ವಯಸ್ಕರ ಪ್ರಪಂಚ

50

ಆಗಸ್ಟ್-ಸೆಪ್ಟೆಂಬರ್, ೧೯೯೮



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೮ ಸಂಚಿಕೆ ೧೧–೧೨

ಆಗಸ್ಟ್–ಸೆಪ್ಟೆಂಬರ್ ೧೯೯೮

ಪರಿವಿಡಿ

ಹೆಚ್ಚುವರಿ ಪುಟಗಳನ್ನು ಸೇರಿಸಿ ಆಗಸ್ಟ್-ಸೆಪ್ಟೆಂಬರ್ ಸಂಚಿಕೆ ಒಟ್ಟಾಗಿ ಪ್ರಕಟಿಸಿದೆ. ಮಾನ್ಯ ಓದುಗರು ಸಹಕರಿಸಬೇಕಾಗಿ ಕೋರಿಕೆ.

ಸಂ

PUSTAKA PRAPANCHA : Monthly

Published and printed by Karnataka State Adult Education Council, Mysore-6. Price: Rupees Six

ಬಿಡಿಪ್ರತಿ : ರೂ. ೬

ವಾರ್ಷಿಕ ಚಂದಾ : ರೂ ೬೦

ಆಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೪೦೦

ಸಂಸ್ಥೆಗೆ : ರೂ. ೬೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು–೫೭೦ ೦೦೬

ನಮ್ಮ ರಾಷ್ಟ್ರಧ್ವಜ

ಪ್ರೊ॥ ಕೆ. ಕೇಶವಮೂರ್ತಿ
ರಾಮಕೃಷ್ಣ ನೈತಿಕ ಮತ್ತು
ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆ, ಯಾದವಗಿರಿ
ಮೈಸೂರು-೫೭೦ ೦೨೩

ಧ್ವಜ, ಪತಾಕೆ, ಕೇತನ–ಇವು ಬಾವುಟಕ್ಕಿರುವ ಸಂಸ್ಕೃತ ಪರ್ಯಾಯ ಪದಗಳು. ಈ ಮೂರು ಇಂದು ನಿನ್ನೆಯದಲ್ಲ. ಇದಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಆದಿಮಾನವ ಎಂದು ನಾಗರಿಕನಾಗಿ ರೂಪುಗೊಂಡನೋ ಅಂದಿನಿಂದಲೂ ಧ್ವಜವು ಒಂದು ಸಂಕೇತವಾಗಿ ಪ್ರಚಲಿತವಾಗಿದೆ. ರಾಮಾಯಣ, ಮಹಾಭಾರತ ಕಾಲದಲ್ಲಿ ಒಬ್ಬೊಬ್ಬ ಅತಿರಥ ಮಹಾರಥರೂ ತಮ್ಮ ತಮ್ಮ ರಥಗಳ ಮೇಲೆ ಒಂದೊಂದು ಧ್ವಜವನ್ನು ಹಾರಿಸುತ್ತಿದ್ದರು. ದೂರದಿಂದ ಆ ಬಾವುಟವನ್ನು ನೋಡಿದೊಡನೆಯೇ ಆ ಧೀರನಾರೆಂಬುದು ತಿಳಿಯುತ್ತಿತ್ತು. ಅಂತೆಯೇ ಹಿಂದಿನ ರಾಜಮಹಾರಾಜರುಗಳು ತಮ್ಮ ಆಳ್ವಿಕೆಗೆ ಒಳಪಟ್ಟ ಪ್ರಾಂತ್ಯಕ್ಕೆ ತಮ್ಮದೇ ಆದ ಧ್ವಜವನ್ನು ನಿಗದಿ ಮಾಡಿಕೊಂಡಿದ್ದರು.

ಮಹಾರಾಜರುಗಳ ನಿರಂಕುಶ ಪ್ರಭುತ್ವ ಕೊನೆಗಂಡು ಪ್ರಜಾಪ್ರಭುತ್ವ ಆರಂಭವಾದ ಮೇಲೂ ಧ್ವಜವು ಮಾತ್ರ ಮುಂದುವರಿಯಿತು. ಇಂದು ವಿಶ್ವದಲ್ಲಿ ಎಷ್ಟು ಸ್ವತಂತ್ರ ರಾಷ್ಟ್ರಗಳಿವೆಯೋ ಅವೆಲ್ಲವೂ ತಮ್ಮದೇ ಆದ ರಾಷ್ಟ್ರಧ್ವಜ ಹೊಂದಿವೆ. ರಾಷ್ಟ್ರೀಯ ಹಬ್ಬಗಳಂದು ನಾವು ಉತ್ಸಾಹದಿಂದ ಧ್ವಜವನ್ನು ಆರೋಹಣ ಮಾಡಿ, ಭಕ್ತಿಯಿಂದ ವಂದಿಸುತ್ತೇವೆ. ಇದೇ ಧ್ವಜವಂದನಾ ಕಾರ್ಯಕ್ರಮ.

"ಮಾತೃದೇವೋಭವ, ಪಿತೃದೇವೋಭವ, ಆಚಾರ್ಯದೇವೋಭವ,ಅತಿಥಿದೇವೋಭವ" —ಇತ್ಯಾದಿ ಉಪನಿಷದ್ವಾಕ್ಯಗಳ ಜತೆಗೆ "ರಾಷ್ಟ್ರದೇವೋಭವ" ಎಂಬುದನ್ನು ಸೇರಿಸಿಕೊಂಡರೆ ಆ ಸರಣಿ ಪೂರ್ತಿಯಾಗುತ್ತದೆ. ಕಾರಣ ಎಲ್ಲಕ್ಕಿಂತ ರಾಷ್ಟ್ರ ದೊಡ್ಡದು ; ಅಷ್ಟೇ ಗೌರವಾದರಗಳಿಗೆ ಪಾತ್ರವಾದುದು.

೧೯೪೭ರ ಆಗಸ್ಟ್ ೧೫ರಂದು ನಮ್ಮ ರಾಷ್ಟ್ರ ಐರೋಪ್ಯದ ಶೃಂಖಲೆಯಿಂದ ಮುಕ್ತವಾಯಿತು. ಇದೊಂದು ರಾಷ್ಟ್ರೀಯ ಹಬ್ಬ. ಅಂದು ಎಲ್ಲೆಲ್ಲೂ ಮುಗಿಲೆತ್ತರದಲ್ಲಿ ಹಾರಾಡುತ್ತಿರುವ ನಮ್ಮ ರಾಷ್ಟ್ರಪತಾಕೆಯನ್ನು ಕಂಡು ಸಂತಸದಿಂದ ಹಿಗ್ಗುತ್ತೇವೆ ; ಅದಕ್ಕೆ ಭಕ್ತಿಪೂರ್ವಕ ಪ್ರಣಾಮಗಳನ್ನು ಸಲ್ಲಿಸುತ್ತೇವೆ.

ನಮ್ಮ ರಾಷ್ಟ್ರಧ್ವಜದ ಇತಿಹಾಸ

ಇಂದು ನಾವು ಕಾಣುತ್ತಿರುವ ನಮ್ಮ ರಾಷ್ಟ್ರಧ್ವಜ ಹಿಂದೆ ಹೀಗಿರಲಿಲ್ಲ. ಮೊದಲು ಅದು ಕೆಂಪು, ಹಳದಿ ಮತ್ತು

ಹಸಿರು ಬಣ್ಣದ ಪಟ್ಟಿಗಳಿಂದ ಕೂಡಿ, ಕೆಂಪು ಪಟ್ಟಿಯಲ್ಲಿ ಬಿಳಿಯ ತಾವರೆ ಹೂವಿನ ಚಿತ್ರವೂ, ಏಳು ನಕ್ಷತ್ರಗಳೂ ಚಿತ್ರಿತವಾಗಿದ್ದವು. ಕಮಲವು ಭಗವಂತನ ಸ್ವರೂಪವಾಗಿಯೂ, ಏಳು ತಾರೆಗಳು ಬ್ರಹ್ಮಾಂಡದ ಚಿಹ್ನೆಯಾಗಿಯೂ ಇದ್ದಿತು, ಇದನ್ನು ಮೊದಲಬಾರಿಗೆ ೧೯೦೦ರಲ್ಲಿ ಪ್ಯಾರಿಸ್ ನಗರದಲ್ಲಿ ಮೇಡಂ ಭಿಕಾಜಿ ಕಾಮಾರವರು ಹಾರಿಸಿದರು ಎಂದು ತಿಳಿದುಬರುತ್ತದೆ.

ಬದಲಾವಣೆ

ಮುಂದಿನ ಆರು ವರ್ಷಗಳಲ್ಲಿ ಆ ಧ್ವಜದಲ್ಲಿ ಸ್ವಲ್ಪ ಬದಲಾವಣೆಯಾಯಿತು. ಕೆಂಪು ಪಟ್ಟಿ ಇದ್ದ ಜಾಗದಲ್ಲಿ ಬಿಳಿಯ ಕಮಲ ಮಾಯವಾಯಿತು. ಏಳು ನಕ್ಷತ್ರಗಳಿಗೆ ಬದಲು, ಎಂಟು ನಕ್ಷತ್ರಗಳಾದವು. ಈ ಬದಲಾವಣೆಗೆ ಕಾರಣವೇನೆಂಬುದು ತಿಳಿಯದಿದ್ದರೂ ಬದಲಾವಣೆಯಂತೂ ಆಯಿತು. ಈ ಧ್ವಜವನ್ನು ೧೯೦೬ರಲ್ಲಿ ಕಲ್ಕತ್ತಾ ನಗರದ ಪಾರ್ಸಿಬಗಾನ್ ಚೌಕದಲ್ಲಿ ಹಾರಿಸಲಾಯಿತು.

ಮತ್ತೆ ಬದಲಾವಣೆ

೧೯೧೭ರ ವೇಳೆಗೆ ಈ ಧ್ವಜವು ಇನ್ನೊಂದು ರೂಪ ತಾಳಿತು. ಒಂದಾದ ಮೇಲೊಂದರಂತೆ ೫ ಕೆಂಪು ಮತ್ತು ೪ ಹಸಿರು ಅಡ್ಡಪಟ್ಟಿಗಳು ಆ ಧ್ವಜದಲ್ಲಿ ಮೂಡಿತು. ಅದರ ಮೇಲ್ತುದಿಯಲ್ಲಿ ಯೂನಿಯನ್ ಜಾಕ್, ಬಲಮೇಲ್ತುದಿ ಅರ್ಧಚಂದ್ರದೊಡನೆ ನಕ್ಷತ್ರ ಮತ್ತು ಮಧ್ಯೆ ಏಳು ನಕ್ಷತ್ರಗಳು ಚಿತ್ರಿತವಾದವು. ಇದನ್ನು ಹೋಂರೂಲ್ ಚಳುವಳಿಯ ನೇತಾರರಾಗಿದ್ದ ಡಾ|| ಅನಿಬೆಸೆಂಟ್ ಮತ್ತು ಲೋಕಮಾನ್ಯ ಬಾಲಗಂಗಾಧರತಿಲಕರು ರೂಪಿಸಿದರು. ಬ್ರಿಟಿಷ್ ಆಧಿಪತ್ಯದಲ್ಲಿಯೇ ಭಾರತಕ್ಕೆ ಸ್ವಯಮಾಡಳಿತ ಹೊವಿನಿಯನ್ ಸ್ಟೇಟಸ್ ಬೇಕು ಎಂಬುದನ್ನು ಸೂಚಿಸಲು ಈ ಧ್ವಜ ನಿರ್ಮಾಣವಾಯಿತು. ಆದರೆ ಪೂರ್ಣಸ್ವಾತಂತ್ರ್ಯವೇ ಚಳುವಳಿಯ ಗುರಿ ಎಂದು ಸಾರಿದಂದಿನಿಂದ ಈ ಧ್ವಜವೂ ಅದೃಶ್ಯವಾಯಿತು.

ನಾಲ್ಕನೆಯ ಬದಲಾವಣೆ

೧೯೨೧ರಲ್ಲಿ ಮತ್ತೊಂದು ರೀತಿಯ ಧ್ವಜ ನಿರ್ಮಾಣವಾಯಿತು. ಅಂದಿನ ಹೈದರಾಬಾದು ರಾಜ್ಯದ ವಿಜಯವಾಡದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಕಾಲದಲ್ಲಿ ಮಚಲೀಪಟ್ಟಣದ ಕಾಲೇಜು ವಿದ್ಯಾರ್ಥಿ ಪಿಂಗಳವೆಂಕಯ್ಯ ಎಂಬುವರು ಭಾರತದ ಪ್ರಮುಖ ಧರ್ಮಗಳಾದ ಹಿಂದು ಮತ್ತು ಇಸ್ಲಾಂಧರ್ಮಗಳನ್ನು ಪ್ರತಿನಿಧಿಸುವ ಕೆಂಪು ಮತ್ತು ಹಸಿರು ಅಡ್ಡಪಟ್ಟಿಗಳು ಮಾತ್ರ ಇರುವ ಒಂದು ಧ್ವಜವನ್ನು ನಿರ್ಮಿಸಿ ಅದನ್ನು ಮಹಾತ್ಮಾ ಗಾಂಧೀಜಿಯವರಿಗೆ ಸಮರ್ಪಿಸಿದರು.

ಆದರೆ ಗಾಂಧೀಜಿಯವರಿಗೆ ಅದು ಸರಿ ಕಾಣಲಿಲ್ಲ. ಹಿಂದೂ ಮತ್ತು ಇಸ್ಲಾಂ ಧರ್ಮಗಳ ಜತೆಗೆ ಭಾರತೀಯ ಇತರ ಧರ್ಮಗಳನ್ನೂ ಸೂಚಿಸುವ ಬಿಳಿಯ ಪಟ್ಟಿಯೊಂದನ್ನು ಅದಕ್ಕೆ ಸೇರಿಸಲು ಸೂಚಿಸಿದರು. ಅಂದಿನಿಂದ ನಮ್ಮ ರಾಷ್ಟ್ರಧ್ವಜ ತ್ರಿವರ್ಣವಾಯಿತು. ಪಂಜಾಬಿನ ಹಂಸಲಾಲರು ಭಾರತೀಯ ಆರ್ಥಿಕದಾಸ್ಯವನ್ನು ಕಳಚುವುದಕ್ಕೆಂದು ಮಧ್ಯೆ ಚರಕದ

ಚಿತ್ರವನ್ನು ಅವರಲ್ಲಿ ರೂಪಿಸಲು ಸಲಹೆ ಮಿತ್ತರು. ಇವೆರಡರ ಪರಿಣಾಮವಾಗಿ ಒಂದು ದಶಕ ಕಾಲ ಈ ಚರಕಯುಕ್ತ ತ್ರಿವರ್ಣಧ್ವಜ ಭಾರತಾದ್ಯಂತ ಸಭೆ ಸಮಾರಂಭಗಳಲ್ಲಿ ವಿಜೃಂಭಿಸಿತು.

ಐದನೆಯ ಬದಲಾವಣೆ

ಆದರೆ ಕಾಂಗ್ರೆಸ್ಸು ಅದನ್ನು ಭಾರತದ ಅಧಿಕೃತಧ್ವಜವೆಂದು ಮಾನ್ಯ ಮಾಡಲಿಲ್ಲ. ಅದಕ್ಕೆ ಬದಲು ತಾನೇ ಒಂದು ಧ್ವಜವನ್ನು ರೂಪಿಸಲು ಸಮಿತಿಯೊಂದನ್ನು ನೇಮಕ ಮಾಡಿತು. ಸಮಿತಿಯು ದೀರ್ಘವಾಗಿ ಆಲೋಚಿಸಿ ಧ್ವಜವೊಂದನ್ನು ರೂಪಿಸಿತು. ಎಡ ಮೇಲ್ತುದಿಯಲ್ಲಿ ಚರಕ ಚಿಹ್ನೆಯುನ್ನು ಹೊತ್ತ ಕೇಸರಿ ಬಣ್ಣದ ಧ್ವಜವದು. ಕೇಸರಿ ಬಣ್ಣವು ತ್ಯಾಗ ಮತ್ತು ಬಲಿದಾನಗಳ ಸಂಕೇತವೆಂದು ಘೋಷಿಸಿತು.

ಆರನೆಯ ಬದಲಾವಣೆ

ಆದರೆ ಈ ಧ್ವಜಕ್ಕೂ ಬಹುಮತ ದೊರೆಯಲಿಲ್ಲ. ೧೯೩೧ರ ಏಪ್ರಿಲ್ ೨೬ರಂದು ಕರಾಚಿಯಲ್ಲಿ (ಈಗಿನ ಪಾಕಿಸ್ತಾನ) ಸರ್ದಾರ್ ವಲ್ಲಭಾಯಿ ಪಟೇಲರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಅಧಿವೇಶನದ ಅಭಿಪ್ರಾಯದಂತೆ ಈ ಹಿಂದೆ ಒಂದು ದಶಕ ಕಾಲ ವಿಜೃಂಭಿಸಿದ್ದ ಚರಕಯುಕ್ತ ತ್ರಿವರ್ಣಧ್ವಜವೇ ಅಲ್ಪಸ್ವಲ್ಪ ವ್ಯತ್ಯಾಸದೊಂದಿಗೆ ರಾಷ್ಟ್ರದ ಅಧಿಕೃತ ಧ್ವಜವೆಂದು ಘೋಷಣೆಯಾಯಿತು. ವ್ಯತ್ಯಾಸವೆಂದರೆ ಕೆಂಪು ಬಣ್ಣವನ್ನು ದಟ್ಟಕೇಸರಿ ಆಕ್ರಮಿಸಿತು.

ತಾತ್ವಿಕ ಅರ್ಥ

ಹೀಗೆ ಬದಲಾವಣೆಯಾದಾಗ ಮೊದಲಿದ್ದ ಧಾರ್ಮಿಕ ಹಿನ್ನೆಲೆಯನ್ನು ಬದಿಗೊತ್ತಿ ಸರ್ವಸಮ್ಮತವಾದ ತಾತ್ತ್ವಿಕ ಅರ್ಥವನ್ನು ಮಾನ್ಯಮಾಡಲಾಯಿತು. ದಟ್ಟ ಕೇಸರಿ ಪಟ್ಟಿಯು ಧೈರ್ಯ ಮತ್ತು ತ್ಯಾಗಗಳನ್ನೂ, ಬಿಳಿಯ ಪಟ್ಟಿಯು ಸತ್ಯ, ಶಾಂತಿ ಮತ್ತು ಪರಿಶುದ್ಧತೆಗಳನ್ನೂ, ಹಸಿರು ಪಟ್ಟಿಯು ಶ್ರದ್ಧೆಯನ್ನೂ, ಚರಕವು ಆರ್ಥಿಕದಾಸ್ಯದ ಮುಕ್ತತೆಯನ್ನೂ ಪ್ರತಿನಿಧಿಸುತ್ತದೆಂದು ಗಾಂಧೀಜಿಯವರು ಸಾರಿದರು. ಅಂದಿನಿಂದ ಈ ಧ್ವಜವು ಸ್ವಾತಂತ್ರ್ಯ ಹೋರಾಟಗಾರರ ಸ್ಫೂರ್ತಿಯ ಪ್ರತೀಕವಾಯಿತು.

ಕಟ್ಟಕಡೆಯ ಬದಲಾವಣೆ

೧೯೪೭ರ ಜುಲೈ ಮಾಹೆಯಲ್ಲಿ ಈ ಧ್ವಜವು ಮತ್ತೆ ಬದಲಾವಣೆಯಾಗಬೇಕಾಗಿ ಬಂತು. ಚರಕದ ಚಿಹ್ನೆಯು ಒಂದೊಂದು ಕಡೆಯಿಂದ ಒಂದೊಂದು ರೀತಿ ಕಾಣುತ್ತದೆಂಬ ಕಾರಣಕ್ಕಾಗಿ ಚರಕ ಚಿಹ್ನೆಯನ್ನೇ ತೆಗೆಯಲಾಯಿತು. ಅದರ ಸ್ಥಾನದಲ್ಲಿ ಸಾರನಾಥದಲ್ಲಿ ಅಶೋಕಚಕ್ರವರ್ತಿಯಿಂದ ನಿಲ್ಲಿಸಲ್ಪಟ್ಟಿದ್ದ ಸಿಂಹಸ್ತಂಭದ ಚೌಕಟ್ಟಿನಲ್ಲಿರುವ ೨೪ ಅರೆಗಳಿಂದ ಕೂಡಿದ ಧರ್ಮಚಕ್ರವನ್ನು ಪ್ರತಿಷ್ಠಿಸಲಾಯಿತು.

ಚಕ್ರವು ಗಾಢ ನೀಲಿ ಬಣ್ಣದ್ದಾಗಿರಬೇಕೆಂದು ಬಿಳಿ ಪಟ್ಟಿಯ ಅಗಲಕ್ಕೆ ಸಮನಾಗಿರಬೇಕೆಂದೂ, ಅದನ್ನು ಅತಿಕ್ರಮಿಸಕೂಡದೆಂದೂ ನಿರ್ಧರಿಸಲಾಯಿತು. ೧೯೪೭ ಆಗಸ್ಟ್ ೧೫ ರಂದು ಪ್ರಥಮ ಸ್ವಾತಂತ್ರ್ಯೋತ್ಸವ ಸಮಾರಂಭದ ದಿನ ದೆಹಲಿಯ ಕೆಂಪು ಕೋಟೆಯ ಮೇಲೆ ಹಾರಿಸಿದ್ದು ಈ ಧ್ವಜವೇ. ಅಂದಿನಿಂದ ಇಂದಿನವರೆಗೂ ನಮ್ಮ ಭಾರತದ ರಾಷ್ಟ್ರಧ್ವಜವೆಂಬ ಮನ್ನಣೆಗೆ ಪಾತ್ರವಾಗಿದೆ.

ಬಣ್ಣಗಳ ಸಂಕೇತ

೧ ಪಂಡಿತ ಜವಹರಲಾಲ್ ನೆಹರೂರವರ ಪ್ರಕಾರ ಧ್ವಜವು ಧೈರ್ಯ, ಸ್ಥೈರ್ಯ, ತ್ಯಾಗ, ಸಮೃದ್ಧಿ ಹಾಗೂ ಪರಿಶುದ್ಧತೆಗಳ ಸಂಕೇತ. ಅದರಲ್ಲಿರುವ ಚಕ್ರವು ಸಾಮ್ರಾಟ್ ಅಶೋಕನ ಉದಾತ್ತ ಆಡಳಿತ ಗೀತೆಯನ್ನು ನೆನಪಿಗೆ ತರುತ್ತದೆ. ಹೀಗಾಗಿ ಅದು ಧರ್ಮಚಕ್ರ.

೮ ಡಾ। ಸರ್ವಪಲ್ಲಿ ರಾಧಾಕೃಷ್ಣನ್‌ರವರು ಬಣ್ಣಗಳ ಸಂಕೇತದ ಬಗ್ಗೆ ಹೇಳುತ್ತಾ, ಧ್ವಜದ ಕೇಸರಿ ಬಣ್ಣವು ವೈರಾಗ್ಯ ಮತ್ತು ಅನಾಸಕ್ತಿಯೋಗದ ಕುರುಹಾಗಿದ್ದು ನಿಃಸ್ವಾರ್ಥತೆಯನ್ನು ಸೂಚಿಸುತ್ತದೆ. ಬಿಳಿಯ ಬಣ್ಣವು ಸತ್ಯದ ದಾರಿಗೆ ಬೆಳಕನ್ನು ಚೆಲ್ಲುವ ಸಂಕೇತ. ಹಸಿರು ಬಣ್ಣವು ನಮ್ಮ ರಾಷ್ಟ್ರದ ಸಸ್ಯ ಸಂಪತ್ತು ಹಾಗೂ ಶುಭವನ್ನು ಸೂಚಿಸುತ್ತದೆ. ನೀಲಿ ಬಣ್ಣದ ಅಶೋಕ ಚಕ್ರವು ಗಾಂಭೀರ್ಯ, ಉನ್ನತಿ, ಸ್ವಾತಂತ್ರ್ಯ, ಪ್ರೇಮ, ಪ್ರಗತಿ ಹಾಗೂ ಉಪಕಾರಗಳ ಪ್ರತೀಕ ಅಷ್ಟೇ ಅಲ್ಲ, ಅದು ಧರ್ಮದಚಕ್ರ, ಭಾಗ್ಯಚಕ್ರ, ಯೋಗಚಕ್ರ, ಯಜ್ಞಚಕ್ರ; ನೀತಿಚಕ್ರ ಹಾಗೂ ಸೃಷ್ಟಿ ಚಕ್ರಗಳ ಸಂಕೇತವೂ ಹೌದು" ಎಂದಿದ್ದಾರೆ. ಒಟ್ಟಿನಲ್ಲಿ ಅದು ಭಾರತೀಯರ ಸಮಗ್ರ ಬದುಕಿನ ಸ್ವಾತಂತ್ರ್ಯ, ಏಕತೆ, ಕೀರ್ತಿ, ಆದರ್ಶಗಳ ಪ್ರತೀಕವಾಗಿದೆ.

ಧ್ವಜದ ಬಳಕೆ

ರಾಷ್ಟ್ರವು ಎಷ್ಟು ಪೂಜ್ಯವೋ ರಾಷ್ಟ್ರ ಧ್ವಜವೂ ಸಹ ಅಷ್ಟೇ ಪೂಜ್ಯವಾದುದು. ಅದನ್ನು ಪ್ರೀತಿಸುವುದು, ಗೌರವಿಸುವುದು ಭಾರತೀಯರಾದ ನಮ್ಮೆಲ್ಲರ ಕರ್ತವ್ಯ. ಆದರೂ ಪೂಜ್ಯರಿಂದ, ಸ್ವಾರ್ಥಪರರಿಂದ, ದೇಶದ್ರೋಹಿಗಳಿಂದ ಒಮ್ಮೊಮ್ಮೆ ರಾಷ್ಟ್ರ ಧ್ವಜಕ್ಕೆ ಧಕ್ಕೆವುಂಟಾಗಬಹುದೆಂಬ ಕಾರಣದಿಂದ ೧೯೭೧ರಲ್ಲಿ ಶಾಸನವೊಂದನ್ನು ರೂಪಿಸಲಾಯಿತು. ಅದರ ಪ್ರಕಾರ ರಾಷ್ಟ್ರ ಧ್ವಜವನ್ನು ಹರಿಯುವುದು, ತುಳಿಯುವುದು, ಅಂದಗೆಡಿಸುವುದು, ವಿರೂಪಗೊಳಿಸುವುದು, ಮಲಿನಗೊಳಿಸುವುದು, ಸುಡುವುದು ಅಥವಾ ಇನ್ನಾವುದೇ ರೀತಿಯಲ್ಲಿ ಅದಕ್ಕೆ ಅಗೌರವ ಸೂಚಿಸುವವರಿಗೆ ಮೂರು ವರ್ಷಗಳ ಸೆರೆಮನೆವಾಸ ಮತ್ತು ದಂಡ ವಿಧಿಸುವ ಆಜ್ಞೆಯನ್ನು ಅಂಗೀಕರಿಸಲಾಯಿತು.

ರಾಷ್ಟ್ರಧ್ವಜದ ನಿರ್ಮಾಣ

ತಿಳಿಯದೆ ಅಪಚಾರ ಮಾಡುವುದನ್ನು ತಪ್ಪಿಸಲು ಅದನ್ನು ಸರಿಯಾಗಿ ಉಪಯೋಗಿಸುವ ಬಗ್ಗೆ ನಿಯಮಾವಳಿಗಳನ್ನು ಭಾರತ ಸರಕಾರ ರೂಪಿಸಿದೆ. ಅದರ ಪ್ರಕಾರ ರಾಷ್ಟ್ರ ಧ್ವಜವನ್ನು ಕೈಯಿಂದ ನೂತ ನೂಲಿನಿಂದಲೇ ತಯಾರಿಸಬೇಕು. ಯಂತ್ರದ ಬಟ್ಟೆ ಕೂಡದು. ನೂಲು, ಹತ್ತಿ, ರೇಷ್ಮೆ ಅಥವಾ ಉಣ್ಣೆಯಾಗಬಹುದು. ಕೇಸರಿ, ಬಿಳಿ ಮತ್ತು ಹಸಿರು ಬಣ್ಣದ ಪಟ್ಟಿಗಳು ಸಮ ಅಳತೆಯದ್ದಾಗಿರಬೇಕು. ಅಶೋಕ-ಚಕ್ರವು ಗಾಢ ನೀಲಿಯ ಬಣ್ಣವೇ ಆಗಿರಬೇಕು. ಅರೆಗಳು ೨೪ಕ್ಕಿಂತ ಹೆಚ್ಚಾಗಿರ ಕೂಡದು. ಬಿಳಿಯ ಪಟ್ಟಿಯ ಅಗಲಕ್ಕೆ ಸರಿಯಾಗಿ ಅದರ ವ್ಯಾಸವಿರಬೇಕು. ಧ್ವಜದ ಅಳತೆ ೩:೨ರ ಪ್ರಮಾಣದಲ್ಲಿರಬೇಕು. ಅಂದರೆ ಉದ್ದ ೩ ಮೂಲಮಾನ, ಅಗಲ ೨ ಮೂಲಮಾನ ಅಳತೆ.

ನಿತ್ಯ ಧ್ವಜ

ರಾಷ್ಟ್ರಧ್ವಜವನ್ನು ಯಾವೊಬ್ಬ ಪ್ರಜೆಯೂ ತನ್ನ ಮನೆಯ ಮೇಲೆ ಹಾರಿಸುವಂತಿಲ್ಲ ಅಥವಾ ಯಾವುದೇ ಖಾಸಗಿ ಕಟ್ಟಡಗಳ ಮೇಲೆಯೂ ಹಾರಿಸುವಂತಿಲ್ಲ. ಸಂಸತ್ ಭವನ, ವಿಧಾನಸಭಾಭವನ, ಸರ್ವೋಚ್ಚ ನ್ಯಾಯಾಲಯ ರಾಷ್ಟ್ರಪತಿ ಭವನ, ಉಪ-ರಾಷ್ಟ್ರಪತಿ ಭವನ, ರಾಜ್ಯಪಾಲರು, ಉಪರಾಜ್ಯಪಾಲರ ಭವನಗಳು ಹಾಗೂ ಸರಕಾರವು ಆದೇಶಿಸಿರುವ ಇತರ ಕಟ್ಟಡಗಳ ಮೇಲೆ ಮಾತ್ರ ಅದನ್ನು ಪ್ರತಿದಿನ ಹಾರಿಸಬಹುದು.

ಸಾರ್ವಜನಿಕರು ಧ್ವಜಾರೋಹಣ ಮಾಡಬೇಕಾದ ದಿನಗಳು

ಸ್ವಾತಂತ್ರ್ಯ ದಿನಾಚರಣೆ, ಗಣರಾ-ಜ್ಯೋತ್ಸವ, ಗಾಂಧಿ ಜಯಂತಿ ಹಾಗೂ ಸರಕಾರವು ಘೋಷಿಸುವ ರಾಷ್ಟ್ರೀಯ ಮಹತ್ವದ ದಿನಗಳಂದು ಸಾರ್ವಜನಿಕರು ಸಾರ್ವಜನಿಕ ಸ್ಥಳದಲ್ಲಿ ಪೂರ್ವಾನುಮತಿಯೊಡನೆ ಧ್ವಜಾರೋಹಣ ಮಾಡಬಹುದು.

ಧ್ವಜದ ಆರೋಹಣ ಮತ್ತು ಅವರೋಹಣ

ರಾಷ್ಟ್ರಧ್ವಜವನ್ನು ಸೂರ್ಯೋದಯಕ್ಕೆ ಸರಿಯಾಗಿ ಹಾರಿಸಿ (ಸೂರ್ಯೋದಯದ ನಂತರವೂ ಬೆಳಗ್ಗೆ ಹಾರಿಸಬಹುದು) ಸೂರ್ಯಾಸ್ತಮಯಕ್ಕೆ ಮೊದಲು ಇಳಿಸಬೇಕು. ಬಿಸಿಲು ಏರಿದ ನಂತರ ಧ್ವಜಾ-ರೋಹಣ ಹಾಗೂ ಸೂರ್ಯಾಸ್ತದನಂತರ ಅವರೋಹಣ ಕೂಡದು. ಕೆಲವು ವಿಶೇಷ ಸಂದರ್ಭಗಳಲ್ಲಿ ಸೂರ್ಯಾಸ್ತದ ನಂತರವೂ ಹಾರಿಸಬಹುದು. ಅದನ್ನು ಸರಕಾರವೇ ಘೋಷಿಸುತ್ತದೆ. ಧ್ವಜವನ್ನು ಏರಿಸುವಾಗ ಕೇಸರಿ ಬಣ್ಣವು ಮೇಲ್ಭಾಗಕ್ಕೆ ಬರುವಂತೆ ಎಚ್ಚರಿಕೆ ವಹಿಸಬೇಕು. ತಲೆಕೆಳಕಾದರೆ ಅದು ಅಪರಾಧವಾಗುತ್ತದೆ. ಧ್ವಜವನ್ನು ಏರಿಸುವಾಗ ಹಾಗೂ ಇಳಿಸುವಾಗ ಕೊಂಬು, ಕಹಳೆ ಮುಂತಾದ ರಾಜಯೋಗ್ಯವಾದ ಪಂಚಮಹಾವಾದ್ಯಗಳು ಮೊಳಗುತ್ತಿರಬೇಕು. ಆ ಸಂದರ್ಭದಲ್ಲಿ ಎಲ್ಲರೂ ಧ್ವಜವಂದನೆ ಮಾಡಬೇಕು.

ರಾಷ್ಟ್ರಧ್ವಜವು ಹಾರಾಡುತ್ತಿರುವಾಗ ಅದಕ್ಕಿಂತ ಎತ್ತರದಲ್ಲಿ ಯಾವುದೇ ಧ್ವಜವಾಗಲೀ, ತೋರಣವಾಗಲೀ, ಇತರ ಯಾವುದೇ ಲಾಂಛನಗಳಾಗಲೀ ಹಾರಾಡಕೂಡದು. ಹಾಗಾದಲ್ಲಿ ಅದು ರಾಷ್ಟ್ರಧ್ವಜಕ್ಕೆ ಸೂಚಿಸಿದ ಅಗೌರವ ಎಂದು ಪರಿಗಣಿಸಲಾಗುತ್ತದೆ. ಆದರೆ ಕೆಲವು ವಿಶೇಷ ಸಂದರ್ಭದಲ್ಲಿ ಇತರ ರಾಷ್ಟ್ರಗಳ ಧ್ವಜವನ್ನು ನಮ್ಮ ರಾಷ್ಟ್ರಧ್ವಜದ ಜತೆ ಹಾರಿಸಬೇಕಾದಾಗ ನಮ್ಮ ಧ್ವಜದ ಸಮಮಟ್ಟದಲ್ಲಿ ಅದರ ಎಡ ಭಾಗಕ್ಕೆ ಹಾರಿಸಬಹುದು. ಯಾವುದೇ ಕಾರಣಕ್ಕೂ ನಮ್ಮ ರಾಷ್ಟ್ರಧ್ವಜವಿರುವ ಸ್ತಂಭದಲ್ಲಿ ಇನ್ನೊಂದು ಧ್ವಜವನ್ನು ಹಾರಿಸಕೂಡದು. ಧ್ವಜಾರೋಹಣವಾಗುತ್ತಿದ್ದಂತೆ ಮೇಲಿನಿಂದ ಪುಷ್ಪವೃಷ್ಟಿಯಾಗಬಹುದು.

ಶೋಕಾಚರಣೆಯ ಸಂದರ್ಭದಲ್ಲಿ ಧ್ವಜಾರೋಹಣ

ರಾಷ್ಟ್ರದ ಪ್ರಮುಖ ವ್ಯಕ್ತಿಗಳಾದ ರಾಷ್ಟ್ರಪತಿ, ಪ್ರಧಾನ ಮಂತ್ರಿ ಮುಂತಾದ

ವರು ದೇಹತ್ಯಾಗ ಮಾಡಿದಾಗ ಅಥವಾ ಮಿತ್ರರಾಷ್ಟ್ರಗಳ ಮಂತ್ರಿ ಮಹೋದಯರು ನಿಧನರಾದಾಗ ಅಥವಾ ಇನ್ನಾವುದೇ ರಾಷ್ಟ್ರೀಯ ಶೋಕಾಚರಣೆಯ ದಿನಗಳಂದು ನಿರ್ದಿಷ್ಟ ಪಡಿಸಿದ ಕಟ್ಟಡಗಳ ಮೇಲೆ ರಾಷ್ಟ್ರಧ್ವಜವನ್ನು ಅರ್ಧಕ್ಕೆ ಹಾರಿಸಬೇಕು. ಇದು ಶೋಕದ ಸಂಕೇತ. ಆದರೆ ಸಂತೋಷದ ಉತ್ಸವಗಳಂದು ಅನಜ್ಞಾತೆಯಿಂದ ಹೀಗೆ ಮಾಡಿದರೆ ಶಿಕ್ಷಾರ್ಹ ಅಪರಾಧವಾಗುತ್ತದೆ.

ವಾಹನಗಳ ಮೇಲೆ ರಾಷ್ಟ್ರಧ್ವಜ

ನಮ್ಮ ರಾಷ್ಟ್ರಧ್ವಜವನ್ನು ಯಾವೊಬ್ಬ ನಾಗರಿಕನೂ ತನ್ನ ವಾಹನದ ಮೇಲೆ ಹಾರಿಸುವಂತಿಲ್ಲ. ಆದರೆ ರಾಷ್ಟ್ರಪತಿ, ಉಪ-ರಾಷ್ಟ್ರಪತಿ, ರಾಜ್ಯಪಾಲರು, ಉಪರಾಜ್ಯಪಾಲರು, ಪ್ರಧಾನ ಮಂತ್ರಿಗಳು, ಮುಖ್ಯ ಮಂತ್ರಿಗಳು, ಎಲ್ಲಾ ಸಚಿವರೂ, ರಾಜ್ಯ ಸಭೆ ಮತ್ತು ಲೋಕಸಭೆಗಳ ಅಧ್ಯಕ್ಷರುಗಳು, ಸರ್ವೋಚ್ಚ ನ್ಯಾಯಮೂರ್ತಿಗಳು ಹಾಗೂ ರಾಯಭಾರಿಗಳು ಮಾತ್ರ ತಮ್ಮ ಸರಕಾರಿ ವಾಹನಗಳ ಮೇಲೆ ರಾಷ್ಟ್ರಧ್ವಜವನ್ನು ಹಾರಿಸಬಹುದು.

ರಾಷ್ಟ್ರಧ್ವಜ ಉಪಯೋಗ

ರಾಷ್ಟ್ರಧ್ವಜವನ್ನು ವಿಶೇಷ ದಿನಗಳಲ್ಲಿ ಹಿಂದೆ ತಿಳಿಸಿದಂತೆ ಆರೋಹಣ ಮಾಡಲು ಮಾತ್ರ ಅವಕಾಶವಿದೆ. ಇದನ್ನು ತೋರಣ, ಪರದೆ, ಸಮವಸ್ತ್ರ, ಕರವಸ್ತ್ರ, ಅಂಗವಸ್ತ್ರ, ಮೇಜು ಹಾಸು, ಹೊದಿಕೆ, ದಿಂಬಿನ ಲಕೋಟಿ—ಮುಂತಾದವುಗಳಿಗಾಗಿ ಬಳಸಬಾರದು. ಯಾವುದೇ ವಸ್ತ್ರವನ್ನು ರಾಷ್ಟ್ರಧ್ವಜದಂತೆ ಜೋಡಿಸಲೂಬಾರದು. ರಾಷ್ಟ್ರಧ್ವಜದ ಮೇಲೆ ಚಿತ್ರ, ನಕಾಶೆ, ಕಸೂತಿ ಬಿಡಿಸಬಾರದು. ಸರಕಾರದ ಅನುಮತಿಯಿಲ್ಲದೆ ಇದನ್ನು ಜಾಹೀರಾತುಗಳಿಗಾಗಿ ಬಳಸಕೂಡದು.

ಯಾವುದೇ ವಿಗ್ರಹ, ಪ್ರತಿಮೆ ಅಥವಾ ಸ್ಮಾರಕಗಳಿಗೆ ರಾಷ್ಟ್ರಧ್ವಜವನ್ನು ಹೊದಿಸಬಾರದು. ಆದರೆ ನಿಧನ ಹೊಂದಿದ ರಾಷ್ಟ್ರೀಯ ನಾಯಕರಿಗೆ, ರಾಷ್ಟ್ರಭಕ್ತರಿಗೆ ಇದನ್ನು ಹೊದಿಸುವ ಪರಿಪಾಠವಿದೆ. ಆದರೆ ಯಾವುದೇ ಕಾರಣಕ್ಕೂ ಧ್ವಜವನ್ನು ನೆಲದ ಮೇಲೆ ಹಾಸಬಾರದು.

ಧ್ವಜ ಶಿಥಿಲವಾದಾಗ

ಧ್ವಜವು ಹಳತಾಗಿ, ಬಣ್ಣ ಕಳೆದುಕೊಂಡು, ಜೀರ್ಣವಾದಾಗ ಅದನ್ನು ಹೊಲಿದು, ದುರಸ್ತಿಮಾಡಿ ಉಪಯೋಗಿಸಬಾರದು. ಅದನ್ನು ಆಗ ಮಾತ್ರ ಅಗ್ನಿ ಸಂಸ್ಕಾರದಿಂದ ಇಲ್ಲವಾಗಿಸಬೇಕು. ಹಳೆಯ ಬಟ್ಟೆ ಎಂದು ಯಾವುದೇ ಅನ್ಯಕಾರ್ಯಕ್ಕೆ ಬಳಸುವಂತಿಲ್ಲ.

ಒಟ್ಟಿನಲ್ಲಿ ಇದು ನಮ್ಮ ಗೌರವ ಪ್ರತಿಷ್ಠೆಗಳ ಸಂಕೇತವಾದ ನಮ್ಮ ರಾಷ್ಟ್ರಧ್ವಜ. ನಮ್ಮ ರಾಷ್ಟ್ರಧ್ವಜವನ್ನು ಗೌರವಿಸಬೇಕಾದುದು ನಮ್ಮೆಲ್ಲರ ಆದ್ಯ ಕರ್ತವ್ಯ.

ಶಿವಪುರ ಧ್ವಜ ಸತ್ಯಾಗ್ರಹ

ಟಿ. ಎಸ್. ಲಲಿತ

೨೦೩, ಮೊದಲನೆ ಮಹಡಿ
೧೭ನೇ ಮೇನ್, ಸರಸ್ವತೀಪುರ
ಮೈಸೂರು–೫೭೦ ೦೦೯

ಮೈಸೂರು–ಬೆಂಗಳೂರು ಹೆದ್ದಾರಿಯ ಮದ್ದೂರು ರಸ್ತೆಯಂಚಿನಲ್ಲಿ ದುಂಡಾಕೃತಿಯ ಕಟ್ಟಡವೊಂದು ಕಣ್ಣಿಗೆ ಬೀಳುತ್ತದೆ. ಈ ಕಟ್ಟಡದ ತುದಿಯಲ್ಲಿ ಗೋಪುರವಿದ್ದು ಧ್ವಜಸ್ತಂಭವಿದೆ. ಕಟ್ಟಡದ ಮೇಲ್ಭಾಗದಲ್ಲಿ 'ಸತ್ಯಾಗ್ರಹ ಸೌಧ' ಎಂದು ಬರೆದಿದ್ದು, ಒಳಗೆ ಭವ್ಯ ಸಭಾಭವನವಿದೆ. ಇಂದಿನ ಪೀಳಿಗೆಗೆ ಅರಿವಿರದ ಈ 'ವೀರ ಸೌಧ'ದ ಬಗ್ಗೆ ಹಿಂದಿನ ತಲೆಮಾರಿನ ಹಲವರಿಗೆ ಸ್ವಾತಂತ್ರ್ಯ ಚಳುವಳಿಯ ಅಂದಿನ ಹೋರಾಟದ ನೆನಪು ನುಗ್ಗಿ ಬಂದೀತು. ೬೦ ವರ್ಷಗಳ ಹಿಂದೆ ಇಲ್ಲಿ ನಡೆದ ಸ್ವಾತಂತ್ರ್ಯ ಪೂರ್ವದ ಐತಿಹಾಸಿಕ ಘಟನೆಯೊಂದು ನೆನಪಲ್ಲಿ ಸುರುಳಿ ಬಿಚ್ಚೀತು. ಈ ಕಟ್ಟಡದ ಹಿನ್ನೆಲೆಯಲ್ಲಿ ಇಂದಿನವರು ತಿಳಿಯಬೇಕಾದ ಕುತೂಹಲಕಾರಿ ಕಥನವಿದೆ. ಇಲ್ಲಿ ಮೊಳೆತು ಚಿಗಿತು, ಫಲಪ್ರದವಾದ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸವಿದೆ.

ಬ್ರಿಟಿಷರ ಆಳ್ವಿಕೆಯಲ್ಲಿ ಭಾರತ 'ಪ್ರಾಂತ್ಯಗಳು' ಹಾಗೂ 'ಆಶ್ರಿತ ಸಂಸ್ಥಾನ'ಗಳೆಂದು ಭಾಗವಾಗಿ, 'ಪ್ರಾಂತ್ಯಗಳನ್ನು ಬ್ರಿಟಿಷ್ ಗವರ್ನರುಗಳು ಆಳಿದರೆ, 'ಆಶ್ರಿತ ಸಂಸ್ಥಾನ'ಗಳನ್ನು ಸ್ಥಳೀಯ ಭಾರತೀಯ ರಾಜರೇ ಆಳಿದರೂ ಆ ರಾಜರು ಬ್ರಿಟಿಷರ ಆಶ್ರಿತರಾಗಿದ್ದರು. ಅಲ್ಲಿ 'ರೆಸಿಡೆಂಟ್' ಎಂಬ ಬ್ರಿಟಿಷ್ ಅಧಿಕಾರಿಯ ನೇಮಕವಾಗುತ್ತಿತ್ತು. ಬ್ರಿಟಿಷ್ ಪ್ರಾಂತ್ಯಗಳು ಆಂಗ್ಲ ಭಾರತವೆನಿಸಿದರೆ, ಆಶ್ರಿತ ರಾಜ್ಯಗಳು ಸಂಸ್ಥಾನವೆನಿಸಿ, ಮೈಸೂರು ಅಂದಿನ ಪ್ರಮುಖ ಸಂಸ್ಥಾನವಾಗಿತ್ತು. ೧೮೩೧ರಿಂದ ೫೦ ವರ್ಷಗಳ ಕಾಲ ಒಡೆಯರ ಆಳ್ವಿಕೆ ತಪ್ಪಿಸಿ, ಮೈಸೂರನ್ನು ಸಂಪೂರ್ಣವಾಗಿ ಬ್ರಿಟಿಷರು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿದ್ದರೂ, ೧೮೮೧ರಲ್ಲಿ ಮೈಸೂರು ಪುನಃ ಒಡೆಯರ ಆಳ್ವಿಕೆಗೊಳಪಟ್ಟಿತು. ಆಗ ರಾಜರ ಅಧೀನದಲ್ಲಿ ಆಡಳಿತ ನಡೆಸಲು ಕಾರ್ಯಾಂಗ ಸಮಿತಿಯೊಂದರ ರಚನೆಯಾಗಿ, ದಿವಾನರು ಆ ಸಮಿತಿಯ ಮುಖ್ಯಸ್ಥರಾದರು. ಅವರ ಸಹಾಯಕ್ಕೆ ಕೌನ್ಸಿಲರುಗಳೆಂಬ ಇಬ್ಬರು ಸದಸ್ಯರು ಚುನಾವಣೆಗಳ ಮೂಲಕ ಆಯ್ಕೆಯಾಗುತ್ತಿದ್ದರು. ಪ್ರಜಾಪ್ರತಿನಿಧಿ ಸಭೆ ಹಾಗೂ ನ್ಯಾಯ ವಿಧಾಯಕ ಸಭೆಗಳು ಶಾಸನಬದ್ಧವಾಗಿ ಅಸ್ತಿತ್ವಕ್ಕೆ ಬಂದು ಒಂದು ವಿಧದ ಪ್ರಜಾಸತ್ತಾತ್ಮಕ ಆಳ್ವಿಕೆ ಏರ್ಪಟ್ಟಿತು.

೧೮೮೫ರಲ್ಲಿ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಸ್ಥಾಪನೆ ಆದಾಗ, ಸ್ವಾತಂತ್ರ್ಯ ಹೋರಾಟದ ಎಲ್ಲ ಚಟುವಟಿಕೆಗಳು

'ಆಂಗ್ಲ ಭಾರತ'ಕ್ಕೆ ಮಾತ್ರ ಸೀಮಿತವಾಗಿತ್ತು. ಸಂಸ್ಥಾನದಲ್ಲಿ ನಮ್ಮವರೇ ಆದ ರಾಜರಿದ್ದು, ಪ್ರಜೆಗಳ ಹಿತರಕ್ಷಣೆ ಆಗುತ್ತಿದೆ ಎಂಬ ಭಾವನೆ ಇತ್ತು. ದೇಶೀಯ ರಾಜರಿಗೂ ತಮ್ಮ ಆಳ್ವಿಕೆ ಮುಂದುವರಿಯಬೇಕು. ಪ್ರಜೆಗಳು ಸ್ವತಂತ್ರರಾಗಬಾರದೆಂಬ ಅನಿಸಿಕೆ ಇದ್ದು, ಬ್ರಿಟಿಷರಿಗೂ ಅದು ಪರೋಕ್ಷವಾಗಿ ಅನುಕೂಲವಾಗಿದ್ದರಿಂದ, ಆ ಭಾವನೆಯನ್ನೇ ಅವರು ಪೋಷಿಸಿಕೊಂಡು ಬಂದರು. ಆದರೆ, ಕ್ರಮೇಣ ರಾಷ್ಟ್ರೀಯ ಕಾಂಗ್ರೆಸ್‌ನ ಚಟುವಟಿಕೆಗಳು ಸಂಸ್ಥಾನಗಳಿಗೂ ವಿಸ್ತರಿಸಿ ಮೈಸೂರಿನಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ ಸ್ಥಾಪಿಸುವ ಸಿದ್ಧತೆಗಳಾದುವು. ಜೊತೆ ಜೊತೆಗೇ ಪ್ರಜಾಸತ್ತಾತ್ಮಕ ಚಟುವಟಿಕೆಗಳನ್ನು ವಿಸ್ತರಿಸುವ ಸಲುವಾಗಿ 'ಪ್ರಜಾಮಿತ್ರ ಮಂಡಲಿ' ಹಾಗೂ 'ಪ್ರಜಾ ಪಕ್ಷ' ಎಂಬ ಪ್ರತ್ಯೇಕ ರಾಜಕೀಯ ಪಕ್ಷಗಳು ಜನ್ಮ ತಳೆದವು. ೧೯೩೪ರ ವೇಳೆಗೆ ಅವೆರಡೂ ಪಕ್ಷಗಳು ವಿಲೀನಗೊಂಡು 'ಸಂಯುಕ್ತ ಪ್ರಜಾ ಪಕ್ಷ' ಎಂಬ ಹೊಸ ರಾಜಕೀಯ ಪಕ್ಷವೊಂದು ರೂಪು ತಳೆಯಿತು. ಅದಾದ ಕೆಲವು ವರ್ಷಗಳ ಮೇಲೆ ಪ್ರಜಾ ಪಕ್ಷವು ಕಾಂಗ್ರೆಸ್ ಪಕ್ಷದಲ್ಲಿಯೇ ವಿಲೀನಗೊಂಡು ಸ್ವಾತಂತ್ರ್ಯ ಚಳುವಳಿಯ ಚಟುವಟಿಕೆಗಳು ತೀವ್ರಗೊಂಡವು. ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗೆ, ಕಾಂಗ್ರೆಸ್ ಪಕ್ಷದ ಉಮೇದುವಾರರು ಆಯ್ಕೆಯಾಗಿ ಆ ಚಟುವಟಿಕೆಗಳಿಗೆ ಹೊಸ ಚಾಲನೆ ದೊರೆತು, ಸರ್ಕಾರದ ದಮನಕಾರಿ ನೀತಿ ಕಟುವಾದ ಟೀಕೆಗೊಳಗಾಯಿತು.

ಸಂಸ್ಥಾನದ ಆಂತರಿಕ ಆಡಳಿತದಲ್ಲಿ ರಾಷ್ಟ್ರೀಯ ಕಾಂಗ್ರೆಸ್ ಪ್ರವೇಶಿಸಬಾರದು. ದೇಶೀಯ ಸಂಸ್ಥಾನಗಳಲ್ಲಿ ಸ್ವಾತಂತ್ರ್ಯ ಹೋರಾಟದ ಚಳುವಳಿಯ ಹೊಣೆಯನ್ನು ಅಲ್ಲಿಯ ಪ್ರಜೆಗಳೇ ಹೊರಬೇಕು. ಅದಕ್ಕಾಗಿ ಅವರು ಸ್ವತಂತ್ರ ರಾಜಕೀಯ ಪಕ್ಷಗಳನ್ನು ಸ್ಥಾಪಿಸಿಕೊಳ್ಳಬೇಕು ಎಂಬ ನಿರ್ಣಯದ ಫಲವಾಗಿ, ಮೈಸೂರು ರಾಜ್ಯದಲ್ಲಿ ಮೈಸೂರಿನವರೇ ಚಳುವಳಿ ನಡೆಸಬೇಕೆಂಬ ಅಗತ್ಯ ಮನವರಿಕೆಯಾಗಿ, ಮೈಸೂರು ಸಂಸ್ಥಾನದಲ್ಲಿ ರಾಷ್ಟ್ರೀಯ ಕಾಂಗ್ರೆಸ್ಸಿಗಿಂತ ಭಿನ್ನವಾದ 'ಮೈಸೂರು ಕಾಂಗ್ರೆಸ್' ಎಂಬ ಪಕ್ಷ ೧೯೩೮ರಲ್ಲಿ ಅಸ್ತಿತ್ವಕ್ಕೆ ಬಂತು. ಅಂದಿನ ಕಾಂಗ್ರೆಸ್ ನಾಯಕರು, ದಿವಾನರು ಪ್ರಜಾಸತ್ತಾತ್ಮಕ ಜವಾಬ್ದಾರಿ ಸರ್ಕಾರ ಸ್ಥಾಪಿಸಬೇಕೆಂದು ಕೇಳಿದಾಗ, ಅವರು ಅದಕ್ಕೆ ಒಪ್ಪದೆ ಚಳುವಳಿಯನ್ನೇ ಹತ್ತಿಕ್ಕಲು ಪ್ರಯತ್ನಿಸಿದರು. ಅದನ್ನು ಬೆಂಬಲಿಸಿ ಕೆಲವರು ಕಾಂಗ್ರೆಸ್ ಚಳುವಳಿಯನ್ನೇ ವಿರೋಧಿಸಿ ದಿವಾನರಿಗೇ ಬೆಂಬಲ ನೀಡಿದರು. ಮೈಸೂರು ಕಾಂಗ್ರೆಸ್ಸಿಗೆ ಪ್ರಜೆಗಳ ಅಂಗೀಕಾರ ಪಡೆಯಬೇಕು, ಸಂದೇಹಾಸ್ಪದವಾಗಿ ವರ್ತಿಸುತ್ತಿರುವ ಸರ್ಕಾರವನ್ನು ಸರಿಯಾಗಿ ಎದುರಿಸಬೇಕು ಎನ್ನುವ ಬಗ್ಗೆ ಚರ್ಚೆ ನಡೆಸಲು, ಸಮ್ಮೇಳನ ಒಂದನ್ನು ನಡೆಸುವ ಸಲುವಾಗಿ, ಶಿವಪುರವನ್ನು ಆಯ್ಕೆ ಮಾಡಲಾಯಿತು. ಈ ಸಭೆ ಶಿವಪುರ 'ರಾಷ್ಟ್ರಕೂಟ' ಎಂದೇ ಹೆಸರಾಯಿತು.

ಈ ನಡುವೆ ಎಲ್ಲೆಲ್ಲಿಯೂ ಮೆರವಣಿಗೆ, ಬಹಿರಂಗ ಸಭೆಗಳು ನಡೆದರೂ, ಸರ್ಕಾರ ದಮನಕಾರಿ ನೀತಿಯನ್ನು ಬಳಸುತ್ತಿತ್ತು. ಸರ್ಕಾರದ ಬಗ್ಗೆ ಜನತೆಯ ಅಸಮಾಧಾನ ಏರುತ್ತಿತ್ತು. ಅಲ್ಲಲ್ಲಿ ಸತ್ಯಾಗ್ರಹಗಳು ನಡೆಯತೊಡಗಿದವು. 'ಶಿವಪುರದ ಧ್ವಜಸತ್ಯಾಗ್ರಹ'

ಸ್ವಾತಂತ್ರ್ಯ ಸಂಗ್ರಾಮದ ಹಾದಿಯ ಮೈಲು ಗಲ್ಲೆನಿಸಿತು. ಶಿವಪುರದ ಸಭೆಯಲ್ಲಿ 'ಮೈಸೂರು ಕಾಂಗ್ರೆಸ್' ಪಕ್ಷ ಸ್ಥಾಪನೆಯ ಘೋಷಣೆಯೊಂದಿಗೆ, ಕಾಂಗ್ರೆಸ್‌ನ ಕಾರ್ಯ ಕ್ರಮಗಳೇನೆಂದು ಜನತೆಗೆ ಅರಿವು ಮಾಡಿ ಕೊಡಲು ನಿರ್ಧರಿಸಿತು. ಜವಾಬ್ದಾರಿ ಸರ್ಕಾರದ ರಚನೆಗೂ ಈ ಸಭೆ ಕರೆಕೊಡ ಬೇಕಾಗಿತ್ತು. ಸ್ವತಂತ್ರವಾದ ರಾಷ್ಟ್ರಧ್ವಜ ಹಾರಿಸುವ ಆದರ ಕಾರ್ಯಕ್ರಮ ಎಲ್ಲಕ್ಕೂ ಪ್ರಧಾನವಾದುದಾಗಿತ್ತು. ಧ್ವಜ ಹಾರಿಸು ವುದು, ಚಳುವಳಿಯನ್ನು ತೀವ್ರಗೊಳಿಸಿ ದೇಶ ಪ್ರೇಮವನ್ನು ಎಚ್ಚರಿಸಲು ಸಹಾಯಕ ವಾಗುತ್ತದೆಂದು ತಿಳಿದ ಸರ್ಕಾರ, ಶಿವಪುರದ ಐದು ಮೈಲಿ ಫಾಸಲೆಯಲ್ಲೆಲ್ಲೂ ಧ್ವಜಾ-ರೋಹಣ ಮಾಡಲಾಗದು, ಪ್ರತ್ಯೇಕ ಧ್ವಜ ವುಳ್ಳ ಮಹಾರಾಜರ ಅಧಿಪತ್ಯಕ್ಕೆ ಅದು ಆತಂಕವೆನಿಸುತ್ತದೆಂದೂ ಒಂದು ತಿಂಗಳ ಅವಧಿಯ ನಿಷೇಧಾಜ್ಞೆ ಹೊರಡಿಸಿತು.

ಈ ಘಟನೆ ೧೯೩೮ರ ಏಪ್ರಿಲ್‌ನಲ್ಲಿ ನಡೆ ಯುವ ವೇಳೆಗೆ ಸುಗ್ಗಿಯ ಕಟಾವು ಮುಗಿದು ಬರಿದಾದ ರಸ್ತೆಬದಿಯ ವಿಶಾಲ ಗದ್ದೆ ಬಯಲನ್ನು ಮಟ್ಟಸಗೊಳಿಸಿ ಚಪ್ಪರ ಹಾಕ ಲಾಗಿತ್ತು. ಬಂದ ಅತಿಥಿಗಳಿಗೆ ಊಟದ ವ್ಯವಸ್ಥೆಯೊಂದಿಗೆ, ವಿಶಾಲವಾದ ಅಂಗಳ ದಲ್ಲಿ ಧ್ವಜಾರೋಹಣ ಸಮಾರಂಭಕ್ಕೆ ಅಣಿ ಗೊಳಿಸಲಾಗಿತ್ತು. ಮೈಸೂರಿನ ಹಿರಿಯ ಸಮಾಜ ಸೇವಕ ಸಾಹುಕಾರ್ ಚನ್ನಯ್ಯ ನವರು ಸ್ವಾಗತ ಸಮಿತಿಯ ಅಧ್ಯಕ್ಷರು. ಕಾರ್ಯಕ್ರಮದ ಪ್ರಕಾರ ಸಭೆಗೆ ಅಧ್ಯಕ್ಷ ರಾಗಿ ಚುನಾಯಿತರಾದವರನ್ನು ಹಿಂದಿನ ಸಂಜೆಯೇ ಭವ್ಯ ಮೆರವಣಿಗೆಯಲ್ಲಿ ಮದ್ದೂರಿನಿಂದ ಸಭಾಂಗಣಕ್ಕೆ ಕರೆತರ ಬೇಕಿತ್ತು. ಧ್ವಜಾರೋಹಣ ಮರು ಬೆಳಗಿನ ಕಾರ್ಯಕ್ರಮ.

ಮೆರವಣಿಗೆಯಂತೂ ಅತ್ಯದ್ಭುತ. ಮೈಸೂರು ಕಾಂಗ್ರೆಸ್ ಅಧ್ಯಕ್ಷ ಟಿ. ಸಿದ್ದಲಿಂಗಪ್ಪನವರನ್ನು ೧೦೦ ಜೋಡಿ ಎತ್ತುಗಳನ್ನು ಕಟ್ಟಿ ಸಿಂಗರಿಸಿದ ಗಾಡಿಯಲ್ಲಿ ಕರೆತರಲಾಯ್ತು. ಸಾವಿರಾರು ಕಂಠಗಳಿಂದ ಮೊಳಗುತ್ತಿದ್ದ ಜೈಕಾರ ಹಾಗೂ ನಗಾರಿಗಳ ಸದ್ದಿನ ನಡುವೆ ಮೆರವಣಿಗೆ ಶಿವಪುರ ತಲುಪಿ ದಾಗ ಜನತೆಯ ಶುಭಕಾಮನೆಗಳನ್ನು ಸ್ವೀಕರಿಸಿ, ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಭಾಗವಹಿಸಲು ತೆರಳಿ ದರು ಸಿದ್ದಲಿಂಗಯ್ಯ. ನೆರೆದ ದೊಡ್ಡ ಗುಂಪು ರಾತ್ರಿಯಾದಂತೆ ಕರಗಿತು. ರೈಲ್ವೇ ನಿಲ್ದಾಣದ ಪ್ಲಾಟ್ ಫಾರಂನಿಂದ ಹಿಡಿದು, ಜಾಗ ಕಂಡಲ್ಲಿ ಮಲಗಿದರು ಜನ.

೧೯೩೮ರ ಏಪ್ರಿಲ್ ೧೧ರ ಬೆಳಗು ಐತಿ-ಹಾಸಿಕ ದಿನ. ಮದ್ದೂರ ಹೊರ ವಲಯ ದಿಂದ ಶಿಂಷಾ ಸೇತುವೆಯವರೆಗಿನ ಹಾದಿ ಯುದ್ದಕ್ಕೂ, ಕೋವಿ ಹಿಡಿದ ೬೦೦ ಮಂದಿ ಪೊಲೀಸರು. ಸಾಲದಂತೆ ಲಾಠಿ ಹಿಡಿದ ಸಾವಿರ ಮಂದಿ ಪೊಲೀಸರು ರಸ್ತೆ ಯುದ್ದಕ್ಕೂ ಸಂಚರಿಸುತ್ತಿದ್ದರು. ಆದರೆ ಸ್ವಾತಂತ್ರ್ಯ ಪ್ರೇಮಿಗಳಾದ ಜನತೆ ಧೃತಿ ಗೆಡಲಿಲ್ಲ. ಎಲ್ಲ ದಿಕ್ಕುಗಳಿಂದ ಧ್ವಜಾ-ರೋಹಣದ ಅಪೂರ್ವ ಕಾರ್ಯಕ್ರಮಕ್ಕೆ ಬಂದ ೪೦,೦೦೦ ಮಂದಿ ಅಲ್ಲಿ ನೆರೆದರು. ಆ ಪ್ರದೇಶವೆಲ್ಲಾ ಬಿಳಿ ಕಾಂಗ್ರೆಸ್ ಟೊಪ್ಪಿಗೆಯ ಸಮುದ್ರದಂತೆ ಕಾಣುತ್ತಿತ್ತು. ಉತ್ಸಾಹ ಹಾಗೂ ಉದ್ರೇಕ ತುಂಬಿದ ವಾತಾವರಣ. ಡೆಪ್ಯುಟಿ ಕಮೀಷನರಾಗಿ ನಿಯುಕ್ತರಾಗಿದ್ದ ಕೆ. ಸುಬ್ಬರಾವ್ ಸ್ಥಳದ

ವೀಕ್ಷಣೆ ನಡೆಸುತ್ತಿದ್ದರು. ಮಂಡ್ಯ ಆಗ ಮೈಸೂರು ಜಿಲ್ಲೆಯ ಒಂದು ಭಾಗವಾಗಿತ್ತು. ಮೈಸೂರು ಡೆಪ್ಯುಟಿ ಕಮೀಷನರ್ ಹಾಗೂ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾಗಿದ್ದ ಎಂ. ಜೆ. ಮೇಖ್ರಿ ಇತರ ಅಧಿಕಾರಿಗಳೊಂದಿಗೆ, ಅಲ್ಲಿನ ಸಿದ್ಧತೆಗಳನ್ನು ಪರಿಶೀಲಿಸುತ್ತಿದ್ದರು. ಗೋಲಿಬಾರ್ ಆಗಬಹುದೆಂಬ ಸುದ್ದಿಯನ್ನು ಸರ್ಕಾರ ಹಬ್ಬಿಸಿದ್ದರೂ ಜನ ಹಿಂತೆಗೆಯಲಿಲ್ಲ.

ಕೆಲವೇ ಮಾರುಗಳಂತರದಲ್ಲಿ ಶಿವಪುರ ರಸ್ತೆ ಬದಿಯ ವೇದಿಕೆಯ ಮೇಲೆ ೬೦–೭೦ ಅಡಿ ಎತ್ತರದ ಧ್ವಜಸ್ತಂಭವೊಂದು ಸಿದ್ಧವಾಗಿತ್ತು. ಹಿಂದಿನ ಸಂಜೆಯೇ ಜಿಲ್ಲಾ ಮ್ಯಾಜಿಸ್ಟ್ರೇಟರು, ಕಾಂಗ್ರೆಸ್ ಬಾವುಟ ಹಾರಿಸದಂತೆ ಹೊರಡಿಸಿದ ನಿಷೇಧಾಜ್ಞೆಯ ಉಲ್ಲಂಘನೆಯಾಗದಂತೆ ನೋಡಿಕೊಳ್ಳಲು ಖುದ್ದು ಹಾಜರಿದ್ದರು.

ಧ್ವಜಾರೋಹಣ ಬೆಳಗಿನ ೮ ಘಂಟೆಗೆಂದು ನಿಗದಿತವಾಗಿತ್ತು. ಸೇವಾದಳದ ಸ್ವಯಂ ಸೇವಕರು ಬಂದು ವೇದಿಕೆಯ ಬಳಿ ನಿಂತರು. ನಾಯಕರು ಒಬ್ಬೊಬ್ಬರಾಗಿ ಬರತೊಡಗಿದರು. ತರುಣ ಸಮೂಹಕ್ಕೆ ಅದೊಂದು ಉತ್ಸಾಹದ ಘಳಿಗೆ. ಹೆಚ್. ಸಿ. ದಾಸಪ್ಪ, ಹೆಚ್. ಕೆ. ವೀರಣ್ಣಗೌಡ, ಸಾಹುಕಾರ್ ಚನ್ನಯ್ಯ, ತಗಡೂರು ರಾಮಚಂದ್ರರಾವ್, ಕೆ. ಸಿ. ರೆಡ್ಡಿ, ಟಿ. ಮರಿಯಪ್ಪ, ಪಾರ್ಥನಾರಾಯಣ ಪಂಡಿತ, ಹೆಚ್. ಸಿದ್ದಯ್ಯ, ಬಳ್ಳಾರಿ ಸಿದ್ದಮ್ಮ, ವೆಂಕಟಪ್ಪ ಹಾಗೂ ಅನೇಕ ಮಂದಿ ಮುಂದಾಳುಗಳು ಉಪಸ್ಥಿತರಿದ್ದರು.

ಜನತೆಗೆ ಅದೊಂದು ಆತಂಕದ ಘಳಿಗೆ ಕೂಡ. ಅಧಿಕಾರಶಾಹಿಯ ಬಗೆಗೆ ಅವರಲ್ಲಿದ್ದ ಕಹಿ ಭಾವನೆ ಎದ್ದು ಕಾಣುತ್ತಿತ್ತು. ಒಂದೇ ಒಂದು ತಪ್ಪು ಹೆಜ್ಜೆಯಿಂದ ಹಿಂಸೆ, ರಕ್ತಪಾತ, ಕೊಲೆಯೊಂದಿಗೆ ಆ ಸ್ಥಳವನ್ನೇ ರಣರಂಗವಾಗಿಸಬಹುದಿತ್ತು. ಆದರೆ ಪೊಲೀಸರು, ಕಾಂಗ್ರೆಸ್ ನಾಯಕರು ಸಾಕಷ್ಟು ಮುನ್ನೆಚ್ಚರಿಕೆ ವಹಿಸಿ ತಾಳ್ಮೆಯಿಂದ ವರ್ತಿಸಿದರೆಂದು ತೋರುತ್ತದೆ. ಇಲ್ಲದಿದ್ದಲ್ಲಿ ಅನೇಕ ದೇಶಭಕ್ತರಿಗೆ ಅಪಾಯವಾಗುವ ಸಂದರ್ಭವಿತ್ತು.

೮ ಘಂಟೆಗೆ ಸರಿಯಾಗಿ ಶ್ರೀ ಸಿದ್ದಲಿಂಗಯ್ಯ ವೇದಿಕೆ ಹತ್ತಿ ಧ್ವಜಸ್ತಂಭದ ಬಳಿ ಬಂದರು. ಕೂಡಲೇ ಅಲ್ಲಿ ಹಾಜರಿದ್ದ ಪೊಲೀಸ್ ಸೂಪರಿಂಟೆಂಡೆಂಟ್ ಅವರ ಬಳಿ ಬಂದು ಕಾಂಗ್ರೆಸ್ ಧ್ವಜಾರೋಹಣ ನಿಷೇಧಿಸಲ್ಪಟ್ಟಿದೆ ಎಂಬ ಅಧಿಕಾರಯುತ ಎಚ್ಚರಿಕೆ ನೀಡಿದರು. ಆಜ್ಞೆಯನ್ನು ಉಲ್ಲಂಘಿಸಿದ ಸಿದ್ದಲಿಂಗಯ್ಯ ಧ್ವಜ ಹಾರಿಸಲು ಮುಂದಾದರು. ತಕ್ಷಣವೇ ದಸ್ತಗಿರಿ ಮಾಡಲ್ಪಟ್ಟರು. ನಂತರ ಮುಂದಾದವರು ಹೆಚ್. ಸಿ. ದಾಸಪ್ಪ, ಮೈಸೂರಿನಿಂದ ಬಂದಿದ್ದ ಯಶೋಧರಮ್ಮ ದಾಸಪ್ಪ, ಸುನಂದ ಐಯ್ಯಂಗಾರ್, ಪಾಲಹಳ್ಳಿ ವೆಂಕಮ್ಮ ಹಾಗೂ ಸುಬ್ಬಮ್ಮ ಜೋಯಿಸ್ ನಿಷೇಧಾಜ್ಞೆಯನ್ನು ಉಲ್ಲಂಘಿಸಲೇಬೇಕೆಂದು ಒತ್ತಿ ಹೇಳಿದರು. ಸೇವಾದಳದ ಜಿ.ಒ.ಸಿ. (ಜನರಲ್ ಆಫೀಸರ್ ಕಮಾಂಡಿಂಗ್) ಎಂ. ಎಸ್. ಜೋಯಿಸರು "ಅಧ್ಯಕ್ಷರು ದಸ್ತಗಿರಿ ಮಾಡಲ್ಪಟ್ಟಿದ್ದಾರೆ. ಆದ್ದರಿಂದ ಜಿ.ಒ.ಸಿ. ಧ್ವಜ ಹಾರಿಸುತ್ತಾರೆ" ಎನ್ನುತ್ತಾ ಧ್ವಜದ ಹಗ್ಗವನ್ನೆಳೆದೇಬಿಟ್ಟರು. ಧ್ವಜ ಹಾರಿತು. ಪೊಲೀಸ್ ಸೂಪರಿಂಟೆಂಡೆಂಟರು ದಿಗ್ಮೂಢರಾದರು. ಧ್ವಜ ಮೆಲ್ಲನೆ ಬಿಚ್ಚಿಕೊಳ್ಳುತ್ತ

ಹೋದಂತೆ ಇಡೀ ಪ್ರದೇಶವೆಲ್ಲಾ "ಭಾರತ ಮಾತಾಕೀ ಜೈ" ಎಂಬ ಜಯಕಾರದೊಂದಿಗೆ ಮಾರ್ದನಿಸಿತು. ನೆರೆದ ಜನತೆ ರೋಮಾಂಚಿತರಾದರು. ಎಂ. ಎನ್. ಜೋಯಿಸರನ್ನು ದಸ್ತಗಿರಿ ಮಾಡಲಾಯ್ತು.

ಹೀಗೆ ಶಾಂತಿಪೂರ್ಣವಾದ, ಅಹಿಂಸಾತ್ಮಕ ಸತ್ಯಾಗ್ರಹವೊಂದು ನಡೆದು ಅದು ಕರ್ನಾಟಕದಲ್ಲಿ ನಡೆದ ಸ್ವಾತಂತ್ರ್ಯ ಚಳುವಳಿಯ ಚರಿತ್ರೆಯಲ್ಲಿ ಸುವರ್ಣಾಕ್ಷರಗಳಲ್ಲಿ ಬರೆದಿಡುವಂತಹ ಸತ್ಯಾಗ್ರಹವೆನಿಸಿತು. ನಂತರ ಸರ್ಕಾರದ ಪ್ರತಿಬಂಧಕಾಜ್ಞೆಯನ್ನು ಪ್ರತಿಭಟಿಸಿ ಒಂದು ತಿಂಗಳ ಕಾಲವೂ ಶಿವಪುರದಲ್ಲಿ ರಾಷ್ಟ್ರಧ್ವಜವೇರಿಸುವ ಸತ್ಯಾಗ್ರಹ ನಡೆಸಲು ತೀರ್ಮಾನವಾಯ್ತು. ಸರದಿ ಪ್ರಕಾರ ಧ್ವಜದ ಬಳಿ ಹೋದ ಹೆಚ್. ಸಿ. ದಾಸಪ್ಪ, ಕೆ. ಸಿ. ರೆಡ್ಡಿ, ವಿ. ವೆಂಕಟಪ್ಪ, ಕೆ. ಟಿ. ಭಾಷ್ಯಮ್, ಹೆಚ್. ಸಿದ್ದಯ್ಯ ಮುಂತಾದವರೆಲ್ಲಾ ದಸ್ತಗಿರಿ ಮಾಡಲ್ಪಟ್ಟರು. ಉಳಿದ ನಾಯಕರು ಜನರಲ್ಲಿ ಉತ್ಸಾಹ ತುಂಬುವ ಭಾಷಣಗಳನ್ನು ಮಾಡಿದರು.

ಈ ಘಟನೆ ಶಿವಪುರದ ಧ್ವಜ ಸತ್ಯಾಗ್ರಹವೆಂದು ದೇಶಾದ್ಯಂತ ಕೀರ್ತಿಗಳಿಸುವುದರೊಂದಿಗೆ ಗಾಂಧೀಜಿಯವರ ಮೆಚ್ಚುಗೆಯನ್ನೂ ಗಳಿಸಿತು. ಇದರಿಂದ ಸ್ಫೂರ್ತಿಗೊಂಡು, ಸಂಸ್ಥಾನದ ಇತರ ಕಡೆಗಳಲ್ಲಿ ಜನ ನಿಷೇಧಾಜ್ಞೆಯನ್ನು ಉಲ್ಲಂಘಿಸಿ, ಬಾವುಟವೇರಿಸಿ ಸತ್ಯಾಗ್ರಹ ನಡೆಸಿದರು. ಭಾರತದ ಇತರ ಸಂಸ್ಥಾನಗಳಲ್ಲಿ ಸತ್ಯಾಗ್ರಹದ ಅರಿವೂ ಸರಿಯಾಗಿ ಮೂಡಿರದಿದ್ದ ಕಾಲದಲ್ಲಾಗಲೇ ಕನ್ನಡನಾಡಿನ ಹಳ್ಳಿಯೊಂದರಲ್ಲಿ ಅಂತಹ ಅಭೂತಪೂರ್ವ ಚಳುವಳಿಯೊಂದು ನಡೆದುದು ಅಚ್ಚರಿಯ ಘಟನೆ. ಈ ವಿಶೇಷ ಘಟನೆಯಿಂದಾಗಿ 'ಮೈಸೂರು ಕಾಂಗ್ರೆಸ್' ಜನ್ಮ ತಳೆದು ರಾಜ್ಯಾದ್ಯಂತ ಚಳುವಳಿ ನಡೆಸಿ ಜವಾಬ್ದಾರಿ ಸರ್ಕಾರ ರಚಿಸಿತು. ರಾಷ್ಟ್ರಧ್ವಜ ಹಾರಿಸುವ ಹಕ್ಕು ಸ್ಥಾಪಿತವಾಯ್ತು. ಭಾರತ ಹೆಜ್ಜೆ ಹೆಜ್ಜೆಯಾಗಿ ಸ್ವಾತಂತ್ರ್ಯದತ್ತ ಮುನ್ನಡೆಯಿತು.

ಶಿವಪುರ, ನಂತರದ ದಿನಗಳಲ್ಲಿ ಎಂದಿನ ತನ್ನ ಮೌನದಾಳಕ್ಕಿಳಿಯಿತು. ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಹಾಗೂ ಆ ಘಟನೆಗೆ ಸಾಕ್ಷಿಭೂತರಾದ ಜನಾಂಗದ ನಿಧನದೊಂದಿಗೆ, ಶಿವಪುರ ಐತಿಹಾಸಿಕ ಘಟನೆ ಮರೆಯಿತು. ಮುಂದೆ ಕರ್ನಾಟಕದ ಮುಖ್ಯಮಂತ್ರಿಗಳಾದ ಕೆಂಗಲ್ ಹನುಮಂತಯ್ಯನವರ ದೂರದೃಷ್ಟಿಯಿಂದ ಆ ಸತ್ಯಾಗ್ರಹದ ನೆನಪು ಚಿರಕಾಲ ಉಳಿಯುವಂತೆ ಆ ಘಟನೆಯ ಕುರುಹಾಗಿ ನಿರ್ಮಿಸಿದ 'ಸತ್ಯಾಗ್ರಹ ಸೌಧ' ೧೯೭೪ರಲ್ಲಿ ಉದ್ಘಾಟನೆಗೊಂಡಿತು.

ನೂರಾರು ಪ್ರಯಾಣಿಕರು ಈ ಸೌಧವನ್ನು ದಿನವೂ ದಾಟಿ ಸಾಗಿದರೂ, ಅವರಾರೂ ಈ ಐತಿಹಾಸಿಕ ಘಟನೆ ನಡೆದ ಸ್ಥಳದ ಬಗ್ಗೆ ವಿಶೇಷ ಆಸಕ್ತಿ ತೋರದೆ ಹೋಗುತ್ತಾರೆ. ಪ್ರವಾಸೋದ್ಯಮ ವಿಭಾಗ ತನ್ನ ಪಟ್ಟಿಯಲ್ಲಿ ಈ ಹೆಸರನ್ನು ಸೇರಿಸದಿರುವುದು ಅಚ್ಚರಿಯ ಸಂಗತಿ. ಭಾರತದ ಸ್ವಾತಂತ್ರ್ಯದ ಕನಸನ್ನು ನನಸಾಗಿಸಲು ಕಾರಣವಾಗಿ, ಇತಿಹಾಸ ಸ್ಮಾರಕವಾದ ಈ ಕಟ್ಟಡ ರಾಷ್ಟ್ರೀಯ ಆಸ್ತಿ.

ಸ್ವಾತಂತ್ರ್ಯ ಸೇನಾನಿ ಎಂ. ಎನ್. ಜೋಯಿಸ್

ರಂಗಧಾಮಯ್ಯ
ಕಾರ್ಯದರ್ಶಿ
ಕನ್ನಡ ಸಹೃದಯ ಬಳಗ
ಸಿಎಫ್‌ಟಿಆರ್‌ಐ, ಮೈಸೂರು.

ಮಹಾತ್ಮ ಗಾಂಧೀಜಿಯವರು ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮನ್ನು ಸಕ್ರೀಯವಾಗಿ ತೊಡಗಿಸಿಕೊಂಡ ಸಂದರ್ಭದಲ್ಲಿ, ಸ್ವರಾಜ್ಯ ಗಳಿಕೆಯ ಹಂಬಲ ಜನಮನದಲ್ಲಿ ತುಡಿಯುತ್ತಿತ್ತು. ಅದಕ್ಕಾಗಿ ಸಾವಿರಾರು ಜನ ಬ್ರಿಟಿಷರ ಗುಂಡಿಗೆ ಬಲಿಯಾಗಿ ಅಮರರಾಗಿದ್ದರು. ಅವರ ತ್ಯಾಗ ಬಲಿದಾನಗಳು ಸ್ವಾತಂತ್ರ್ಯ ಗೀತೆಗಳಾಗಿ ಜನನಾಲಗೆಯ ಮೇಲೆ ನರ್ತಿಸುತ್ತಿದ್ದುವು. ಗಾಂಧೀಜಿಯವರು ಜನಮನದ ಯುಗಪುರುಷರಾಗಿ ಚಳುವಳಿಯನ್ನು ದಿಗ್ದರ್ಶಿಸಿದರು. ದೇಶಭಕ್ತ ಹೋರಾಟಗಾರರಿಗೆ ಇರಬೇಕಾದ ಸತ್ಯ, ಅಹಿಂಸೆ, ತ್ಯಾಗ, ಧೈರ್ಯ, ಶಾಂತಿ ಮೊದಲಾದುವುಗಳ ಮಹತ್ವವನ್ನು ವಿವರಿಸಿದರು. ಬ್ರಿಟಿಷರನ್ನು ಬಗ್ಗು ಬಡಿಯಲು ಅಹಿಂಸೆ ಎಂಬ ಬ್ರಹ್ಮಾಸ್ತ್ರದ ಬಳಕೆಯ ಅಗತ್ಯವನ್ನು ಎತ್ತಿ ಹಿಡಿದರು. ಸತ್ಯಕ್ಕಾಗಿ ಹೋರಾಟಗಳನ್ನು ಸಜ್ಜುಗೊಳಿಸಿದರು. ಅಸಹಕಾರ ಚಳುವಳಿಗಳನ್ನು ರೂಪಿಸಿದರು. ಇಡೀ ದೇಶ ಅವರ ಮಾರ್ಗದರ್ಶನಕ್ಕಾಗಿ ಎದುರು ನೋಡುತ್ತಿತ್ತು. ಆಗ ಮೈಸೂರು ಗಾಂಧೀಜಿಯವರ ಪ್ರಭಾವದಿಂದ ಮುಕ್ತವಾಗಿರಲಿಲ್ಲ. ಇಲ್ಲಿಯ ತಗಡೂರು ರಾಮಚಂದ್ರರಾಯರು, ಆಗರಂ ರಂಗಯ್ಯ, ಎಂ. ವೆಂಕಟಕೃಷ್ಣಯ್ಯ ಮೊದಲಾದವರು ಗಾಂಧೀಜಿಯವರ ಆದರ್ಶವನ್ನು ಪಾಲಿಸುತ್ತಿದ್ದರು.

೧೯೨೦ ರ ಸುಮಾರು. ಕರ್ನಾಟಕದ ಎಲ್ಲೆಡೆ ತಿರುಗಾಡಿ ತಮ್ಮ ಪ್ರಭಾವಯುತವಾದ ಭಾಷಣಗಳಿಂದ ಜನಮನ ಪರಿವರ್ತನೆಯ ಪವಿತ್ರ ಕಾರ್ಯದಲ್ಲಿ ತೊಡಗಿದ್ದ ಮುದವೀಡು ಕೃಷ್ಣರಾಯರು ಮೈಸೂರಿಗೆ ಆಗಮಿಸಿ ಸದ್ವಿದ್ಯಾ ಪಾಠಶಾಲೆಯ ಹೊರ ಆವರಣದಲ್ಲಿ ಒಂದುವಾರದ ಸ್ವಾತಂತ್ರ್ಯ ಪ್ರಚಾರ ಭಾಷಣದಲ್ಲಿ ಪಾಲ್ಗೊಂಡರು. ಇವರ ಮಾತುಗಳನ್ನು ಕೇಳುವುದಕ್ಕಾಗಿ ಸಹಸ್ರಾರು ಸಂಖ್ಯೆಯಲ್ಲಿ ಜನ ಸೇರಿದರು. ದಿನದಿಂದ ದಿನಕ್ಕೆ ಗುಂಪು ಇಮ್ಮಡಿಯಾಗತೊಡಗಿತ್ತು, ವಿದೇಶಿ ವಸ್ತ್ರದಹನದ ಕೊನೆಯ ಹಂತದಲ್ಲಿ, ಜನತೆ ತಂಡೋಪತಂಡವಾಗಿ ಬಂದು ತಮ್ಮಲ್ಲಿದ್ದ ವಿದೇಶಿ ವಸ್ತುಗಳನ್ನು ಅಗ್ನಿದೇವನಿಗೆ ಅರ್ಪಿಸಿತು.. ಮುದವೀಡು ಕೃಷ್ಣರಾಯರ ಭಾಷಣವನ್ನು ಒಂದು ವಾರದಿಂದಲೂ ಆಸಕ್ತಿಯಿಂದ ಆಲಿಸುತ್ತಿದ್ದ ಬಾಲಕನೊಬ್ಬ, ಜನರ ಉತ್ಸಾಹವನ್ನು ಹತ್ತಿರದಿಂದ ಕಂಡು ವಿದೇಶಿ ವಸ್ತ್ರ ದಹನದಲ್ಲಿ ಪಾಲ್ಗೊಂಡ. ತಾನು ತೊಟ್ಟಿದ್ದ ಉಡುಪುಗಳನ್ನೇ ಕಳಚಿ

ಅಗ್ನಿಗರ್ಪಿಸಿಬಿಟ್ಟ! ಲಂಗೋಟಿಯನ್ನುಳಿದು ಬೇರಾವ ಉಡುಪೂ ಅವನ ಮೈಮೇಲೆ ಇರಲಿಲ್ಲ. ಬಾಲಕ ತನ್ನ ಮನೆಯತ್ತ ನಡೆದ. ಇವನ ಮಡಿವಂತ ತಂದೆ ಮಗನ ಕೃತ್ಯದಿಂದ ಕೆಂಡಮಂಡಲವಾದರು. ಕೈಗೆ ಸಿಕ್ಕಿದ ಸೌದೆಯ ತುಂಡಿನಿಂದ ಬಡಿದರು. ಅವನನ್ನು ಮನೆಯಿಂದ ಹೊರತಳ್ಳಿದರು. ಬಾಲಕನ ಮೈಮೇಲೆ ಬಾಸುಂಡೆಗಳೆದ್ದುವು. ಗೀರು ಗಾಯಗಳಿಂದ ರಕ್ತ ಒಸರುತ್ತಿತ್ತು. ಅವನು ತನ್ನ ನೋವನ್ನು ಲೆಕ್ಕಿಸದೆ, ತನ್ನನ್ನು ಸ್ವಾತಂತ್ರ್ಯ ಸಮರಕ್ಕೆ ಸಮರ್ಪಿಸಿ ಕೊಂಡುಬಿಟ್ಟ! ಅವನಿಗಿನ್ನೂ ಆಗ ೧೪ ವರ್ಷಗಳು. ಆ ಧೀರ ಬಾಲಕನೇ ಎಂ. ಎಸ್. ಜೋಯಿಸ್.

ಎಂ. ಎಸ್. ಜೋಯಿಸರ ಹಿರಿಯರು ತಂಜಾವೂರಿನಿಂದ ಬಂದು ಮೈಸೂರಿನ ರಾಜಾಶ್ರಯದಲ್ಲಿದ್ದರು. ಅವರೆಲ್ಲಾ ವೇದ ವಿದ್ಯಾಪಾರಂಗತರಾಗಿದ್ದರು. ರಾಜಮನ್ನಣೆ ಯನ್ನು ಗಳಿಸಿ, ಜನಾನುರಾಗಿಯಾಗಿದ್ದರು. ಈ ವಂಶದ ನರಹರಿ ಜೋಯಿಸರು ಜ್ಯೋತಿಷ್ಯರತ್ನ ವಿಶಾರದರೆನಿಸಿದ್ದರು. ದೇಶದ ವಿವಿಧ ಭಾಗಗಳಲ್ಲಿ ನಡೆದ ವಿದ್ವತ್ ಗೋಷ್ಠಿಗಳಲ್ಲಿ ಭಾಗವಹಿಸಿ ಪಾಂಡಿತ್ಯ ಪ್ರದರ್ಶನ ಮಾಡಿ ಖ್ಯಾತರಾಗಿದ್ದರು. ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರು ಇವರಿಗೆ "ಜ್ಯೋತಿಷ್ಯ ರತ್ನ" ಎಂಬ ಬಿರುದನ್ನಿತ್ತು ಸನ್ಮಾನಿಸಿದ್ದರು.

ಪ್ರಸಿದ್ಧರಾದ ನರಹರಿ ಜೋಯಿಸರ ನಾಲ್ಕು ಜನ ಕಿರಿಯ ಸೋದರರಲ್ಲಿ ಮೂರನೆ ಯವರು ಎಂ. ನಾರಾಯಣ ಜೋಯಿಸರು. ಸಂಸ್ಕೃತ ಮತ್ತು ಇಂಗ್ಲಿಷನ್ನು ಬಲ್ಲವ ರಾಗಿದ್ದು, ಮರಿಮಲ್ಲಪ್ಪ ಪ್ರೌಢಶಾಲೆಯಲ್ಲಿ ಇಂಗ್ಲಿಷ್ ಅಧ್ಯಾಪಕರಾಗಿ ಸೇವೆ ಸಲ್ಲಿಸಿ ದ್ದರು. ಸಮಾಜದ ಗಣ್ಯವ್ಯಕ್ತಿಯಾಗಿ ಹೆಸರಾ ಗಿದ್ದರು. ಇವರ ಧರ್ಮಪತ್ನಿ ನಂಜಮ್ಮ ಪತಿಯ ನೆರಳಾಗಿ ಕಷ್ಟಸುಖದಲ್ಲಿ ಪಾಲ್ಗೊಂಡವರು. ಧಾರ್ಮಿಕಾಚರಣೆಗಳಲ್ಲಿ ನಿಷ್ಠರಾಗಿದ್ದರು. ಬೇಡಿ ಬಂದವರನ್ನು ಬರಿಗೈಯಲ್ಲಿ ಕಳುಹಿಸುತ್ತಿರಲಿಲ್ಲ. ಅತಿಥಿ ಅಭ್ಯಾಗತರನ್ನು ಆದರದಿಂದ ಉಪಚರಿಸು ತ್ತಿದ್ದರು. ವಾರಾನ್ನದ ಹುಡುಗರನ್ನು ಪೋಷಿಸಿ, ಊಟ, ವಸತಿ ಯೋಗಕ್ಷೇಮ ಗಳನ್ನು ನೋಡಿಕೊಂಡರು. ಎಷ್ಟೋ ಸಾರಿ ಸಾಲ ಮಾಡಿ ಆತಿಥ್ಯಕ್ಕೆ ಚ್ಯುತಿ ಬಾರದಂತೆ ನೋಡಿಕೊಳ್ಳುತ್ತಿದ್ದರು. ನೂರಾರು ಜನರಿಗೆ ಅನ್ನವಿಕ್ಕಿ, ಅವರ ಉಜ್ವಲ ಭವಿಷ್ಯವನ್ನು ರೂಪಿಸಿದ ಈ ಅನುರೂಪಿ ದಂಪತಿಗಳ ಬದುಕು ಮಾತ್ರ ಬಡತನದ ಬೀಡಾಗಿತ್ತು. ಈ ದಂಪತಿಗಳ ಏಳು ಮಕ್ಕಳಲ್ಲಿ ಹಿರಿಯ ಮಗನಾಗಿ ಎಂ. ಎಸ್. ಜೋಯಿಸರು ೧೪–೧೨–೧೯೦೫ ರಂದು ಜನಿಸಿದರು ಬಾಲ್ಯದಲ್ಲಿಯೇ ಬಡತನದ ರುಚಿಕಂಡ ಜೋಯಿಸರಿಗೆ, ಬಡವರನ್ನು ಕಂಡರೆ ಹೆಚ್ಚು ಆತ್ಮೀಯತೆ.

ಎಂ. ಎಸ್. ಜೋಯಿಸರು ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿ ಮರಿಮಲ್ಲಪ್ಪ ಪ್ರೌಢಶಾಲೆಗೆ ಸೇರಿದರು. ಅಲ್ಲಿ ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರೇ ಮೊದಲಾದ ಸಮರ್ಥ ಗುರುಗಳ ಮಾರ್ಗ ದರ್ಶನ ಲಭಿಸಿತು. ಹುಡುಗರಲ್ಲಿ ದೇಶಪ್ರೇಮ ವನ್ನು ತುಂಬುವ ಗುರುತರವಾದ ನೈತಿಕ ಜವಾಬ್ದಾರಿಯ ಅರಿವಿದ್ದ ಅವರು-ದೇಶಭಕ್ತ ವೀರರ, ಹುತಾತ್ಮರ ಕತೆಗಳನ್ನು ರಸವತ್ತಾಗಿ ವರ್ಣಿಸುತ್ತಿದ್ದರು. ಸ್ವಾತಂತ್ರ್ಯ ಚಳುವಳಿಯ

ಅಲೆಗೆ ಸಿಲುಕಿದ್ದ ಹುಡುಗರ ಮಾನಸ್ಸನ್ನು ಹದಗೊಳಿಸುತ್ತಿದ್ದರು. ಇಲ್ಲಿಂದಲೇ ಬಾಲಕ ಎಂ. ಎನ್. ಜೋಯಿಸನಲ್ಲಿ ಬ್ರಿಟಿಷ್ ಪ್ರಭುತ್ವದ ವಿರುದ್ಧ ಭಾವನೆಗಳು ಬಲಿಯ ತೊಡಗಿದುವು. ಮನಸ್ಸು ಸ್ವಾತಂತ್ರ್ಯ ಹೋರಾಟಗಾರರ ಒಡನಾಟವನ್ನು ಬಯಸಿತು. ಪ್ರೌಢಶಾಲಾ ವ್ಯಾಸಂಗ ಮುಗಿದನಂತರ ಸ್ವಾತಂತ್ರ್ಯ ಚಳುವಳಿಯಲ್ಲಿ ಧುಮಿಕಿದರು.

ಆಗ ಮೈಸೂರು ಸಂಸ್ಥಾನವು ಬ್ರಿಟಿಷರ ಆಶ್ರಯದಲ್ಲಿದ್ದು, ಸಂಸ್ಥಾನದ ಆಡಳಿತವು ಬ್ರಿಟಿಷರ ಚಟುವಟಿಕೆಗಳನ್ನು ಪ್ರಶ್ನಿಸುವ ಸ್ಥಿತಿಯಲ್ಲಿರಲಿಲ್ಲ. ಕ್ರಿಶ್ಚಿಯನ್ ಪಾದ್ರಿಗಳು ಈ ಅವಕಾಶವನ್ನು ತಮ್ಮ ಧರ್ಮ ಪ್ರಚಾರಕ್ಕಾಗಿ ಬಳಸಿಕೊಂಡರು. ಸಂಸ್ಥಾನದ ಹಿಂದುಳಿದ ಜನರಿಗೆ ಪ್ರಲೋಭನೆಗಳನ್ನು ಒಡ್ಡಿದರು. ಅವರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರಿಸುವ ಷಡ್ಯಂತ್ರವನ್ನು ರೂಪಿಸಿದರು. ನೂರಾರು ಜನ ಹರಿಜನರು ಕ್ರಿಶ್ಚಿಯನ್ ಧರ್ಮಕ್ಕೆ ಸೇರತೊಡಗಿದಾಗ, ನಮ್ಮ ನಾಯಕರು ಜಾಗೃತರಾದರು. ಆಗ ತಗಡೂರು ರಾಮಚಂದ್ರರಾಯರು ಇದಕ್ಕಾಗಿ ಚಳುವಳಿಗಳನ್ನೇ ಹಮ್ಮಿಕೊಳ್ಳಬೇಕಾಯಿತು. ಇಂಥ ಸಮಯದಲ್ಲಿ ಎಂ. ಎನ್. ಜೋಯಿಸರು ತಗಡೂರರ ಒಡನಾಡಿಯಾಗಿ ಊರೂರು ಸುತ್ತಿ ಜನರಿಗೆ ತಿಳುವಳಿಕೆ ನೀಡುವ ಕಾರ್ಯದಲ್ಲಿ ನೆರವಾದರು. ವಾರಕ್ಕೊಮ್ಮೆಯಾದರು ಹರಿಜನ ಕೇರಿಗೆ ಹೋಗಿ ಸ್ವಚ್ಛತೆಯ ಬಗ್ಗೆ ತಿಳುವಳಿಕೆ ಕೊಡುತ್ತಿದ್ದರು.

ಸಂಸ್ಥಾನದ ಶ್ರೀಮನ್ಮಹಾರಾಜರಿಗೆ ನಿಷ್ಠರಾಗಿದ್ದ ನಾರಾಯಣ ಜೋಯಿಸರು ಮಗನ ನಡುವಳಿಕೆಯಿಂದ ಬೇಸತ್ತರು. ಸಂಪ್ರದಾಯನಿಷ್ಠ ದಂಪತಿಗಳಿಗೆ ಮಗನ ಸ್ವರಾಜ್ಯ ಚಟುವಟಿಕೆಗಳು ಸರಿಕಾಣಲಿಲ್ಲ. ಅವರನ್ನು ಚಳುವಳಿಯಿಂದ ವಿಮುಖರನ್ನಾಗಿಸಲು, ಜೋಯಿಸರ ವಿವಾಹವನ್ನು ನಿರ್ಧರಿಸಿದರು. ಮದ್ರಾಸು ಸರ್ಕಾರದ ನೌಕರಿಯಲ್ಲಿದ್ದ ಶ್ರೀಮಂತ ಕುಟುಂಬದ ಹೆಣ್ಣನ್ನು ಗೊತ್ತು ಮಾಡಿದರು. ಅವರು ಜೋಯಿಸರನ್ನು ಪ್ರಯಾಸದಿಂದಲೇ ಮದುವೆಗೆ ಒಪ್ಪಿಸಬೇಕಾಯಿತು. ಮದುವೆ ಸರಳವಾಗಿ ನಡೆಯಬೇಕೆಂದೂ, ಬಳುವಳಿಯಾಗಿ ಖಾದಿ ಪಂಚೆಯನ್ನೇ ನೀಡಬೇಕೆಂದು ಜೋಯಿಸರು ಪಟ್ಟು ಹಿಡಿದರು. ತಮ್ಮ ಹಿರಿಯ ಮಗಳ ಮದುವೆಯನ್ನು ಅದ್ದೂರಿಯಾಗಿ ಮಾಡಬೇಕೆಂದಿದ್ದ ಭಾವೀ ಮಾವ ಡಾ|| ವೆಂಕಟರಾಮಾ ಪಂಡಿತರಿಗೆ ತುಂಬಾ ನಿರಾಶೆಯಾಯಿತು. ಸದ್ವಿದ್ಯಾ ಪಾಠಶಾಲೆಯಲ್ಲಿ ಜೋಯಿಸರ ವಿವಾಹವು ೧೯೩೪ರಲ್ಲಿ ಸೌಭಾಗ್ಯವತಿ ಸುಬ್ಬಮ್ಮನವರೊಂದಿಗೆ ಸರಳವಾಗಿ ನಡೆಯಿತು.

ಮದುವೆಯಾದ ಮೇಲೆ ತಮ್ಮ ಮಗನು ಸ್ವರಾಜ್ಯ ಚಳುವಳಿಯ ಚಟುವಟಿಕೆಗಳನ್ನು ನಿಲ್ಲಿಸಬಹುದೆಂದು ಭಾವಿಸಿದ್ದ ನಾರಾಯಣ ಜೋಯಿಸರ ನಂಬಿಕೆ ಹುಸಿಯಾಯಿತು. ಅವನನ್ನು ಮನೆಯಲ್ಲಿ ಹಿಡಿದಿಟ್ಟುಕೊಳ್ಳುವುದು ಅಸಾಧ್ಯವೆನಿಸಿತು. ಜೋಯಿಸರ ಚಟುವಟಿಕೆಗಳು ವಿಸ್ತೃತಗೊಂಡುವು. ಶ್ರೀಮತಿ ಸುಬ್ಬಮ್ಮನವರು ಹಲವಾರು ವರ್ಷ ತೌರು ಮನೆಯಲ್ಲಿಯೇ ಉಳಿಯಬೇಕಾಯಿತು. ಇತ್ತ ಜೋಯಿಸರು ಸ್ವಾತಂತ್ರ್ಯ ಚಳುವಳಿಯ ಕಾರಣದಿಂದ

ಮೂರು ವರ್ಷದ ಬಿ.ಎ. ವ್ಯಾಸಂಗವನ್ನು ಆರು ವರ್ಷಗಳಲ್ಲಿ ಮುಗಿಸಬೇಕಾಯಿತು. ಇಷ್ಟೊತ್ತಿಗಾಗಲೇ ಅವರು ನಗರ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯಾಗಿ ಸಾಕಷ್ಟು ಅನುಭವ ಗಳಿಸಿದ್ದರು.

೧೯೩೧ರಲ್ಲಿ ಜೋಯಿಸರು ತಮ್ಮ ಸಾಂಸಾರಿಕ ಜೀವನವನ್ನು ಪ್ರಾರಂಭಿಸಿದರು. ಮಡಿವಂತ ತಂದೆ ತಾಯಿಗಳು ಅವರನ್ನು ತಮ್ಮೊಂದಿಗೆ ಇಟ್ಟುಕೊಳ್ಳಲು ಬಯಸಲಿಲ್ಲ. ಸ್ವತಂತ್ರರಾದ ಜೋಯಿಸರು ಸ್ವರಾಜ್ಯ ಚಳುವಳಿಯ ದೀಕ್ಷೆಯನ್ನು ತಮ್ಮ ಪತ್ನಿಗೂ ನೀಡಿದರು. ಅಂದಿನಿಂದ ಸುಬ್ಬಮ್ಮನವರು ತಮ್ಮ ಪತಿಯನ್ನು ನೆರಳಾಗಿ ಹಿಂಬಾಲಿಸಿದರು.

ಮೈಸೂರು ಪ್ರಾಂತದ ಚಳುವಳಿಗಾರರಲ್ಲಿ ಎಂ. ಎಸ್. ಜೋಯಿಸರ ವ್ಯಕ್ತಿತ್ವ ಪ್ರಧಾನವಾಗಿ ರೂಪುಗೊಳ್ಳುತ್ತಿತ್ತು. ಆಜಾನುಬಾಹು, ಕಂಚಿನ ಕಂಠ, ಉಕ್ಕಿ ಹರಿಯುತ್ತಿದ್ದ ಭಾವಪೂರ್ಣವಾದ ಅವರ ಮಾತುಗಳಿಂದ ಜನರು ಸಮ್ಮೋಹಕ್ಕೊಳಗಾಗುತ್ತಿದ್ದರು. ಭಾಷಣವನ್ನಾಲಿಸಲು ಜನರು ಸಹಸ್ರಾರು ಸಂಖ್ಯೆಯಲ್ಲಿ ಸೇರುತ್ತಿದ್ದರು. ಸುಬ್ಬರಾಯನ ಕೆರೆ ಅವರ ಕಾರ್ಯರಂಗವಾಗಿತ್ತು.

೧೯೩೨-೩೩ರ ಅವಧಿಯಲ್ಲಿ ಉತ್ತರ ಕರ್ನಾಟಕದ ಸಿರಸಿ, ಸಿದ್ದಾಪುರ ಮತ್ತು ಅಂಕೋಲಗಳಲ್ಲಿ ನಡೆದ ಸತ್ಯಾಗ್ರಹಗಳು ಜೋಯಿಸರನ್ನು ಕೈಬೀಸಿ ಕರೆದುವು. ನಗರ ಕಾಂಗ್ರೆಸ್ ಕಮಿಟಿಯ ಆದೇಶದಂತೆ, ಅಪರಿಚಿತವಾದ ಪ್ರದೇಶಕ್ಕೆ ತಮ್ಮ ಪತ್ನಿ ಸುಬ್ಬಮ್ಮನವರೊಂದಿಗೆ ತೆರಳಿ, ಅಲ್ಲಿಯ ಸತ್ಯಾಗ್ರಹದ ಸೂತ್ರವನ್ನೂ ಹಿಡಿದರು. ಅಲ್ಲಿ ಜೋಯಿಸ್ ದಂಪತಿಗಳು ಮೈನವಿರೇಳಿಸುವ ಅಧ್ಯಾಯವನ್ನೇ ತೆರೆದರು. ಅಲ್ಲಿಯ ಸತ್ಯಾಗ್ರಹಿಗಳನ್ನು ಹುರಿದುಂಬಿಸಿ, ಅವರಿಗೆ ನಿರ್ದೇಶನವೀಯುತ್ತಿದ್ದ ಜೋಯಿಸರು ಪೊಲೀಸರಿಗೆ ತಲೆನೋವಾಗಿ ಪರಿಣಮಿಸಿ ಇವರ ಕೈಗೆ ಸಿಕ್ಕದೆ ಭೂಗತರಾಗಿದ್ದುಕೊಂಡೇ ಚಳುವಳಿಗಾರರು ಸಂಪರ್ಕವನ್ನಿಟ್ಟುಕೊಂಡಿದ್ದರು. ಅಲ್ಲಿಯ ಜನರ ನಡೆನುಡಿಗಳಿಗೆ ಬಹುಬೇಗ ಹೊಂದಿಕೊಂಡರು. ಪೊಲೀಸರ ಎದುರಿನಲ್ಲಿಯೇ ದನಕಾಯುವವನ ವೇಷದಿಂದ ದನಗಳನ್ನು ಅಟ್ಟಿಕೊಂಡು ಹೋದರು. ಜೋಯಿಸರ ಇರುವನ್ನು ಅರಿತ ಪೊಲೀಸರು ಮನೆಯೊಂದನ್ನು ಶೋಧಿಸಿದಾಗ, ಅವರೆದುರಿನಲ್ಲಿಯೇ ಪೂಜಾರಿಯಾಗಿ ಹೊರ ನಡೆದರು. ಇನ್ನೊಮ್ಮೆ ತಲೆಯನ್ನೇ ಬೋಳಿಸಿಕೊಂಡು ಕಷಾಯ ವಸ್ತ್ರಧಾರಿ ಧೀರಾನಂದನೆಂಬ ಹೆಸರಿನಿಂದ ದಿಟ್ಟತನದಿಂದ ನಡೆದರು. ಮತ್ತೊಮ್ಮೆ ಭಿಕ್ಷುಕನ ವೇಷಧರಿಸಿ, ಪೊಲೀಸರ ಹದ್ದುಗಣ್ಣುಗಳಿಂದ ಮಾಯವಾಗಿ ಚಳುವಳಿಗಾರರಿಗೆ ವಿವರಗಳನ್ನು ನೀಡುತ್ತಿದ್ದರು. ಹೀಗೆ ಸಮಯಸ್ಫೂರ್ತಿಯಿಂದ ವಿವಿಧ ವೇಷಗಳನ್ನು ಧರಿಸಿ ಪೊಲೀಸರಿಗೆ ಚಳ್ಳೆ ಹಣ್ಣು ತಿನ್ನಿಸಿದರು.

ಅಲ್ಲಿಯ ಉಪ್ಪಿನ ಸತ್ಯಾಗ್ರಹ, ಕರನಿರಾಕರಣ ಚಳುವಳಿ, ಅರಣ್ಯ ಸತ್ಯಾಗ್ರಹ, ಹುಲ್ಲುಬನ್ನಿ ಚಳುವಳಿಗಳನ್ನು ಜಯದ ಹಾದಿಯಲ್ಲಿ ನಡೆಸಿದ ಸಾರಥಿ ಜೋಯಿಸರು ಕೊನೆಗೂ ಪೊಲೀಸರ ಅತಿಥಿಯಾಗಬೇಕಾಯಿತು. ಕಾರವಾರ, ಶಿವಮೊಗ್ಗ ಮುಂತಾದ ಜೈಲುಗಳಲ್ಲಿ ಹಿಂಸೆಯನ್ನು ಅನುಭವಿಸಬೇಕಾಯಿತು. ಕಾರವಾರ ಜೈಲಿ

ನಲ್ಲಿದ್ದಾಗ ರಸ್ತೆ ಕಾಮಗಾರಿಯಲ್ಲಿ ದುಡಿದರು. ಎತ್ತುಗಳ ಬದಲಾಗಿ ಜೋಯಿಸರ ಕೈಯಲ್ಲಿ ರೋಡ್‌ರೋಲರನ್ನು ಎಳೆಸಲಾಯಿತು. ಈ ಎಲ್ಲವನ್ನೂ ಜೋಯಿಸರು ವಿನೀತರಾಗಿ ಸಹಿಸಿದರು.

ಅದೇ ಸಂದರ್ಭದಲ್ಲಿ ಸರ್ಕಾರವು ಕರ ಕೊಡಲು ನಿರಾಕರಿಸಿದವರ ಆಸ್ತಿಪಾಸ್ತಿಗಳನ್ನು ಹರಾಜು ಹಾಕುತ್ತಿತ್ತು. ವಸ್ತುಗಳನ್ನು ಕೊಂಡವರ ಮನೆಯ ಮುಂದೆ ಮಹಿಳೆಯರು ಸತ್ಯಾಗ್ರಹ ಕೂರುತ್ತಿದ್ದರು. ಅವರು ಕೊಂಡ ವಸ್ತುಗಳನ್ನು ಹಿಂತಿರುಗಿಸುವವರೆಗೂ ಧರಣಿಯನ್ನು ನಿಲ್ಲಿಸುತ್ತಿರಲಿಲ್ಲ. 'ಜೈಲು ಇಲ್ಲವೇ ಜಯ' ಅವರ ಮಂತ್ರವಾಗಿತ್ತು. ಪೋಲೀಸರು ಧರಣಿ ಕುಳಿತ ಮಹಿಳೆಯರನ್ನು ಬಂಧಿಸುತ್ತಿದ್ದರು. ಆಗ ಮತ್ತೊಂದು ತಂಡ ಸತ್ಯಾಗ್ರಹಕ್ಕಾಗಿ ಅಣಿಯಾಗುತ್ತಿತ್ತು. ಕೊನೆಯಲ್ಲಿ ಮಹಿಳೆಯರಿಗೆ ಯಶಸ್ಸು ದೊರೆಯುತ್ತಿತ್ತು. ತೆರಮರೆಯಲ್ಲಿದ್ದುಕೊಂಡೇ ಸತ್ಯಾಗ್ರಹಿಗಳಿಗೆ ನಿರ್ದೇಶನವೀಯುತ್ತಿದ್ದ ಶ್ರೀಮತಿ ಸುಬ್ಬಮ್ಮ ಜೋಯಿಸರ ಪಾತ್ರ ಹಿರಿದಾಗಿತ್ತು. ಅನಿವಾರ್ಯ ಸಂದರ್ಭಗಳಲ್ಲಿ ಅವರೂ ಧರಣಿ ಕುಳಿತು ಬಂಧನಕ್ಕೊಳಗಾಗುತ್ತಿದ್ದರು. ಪೋಲೀಸರಿಂದ ಚಿತ್ರಹಿಂಸೆಯನ್ನು ಅನುಭವಿಸಿದರು. ಜೈಲಿನ ಅಧಿಕಾರಿಯೊಬ್ಬ ತನ್ನ ತಾಳಿಯನ್ನು ಕಿತ್ತುಕೊಂಡಾಗ ಪ್ರತಿಭಟಿಸಿದರು. ವಿಷಯ ಕೋರ್ಟಿಗೂ, ಹೋಯಿತು. ಯಶಸ್ಸು ಸುಬ್ಬಮ್ಮನವರದಾಯಿತು. ಅಂದಿನಿಂದ ಅವರು 'ತಾಳಿಯ ಸುಬ್ಬಮ್ಮ'ನಾದರು.

ಚಳುವಳಿಗಾರರನ್ನು ಬಗ್ಗುಬಡಿಯಲು ಪೋಲೀಸರು ಹಳ್ಳಿಹಳ್ಳಿಗಳಿಗೆ ನುಗ್ಗಿ ಅಲ್ಲಿಯ ಸಶಕ್ತರನ್ನೆಲ್ಲಾ ಎಳೆದೊಯ್ಯುತ್ತಿದ್ದರು. ಆ ಸಮಯದಲ್ಲಿ ಆಸರೆಯಿಲ್ಲದ ಮಕ್ಕಳು ಮತ್ತು ಅಶಕ್ತರು ಅನಾಥರಾಗುತ್ತಿದ್ದರು. ಎಷ್ಟೋ ಕುಟುಂಬಗಳು ಸರ್ವನಾಶವಾಗುತ್ತಿದ್ದುವು. ಇದನ್ನು ತಪ್ಪಿಸುವ ಸಲುವಾಗಿ, ಸುಬ್ಬಮ್ಮ ಬಹುವಾಗಿ ಶ್ರಮಿಸಿದರು. ಅನಾಥರಿಗಾಗಿ ಶಿವಮೊಗ್ಗದಲ್ಲಿ ಬಾಲಿಕಾಶ್ರಮವೊಂದು ಅಸ್ತಿತ್ವಕ್ಕೆ ಬಂದು ಸುಬ್ಬಮ್ಮನವರು ಅಶಕ್ತರ ಕಲ್ಯಾಣ ಕಾರ್ಯಗಳಲ್ಲಿ ಪಾಲ್ಗೊಂಡರು.

ಎಂ. ಎನ್. ಜೋಯಿಸರು ೧೯೩೪ರಲ್ಲಿ ಬಂಧನದಿಂದ ಮುಕ್ತರಾದ ಮೇಲೆ ಬಾಲಿಕಾಶ್ರಮದಲ್ಲಿ ಪತ್ನಿ ಸುಬ್ಬಮ್ಮನವರನ್ನು ಕರೆದುಕೊಂಡು ಮೈಸೂರಿಗೆ ಹಿಂತಿರುಗಿದರು. ಮೈಸೂರಿನ ಆಳರಸರಿಗೆ ನಿಷ್ಠರಾಗಿದ್ದ ಜೋಯಿಸರ ತಂದೆ ತಾಯಿಗಳು ಅವರನ್ನು ದೂರವಿಟ್ಟರು. ಅವರೊಂದಿಗಿನ ಸಹಪಂಕ್ತಿ ಭೋಜನವನ್ನು ನಿಷೇಧಿಸಿ, ಅನುದಿನವೂ ಕೊರಗಿದರು. ಈ ಎಲ್ಲಾ ಕಾರಣಗಳಿಂದ ಜೋಯಿಸ್ ದಂಪತಿಗಳು ಬೇರೆ ಮನೆಯನ್ನು ಮಾಡಬೇಕಾಯಿತು. ತಂದೆ-ತಾಯಿಗಳು ಸಮಾಜಕ್ಕೆ ಹೆದರಿ ಕಠಿಣವಾಗಿ ವರ್ತಿಸಿದರೂ, ಪುತ್ರ ವ್ಯಾಮೋಹದಿಂದ ಮುಕ್ತರಾಗಿಲಿಲ್ಲ, ಜೋಯಿಸರ ತಾಯಿ ನಂಜಮ್ಮನವರು ಮಗ ಸೊಸೆಯನ್ನು ಬರಮಾಡಿಕೊಂಡು ಮನೆಯ ಹೊರ ಬಾಗಿಲಿನಲ್ಲಿ ಕೂರಿಸಿ ಉಪಚರಿಸುತ್ತಿದ್ದರು. ಅಂಥ ಸಮಯಗಳಲ್ಲಿ ಜೋಯಿಸರು ತಾಯಿಯ ಮಮತೆಯ ವಾತ್ಸಲ್ಯವನ್ನು ನಿರಾಕರಿಸಲಾಗದೆ ತಮ್ಮ ಅಸ್ಪೃಶ್ಯತೆಯ ನೋವನ್ನು ನುಂಗಿಕೊಳ್ಳುತ್ತಿದ್ದರು. ಡಾ॥ ವೆಂಕಟರಾಮಾಪಂಡಿತರೂ ಸಹ ತಮ್ಮ ಸರ್ಕಾರಿ

ಕೆಲಸದ ಭೀತಿಯಿಂದ ಮಗಳು ಸುಬ್ಬಮ್ಮ ನನ್ನು ಅನಾದರದಿಂದ ಕಂಡರು. ಇದರಿಂದ ಮನನೊಂದ ಸುಬ್ಬಮ್ಮನವರು ಮತ್ತೆಂದೂ ತೌರುಮನೆಗೆ ಕಾಲಿಡಲಿಲ್ಲ.

ಉತ್ತರ ಕರ್ನಾಟಕದ ಚಳುವಳಿಗೆ ಜಯ ತಂದಿತ್ತು, ಜೋಯಿಸ್ ದಂಪತಿಗಳು ಮೈಸೂರು ಸಂಸ್ಥಾನದಲ್ಲಿ ಮತ್ತೊಂದು ಹೋರಾಟಕ್ಕೆ ಅಣಿಯಾದರು. ಸುಬ್ಬ-ರಾಯನ ಕೆರೆಯನ್ನು ತನ್ನ ರಾಜಕೀಯ ಚಟುವಟಿಕೆಗಳ ಕೇಂದ್ರವನ್ನಾಗಿ ಮಾಡಿಕೊಂಡರು. ಅವರ ಮನೆ ಕಾಂಗ್ರೆಸ್ ಕಛೇರಿಯಾಯಿತು. ಪತಿ-ಪತ್ನಿ ಇಬ್ಬರೂ ಕಾಂಗ್ರೆಸ್ ಕಾರ್ಯದಲ್ಲಿ ಮೈಮರೆತರು. ದೇಶಕಟ್ಟುವ ಉನ್ನತವಾದ ಈಶಸೇವೆಯಲ್ಲಿ ಮಗ್ನ-ರಾದರು. ಅವರು ತಗಡೂರು ರಾಮಚಂದ್ರ ರಾಯರು, ಎಚ್. ಕೆ. ವೀರಣ್ಣಗೌಡ, ಟಿ. ಸಿದ್ದಲಿಂಗಯ್ಯ, ಬಳ್ಳಾರಿ ಸಿದ್ದಮ್ಮ, ಯಶೋಧರ ದಾಸಪ್ಪ ಮುಂತಾದವರೊಂದಿಗೆ ಸೇರಿ ಮೈಸೂರು ಕಾಂಗ್ರೆಸನ್ನು ಬಲಪಡಿಸಿದರು. ಪ್ರತಿವರ್ಷ ಜನವರಿ ೨೬ ರಂದು ಕಾಂಗ್ರೆಸ್ ಧ್ವಜ ಹಾರಿಸುವುದನ್ನು ಜೋಯಿಸರು ತಪ್ಪದೆ ಪಾಲಿಸಿಕೊಂಡು ಬಂದಿದ್ದರು. ೨೬–೧–೧೯೩೪ ರಂದು ಧ್ವಜಾರೋಹಣ ಮಾಡಬೇಕಾಗಿದ್ದ ಜೋಯಿಸರು ಸೆರೆಮನೆ ಸೇರಿದ್ದರು. ಸುಬ್ಬಮ್ಮನವರು ಚಿಂತೆಯಿಂದ ಕಂಗಾಲಾದರು. ಪತಿಯ ನಿಯಮಕ್ಕೂ ಚ್ಯುತಿ ಬರುವಂತಿಲ್ಲ! ಅದೇ ಸಮಯದಲ್ಲಿ ಸರ್ಕಾರ ಧ್ವಜಾರೋಹಣವನ್ನು ನಿರ್ಬಂಧಿಸಿತು. ದೃಢ ನಿರ್ಧಾರಕ್ಕೆ ಬಂದ ಸುಬ್ಬಮ್ಮನವರು ಸರ್ಕಾರದ ಆಜ್ಞೆಯನ್ನು ಉಲ್ಲಂಘಿಸಿ, ಧ್ವಜ ಹಾರಿಸುವ ನಿರ್ಣಯವನ್ನು ಕೈಗೊಂಡರು. ಈ ಸಂದರ್ಭ ವೀಕ್ಷಣೆಗಾಗಿ ಸಾವಿರಾರು ಜನ ಸುಬ್ಬರಾಯನ ಕೆರೆಯಲ್ಲಿ ಸೇರಿದರು. ಕಾರಣ, ಸರ್ಕಾರದ ಆಜ್ಞೆಗಳನ್ನು ಉಲ್ಲಂಘಿಸಿ ಜೈಲು ಸೇರಿದ ಮಹಿಳೆಯರು ಸಂಸ್ಥಾನದಲ್ಲಿ ಯಾರೂ ಇರಲಿಲ್ಲ. ಸುಬ್ಬಮ್ಮ ನಿಗದಿಯಾದ ಸಮಯಕ್ಕೆ ಸರಿಯಾಗಿ ತನ್ನ ಪುಟ್ಟ ಕಂದಮ್ಮನನ್ನು ಕಂಕುಳಲ್ಲಿ ಇರುಕಿಕೊಂಡು ಬಂದರು. ಕೂಸನ್ನು ಬೇರೆಯವರ ಕೈಗಿತ್ತು ಧ್ವಜಾ-ರೋಹಣವನ್ನು ನೆರವೇರಿಸಿಯೇ ಬಿಟ್ಟರು! ತಕ್ಷಣ ಪೋಲೀಸರು ಅವರನ್ನು ಬಂಧಿಸಿದರು. ದೇಶದ ಸ್ವಾತಂತ್ರ್ಯಕ್ಕಾಗಿ ಧ್ವಜಹಾರಿಸಿ ಜೈಲು ಸೇರಿದ ರಾಜ್ಯದ ಮೊಟ್ಟಮೊದಲ ಮಹಿಳೆ ಸುಬ್ಬಮ್ಮ ಜೋಯಿಸ್ ಎಂಬ ಖ್ಯಾತಿ ಅವರಿಗೆ ಸಂದಿತು. ಈ ಸಂದರ್ಭ ಚಳುವಳಿಗಾರರ ಗಮನ ಸೆಳೆಯಿತು. ಅದುವರೆಗೂ ಚಳುವಳಿಯ ವಿರೋಧಿಯಾಗಿದ್ದ ಮಡಿವಂತ ಅತ್ತೆ ನಂಜಮ್ಮನವರು ಬಂದು, ಸೊಸೆಯ ಸಾಹಸವನ್ನು ಕೊಂಡಾಡಿ ಹರಸಿದರು. ಇನ್ನುಳಿದ ತಮ್ಮ ಮಕ್ಕಳನ್ನು ಸ್ವಾತಂತ್ರ್ಯ ಚಳುವಳಿಗೆ ಅರ್ಪಿಸುವ ಘೋಷಣೆ ಮಾಡಿದರು. ಅಂದಿನಿಂದ ಇಡೀ ಜೋಯಿಸ್ ಕುಟುಂಬ ದೇಶದ ವಿಮುಕ್ತಿಗೆ ಶ್ರಮಿಸಿತು.

ಎಂ. ಎನ್. ಜೋಯಿಸ್ ಮೈಸೂರು ಸಂಸ್ಥಾನದಲ್ಲೆಲ್ಲಾ ಬಿರುಗಾಳಿಯಂತೆ ಓಡಾಡಿ ಜನರನ್ನು ಸಂಘಟಿಸಿ, ಚಳುವಳಿಗಾರರನ್ನು ವೃದ್ಧಿಸಿದರು. ಬ್ರಿಟಿಷ್ ಮತ್ತು ಆಳರಸರ ಸರ್ಕಾರವನ್ನು ಕಟುವಾಗಿ ಟೀಕಿಸುತ್ತಿದ್ದ ಜೋಯಿಸರು ಜವಾಬ್ದಾರಿ ಸರ್ಕಾರದ ಅಗತ್ಯವನ್ನು ಮನಗಂಡರು. ಅದಕ್ಕಾಗಿ ಒಂದು ಸಮರ್ಥ ಸಂಘಟನೆಯ ಸಮಾಲೋಚನೆಯನ್ನು ಚಳುವಳಿಯ ಧುರೀಣ

ರೊಂದಿಗೆ ಚರ್ಚಿಸಿದರು. ೨೮–೨–೧೯೩೮ ರಂದು ಟಿ. ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ 'ಮೈಸೂರು ಕಾಂಗ್ರೆಸ್' ಉದಯವಾಯಿತು. ಕಾಂಗ್ರೆಸ್ಸಿನ ಅಖಿಲ ಭಾರತ ಮಟ್ಟದ ಅಧಿವೇಶನಕ್ಕಾಗಿ ೧೧-೪-೧೯೩೮ರ ದಿನಾಂಕವನ್ನು ಗೊತ್ತುಮಾಡಲಾಯಿತು. ಮದ್ದೂರಿನ ಬಳಿಯಿರುವ ಶಿವಪುರದ ತಿರುಮಲೇಗೌಡರ ವಿಶಾಲವಾದ ಜಮೀನಿನಲ್ಲಿ ಅಧಿವೇಶನವನ್ನು ನಡೆಸಲು ನಿರ್ಧಾರವಾಗಿ ಕಾಮಗಾರಿ ಭರದಿಂದ ಸಾಗಿತು.

ಶಿವಪುರ ಸತ್ಯಾಗ್ರಹ ಜೋಯಿಸರ ಸ್ವಾತಂತ್ರ್ಯ ಚಳುವಳಿಯ ಜೀವನದಲ್ಲಿ ಒಂದು ಸ್ವರ್ಣ ಅಧ್ಯಾಯವನ್ನೇ ತೆರೆಯಿತು. ಇತಿಹಾಸದ ಪುಟಗಳಲ್ಲಿ ಮರೆಯಲಾಗದ ಘಟನೆಯಾಗಿ ದಾಖಲಾಯಿತು. ಶಿವಪುರದಲ್ಲಿ ನಡೆದ ಪ್ರಥಮ ಅಖಿಲ ಭಾರತ ಕಾಂಗ್ರೆಸ್ ಮಹಾಧಿವೇಶನಕ್ಕೆ ಸಂಸ್ಥಾನದ ಮೂಲೆ ಮೂಲೆಗಳಿಂದ ಜನಪ್ರವಾಹ ಹರಿದು ಬರತೊಡಗಿತು. ಶ್ರೀ ಸಿದ್ಧಲಿಂಗಯ್ಯನವರು ಅಧಿವೇಶನದ ಅಧ್ಯಕ್ಷರಾಗಿದ್ದರು. ಅಂದು ಅಧ್ಯಕ್ಷರು ಕಾಂಗ್ರೆಸ್ ಬಾವುಟವನ್ನು ಹಾರಿಸುವ ಯೋಜನೆಯೂ ಇತ್ತು. ಸ್ವಯಂಸೇವಾ ದಳದ ದಳಪತಿಯಾಗಿ ಎಂ. ಎನ್. ಜೋಯಿಸರು ಧ್ವಜಾರೋಹಣಕ್ಕೆ ಸಿದ್ಧತೆ ಮಾಡಿಕೊಂಡಿದ್ದರು. ಐವತ್ತು ಸಾವಿರಕ್ಕೂ ಹೆಚ್ಚು ಜನ ಅಲ್ಲಿ ಸೇರಿದ್ದರು. ಸರ್ಕಾರ ಶಿವಪುರದ ಎರಡು ಮೈಲಿಗಳ ಸುತ್ತಳತೆಯಲ್ಲಿ ನಿಷೇಧಾಜ್ಞೆ ವಿಧಿಸಿತು. ಧ್ವಜಾರೋಹಣವನ್ನು ನಿರ್ಬಂಧಿಸಿತು. ಜನತೆ ಸರ್ಕಾರದ ಆಜ್ಞೆಯನ್ನು ಧಿಕ್ಕರಿಸಿ ಅತ್ಯುತ್ಸಾಹದಿಂದ ಅಧಿವೇಶನದಲ್ಲಿ ಪಾಲ್ಗೊಂಡಿತು. ಒಂದು ಸಾವಿರ ಬಂದೂಕುಧಾರಿ ಪೊಲೀಸರು ಅಧಿವೇಶನವನ್ನು ಸುತ್ತುವರಿದರು. ಆರುನೂರಕ್ಕೂ ಹೆಚ್ಚು ಲಾಠಿ ಹಿಡಿದ ಪೊಲೀಸರು ತಮ್ಮ ಮೇಲಧಿಕಾರಿಗಳ ಆದೇಶವನ್ನು ಎದುರು ನೋಡುತ್ತಿದ್ದರು. ಜನತೆ ಆತಂಕದ ಕ್ಷಣಗಳನ್ನು ಎಣಿಸುತ್ತಿತ್ತು. ಸಿದ್ಧಲಿಂಗಯ್ಯನವರು ಮಾತನಾಡಿ, ಜನತೆ ಶಾಂತಿಯಿಂದ ವರ್ತಿಸಬೇಕೆಂದೂ ನಾನೀಗ ಧ್ವಜಾರೋಹಣ ಮಾಡುವೆನೆಂದು ಹೇಳಿದ್ದೇ ತಡ, ಜನತೆ ಹರ್ಷೋದ್ಗಾರ ಮಾಡಿತು. ಪೊಲೀಸರು ಮಿಂಚಿನ ವೇಗದಲ್ಲಿ ಕಾರ್ಯೋನ್ಮುಖರಾಗಿ ಅವರನ್ನು ಬಂಧಿಸಿದರು. ಜೋಯಿಸರು ತಕ್ಷಣ ಬಾವುಟದ ಹಗ್ಗವನ್ನು ಹಿಡಿದೆಳೆದರು! ಬಾವುಟ ಬಾನಿನಲ್ಲಿ ರೆಕ್ಕೆ ಬಿಚ್ಚಿ ಹಾರಿತು. ಜನತೆ ಹರ್ಷದಿಂದ ಜಯಘೋಷ ಮಾಡಿತು. ಸರ್ಕಾರಕ್ಕೆ ಮುಖಭಂಗವಾಯಿತು. ಕಾಂಗ್ರೆಸ್ಸಿಗೆ ಜಯ ಲಭಿಸಿತು. ಆಕ್ಷಣವೇ ಪೊಲೀಸರು ಜೋಯಿಸರನ್ನು ಬಂಧಿಸಿದರು.

ಶಿವಪುರದ ಕಾಂಗ್ರೆಸ್ ಅಧಿವೇಶನವು ರಾಜ್ಯದಾದ್ಯಂತ 'ಧ್ವಜಸತ್ಯಾಗ್ರಹ' ಎಂಬ ಹೆಸರಿನಲ್ಲಿ ಖ್ಯಾತವಾಯಿತು. ಅಲ್ಲಲ್ಲಿ ಧ್ವಜಾರೋಹಣಗಳು ನಡೆಯುವಂತೆ ಸ್ಫೂರ್ತಿಯನ್ನು ನೀಡಿತು. ಆಗ ರಾಜ್ಯದಲ್ಲಿ ಧ್ವಜ ಹಾರಿಸದಂತೆ ಸರ್ಕಾರ ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಿತು. ಜನತೆ ಆಜ್ಞೆಯನ್ನು ಧಿಕ್ಕರಿಸಿತು. ಪೊಲೀಸರು ಲಾಠೀ ಪ್ರಹಾರ ಮಾಡಿ ಚಳುವಳಿಗಾರರನ್ನು ಸೆರೆಮನೆಗೆ ತಳ್ಳಿದರು.

ಇದೇ ಸಂದರ್ಭದಲ್ಲಿ ವಿದುರಾಶ್ವತ್ಥದಲ್ಲಿ ನಡೆದ ಧ್ವಜಸತ್ಯಾಗ್ರಹದ ಪರಿಣಾಮ ಮಾತ್ರ ಭೀಕರವಾಗಿತ್ತು. ಸತ್ಯಾಗ್ರಹಿಗಳ

ಮೇಲೆ ಲಾಠೀ ಪ್ರಹಾರ ಮಾಡಿದ್ದಲ್ಲದೆ, ಗುಂಡಿನ ಮಳೆಗರೆದು ನರಹತ್ಯೆಗೈದರು. ನಲವತ್ತು ಮಂದಿ ಸತ್ತು, ನೂರಾರು ಜನ ಗಾಯಗೊಂಡರು. ಕೆಲವೇ ಗಂಟೆಗಳಲ್ಲಿ ಸುದ್ದಿ ದೇಶವನ್ನು ದಾಟಿ ವಿಶ್ವದಗಲ ಹರಡಿತು.

ಮೈಸೂರಿನಲ್ಲಿ ನಡೆದ ಮತ್ತೊಂದು ಘಟನೆ ಇಲ್ಲಿ ಉಲ್ಲೇಖಾರ್ಹ. ಆಂಗ್ಲರ ಮೇಲಿನ ಅಭಿಮಾನದಿಂದ ಮೈಸೂರು ಸಂಸ್ಥಾನವು ಮೈಸೂರಿನ ಪೊಲೀಸ್ ಸ್ಟೇಷನ್ ಕಟ್ಟಡವೊಂದಕ್ಕೆ ಇನ್‌ಸ್ಪೆಕ್ಟರ್ ಜನರಲ್ ಹ್ಯಾಮಿಲ್ಟನ್ನನ ಹೆಸರನ್ನು ಇಟ್ಟಿತು. ಆಳರಸರ ಅಭಿಮಾನ ಶೂನ್ಯ ಈ ಕ್ರಮದಿಂದ ಚಳುವಳಿಗಾರರು ರೊಚ್ಚಿಗೆದ್ದರು. ಅದನ್ನು ಉಗ್ರವಾಗಿ ಪ್ರತಿಭಟಿಸಿದರು. ಜೋಯಿಸರು ತಗಡೂರರೊಂದಿಗೆ ಸಮಾಲೋಚಿಸಿದರು. ಪೊಲೀಸ್ ಸ್ಟೇಷನ್ನಿನ ಕಟ್ಟಡದ ಮೇಲಿದ್ದ ಹ್ಯಾಮಿಲ್ಟನ್ನನ ಹೆಸರಿಗೆ ಮಸಿ ಬಳಿಯುವ ಚಳುವಳಿಯನ್ನು ಹಮ್ಮಿಕೊಂಡರು. ಚಳುವಳಿ ಯಶಸ್ವಿಯಾಯಿತು. ಮುಂದಾಳು ಜೋಯಿಸರು ಬಂಧನಕ್ಕೊಳಗಾದರು. ಒಂದು ವರ್ಷದ ಕಠಿಣ ಸೆರೆವಾಸವನ್ನು ಅನುಭವಿಸಲು ಅವರನ್ನು ಶಿವಮೊಗ್ಗ ಜೈಲಿಗೆ ರವಾನಿಸಲಾಯಿತು.

ಆಗಸ್ಟ್ ೧೫, ೧೯೪೭ ರಲ್ಲಿ ನಮ್ಮ ದೇಶ ದಾಸ್ಯದಿಂದ ಮುಕ್ತವಾಯಿತು. ಸ್ವಾತಂತ್ರ್ಯ ಹೋರಾಟಗಾರರಿಗೆ ಜಯ ಲಭಿಸಿತು. ಇಡೀ ದೇಶ ಆ ದಿನವನ್ನು ಸಂಭ್ರಮದಿಂದ ಸ್ವಾಗತಿಸಿ ಹಿಗ್ಗಿತು. ಅದೇ ಸಮಯದಲ್ಲಿ ನಮ್ಮ ದೇಶದಲ್ಲಿದ್ದ ಕೆಲವು ದೇಶೀಯ ಸಂಸ್ಥಾನಗಳು ಭಾರತದ ಒಕ್ಕೂಟಕ್ಕೆ ಸೇರಲು ಸಮ್ಮತಿಸಿದರೂ, ಆಂತರಿಕ ಆಡಳಿತದ ತಮ್ಮ ಸರ್ವಾಧಿಕಾರವನ್ನು ಬಿಟ್ಟುಕೊಡಲು ಸಿದ್ಧರಿರಲಿಲ್ಲ. ಅವುಗಳಲ್ಲಿ ಮೈಸೂರು ಒಂದಾಗಿತ್ತು. ದೇಶದ ತುಂಬಾ ಧ್ವಜಾರೋಹಣ ಕಾರ್ಯಕ್ರಮಗಳು ಸಂಭ್ರಮದಿಂದ ಆಚರಿಸಲ್ಪಡುತ್ತಿದ್ದರೆ, ಮೈಸೂರು ಅದರಿಂದ ಹೊರತಾಗಿತ್ತು. ಅಲ್ಲಿಯ ಜನರು ಇನ್ನೂ ಸರ್ವಾಧಿಕಾರಿ ಗ್ರಹಣದಿಂದ ಮುಕ್ತರಾಗಿರಲಿಲ್ಲ. ಆಗ ಜನತೆ ವಿಧಿಯಿಲ್ಲದೆ ಮತ್ತೊಮ್ಮೆ ಮೈಸೂರರಸರ ವಿರುದ್ಧ ಬಂಡಾಯವೆದ್ದರು. ಎಂ. ಎನ್. ಜೋಯಿಸರು 'ಪ್ರಗತಿ ಪಕ್ಷ' ಎಂಬ ಯುವ ಪಡೆಯನ್ನು ಸಂಘಟಿಸಿ ಸಂಘರ್ಷಕ್ಕೆ ಅಣಿಯಾದರು.

ರಾಜ್ಯ ಕಾಂಗ್ರೆಸ್ಸು ಕೆ. ಚೆಂಗಲರಾಯ ರೆಡ್ಡಿಯವರನ್ನು ತಮ್ಮ ಮುಖಂಡರನ್ನಾಗಿ ಮುಂದಿಟ್ಟುಕೊಂಡು ಚಳುವಳಿಯನ್ನು ಪ್ರಾರಂಭಿಸಿತು. ಜೋಯಿಸರೂ ಸೇರಿದಂತೆ ಕಾಂಗ್ರೆಸ್ ಧುರೀಣರು ರಾಜ್ಯದಲ್ಲೆಲ್ಲಾ ಸಂಚರಿಸಿ, ಜನಜಾಗೃತಿಯನ್ನುಂಟು ಮಾಡಿದರು. ಅಲ್ಲಲ್ಲಿ ಸತ್ಯಾಗ್ರಹ ಶಿಬಿರಗಳನ್ನು ಸ್ಥಾಪಿಸಿ ಮೈಸೂರಿನತ್ತ ಧಾವಿಸಲು ಯೋಜಿಸಲಾಯಿತು. ಅರಮನೆ ಮುತ್ತಿಗೆ ಕಾರ್ಯಕ್ರಮವನ್ನ ಹಮ್ಮಿಕೊಂಡು "ಮೈಸೂರು ಚಲೋ" ಚಳುವಳಿಯನ್ನು ವ್ಯವಸ್ಥೆಗೊಳಿಸಿದರು. ಈ ಮೂಲಕ ಅರಸರನ್ನು ಪ್ರಬಲವಾಗಿ ಪ್ರತಿಭಟಿಸಿದರು. ಸಂಸ್ಥಾನದ ಆಡಳಿತ ತನ್ನ ಬಲಪ್ರಯೋಗ ಪ್ರಾರಂಭಿಸಿ ಚಳುವಳಿಗಾರರ ಮುಖಂಡರನ್ನು ಬಂಧಿಸಿತು. ಜೋಯಿಸರು ಭೂಗತರಾಗಿ ಹಿಂದೂಪುರದಲ್ಲಿ ಕಾಣಿಸಿಕೊಂಡರು. ಅಲ್ಲಿಂದಲೇ ಚಳುವಳಿಯ ಜವಾಬ್ದಾರಿಯನ್ನು ನಿರ್ವಹಿಸಿದರು. ಪೌರವಾಣಿ ಪತ್ರಿಕೆಯನ್ನು ಪ್ರಕಟಿಸಿ, ಮೈಸೂರಿಗೆ ರವಾನಿಸತೊಡಗಿ

ದರು. ಕ್ರಾಂತಿಕಾರಿ ಪ್ರಕಟಣೆಗಳಿಂದ ಜನ ಜಾಗೃತಿ ಬತ್ತದಂತೆ ನೋಡಿಕೊಂಡರು. ಚಳುವಳಿ ಒಂದು ತಿಂಗಳಕಾಲ ನಿರಂತರವಾಗಿ ಸಾಗಿತು. ಪ್ರಬಲವಾದ ಪ್ರತಿಭಟನೆಯ ಮುಂದೆ ಅರಸರ ಸ್ಥೈರ್ಯ ಕುಗ್ಗಿತು. ಆಗಿನ ಶ್ರೀಮನ್ಮಹಾರಾಜರಾದ ಜಯಚಾಮರಾಜ ಒಡೆಯರು ಕಾಂಗ್ರೆಸ್ಸಿನೊಂದಿಗೆ ಒಪ್ಪಂದ ಮಾಡಿಕೊಂಡರು. ಕಾಂಗ್ರೆಸ್ಸಿನ ಎಲ್ಲಾ ಬೇಡಿಕೆಗಳು ಸ್ವೀಕೃತವಾದುವು. ಚಳುವಳಿಗಾರರಿಗೆ ಜಯ ಲಭಿಸಿತು. ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರ ಅಸ್ತಿತ್ವಕ್ಕೆ ಬಂದಿತು. ಕೆ. ಚೆಂಗಲರಾಯ ರೆಡ್ಡಿಯವರು ೧೯೪೭ ಸೆಪ್ಟೆಂಬರ್ ೨೪ ರಂದು ರಾಜ್ಯದ ಪ್ರಥಮ ಮುಖ್ಯಮಂತ್ರಿಯಾಗಿ ಆಡಳಿತ ಸೂತ್ರ ಹಿಡಿದರು.

ದೇಶಕ್ಕೆ ಸ್ವಾತಂತ್ರ್ಯ ಲಭಿಸಿ ಚರಿತ್ರಾರ್ಹ ಮೈಸೂರರಸರ ಆಳ್ವಿಕೆಯೂ ಕೊನೆಗೊಂಡಿತು. ಪ್ರಜಾಪ್ರತಿನಿಧಿ ಸರ್ಕಾರ ಸ್ಥಾಪನೆಯಾಗಿ ಹೊಸ ಸಂವಿಧಾನ ಅಸ್ತಿತ್ವಕ್ಕೆ ಬಂದಿತು. ಜನತೆ ತಮ್ಮ ಪ್ರತಿನಿಧಿಗಳನ್ನು ಆರಿಸಿ ಕಳುಹಿಸುವ ಹಕ್ಕು ಪಡೆದರು. ಎಂ. ಎನ್. ಜೋಯಿಸರು ಮೈಸೂರು ಜಿಲ್ಲೆಯಿಂದ ಅವಿರೋಧವಾಗಿ ಆಯ್ಕೆಯಾದರು. ಮುಂದೆ ಅವರು ಪ್ರಜಾಪ್ರತಿನಿಧಿ ಸರ್ಕಾರದ ವಿವಿಧ ಹಂತಗಳಲ್ಲಿ ದಕ್ಷತೆಯಿಂದ ಸೇವೆ ಸಲ್ಲಿಸಿದರು.

ಸುಮಾರು ೨೬ ವರ್ಷಗಳಕಾಲ ನಿರಂತರವಾಗಿ ದೇಶದ ಬಿಡುಗಡೆಗೆ ಶ್ರಮಿಸಿದ ಜೋಯಿಶರಿಗೀಗ ಬಿಡುವು ಸಿಕ್ಕಿತು. ಸ್ವಾತಂತ್ರ್ಯ ಪೂರ್ವ ಚಳುವಳಿಯಲ್ಲಿ ಸಕ್ರಿಯರಾಗಿದ್ದ ಅವರು ಸ್ವಾತಂತ್ರ್ಯೋತ್ತರ ರಾಜಕೀಯಕ್ಕೆ ವಿದಾಯ ಹೇಳಿದರು. ಆಗ ಅವರು ಬಯಸಿದ್ದರೆ, ಮಂತ್ರಿಮಂಡಲದಲ್ಲಿ ಸ್ಥಾನ ಪಡೆಯಬಹುದಿತ್ತು. ಇದಾವುದನ್ನು ಬಯಸದ ಜೋಯಿಸರು ರಾಜ್ಯ ಸರ್ಕಾರ ಕೊಡಮಾಡಿದ ಸಹಾಯವನ್ನು ನಯವಾಗಿ ನಿರಾಕರಿಸಿದರು. ಆಗ ಜೋಯಿಸರ ಜೀವನ ನಿರ್ವಹಣೆ ಕಷ್ಟವಾಯಿತು. 'ನ್ಯೂ ಇಂಡಿಯಾ' ಅಶ್ಯೂರೆನ್ಸ್ ಕಂಪನಿಯೊಂದರಲ್ಲಿ ಏಜಂಟರಾಗಿ ಕೆಲಸ ಮಾಡತೊಡಗಿದರು. ಅದರ ಶಾಖಾ ವ್ಯವಸ್ಥಾಪಕರಾಗಿಯೂ ಬಡ್ತಿ ಪಡೆದು ೧೯೫೬ ರ ವರೆಗೆ ದುಡಿದರು. ಅದೇ ಸಮಯದಲ್ಲಿ ಸ್ಥಾಪನೆಯಾದ 'ಭಾರತೀಯ ಜೀವವಿಮಾ ನಿಗಮ' ದಲ್ಲಿ ಅಧಿಕಾರಿಯಾಗಿ, ೧೯೬೫ ರ ವರೆಗೆ ಸೇವೆ ಸಲ್ಲಿಸಿ ನಿವೃತ್ತರಾದರು.

ಜೋಯಿಸರು ತಮ್ಮ ಬದುಕನ್ನು ರೂಪಿಸಿಕೊಂಡಮೇಲೆ ಸಮಾಜ ಕಲ್ಯಾಣಕ್ಕಾಗಿ ಶ್ರಮಿಸಿದರು. ದೇಶದ ಅಭಿವೃದ್ಧಿಗೆ ವಿದ್ಯಾಭ್ಯಾಸವೇ ಅಡಿಗಲ್ಲು ಎಂಬ ಅನುಭವವನ್ನು ಕಂಡುಕೊಂಡರು. ಅವರು ಮೈಸೂರಿನಲ್ಲಿ ಗೆಳೆಯರೊಂದಿಗೆ ಸೇರಿ (ಎನ್ಐಇ) ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ ಮತ್ತು ಮಹಾಜನ ವಿದ್ಯಾ ಸಂಸ್ಥೆಗಳನ್ನು ಹುಟ್ಟುಹಾಕಿ ಪೋಷಿಸಿದರು. ಸೀತಾ ವಿಲಾಸ ಅಗ್ರಹಾರದಲ್ಲಿ ಪಾಳುಬಿದ್ದಿದ್ದ ಶ್ರೀ ಸೀತಾರಾಮ ದೇವಸ್ಥಾನವನ್ನು ಪುನರುಜ್ಜೀವನಗೊಳಿಸಿ ತಮ್ಮ ತಂದೆಯವರ ಹೆಸರಿನಲ್ಲಿ ಗಣಪತಿ ಸ್ಥಾಪಿಸಿದರು. ಅಲ್ಲಿ ನಿತ್ಯಾರ್ಚನೆ ನಡೆಯುವಂತೆ ಏರ್ಪಾಡು ಮಾಡಿದರು. ದೇವಸ್ಥಾನದ ಆದಾಯ ಮೂಲಗಳನ್ನು ಅಭಿವೃದ್ಧಿಪಡಿಸಿದರು. ತಂದೆ ನಾರಾಯಣ ಜೋಯಿಸರಂತೆ ವಾರಾನ್ನದ ವಿದ್ಯಾರ್ಥಿಗಳನ್ನು ಪೋಷಿಸಿ

ದರು. ಅನಾಥರಿಗೆ ಮತ್ತು ಅಸಹಾಯಕರಿಗೆ ಮುಕ್ತವಾಗಿ ಸಹಾಯ ಮಾಡಿದರು. ಅತಿಥಿ ಅಭ್ಯಾಗತರನ್ನು ಆದರದಿಂದ ಉಪಚರಿಸಿದರು.

ಜೋಯಿಸರ ಪತ್ನಿ ಸುಬ್ಬಮ್ಮನವರೂ ಸಹ ಸ್ವಾತಂತ್ರ್ಯಾನಂತರ ಗೃಹಕೃತ್ಯಗಳಲ್ಲಿ ಮಗ್ನರಾದರು. ವಿರಳವಾಗಿ ಸಮಾಜಸೇವಾ ಕಾರ್ಯಗಳಲ್ಲಿ ತೊಡಗುತ್ತಿದ್ದರು. ತನ್ನ ಮೂರು ಗಂಡು ಮಕ್ಕಳೊಂದಿಗೆ ಮನೆ ಸಂಸಾರ, ಪೂಜೆ ಪುನಸ್ಕಾರಗಳಲ್ಲಿ ಕಳೆದರು. ಬದುಕಿನುದ್ದಕ್ಕೂ ಪತಿಯ ನೆರಳಾಗಿ ಅನುಸರಿಸಿದ ಸುಬ್ಬಮ್ಮನವರು. (೭೦) ೧೯೮೧ರಲ್ಲಿ ಸ್ವರ್ಗಸ್ಥರಾದಾಗ ಜೋಯಿಸರು ಒಂಟಿಯಾದರು.

ಈ ಸ್ವಾತಂತ್ರ್ಯ ಸೇನಾನಿ ದಂಪತಿಗಳಿಗೆ ಕೇಂದ್ರ ಸರ್ಕಾರವು ತಾಮ್ರಪತ್ರ ಪ್ರಶಸ್ತಿಯನ್ನಿತ್ತು ಗೌರವ ಸಲ್ಲಿಸಿತು. ೧೯೮೯ರಲ್ಲಿ ರಾಷ್ಟ್ರವೀರ ಪ್ರಶಸ್ತಿಯನ್ನಿತ್ತು ಜೋಯಿಸರನ್ನು ಸನ್ಮಾನಿಸಿತು. ಅನೇಕ ಸಂಘ ಸಂಸ್ಥೆಗಳೂ, ಸಾರ್ವಜನಿಕರು ಈ ಮಹಾಚೇತನಗಳನ್ನು ಆದರಿಸಿ ಸತ್ಕರಿಸಿವೆ. ಅವರ ಸ್ವಾತಂತ್ರ್ಯ ಸಮರ ಗಾಥೆಯಿಂದ ರೋಮಾಂಚನಗೊಂಡಿವೆ.

ಈಗಲೂ, ವಯೋವೃದ್ಧ ಜೋಯಿಸರು ಮಾತನಾಡಲು ಪ್ರಾರಂಭಿಸಿದರೆ, ಅವರ ಕಂಚಿನ ಕಂಠಕ್ಕೆ ಕಿವಿ ನಿಮಿರುತ್ತದೆ. ಅವರ ದೃಷ್ಟಿಗ್ರಾಹ್ಯಕ್ಕೆ ಬೆರಗಾಗುತ್ತೇವೆ. ಸಮಯ ಚಿಂತೆ ಮರೆಯುತ್ತದೆ. "ಅಂದಿನ ಘಟನೆಗಳನ್ನು ಇಂದಿನ ಜನಾಂಗಕ್ಕೆ ಸಾರಿ ಹೇಳು, ದೇಶ ಕಟ್ಟುವ ಕೆಲಸವನ್ನು ಮುಂದುವರಿಸು ಎಂದು; ನನ್ನುಳಿಸಿ, ಉಳಿದ ಚಳುವಳಿಗಾರರು ಕಾಲವಶರಾದರು. ಅದಕ್ಕಾಗಿಯೇ ದೇವರು ಇನ್ನೂ ನನ್ನನ್ನು ಉಳಿಸಿದ್ದಾನೆ" ಎಂದು ಹೇಳುವಾಗ, ಅವರ ದೇಶಭಕ್ತಿಯ ತುಡಿತದ ದರ್ಶನವಾಗುತ್ತದೆ.

ಬಾಲ್ಯದಿಂದಲೇ ದೇಶದ ಹಿತಚಿಂತನೆಯನ್ನು ಗರಿಗಟ್ಟಿಕೊಂಡು ಬೆಳೆದ ಜೋಯಿಸರು ಸ್ವಾತಂತ್ರ್ಯ ಸಮರ ಸೇನಾನಿಯಾಗಿ, ದಕ್ಷ ಆಡಳಿತಗಾರರಾಗಿ, ವಾಗ್ಮಿಯಾಗಿ, ಸಮಾಜ ಸೇವಕರಾಗಿ, ಧೈರ್ಯ ಸ್ಥೈರ್ಯಗಳ ಸಂಕೇತವಾಗಿ ಇಂದೂ ನಮ್ಮೊಂದಿಗಿದ್ದು, ಸಭೆ ಸಮಾರಂಭಗಳಲ್ಲಿ ಪಾಲ್ಗೊಂಡು ದೇಶದ ಹಿತವನ್ನು ಬಯಸುತ್ತಿರುವುದು ನಮ್ಮೆಲ್ಲರ ಸೌಭಾಗ್ಯ.

"ಸ್ವಾತಂತ್ರ್ಯವೆಂಬುದು ಯಾರೂ ಕೊಡುವಂಥ ಸರಕಲ್ಲ ; ಅದು ನಾವು ಪಡೆದುಕೊಳ್ಳಬೇಕಾದದ್ದು."

—ಸುಭಾಷ್‌ಚಂದ್ರ ಬೋಸ್

ಈಸೂರು ಕ್ರಾಂತಿ

ಹೆಚ್. ಪಿ. ವೆಂಕಟಸುಬ್ಬಯ್ಯ
ಸ್ವಾತಂತ್ರ್ಯ ಹೋರಾಟಗಾರರು
ನಂ. ೪೬೧, ಪೋಸ್ಟಲ್ ಕಾಲೊನಿ
ವಿಶ್ವೇಶ್ವರನಗರ, ಮೈಸೂರು–೮

"ಲೋಕ ಮಲಗಿದಂದು ನೀ ನಟ್ಟ ನಡೂರಾತ್ರಿ! ಎಚ್ಚರಾಂತೆ; ಅವಿಶ್ರಾಂತೆಯಾದೆ ಪುನರ್‌ಯಾತ್ರಿ" ೧೫–೮–೧೯೪೭ರ ಸ್ವಾತಂತ್ರ್ಯೋದಯ ಕುರಿತು ಕುವೆಂಪು ಬರೆದಿರುವ ನುಡಿಗಳಿವು. ಈಸೂರಿನ, ಅದೂ ಕವಿಯ ನಾಡಿನ, ಕೊಡುಗೆ ಏನೆಂದು ಈ ಲೇಖನವಲ್ಲಿ ಓದಿ—ಸ್ವತಃ ಪಾಲ್ಗೊಂಡವರ ನೆನಪಿನಂಗಳದಿಂದ ಮೂಡಿರುವ ಕಿಡಿ.

ಈಸೂರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಒಂದು ಹಳ್ಳಿ. ಊರಿನ ಸುತ್ತ ಕಾಡು, ಗದ್ದೆಗಳು. ಪಕ್ಕದಲ್ಲೇ ಕುಮುದ್ವತಿ ನದಿ. ಊರಮಧ್ಯದಲ್ಲಿ ವೀರಭದ್ರದೇವಸ್ಥಾನ. ಇದು ಊರದೇವತೆ. ಊರಿನವರ ಎಲ್ಲ ಕೆಲಸಗಳಿಗೂ ಇದೇ ಕೇಂದ್ರ.

ಗಾಂಧೀಜಿ ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕಹಳೆ ಊದಿ, ಬ್ರಿಟಿಷರನ್ನು ಭಾರತದಿಂದ ಓಡಿಸಲು 'ಮಾಡು ಇಲ್ಲವೆ ಮಡಿ' ದೀಕ್ಷೆಯನ್ನು ಭಾರತೀಯರಿಗೆ ಕೊಟ್ಟಾಗ (೯–೮–೧೯೪೨) ಈ ಕರೆಗೆ ಓಗೊಟ್ಟಿತು.

ಈಸೂರು ಇದಕ್ಕೆ ಹೊರತಾಗಲಿಲ್ಲ ಇಲ್ಲಿಯ ಹಾವಣ್ಣ ದೇಶಭಕ್ತರು. ಹರಿಕಥೆಯ ಮೂಲಕ ಸ್ವಾತಂತ್ರ್ಯ ಸಂಗ್ರಾಮದ ಸಂದೇಶ ಸಾರುತ್ತಿದ್ದರು. ಹಾವಣ್ಣನವರ ಮಾತು ಈಸೂರಿನ ಯುವಕರನ್ನು ಬಡಿದೆಬ್ಬಿಸಿತು. ಬೆಳಗ್ಗೆ ಪ್ರಭಾತಫೇರಿ, ವೀರಭದ್ರ ದೇವಸ್ಥಾನದ ಬಳಿ ಧ್ವಜಾರೋಹಣ, ರಾಷ್ಟ್ರಗೀತೆ, ಸಂಜೆ ದೇಶಭಕ್ತಿಗೀತೆಗಳನ್ನು ಹಾಡುವುದು, ಭಾಷಣ ಇದು ದಿನ ನಿತ್ಯದ ಕಾರ್ಯಕ್ರಮ.

ಈಸೂರಿನ ಯುವಕರಿಗೆ ಇಷ್ಟರಿಂದಲೇ ತೃಪ್ತಿಯಿಲ್ಲ. ಇಲ್ಲಿಯ ಜನ ಸ್ವಾತಂತ್ರ್ಯ ವೀರರು ಎಂದು ಸರಕಾರಕ್ಕೆ ತಿಳಿಯಬೇಕೆಂಬ ಮಹತ್ವಾಕಾಂಕ್ಷೆಯನ್ನು ಸಾದರಪಡಿಸಲು ಯುವಕರು ಕಾರ್ಯೋನ್ಮುಖರಾದರು. ಊರಿನ ಹಿರಿಯರು ಅವರಿಗೆ ಬೆಂಗಾವಲಾಗಿ ನಿಂತು, ಈಸೂರನ್ನು ಸ್ವತಂತ್ರವೆಂದು ಸಾರಲು ಈ ನಿರ್ಧಾರ ಕೈಗೊಂಡರು.

ಈಸೂರನ್ನು ಸ್ವತಂತ್ರವೆಂದು ಸಾರಬೇಕು. "ಬೇಜವಾಬ್ದಾರಿ ಸರಕಾರದ ಅಧಿಕಾರಿಗಳು ಯಾರೇ ಆಗಿರಲಿ ಅವರು ಈಸೂರನ್ನು ಪ್ರವೇಶಿಸದಂತೆ ತಡೆಯಬೇಕು."

"ಊರಿನ ಶ್ಯಾನುಭೋಗರು ಮತ್ತು ಪಟೇಲರ ಸರ್ಕಾರಿ ದಪ್ತರ ತೆಗೆದುಕೊಂಡು, ಅವರಿಂದ ರಾಜೀನಾಮೆ ಕೊಡಿಸಬೇಕು."

"ಸರ್ಕಾರಕ್ಕೆ ಕಂದಾಯ ಕಟ್ಟ ಕೂಡದು."

"ವೀರಭದ್ರ ದೇವಸ್ಥಾನದ ಜಾಗಟೆಯ ಸದ್ದು ಕೇಳಿದೊಡನೆ ಎಲ್ಲರೂ ಬಂದು ಸೇರ ಬೇಕು."

ಎಲ್ಲರೂ ಈ ತೀರ್ಮಾನಗಳನ್ನು ಒಪ್ಪಿದರು.

'ಈಸೂರು ಸ್ವತಂತ್ರವಾಗಿದೆ. ಬೇಜವಾಬ್ದಾರಿ ಸರಕಾರಿ ಅಧಿಕಾರಿಗಳಿಗೆ ಪ್ರವೇಶವಿಲ್ಲ ! ಒಂದು ವೇಳೆ ಪ್ರವೇಶಿಸಿದರೆ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ' ಎಂಬ ನಾಮ ಫಲಕ ಊರಮುಂದೆ ಕಾಣಿಸಿಕೊಂಡಿತು.

ಯುವ ಸ್ವಯಂಸೇವಕರು ಲಾಠೀ ಧಾರಿಗಳಾಗಿ ಊರಿನ ಕಾವಲಿಗೆ ಸಜ್ಜಾದರು. ಜಯಣ್ಣನನ್ನು ಅಮಲ್ದಾರನನ್ನಾಗಿ, ಮಲ್ಲಪ್ಪಯ್ಯನನ್ನು ಸಬ್ ಇನ್ಸ್‌ಪೆಕ್ಟರನ್ನಾಗಿ ಚುನಾಯಿಸಿಕೊಂಡು, ಊರಿನ ಆಡಳಿತವನ್ನು ತಮ್ಮ ವಶಕ್ಕೆ ತೆಗೆದುಕೊಂಡರು.

ಪೊಲೀಸ್ ಕೆಲಸದಲ್ಲಿದ್ದ ಗುತ್ತಿಗೆಪ್ಪ ಈಸೂರಿನವನು. ಇಲ್ಲಿ ನಡೆಯುತ್ತಿದ್ದ ಎಲ್ಲ ಕೆಲಸಗಳನ್ನೂ ಮೇಲಧಿಕಾರಿಗಳಿಗೆ ತಿಳಿಸುತ್ತಿದ್ದ. ಇವನ ಹೇಳಿಕೆಯಂತೆ ಹಲವಾರು ಹೆಸರುಗಳು ಪೊಲೀಸ್ ಸ್ಟೇಷನ್ನಿನಲ್ಲಿ ದಾಖಲಾದುವು.

ಈಸೂರಿನಲ್ಲಿ ನಡೆದ ಸಂಗತಿ ಎಲ್ಲ ಕಡೆಗೂ ಹಬ್ಬಿತು. ಕೆಲವರು 'ಭಲೇ' ಎಂದು ಹೊಗಳಿದರು. ಕೆಲವರು ಇದು ಪುಂಡಾಟ. ಊರನ್ನು ಸ್ವತಂತ್ರಗೊಳಿಸುವುದು ಎಂದರೇನು ? ಸರಕಾರ ಸುಮ್ಮನಿರುತ್ತದೆಯೆ ? ಎಲ್ಲರನ್ನೂ ಹಿಡಿದು ಜೈಲಿಗೆ ಹಾಕುತ್ತಾರೆ. ಗುಂಡಿಕ್ಕಿ ಕೊಲ್ಲುತ್ತಾರೆ. ಇದು ಹುಡುಗಾಟವಲ್ಲ ಎಂದರು.

"ವೀರಭದ್ರ ದೇವಸ್ಥಾನದಲ್ಲಿ ಊರಿನ ಶ್ಯಾನುಭೋಗರು ಮತ್ತು ಪಟೇಲರು ಬಂದು ಕುಳಿತಿದ್ದಾರೆ" ಎಂದು ಊರಮುಂದೆ ಕಾವಲಿದ್ದ ಸ್ವಯಂಸೇವಕರಿಗೆ ಯಾರೋ ಸುದ್ದಿ ಮುಟ್ಟಿಸಿದರು. ದೇವಸ್ಥಾನದ ಜಾಗಟೆಯ ಢಣ ಢಣ ಶಬ್ದ ಎಲ್ಲರನ್ನೂ ಕರೆಯಿತು. ಊರಿನ ಜನವೆಲ್ಲಾ ಸೇರಿತು.

ಅಮಲ್ದಾರ್ ಜಯಣ್ಣ ಕೇಳಿದ "ಏನು ಪಟೇಲರೇ ! ಶ್ಯಾನುಭೋಗರೇ ! ಊರಿಗೆ ಯಾವ ಕಡೆಯಿಂದ ಬಂದಿರಿ ?" ಊರನ್ನು ಅಪ್ಪಣೆ ಇಲ್ಲದೆ ಪ್ರವೇಶಿಸಬಾರದೆಂದು ಊರ ಮುಂದೆ ಬೋರ್ಡು ಹಾಕಿದೆ. ನೀವು ನೋಡಲಿಲ್ಲವೆ ?"

"ನಾವು ಆ ಕಡೆಯಿಂದ ಬರಲಿಲ್ಲ. ಅಡ್ಡ ದಾರಿಯಿಂದ ಬಂದೆವು." ಪಟೇಲರು ಹೇಳಿದರು.

"ನೀವು ಎಲ್ಲಿಂದಾದರೂ ಬನ್ನಿ. ಅಪ್ಪಣೆ ಇಲ್ಲದೆ ಊರಿಗೆ ಪ್ರವೇಶ ಮಾಡಿರುವುದು ಅಪರಾಧ. ಇದು ಸ್ವತಂತ್ರ ಈಸೂರಿನ ಕಾನೂನು. ಇದಕ್ಕೆ ಶಿಕ್ಷೆ ಅನಿವಾರ್ಯ" ಅಮಲ್ದಾರ್ ಜಯಣ್ಣ ಹೇಳಿದ.

"ನೀವು ಹಿಂದೆ ಹೇಳಿದ್ದಂತೆ ರಾಜೀನಾಮೆ ನೀಡಿ ನಿಮ್ಮ ದಪ್ತರುಗಳನ್ನು ನಮಗೆ ಒಪ್ಪಿಸಿದರೆ, ನಿಮಗೆ ಶಿಕ್ಷೆಯಿಂದ ವಿನಾಯಿತಿ ದೊರೆಯುವುದು." ಸಬ್ ಇನ್ಸ್‌ಪೆಕ್ಟರ್ ಮಲ್ಲಪ್ಪಯ್ಯ ಹೇಳಿದ.

"ನಮ್ಮನ್ನು ರಾಜೀನಾಮೆ ಕೊಡಿ ಎಂದು ಕೇಳಲು ನೀವ್ಯಾರು ? ಒಂದು ವೇಳೆ ರಾಜೀನಾಮೆ ಕೊಡಬೇಕಾದರೆ ಶಿಕಾರಿಪುರದಲ್ಲಿ ಅಮಲ್ದಾರರಿಗೆ ಕೊಡುತ್ತೇವೆ ನಿಮಗಲ್ಲ" ಪಟೇಲರು ಹೇಳಿದರು.

ಯಾರು ಎಷ್ಟು ಹೇಳಿದರೂ ಪಟೇಲರು, ಶ್ಯಾನುಭೋಗರು ರಾಜೀನಾಮೆ ಕೊಡಲು ಒಪ್ಪಲಿಲ್ಲ. ಗಾಂಧೀ ಟೋಪಿ ಹಾಕಲೂ ಒಪ್ಪಲಿಲ್ಲ.

ಪಟೇಲರು ಮತ್ತು ಶ್ಯಾನುಭೋಗರನ್ನು ಗುಡಿಯ ಆವರಣದಿಂದ ಹೊರದೂಡಿ, ಮುಂದಿನ ಬಯಲಿನಲ್ಲಿ ಒಂಟಿ ಕಾಲ ಮೇಲೆ ನಿಲ್ಲಿಸಿ, ಸ್ವಯಂ ಸೇವಕರು ಅವರನ್ನು ಸುತ್ತುವರಿದರು.

ಮೊದಲೇ ವಯಸ್ಸಾದವರು. ಮೇಲೆ ಬಿಸಿಲು. ಪಟೇಲರು, ಶ್ಯಾನುಭೋಗರು ಬಳಲಿ ಬೆಂಡಾದರು. ಮೂರು ಗಂಟೆಗಳ ಕಾಲದ ಶಿಕ್ಷೆ ಅನುಭವಿಸಿದ ಮೇಲೆ ಅವರ ಬಿಡುಗಡೆಯಾಯಿತು. ಅವಮಾನ, ಸೇಡಿನ ಪ್ರತೀಕಾರ ಹೊತ್ತು ಅವರಿಬ್ಬರೂ ಶಿಕಾರಿಪುರ ಸೇರಿದರು.

ಶಿಕಾರಿಪುರದಲ್ಲಿ ಅಮಲ್ದಾರ್ ಚನ್ನಕೃಷ್ಣಯ್ಯ ಮತ್ತು ಸಬ್‌ಇನ್ಸ್‌ಪೆಕ್ಟರ್ ಕೆಂಚೇಗೌಡರು ಈಸೂರಿನ ವಿಷಯ ಸಮಾಲೋಚಿಸುತ್ತಿದ್ದರು. ಅಷ್ಟರಲ್ಲಿ ಈಸೂರಿನ ಪಟೇಲ್ ಚನ್ನಬಸಪ್ಪ ಮತ್ತು ಶ್ಯಾನುಭೋಗ್ ರಂಗನಾಥರಾವ್ ಬಂದು ಈಸೂರಿನಲ್ಲಿ ತಮಗಾದ ಅವಮಾನ ಮತ್ತು ಶಿಕ್ಷೆಯ ವರದಿ ಮಾಡಿದರು.

ಮೊದಲೇ ಈಸೂರಿನ ವಿಚಾರ ತಿಳಿದಿದ್ದ ಸಬ್‌ಇನ್ಸ್‌ಪೆಕ್ಟರ್ ಪಟೇಲರ ಮಾತು ಕೇಳಿ ಉಗ್ರಾವತಾರ ತಾಳಿ "ಇವರದು ಬಹಳ ಪುಂಡಾಟವಾಯಿತು. ಇದು ಬರೀ ಹುಡುಗರ ಕೆಲಸವಲ್ಲ. ಇವರ ಹಿಂದೆ ಊರ ಹಿರಿಯರೂ ಇದ್ದಾರೆ. ಇವರನ್ನು ಹೀಗೇ ಬಿಡಬಾರದು. ಗುಂಡು ಹೊಡೆದು ಸುಡಬೇಕು" ಎಂದು ಗುಡುಗಿದರು.

"ದುಡುಕುವುದರಿಂದ ಪ್ರಯೋಜನವಿಲ್ಲ, ಅಲ್ಲಿ ಏನು ನಡೆದಿದೆಯೋ ನೋಡೋಣ. ಇವರ ಮಾತನ್ನೇ ನಂಬಿ ನಿರ್ಧಾರಕ್ಕೆ ಬರುವುದು ಸರಿಯಲ್ಲ. ನಾಳೆ ನಾವೇ ಈಸೂರಿಗೆ ಹೋಗೋಣ. ಪರಿಸ್ಥಿತಿಯನ್ನು ಅರಿಯೋಣ. ಅನಂತರ ಮುಂದಿನ ಕಾರ್ಯ ಯೋಚಿಸೋಣ" ಅಮಲ್ದಾರವರು ಹೇಳಿದರು.

ಮಾರನೆಯ ದಿನ ಅಮಲ್ದಾರ್ ಚನ್ನಕೃಷ್ಣಯ್ಯ ಸಬ್‌ಇನ್ಸ್‌ಪೆಕ್ಟರ್ ಕೆಂಚೇಗೌಡರು ಈಸೂರಿಗೆ ಹೊರಟರು. ಈಸೂರಿನ ಜನರು ಇವರೂ ಬರಬಹುದೆಂದು ಊಹಿಸಿದ್ದರು. ಯಾರೂ ದುಡುಕಬಾರದೆಂದು ಯುವಕರಿಗೆ ಹಿರಿಯರು ತಿಳಿಸಿದರು.

ಊರಮುಂದಕ್ಕೆ ಬಂದ ಅಮಲ್ದಾರ್ ಮತ್ತು ಸಬ್‌ಇನ್ಸ್‌ಪೆಕ್ಟರ್ ಅಲ್ಲಿದ್ದ ಫಲಕ ನೋಡಿದರು. ಸಬ್‌ಇನ್ಸ್‌ಪೆಕ್ಟರಿಗೆ ಬಹಳ ಕೋಪ ಬಂತು. ಆ ಫಲಕ ತಮ್ಮ ಅಧಿಕಾರಕ್ಕೆ ಸವಾಲು ಎಂದು ಭಾವಿಸಿ ಅದನ್ನು ಕಿತ್ತೆಸೆದು ಅಮಲ್ದಾರರು ಮತ್ತು ಸಬ್‌ಇನ್ಸ್‌ಪೆಕ್ಟರು ವೀರಭದ್ರ ದೇವಸ್ಥಾನಕ್ಕೆ ಬಂದರು.

ವೀರಭದ್ರ ದೇವಸ್ಥಾನದ ಮುಂದೆ ತ್ರಿವರ್ಣ ಧ್ವಜ ಹಾರಾಡುತ್ತಿತ್ತು. ಸ್ವಯಂ ಸೇವಕರು ಲಾಠೀ ಧಾರಿಗಳಾಗಿ ಅದರ ರಕ್ಷಣೆಗಾಗಿ ನಿಂತಿದ್ದರು.

"ಈ ಧ್ವಜ ತೆಗೆದು ಹಾಕಿ. ಇದು ಸರಕಾರದ ವಿರುದ್ಧವಾದ ಕೆಲಸ" ಎಂದು ಸಬ್‌ಇನ್ಸ್‌ಪೆಕ್ಟರ್ ಅಬ್ಬರಿಸಿದರು.

ಸ್ವಯಂಸೇವಕರು ಇದಕ್ಕೆ ಒಪ್ಪಲಿಲ್ಲ. ವಿಷಯ ತಿಳಿದ ಹಿರಿಯರೂ ಅಲ್ಲಿ ಬಂದು ಸೇರಿದರು. ಅವರಲ್ಲಿ ಒಬ್ಬರು ಹೇಳಿದರು—

"ಸ್ವಾಮಿ ಈ ಧ್ವಜ ನಮ್ಮ ರಾಷ್ಟ್ರದ ಸಂಕೇತ. ಇದನ್ನು ಏಕೆ ತೆಗೆಯಬೇಕು?

ನೀವೂ ಭಾರತೀಯರು. ಈ ಧ್ವಜಕ್ಕೆ ಗೌರವ ಸಲ್ಲಿಸಿ. ಈ ಗಾಂಧೀ ಟೋಪಿ ಧರಿಸಿ" ಎಂದು ಮುಂದೆ ಹಿಡಿದರು.

"ಕೊಡಿ ಗಾಂಧೀ ಟೋಪಿಯನ್ನು ನಾನು ಧರಿಸುತ್ತೇನೆ" ಎಂದು ಗಾಂಧೀ ಟೋಪಿಯನ್ನು ತಲೆಯ ಮೇಲೆ ಧರಿಸಿದರು. ಎಲ್ಲರೂ ಜಯಕಾರ ಮಾಡಿದರು.

ಅಮಲ್ದಾರರ ವರ್ತನೆ ಸಬ್‌ಇನ್ಸ್‌ಪೆಕ್ಟ-ರಿಗೆ ಹಿಡಿಸಲಿಲ್ಲ. ಅವರು ಮಾಡಿದ ಕೆಲಸ ಸರಕಾರಕ್ಕೆ ಮಾಡಿದ ಅವಮಾನವೆಂದು ತಿಳಿಸಿದರು. ಅವರ ಸಹನೆ ಮೀರಿತು.

"ಈ ಧ್ವಜವನ್ನು ತೆಗೆಯಿರಿ. ಎಲ್ಲರೂ ಈ ಜಾಗವನ್ನು ಬಿಟ್ಟು ಹೊರಡಿ ಇಲ್ಲದಿದ್ದರೆ ಮುಂದೆ ಆಗುವ ಪರಿಣಾಮವನ್ನು ಎದುರಿಸಬೇಕಾಗುತ್ತದೆ" ಎಂದು ಆರ್ಭಟಿಸಿದರು.

"ಧ್ವಜವನ್ನೂ ತೆಗೆಯುವುದಿಲ್ಲ, ನಾವು ಮನೆಗೆ ಹೋಗುವುದೂ ಇಲ್ಲ. ಪರಿಣಾಮವನ್ನು ನಾವು ಎದುರಿಸಲು ಸಿದ್ಧರಾಗಿದ್ದೇವೆ" ಎಂದು ಹಿರಿಯರೊಬ್ಬರು ಹೇಳಿದರು.

"ನೀವು ತೆಗೆಯದಿದ್ದರೆ ನಾವೇ ತೆಗೆಯುತ್ತೇವೆ" ಎಂದು ಹೇಳಿ, ಜನರು ಪ್ರತಿಭಟಿಸುತ್ತಿದ್ದರೂ ಧ್ವಜವನ್ನು ಕಿತ್ತು ಬೂಟು ಕಾಲಿನಿಂದ ತುಳಿದರು.

ಇದರಿಂದ ಅಲ್ಲಿದ್ದ ಜನ ಕೆರಳಿದರು. ದೇವಸ್ಥಾನದ ಜಾಗಟೆಯನ್ನು ಬಡಿದರು. ಊರಿನ ಜನರೆಲ್ಲಾ ಅಲ್ಲಿ ಸೇರಿದರು. ಪರಿಸ್ಥಿತಿ ಕೈಮೀರಿ ಹೋಗುತ್ತಿತ್ತು. ಇನ್ಸ್‌ಪೆಕ್ಟರ್ ಜೊತೆಯಲ್ಲಿ ಬಂದಿದ್ದ ಪೊಲೀಸರು. ಜನರನ್ನು ಚದುರಿಸಲು ಲಾಠೀ ಬೀಸಿದರು. ಆದರೂ ಜನ ಜಗ್ಗಲಿಲ್ಲ. ಆಗ ಸಬ್‌ಇನ್ಸ್‌ಪೆಕ್ಟರ್‌ರವರು ಅದುವರೆವಿಗೂ ಬಚ್ಚಿಟ್ಟುಕೊಂಡಿದ್ದ ಪಿಸ್ತೂಲು ಹೊರ ತೆಗೆದರು.

"ಎಲ್ಲರೂ ಹೊರಟು ಹೋಗಿ ಇಲ್ಲದಿದ್ದರೆ ಗುಂಡು ಹಾರಿಸಿ ಎಲ್ಲರನ್ನೂ ಸುಟ್ಟುಬಿಡುತ್ತೇನೆ" ಎಂದು ಕೂಗಿದರು.

ಜನರು ಬೆಚ್ಚಿದರೂ ಬೆದರಲಿಲ್ಲ. ನಿಂತ ಜಾಗ ಬಿಟ್ಟು ಕದಲಲಿಲ್ಲ. ಜನರಿಗೂ ಸಬ್-ಇನ್ಸ್‌ಪೆಕ್ಟರಿಗೂ ಮಾತಿಗೆ ಮಾತು ಬೆಳೆಯಿತು. ಅಷ್ಟರಲ್ಲಿ ಯಾರೋ ಇನ್ಸ್‌ಪೆಕ್ಟರ ಟೋಪಿಯನ್ನು ಹಾರಿಸಿದರು. ಇದರಿಂದ ಕೋಪಗೊಂಡ ಇನ್ಸ್‌ಪೆಕ್ಟರ್ ಗುಂಡು ಹಾರಿಸಿದರು. ಗುಂಡು ಗುರುಶಾಂತಪ್ಪ ಮತ್ತು ಫಣಿಯಪ್ಪಾಚಾರ್‌ರವರಿಗೆ ಬಡಿದು ರಕ್ತ ಹರಿಯಿತು.

ರಕ್ತ ಕಂಡ ಜನ ಹುಚ್ಚರಾದರು. ಅಮಲ್ದಾರ್ ಮತ್ತು ಸಬ್‌ಇನ್ಸ್‌ಪೆಕ್ಟರನ್ನು ಸುತ್ತುವರೆದು, ಕೈಗೆ ಸಿಕ್ಕಿದ ಬಡಿಗೆಗಳಿಂದ ಬಾರಿಸಿದರು. ಇಬ್ಬರೂ ಜ್ಞಾನತಪ್ಪಿ ಬಿದ್ದು, ಇಹಲೋಕಯಾತ್ರೆ ಮುಗಿಸಿದರು.

ವಿಷಯ ಶಿಕಾರಿಪುರಕ್ಕೆ ತಲಪಿತು. ಅಧಿಕಾರಿಗಳು ಸಮಾಲೋಚನೆ ಮಾಡಿ, ಬೆಂಗಳೂರಿನಿಂದ ಹೆಚ್ಚು ಪೊಲೀಸರನ್ನು ಕರೆಸಿದರು. ಪೊಲೀಸ್ ಪಡೆ ಈಸೂರಿನ ಮೇಲೆ ಧಾಳಿ ಮಾಡಿತು.

ಧಾಳಿಗೆ ಮೊದಲೇ ಈಸೂರಿನ ಜನ ಊರು ಬಿಟ್ಟರು. ಹೆಂಗಸರು ಮತ್ತು ಮಕ್ಕಳನ್ನು ತಮ್ಮ ಬಂಧುಗಳ ಮನೆಗೆ ಕಳುಹಿಸಿದರು. ಊರಿನಲ್ಲಿ ಕೆಲವು ವಯಸ್ಸಾದ ಹೆಂಗಸರಲ್ಲದೆ ಬೇರಾರೂ ಇರಲಿಲ್ಲ. ಸ್ವಾತಂತ್ರ್ಯದ ಜಯಘೋಷಗಳಿಂದ ತುಂಬಿರುತ್ತಿದ್ದ ಈಸೂರು ಮೌನವಾಗಿ ಮಲಗಿತ್ತು.

....

ಪೊಲೀಸರು ಈಸೂರಿಗೆ ಲಗ್ಗೆ ಇಟ್ಟರು. ತಮ್ಮ ಪಟ್ಟಿಯಲ್ಲಿದ್ದ ಅಪರಾಧಿಗಳನ್ನು ಹುಡುಕಿದರು. ಯಾರೂ ಸಿಕ್ಕಲಿಲ್ಲ. ಎಲ್ಲರ ಮನೆಗೂ ನುಗ್ಗಿ ಕೈಗೆ ಸಿಕ್ಕಿದುದನ್ನು ದೋಚಿದರು. ಪ್ರತಿಭಟಿಸಿದವರನ್ನು ಥಳಿಸಿದರು. ಹುಲ್ಲಿನ ಬಣವೆಗಳಿಗೆ ಬೆಂಕಿ ಇಟ್ಟರು. ದನ ಕರುಗಳನ್ನು ಬಿಚ್ಚಿ ಅಟ್ಟಿದರು.

ಪೊಲೀಸರು ಎಷ್ಟು ಸಾಹಸ ಮಾಡಿದರೂ ಎಷ್ಟೇ ಕಿರುಕುಳ ನೀಡಿದರೂ ಕ್ರಾಂತಿವೀರರ ನೆಲೆ ಪತ್ತೆ ಮಾಡಲು ಆಗಲಿಲ್ಲ.

ಈಸೂರಿನ ಜನ ಪಕ್ಕದ ಕಾಡಿನಲ್ಲಿ ಅವಿತುಕೊಂಡಿದ್ದರು. ಊರಿನ ಜನ ದನ ಕಾಯುವವರ ಮೂಲಕ ಅವರಿಗೆ ಊಟ ಕಳುಹಿಸುತ್ತಿದ್ದರು.

ಪೊಲೀಸರಿಗೆ ಅವಿತುಕೊಂಡಿರುವ ಸುಳಿವು ತಿಳಿಯಿತು. ಅವರನ್ನು ಹೇಗಾದರೂ ಮಾಡಿ ಹೊರಗೆ ಬರುವಂತೆ ಮಾಡಲು “ಈಸೂರಿನ ಕ್ರಾಂತಿಕಾರರನ್ನು ಸರಕಾರ ಕ್ಷಮಿಸುತ್ತದೆ. ಅವರು ಊರಿಗೆ ಹಿಂತಿರುಗಬಹುದು” ಎಂದು ಪ್ರಕಟಿಸಿದರು.

ಕಾಡಿನಲ್ಲಿ ಅವಿತುಕೊಂಡಿದ್ದವರಿಗೂ ಈ ವಿಷಯ ತಿಳಿಯಿತು. ಎಷ್ಟು ದಿನ ಹೀಗೆ ತಲೆ ಮರೆಸಿಕೊಂಡಿರುವುದು ಬಂದದ್ದನ್ನು ಎದುರಿಸೋಣ ಎಂದು ಎಲ್ಲರೂ ಊರಿಗೆ ಮರಳಿದರು.

ಪೊಲೀಸರ ತಂತ್ರ ಫಲಿಸಿತು. ಊರನ್ನು ಪೊಲೀಸರು ಪುನಃ ಸುತ್ತುವರೆದರು. ಒಬ್ಬೊಬ್ಬರಾಗಿ ಹಿಡಿದು ಶಿಕಾರಿಪುರಕ್ಕೆ ಸಾಗಿಸಿದರು.

ಸರಕಾರವು ಸಾಗರದಲ್ಲಿ ವಿಶೇಷ ನ್ಯಾಯಾಲಯ ಸ್ಥಾಪಿಸಿತು. ಬಂಧಿತರ ಮೇಲೆ ರಾಜದ್ರೋಹದ ಆಪಾದನೆ ಮತ್ತು ಕೊಲೆ ಆಪಾದನೆಯನ್ನು ಹೊರಿಸಿತು.

ವಿಚಾರಣೆ ಪ್ರಾರಂಭವಾಯಿತು. ಸರಕಾರ ಅರವತ್ತನಾಲ್ಕು ಸಾಕ್ಷಿಗಳನ್ನು ಸಿದ್ಧಪಡಿಸಿತು. ಪೊಲೀಸಿನವರು ಹೇಳಿಕೊಟ್ಟಂತೆ ಸಾಕ್ಷಿ ನೀಡಿದರು.

ಈಸೂರಿನವರ ಪರವಾಗಿ ಕೆಲವರು ಸಾಕ್ಷಿ ಹೇಳಿದರು. ಆದರೇನು ಇವರ ಸಾಕ್ಷಿಯನ್ನು ಕೇಳುವವರು ಯಾರು? ಸರಕಾರ ಇಪ್ಪತ್ತೆರಡು ದಿನಗಳ ವಿಚಾರಣೆಯ ನಾಟಕ ಮಾಡಿ, ಹನ್ನೆರಡು ಜನರಿಗೆ ಮರಣ ದಂಡನೆಯನ್ನೂ ಇಪ್ಪತ್ತಮೂರು ಮಂದಿಗೆ ಜೀವಾವಧಿ ಶಿಕ್ಷೆಯನ್ನೂ ವಿಧಿಸಿತು. ಇವರಲ್ಲಿ ಹಾಲಮ್ಮ, ಸಿದ್ದಮ್ಮ, ಪಾರ್ವತಮ್ಮ ಎಂಬ ಮೂವರು ಮಹಿಳೆಯರೂ ಇದ್ದರು.

ಈಸೂರಿನ ಕ್ರಾಂತಿಕಾರರ ಪರ ವಕೀಲರಾದ ಸುಂದರರಾಜ ಅಯ್ಯಂಗಾರ್ ಅವರು ಹೈಕೋರ್ಟಿನಲ್ಲಿ ಮೇಲ್ಮನವಿ ಸಲ್ಲಿಸಿದರು. ಅಲ್ಲಿ ಗುರಪ್ಪ, ಮಲ್ಲಪ್ಪ, ಶಂಕರಪ್ಪ, ಹಾಲಪ್ಪ ಮತ್ತು ಸೂರ್ಯನಾರಾಯಣಚಾರಿಗೆ ಮರಣ ದಂಡನೆ ಖಾಯಂ ಆಗಿ ಉಳಿದ ಆರು ಜನರಿಗೆ ಜೀವಾವಧಿ ಶಿಕ್ಷೆ ಆಯಿತು.

ಮೈಸೂರಿನ ಮಹಾರಾಜರಾಗಿದ್ದ ಜಯಚಾಮರಾಜ ಒಡೆಯರ್ ಅವರು ಶಿವಮೊಗ್ಗಕ್ಕೆ ಬರುವವರಿದ್ದರು. ಮರಣ ದಂಡನೆಗೆ ಗುರಿಯಾಗಿದ್ದ ಸೂರ್ಯನಾರಾಯಣಚಾರಿಯವರ ಪತ್ನಿ ಗೋವಿಂದಮ್ಮ ಮಹಾರಾಜರನ್ನು ಭೇಟಿ ಮಾಡಿ ತನ್ನ ಅಳಲನ್ನು ತೋಡಿಕೊಳ್ಳಲು ನಿರ್ಧರಿಸಿದಳು. ಅವಳು ಒಂದು ಅರ್ಜಿಯನ್ನು ತಯಾರು ಮಾಡಿ ಶಿವಮೊಗ್ಗಕ್ಕೆ ಹೊರಟಳು.

ಮಹಾರಾಜರನ್ನು ನೋಡಲು ಜನ ಕಿಕ್ಕಿರಿದು ರಸ್ತೆಯ ಬದಿಯಲ್ಲಿ ನೆರೆದಿತ್ತು. ಗೋವಿಂದಮ್ಮನೂ ಈ ಗುಂಪಿನಲ್ಲಿ ನುಸುಳಿ ಕೊಂಡು ಸಮಯಕ್ಕಾಗಿ ಕಾಯುತ್ತಿದ್ದಳು.

ಮಹಾರಾಜರ ಕಾರು ಬಂತು. ಮಿಂಚಿನ ವೇಗದಲ್ಲಿ ಗೋವಿಂದಮ್ಮ ಕಾರಿನ ಮುಂದೆ ಬಂದು ನಿಂತಳು. ಕಾರು ನಿಂತಿತು. ಗೋವಿಂದಮ್ಮ ಮಹಾರಾಜರಿಗೆ ಅರ್ಜಿ ಯನ್ನು ನೀಡಿ, ತನ್ನ ಪತಿ ನಿರಪರಾಧಿ. ಅವರ ಮರಣ ದಂಡನೆಯನ್ನು ರದ್ದುಗೊಳಿಸಿ ತನಗೆ 'ಮಾಂಗಲ್ಯ ಭಿಕ್ಷೆ' ನೀಡಬೇಕೆಂದು ಬೇಡಿ ಕೊಂಡಳು. ಮಹಾರಾಜರು ತಮ್ಮ ಕೈಲಾದ ಸಹಾಯ ಮಾಡುವುದಾಗಿ ತಿಳಿಸಿದರು.

ಯಾರ ಪ್ರಯತ್ನವೂ ಫಲಿಸಲಿಲ್ಲ. ಸರಕಾರ ಅಪರಾಧಿಗಳಾದ ಕಮ್ಮಾರ ಗುರಪ್ಪ. ಜೀನ ಹಳ್ಳಿ ಮಲ್ಲಪ್ಪ, ಸೂರ್ಯನಾರಾಯಣ ಚಾರಿ, ಬಡಕನಹಳ್ಳಿ ಹಾಲಪ್ಪ ಮತ್ತು ಗೌಡರ ಶಂಕರಪ್ಪ ಇವರುಗಳನ್ನು ಗಲ್ಲಿಗೇರಿಸಲು ದಿನಗಳನ್ನು ಗೊತ್ತುಪಡಿಸಿ, ಅದರಂತೆ ಗಲ್ಲಿಗೇರಿಸಿತು.

ಈಸೂರಿನ ವೀರರು, ಸ್ವಾತಂತ್ರ್ಯ ದೇವಿಯ ಬಲಿ ಪೀಠದಲ್ಲಿ ಪ್ರಾಣಾರ್ಪಣೆ ಮಾಡಿ ಹುತಾತ್ಮರಾದರು.

ಭಾರತ ಸ್ವಾತಂತ್ರ್ಯ ಪಡೆದ ಮೇಲೆ, ಜೀವಾವಧಿ ಶಿಕ್ಷೆಗೊಳಗಾಗಿದ್ದವರನ್ನು ಮತ್ತು ಇತರ ಎಲ್ಲ ರಾಜಕೀಯ ಬಂಧಿಗಳನ್ನು ಬಿಡುಗಡೆ ಮಾಡಲಾಯಿತು.

ಹುತಾತ್ಮರ ನೆನಪಿಗಾಗಿ ಈಸೂರಿನಲ್ಲಿ ಸ್ಮಾರಕವೊಂದು ನಿಂತಿದೆ.



ಅಹಿಂಸೆ ಹೇಡಿತನವಲ್ಲ. ಅದು ಧೈರ್ಯದ ಪ್ರತೀಕ. ಆದರೆ ಅಹಿಂಸೆಯಿಂದ ಗುರಿ ಮುಟ್ಟಬೇಕಾದರೆ ತಾಳ್ಮೆ ಅಗತ್ಯ.

—ಗಾಂಧೀಜಿ

ಅಸ್ತಂಗತ

ಲೀಲಾವಣ್ಣಾಲ
"ನಿಸರ್ಗ" ೮೬, ಗುರುರಾಜ ಲೇಔಟ್
ಸಿದ್ಧಾರ್ಥನಗರ, ಮೈಸೂರು-೫೭೦ ೦೧೧

ಸ್ವಾತಂತ್ರ್ಯದೆಡಗಿನ ಮಾರ್ಗ ಎಂದೂ ಎಲ್ಲಿಯೂ ಸುಲಭವಲ್ಲ, ಅನೇಕ ವೇಳೆ ಗೋಚರವೂ ಅಲ್ಲ. ಶುದ್ಧ ಸಂಕಲ್ಪ, ಅತುಲ ಆತ್ಮವಿಶ್ವಾಸ, ಸಂಪೂರ್ಣ ಸ್ವಾರ್ಥತ್ಯಾಗ ಸಂಲಗ್ನಗೊಂಡರೆ ಮಾತ್ರ "ಪಂಗುಂ ಲಂಘಯತೇ ಗಿರಿಂ."

ಕಾರಿರುಳ ಸೆರಗಿನಿಂದ ಅವಕುಂಠಿತವಾದ ನಿಸರ್ಗವು ಮೌನವಾಗಿ ರೋದಿಸುವ ಹೊತ್ತಿನಲ್ಲಿ ತಾತ್ಯಾಟೋಪೆಯು ಮೆತ್ತನೆಯ ಹಾಸುಗೆಯ ಮೇಲೆ ಪವಡಿಸಿದ್ದ. ಅವನನ್ನು ಒಲಿಸಿಕೊಳ್ಳಲು ವಿಫಲಳಾದ ನಿದ್ರಾದೇವಿಯು ನಿರಾಸೆಯಿಂದ ಕೈಚೆಲ್ಲಿ ದೂರ ಸರಿದಾಗ, ಮೃದುಶಯ್ಯೆಯೂ ಶರಮಂಚವಾಗಿಯೇ ಭಾಸವಾಗಿತ್ತು. ನಿಶ್ಶಬ್ದ ನಿಶೆಯಲ್ಲಿ ಅತ್ತಿತ್ತ ಹೊರಳಾಡಿದಾಗ ಕಿರ್ರ್‌ಕಿರ್ರನೆ ಕೂಗುವ ಪಲ್ಲಂಗವು ಮನದ ಬೇಗುದಿಗೆ ಸಾಕ್ಷಿ ನುಡಿದಿತ್ತು.

'ಇಲ್ಲ..... ಇಲ್ಲ.... ಹೀಗಾಗಬಾರದಿತ್ತು....ಹೀಗಾಗಬಾರದಿತ್ತು....' ಅವನು ಕೂಗಿಕೊಂಡ. ಇನ್ನು ಮಲಗಲಾಗದೆ ಮೇಲೆದ್ದು ಕೈಸಾಲೆಗೆ ಬಂದ. ಕವ್ವನೆ ಕವಿದಿರುವ ಕತ್ತಲೆಯನ್ನು ಸೀಳಿ, ಅವನ ಕಣ್ಣುಗಳು ಆಗಸದಲ್ಲಿ ಮಿನುಗುವ ನಕ್ಷತ್ರಗಳನ್ನು ನಿಟ್ಟಿಸಿದುವು. ನಕ್ಷತ್ರವನ್ನೂ ಮೀರಿಸುವ ಹೊಳಪನ್ನು ಮುಕ್ಕಳಿಸುವ ಅವನ ಕಣ್ಣುಗಳ ಆಳದಲ್ಲಿ ಮಹಾ ವಿಪ್ಲವವೇ ನಡೆದಿತ್ತು.

೧೮೫೭ರ ಮೇ ತಿಂಗಳ ಮೊದಲ ವಾರ. ಅತೃಪ್ತ ಸೈನಿಕರು ಬ್ರಿಟಿಷ್ ದಬ್ಬಾಳಿಕೆಯ ವಿರುದ್ಧ ಸಿಡಿದೆದ್ದಿದ್ದರು. ಬರಖ್‌ಪುರದಲ್ಲಿ ಭುಗಿಲೆದ್ದ ಬೆಂಕಿ ಕಾಡ್ಗಿಚ್ಚಿನೋಪಾದಿಯಲ್ಲಿ ತನ್ನ ಕೆನ್ನಾಲಿಗೆಯನ್ನು ನಾಲ್ದೆಸೆಯೂ ಚಾಚತೊಡಗಿತ್ತು. ತಾತ್ಯಾಟೋಪೆಯ ಯಜಮಾನನೂ, ಗೆಳೆಯನೂ ಆಗಿದ್ದ ನಾನಾಸಾಹೇಬನ ಯೋಜನೆಯ ಪ್ರಕಾರ ದಂಗೆಯು ಮೇ ತಿಂಗಳ ಕೊನೆಯ ವಾರದಲ್ಲಿ ಆರಂಭವಾಗಬೇಕಾಗಿತ್ತು. ಆದರೆ ಉದ್ರಿಕ್ತ ಸೈನಿಕರು ಸ್ವಯಂ ನಿಯಂತ್ರಣವನ್ನು ಕಳೆದುಕೊಂಡು, ನಿಗದಿಯಾದ ಅವಧಿಗಿಂತ ಮೊದಲೇ ಆಸ್ಫೋಟಗೊಂಡರು. ಇದೇ ಕಾರಣದಿಂದಾಗಿ ತಾತ್ಯಾಟೋಪೆಯ ಮನಸ್ಸು ಅಸ್ವಸ್ಥಗೊಂಡಿತ್ತು.

೧೮೫೭ರ ದಂಗೆ ಸಿಪಾಯಿದಂಗೆಯಾಗಿರದೆ, ನೂರಾರು ವರ್ಷಗಳಿಂದ ಇಂಗ್ಲಿಷರು ಅವ್ಯಾಹತವಾಗಿ ನಡೆಸುತ್ತಲೇ ಬಂದ ದುರಾಡಳಿತಕ್ಕೆ ಭಾರತೀಯರು ವ್ಯಕ್ತ

ಘಡಿಸಿದ ಪ್ರತಿಕ್ರಿಯೆಯಾಗಿತ್ತು. ಆದ್ದರಿಂದಲೇ ಅದನ್ನು 'ಪ್ರಥಮ ಸ್ವಾತಂತ್ರ್ಯ ಸಂಗ್ರಾಮ' ಎಂದು ಕರೆಯಲಾಯ್ತು. ಯಾವುದೇ ಒಬ್ಬ ವ್ಯಕ್ತಿಯಾದರೂ ನೆಲ ಮುಟ್ಟುವವರೆಗೂ ಬಾಗಬಹುದು. ಅನಂತರ? ನೆಟ್ಟಗೆ ನಿಲ್ಲಲೇಬೇಕು ತಾನೆ? ಅಂತೆಯೇ ಅನ್ಯಾಯವನ್ನು ಸಹಿಸುತ್ತಾ ಹೋಗುವುದಕ್ಕೂ ಒಂದು ಮಿತಿ ಇದ್ದೇ ಇರುತ್ತದೆ. ಬ್ರಿಟಿಷ್ ಆಡಳಿತವು ಭಾರತೀಯ ಸಮಾಜದ ಪ್ರತಿಯೊಂದು ವ್ಯವಸ್ಥೆಯ ಮೇಲೂ ತನ್ನ ಕರಿನೆರಳನ್ನು ಹಾಯಿಸಿತ್ತು. ದೇಶೀಯ ರಾಜರು ತಮ್ಮ ರಾಜ್ಯಗಳನ್ನು ಕಳೆದುಕೊಂಡರು. ಜಮೀನುದಾರರು ಭೂಹೀನರಾದರು. ನೇಕಾರರು ನಿರುದ್ಯೋಗಿಗಳಾದರು. ಜನರ ಸಾಮಾಜಿಕ ಹಾಗೂ ಧಾರ್ಮಿಕ ಆಚಾರ ವಿಚಾರಗಳ ಮೇಲೆ ಇಂಗ್ಲಿಷರ ಪ್ರಹಾರ ಮೇರೆಮೀರಿತು.

ದನದ ಮತ್ತು ಹಂದಿಯ ಕೊಬ್ಬನ್ನು ಸವರಿದೆಯೆಂದು ಶಂಕಿಸಲಾದ ರೈಫಲನ್ನು ಉಪಯೋಗಿಸಲು ಬರಖ್‌ಪುರದ ದೇಶೀಯ ಪದಾತಿದಳವು ನಿರಾಕರಿಸಿದಾಗ, ಕೋಪೋದ್ರೇಕಿತನಾದ ಮೇಜರ್ ಹೆಡ್ಸನ್ ಸೈನಿಕರನ್ನು ವಿವಸ್ತ್ರಗೊಳಿಸಿ, ಪೆರೇಡ್‌ಗೆ ನಿಲ್ಲಿಸಿದ. ಸ್ವಾಭಿಮಾನೀ ಸೈನಿಕರ ನೆತ್ತರು ಕುದಿಯಿತು. ಅವರಲ್ಲೊಬ್ಬನಾದ ಮಂಗಲ್‌ಪಾಂಡೆಯು ಹೊರಗೆ ಜಿಗಿದು ಒಂದೇ ಏಟಿಗೆ ಮೇಜರ್ ಹಡ್ಸನ್ನನನ್ನು ಕೊಂದುಹಾಕಿದ! ರಾಜದ್ರೋಹದ ಆಪಾದನೆಗಾಗಿ ಮಂಗಲಪಾಂಡೆಯು ಗಲ್ಲು ಶಿಕ್ಷೆಗೆ ಒಳಗಾಗುತ್ತಿದ್ದಂತೆಯೇ ದಂಗೆಯ ಉರಿ ಪ್ರಖರಗೊಂಡಿತು.

ಮೇ ಹತ್ತರಂದು ಮೀರತ್‌ನ ಸಿಪಾಯಿಗಳು ಬ್ರಿಟಿಷ್ ಅಧಿಕಾರಿಗಳಿಗೆ ತಿರುಗಿನಿಂತರು. ಉದ್ರಿಕ್ತ ಸೈನಿಕರ ಜೊತೆಗೆ ನೋವುಂಡ ನಾಗರಿಕರೂ ಸೇರಿಕೊಂಡರು. ಗಂಡಸರು, ಹೆಂಗಸರು, ಮಕ್ಕಳು ಎಂದು ನೋಡದೆ, ಬಿಳಿತೊಗಲಿನವರನ್ನು ಕಂಡಲ್ಲಿ ಕೊಲ್ಲುತ್ತಾ, ರಕ್ತದ ಹೊಳೆ ಹರಿಸಿದರು. ಸೆರೆಮನೆಗಳ ಬೀಗ ಒಡೆಯಿತು. ಬಿಳಿಜನರ ಮನೆಗಳು ಬೆಂಕಿ ಹತ್ತಿಕೊಂಡು ಉರಿಯಲಾರಂಭಿಸಿದುವು!

ಸ್ಫೋಟಗೊಂಡ ಕ್ರಾಂತಿಯ ಸುದ್ದಿ ಕಿವಿಗೆ ಬೀಳುತ್ತಿದ್ದಂತೆಯೇ ನಾನಾಸಾಹೇಬ, ತಾತ್ಯಾಟೋಪೆ ಮತ್ತು ಅವರ ಬೆಂಬಲಿಗರು ದಿಗ್ಭ್ರಮೆಗೊಂಡರು. ನಾನಾಸಾಹೇಬನು ತುರ್ತು ಅಧಿವೇಶನವನ್ನು ನಡೆಸಿ, ವಿಪ್ಲವದ ಬಾವುಟವನ್ನು ಕಾನ್ಪುರದಲ್ಲಿ ಯೂ ಹಾರಿಸುವ ನಿರ್ಧಾರವನ್ನು ಪ್ರಕಟಿಸಿದನು. ಮಿಂಚಿನ ವೇಗದ ಆಕ್ರಮಣವನ್ನು ನಡೆಸಿ, ಬ್ರಿಟಿಷರು ತೊಡಿಸಿದ್ದ ಪರತಂತ್ರದ ಬೇಡಿಯನ್ನು ಕಿತ್ತೊಗೆಯುವ ಶಪಥವನ್ನು ಎಲ್ಲರೂ ಕೈಗೊಂಡರು. ಅದಕ್ಕೆ ಬೇಕಾದ ಸಿದ್ಧತೆಯು ರಹಸ್ಯವಾಗಿಯಾದರೂ, ಭರದಿಂದಲೇ ನಡೆಯಿತು.

ತಾತ್ಯಾಟೋಪೆಯು ಈಸ್ಟ್ ಇಂಡಿಯಾ ಕಂಪೆನಿಯ ಊಳಿಗದಲ್ಲಿ ಇದ್ದವನಲ್ಲ. ಹೀಗಾಗಿ 'ಎನ್‌ಫೀಲ್ಡ್ ರೈಫಲ್'ನ ಹೊರ ಕವಚವನ್ನು ಬಾಯಿಂದ ಕಚ್ಚಿ ತೆರೆಯುವ ಹೀನ ಅನಿವಾರ್ಯತೆಯೂ ಅವನಿಗೆ ಒದಗಿರಲಿಲ್ಲ. ಬ್ರಿಟಿಷರ ಸಾಮ್ರಾಜ್ಯ ವಿಸ್ತರಣೆಯ ಸ್ವಾರ್ಥಪರ ನೀತಿಗನುಗುಣವಾಗಿ ರಾಜ್ಯ ಕಳೆದುಕೊಂಡ ರಾಜನೂ ಅವನಾಗಿರಲಿಲ್ಲ. ನಿಜ ಹೇಳಬೇಕೆಂದರೆ ವಿದೇಶೀ ಆಡಳಿತದಿಂದಾಗಿ ವೈಯುಕ್ತಿಕ ನಷ್ಟವೇನೂ ಅವನಿಗಾಗಿರಲಿಲ್ಲ. ಆದರೆ ಅವನು ತನ್ನ

ತಾಯ್ನಾಡನ್ನು ಪ್ರೀತಿಸುವ ಉಜ್ವಲ ರಾಷ್ಟ್ರಪ್ರೇಮಿಯಾಗಿದ್ದ. ಪರಾಡಳಿತದ ದಾಸ್ಯದಿಂದಾಗಿ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಭಾರತದ ಪ್ರತಿಯೊಂದು ರಾಜ್ಯವೂ ಅದೆಂಥ ದುಃಸ್ಥಿತಿಯ ರಸಾತಲಕ್ಕೆ ಕುಸಿದುಹೋಗಿದೆ ಎಂಬುದನ್ನು ಕಣ್ಣಾರೆ ಕಂಡು ಮಮ್ಮಲ ಮರುಗಿದವನಾಗಿದ್ದ. ಈ ಬಗ್ಗೆ ಯೋಚಿಸಿದಾಗೆಲ್ಲಾ ಅವನ ಯುವರಕ್ತ ಕುದಿಯುತ್ತಿತ್ತು.

ತಾತ್ಯಾಟೋಪೆಯು ಎರಡನೇ ಬಾಜೀರಾಯನ ಆಸ್ಥಾನದಲ್ಲಿ ಅಧಿಕಾರದಲ್ಲಿದ್ದ ಪಾಂಡುರಂಗರಾವ್ ಟೋಪೆಯ ಸುಪುತ್ರ. ಶಿವಾಜಿಯ ಭವ್ಯ ಪರಂಪರೆಯ ಕೊನೆಯ ಕುಡಿಯಾದ ಬಾಜೀರಾಯನಿಂದ ಇಂಗ್ಲಿಷರು ರಾಜ್ಯವನ್ನು ಕಸಿದುಕೊಂಡಿದ್ದರು. ಆದರೆ ಇದರಿಂದಾಗಿ ರಾಜಕುಟುಂಬದೊಂದಿಗಿನ ಸೌಹಾರ್ದಯುತ ಸಂಬಂಧವನ್ನು ಪಾಂಡುರಂಗ ಟೋಪೆಯು ಕಡಿದಿರಲಿಲ್ಲ. ಹೀಗಾಗಿ ರಾಜಕುಟುಂಬದ ಮಕ್ಕಳೊಡನೆ ಆಡುತ್ತಾ ತನ್ನ ಬಾಲ್ಯವನ್ನು ಕಳೆದಿದ್ದ ತಾತ್ಯಾಟೋಪೆ. ಬಾಜೀರಾಯನ ದತ್ತುಪುತ್ರನಾದ ನಾನಾಸಾಹೇಬನು ಅವನ ಪರಮಮಿತ್ರನಾಗಿದ್ದ. ಅಷ್ಟೇ ಅಲ್ಲ, ಮುಂದೊಂದು ದಿನ ಝಾನ್ಸಿಯ ಅನಭಿಷಿಕ್ತ ರಾಣಿಯಾಗಿ ಮೆರೆದ ಲಕ್ಷ್ಮೀಬಾಯಿಯೂ ತಾತ್ಯಾನ ಬಾಲ್ಯ ಸ್ನೇಹಿತೆಯಾಗಿದ್ದಳು! ಅವರೆಲ್ಲಾ ಒಟ್ಟಿಗೆ ಓದಿದರು. ಒಡನಾಡಿಯಾಗಿ ಬೆಳೆದರು. ಮುಗ್ಧತೆಯ ಬಾಲ್ಯದಲ್ಲೂ ವಿದೇಶಿಯರನ್ನು ಹೊಡೆದೋಡಿಸುವ ಆಟ ಅವರಿಗೆ ಅತ್ಯಂತ ಪ್ರಿಯವಾಗಿತ್ತು!

ಮರಾಠಾ ನಾಯಕ ಬಾಜೀರಾಯನು ರಾಜ್ಯಹೀನನಾದ ಬಳಿಕ ತನ್ನ ಸಾವಿನವರೆಗೆ ಈಸ್ಟ್ ಇಂಡಿಯಾ ಕಂಪೆನಿಯಿಂದ ಮಾಸಾಶನವನ್ನು ಪಡೆಯುತ್ತಿದ್ದ. ಆದರೆ ಇಂಗ್ಲಿಷ್ ಗವರ್ನರ್ ಜನರಲ್ ಡಾಲ್‌ಹೌಸಿಯು 'ದತ್ತುಮಕ್ಕಳಿಗೆ ಹಕ್ಕಿಲ್ಲ' ಎಂಬ ದುರ್ನೀತಿಯನ್ನು ಜಾರಿಗೆ ತಂದನು. ಪರಿಣಾಮವಾಗಿ ನಾನಾಸಾಹೇಬನಿಗೆ ಮಾಸಾಶನವನ್ನು ನಿರಾಕರಿಸಲಾಯ್ತು. ಅಷ್ಟೇ ಅಲ್ಲ ಬಾಜೀರಾಯನ ಆಸ್ತಿಪಾಸ್ತಿಗಳ ಹಕ್ಕಿನಿಂದಲೂ ನಾನಾಸಾಹೇಬ ವಂಚಿತನಾಗಬೇಕಾಯ್ತು. ಇದು ಅವನ ಕ್ರೋಧಕ್ಕೆ ಕಾರಣವಾಗಿತ್ತು. ಭಾರತೀಯರನ್ನು ಕೈಗೊಂಬೆಗಳಂತೆ ಕುಣಿಸುವ ಬ್ರಿಟಿಷ್ ನೀತಿ ಅವನನ್ನು ಕೆರಳಿಸಿತ್ತು.

ನಾನಾಸಾಹೇಬನ ಧಮನಿ....ಧಮನಿಗಳಲ್ಲಿ ಹರಿಯುತ್ತಿದ್ದುದು ಕೆಚ್ಚೆದೆಯ ಮರಾಠಾರಕ್ತ! ಆದ್ದರಿಂದಲೇ ಇಂಗ್ಲಿಷರ ವಿರುದ್ಧ ಸೇಡುತೀರಿಸಲು ಅವನು ಕಂಕಣಬದ್ಧನಾಗಿದ್ದ. ತನ್ನ ಸಹಾಯಕ ಅಜೀಮುಲ್ಲಾ ಖಾನನ ಜೊತೆ ಸೇರಿಕೊಂಡು ತೀರ್ಥಯಾತ್ರೆಯ ನೆಪದಿಂದ, ಉತ್ತರ ಭಾರತವಿಡೀ ಸಂಚರಿಸಿ ಬಂದಿದ್ದ ನಾನಾಸಾಹೇಬ. ಅಲ್ಲಿಯ ಪ್ರಮುಖರನ್ನೆಲ್ಲಾ ಭೇಟಿಯಾಗಿ, ೧೮೫೭ರ ಮಹಾದಂಗೆಯನ್ನು ಸಂಘಟಿಸುವುದೇ ಅವನ ಯಾತ್ರೆಯ ಹಿಂದಿನ ಮುಖ್ಯ ಗುರಿಯಾಗಿತ್ತು. ನಿಗದಿಗೊಳಿಸಿದ ದಿನಾಂಕವನ್ನು ಕಾಯ್ದುಕೊಳ್ಳಲಾಗದಾಗ, ತಬ್ಬಿಬ್ಬುಗೊಂಡರೂ ಸಾವರಿಸಿಕೊಂಡು ಕಾರ್ಯೋನ್ಮುಖನಾದವನು ನಾನಾಸಾಹೇಬ. ಅವನಿಗೆ ಹೆಗಲೆಣೆಯಾಗಿ ನಿಂತವನು ತಾತ್ಯಾಟೋಪೆ.

ಭಾರತದ ಮೇಲೆ ಕಬಂಧ ಹಿಡಿತವನ್ನು ಸಾಧಿಸಿದ್ದ ವಿದೇಶಿಯರನ್ನು ವೈಯಕ್ತಿಕ

ಕಾರಣಕ್ಕಾಗಿ ಎದುರಿಸುವ ನಿರ್ಧಾರವನ್ನು ನಾನಾಸಾಹೇಬನು ಕೈಗೊಂಡಾಗ, ಅವನನ್ನು ಬೆಂಬಲಿಸುವ ಅನಿವಾರ್ಯತೆಯೇನೂ ತಾತ್ಯಾಟೋಪೆಗೆ ಇರಲಿಲ್ಲ. ಅವನಿನ್ನೂ ಯುವಕನಾಗಿದ್ದ. ಮುಳ್ಳುಹಾಸದ ಹಾದಿಯಲ್ಲಿ ಕ್ರಮಿಸಿ, ನಿಶ್ಚಿಂತ ಭವಿಷ್ಯವನ್ನು ರೂಪಿಸಿಕೊಳ್ಳುವ ಅವಕಾಶ ಅವನಿಗಿದ್ದಿತು. ಯಾವ ಕೋಟಲೆಗೂ ತಲೆಹಾಕದೆ, ತನ್ನ ಕುಟುಂಬವೆಂಬ ಸೀಮಿತ ಪ್ರಪಂಚದಲ್ಲಿ ಸುಖವಾಗಿಯೇ ಇರಬಹುದಾಗಿದ್ದಿತು. ಆದರೆ ತಾತ್ಯಾಟೋಪೆಯಂಥ ಅದ್ಭುತ ಇಚ್ಛಾಶಕ್ತಿಯುಳ್ಳ ಯುಗಪುರುಷರ ದೃಷ್ಟಿಯಲ್ಲಿ 'ಸುಖದ' ವ್ಯಾಖ್ಯಾನ ಬೇರೆಯೇ ಆಗಿರುತ್ತದೆ, ಇಂಥವರಿಗೆ ತಮ್ಮ ಸುತ್ತಮುತ್ತಲಿನ ಪ್ರಪಂಚ ದುಃಖದಲ್ಲಿ ಮುಳುಗಿರುವಾಗ ಸುಖ ನಿದ್ರೆ ಬರುವುದು ಸಾಧ್ಯವೇ ಇಲ್ಲ.

ಹಕ್ಕಿಪಕ್ಕಿಗಳಿನ್ನೂ ಉದಯರಾಗವನ್ನು ಹಾಡಿರಲಿಲ್ಲ. ನಕ್ಷತ್ರಗಳು ತಮ್ಮ ತೇಜಸ್ಸನ್ನು ಕಳೆದುಕೊಂಡಿರಲಿಲ್ಲ. ಭೂಮಿಯ ಮೇಲೆ ಹಾಸಿದ ಇರುಳದೇವಿಯ ಸೆರಗಿನ್ನೂ ಸರಿದಿರಲಿಲ್ಲ. ಕವಚ, ಕತ್ತಿ, ಶಿರಸ್ತ್ರಾಣಗಳೊಡನೆ ಸಿದ್ಧನಾದ ತಾತ್ಯಾಟೋಪೆಯು ತಾಯ್ನಾಡಿನ ಬಂಧವಿಮೋಚನೆಗೆ ವೀರೋಚಿತವಾಗಿ ಹೊರಟು ನಿಂತ.

ತಾತ್ಯಾಟೋಪೆಯು ಸಾಂಪ್ರದಾಯಿಕವಾಗಿ ಯುದ್ಧ ತರಬೇತಿಯನ್ನು ಹೊಂದಿದವನಲ್ಲ. ಆದರೆ ಅವನು ಹುಟ್ಟುಯೋಧನಾಗಿದ್ದ. ಚಲನವಲನಗಳಲ್ಲಿ ಮಿಂಚಿನಗತಿ ಅವನಿಗೆ ಕರಗತವಾಗಿತ್ತು. ಅಖಂಡ ಆತ್ಮವಿಶ್ವಾಸವೂ, ಸಾಹಸ ಮನೋವೃತ್ತಿಯೂ ಅವನ ಸಹಜ ಗುಣವಾಗಿತ್ತು. ಪ್ರಾಮಾಣಿಕತೆ, ದೇಶಪ್ರೇಮ ಹಾಗೂ ಸ್ವಾರ್ಥತ್ಯಾಗ ಅವನ ಮನೋಧರ್ಮವೇ ಆಗಿತ್ತು. ಹಲವು ಯುದ್ಧಗಳಲ್ಲಿ ನಾನಾಸಾಹೇಬನ ಸೇನಾನಾಯಕತ್ವವನ್ನು ತಾತ್ಯಾಟೋಪೆಯು ಸಮರ್ಥವಾಗಿಯೇ ನಿಭಾಯಿಸಿದ್ದ.

ಬರಖ್‌ಪುರದಲ್ಲಿ ಎದ್ದ ದಂಗೆಯು ಅಲಹಾಬಾದ್, ಔದ್, ದೆಹಲಿ....ಹೀಗೆ ಉತ್ತರಭಾರತ, ಮಧ್ಯಭಾರತದ ತುಂಬೆಲ್ಲಾ ವ್ಯಾಪಿಸಿತು.

ಭಾರತೀಯ ಸಿಪಾಯಿಗಳ ಅಶ್ವದಳವು ಸಂತೋಷಾತಿರೇಕದಿಂದ ಕೂಗುತ್ತಾ ದೆಹಲಿಯ ಕೆಂಪು ಕೋಟೆಯನ್ನು ಪ್ರವೇಶಿಸಿ, ಬಹಾದ್ದೂರ್‌ಷಾನನ್ನು ಚಕ್ರವರ್ತಿಯಾಗಿ ಘೋಷಿಸಿತು.

ಐಶ್ವರ್ಯವನ್ನೂ, ಅಂತಸ್ತನ್ನೂ ಕಳೆದುಕೊಂಡಿದ್ದ ಬಹದ್ದೂರ್‌ಷಾ ವಾರ್ಧಕ್ಯದಿಂದಾಗಿ ಕುಗ್ಗಿಹೋಗಿದ್ದ. ಸಿಪಾಯಿಗಳ ಅಭಿಮಾನ ಕಂಡು, ಹೃದಯ ತುಂಬಿ ಬಂದ ಚಕ್ರವರ್ತಿಯು ಗದ್ಗದಿತನಾಗಿ, "ಪ್ರತಿಯಾಗಿ ನೀಡಲು ನನ್ನ ಬಳಿ ಏನೂ ಇಲ್ಲ" ಎಂದಾಗ ಭಾವೋದ್ರೇಕಿತರಾದ ಸಿಪಾಯಿಗಳು, "ನೀವೇನೂ ಕೊಡಬೇಕಾಗಿಲ್ಲ. ಬ್ರಿಟಿಷರ ಖಜಾನೆಗಳನ್ನು ಲೂಟಿ ಹೊಡೆದು, ನಾವೇ ನಿಮ್ಮ ಪದತಲಕ್ಕೆ ತಂದೊಪ್ಪಿಸುವೆವು" ಎಂದು ಒಕ್ಕೊರಲಿನಿಂದ ನುಡಿದರು. ಹಾಗೆ ನುಡಿದವರಲ್ಲಿ ಮುಸಲ್ಮಾನರಿದ್ದರು. ಹಿಂದೂಗಳೂ ಇದ್ದರು ! ಆಗಿನ್ನೂ ಬ್ರಿಟಿಷರು ಬಿತ್ತಿದ ಮತೀಯ ವೈಷಮ್ಯದ ಬೀಜ ಮೊಳಕೆಯೊಡೆದಿರಲಿಲ್ಲ !

ಕಾನ್ಪುರದಲ್ಲಿ ಪ್ರಳಯರುದ್ರನಂತೆ ಹೋರಾಡಿದ ನಾನಾಸಾಹೇಬ, ಪ್ರಾಣದ

ಹಂಗು ತೊರೆದ ತಾತ್ಯಾಟೋಪೆ ಮತ್ತವರ ಬೆಂಬಲಿಗರನ್ನು ಸೋಲಿಸಲಾಗದೆ, ಕರ್ನಲ್ ವೀಲರನು ತಾನೇ ಶರಣಾಗತನಾಗಬೇಕಾಯಿತು. ಜನರ ಹರ್ಷೋದ್ಗಾರಗಳ ನಡುವೆ ನಾನಾಸಾಹೇಬನು ಚಕ್ರವರ್ತಿ ಬಹಾದ್ದೂರ್ ಷಾನ ಗೌರವಾರ್ಥ ನೂರಒಂದು ತೋಪುಗಳನ್ನು ಹಾರಿಸಿ, ತಾನೇ ಪೇಶ್ವೆ ಎಂದು ಘೋಷಿಸಿಕೊಂಡನು.

ಕಾನ್ಪುರವು ಹೋರಾಟಕ್ಕೆ ಇಳಿದ ಕಾಲದಲ್ಲಿಯೇ ಝಾನ್ಸಿಯಲ್ಲೂ ವಿಪ್ಲವದ ಬಾವುಟ ಹಾರಿತ್ತು. ಅಲ್ಲಿಯ ನಾಯಕತ್ವವನ್ನು ವಹಿಸಿದವಳು ವೀರರಾಣಿ ಲಕ್ಷ್ಮೀಬಾಯಿ. ಝಾನ್ಸಿಯ ರಾಜನಾಗಿದ್ದ ಗಂಗಾಧರರಾಯನು ೧೮೫೩ರಲ್ಲಿ ಮಡಿದಾಗ ಅವನಿಗೆ ಗಂಡು ಸಂತಾನವಿರಲಿಲ್ಲ. ಅದನ್ನೇ ನೆಪವಾಗಿರಿಸಿಕೊಂಡು ಝಾನ್ಸಿಯನ್ನು ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿಸಲಾಗಿತ್ತು. ಅಷ್ಟೇ ಅಲ್ಲ. ಗಂಗಾದರರಾಯನ ವಿಧವೆ ಲಕ್ಷ್ಮೀಬಾಯಿಗೆ ಕೊಡಬೇಕಾದ ಹಣವನ್ನು ಇಂಗ್ಲಿಷ್ ಸರಕಾರ ಮುಟ್ಟುಗೋಲು ಹಾಕಿತ್ತು. ತನ್ನ ಪತಿಯ ವಂಶಕ್ಕೆ ಒದಗಿದ ಘೋರ ಅಪಮಾನವನ್ನು, ತನಗಾದ ಅಖಂಡ ಅನ್ಯಾಯವನ್ನು ಜೀರ್ಣಿಸಿಕೊಳ್ಳುವುದು ಸ್ವಾಭಿಮಾನಿಯಾಗಿದ್ದ ಲಕ್ಷ್ಮೀಬಾಯಿಗೆ ಸಾಧ್ಯವೇ ಆಗಿರಲಿಲ್ಲ. ತಾಯ್ನಾಡಿಗೆ ಎರಗಿ ಬಂದ ಕಳಂಕವನ್ನು ತೊಡೆದು ಹಾಕಲು ಪಣತೊಟ್ಟ ಆಕೆ ತಕ್ಕ ಸಮಯಕ್ಕಾಗಿ ಕಾಯುತ್ತಿದ್ದಳು.

ಝಾನ್ಸಿಯಲ್ಲಿ ದೇಶೀಯ ಸೈನಿಕರನ್ನು ತನ್ನೆಡೆಗೆ ಒಲಿಸಿಕೊಂಡಿದ್ದ ಲಕ್ಷ್ಮೀಬಾಯಿ ಉತ್ತರ ಭಾರತದಲ್ಲಿ ಕ್ರಾಂತಿಯ ಕಿಡಿ ಪ್ರಜ್ವಲಿಸಿದ ತಕ್ಷಣ, ತನ್ನ ಗುರಿ ಸಾಧನೆಯತ್ತ ಗಮನ ಹರಿಸಿದಳು. ಆಕೆಯ ಕಾರ್ಯಚಟುವಟಿಕೆ ಅದೆಷ್ಟು ಚುರುಕಾಗಿತ್ತೆಂದರೆ ಝಾನ್ಸಿಯ ಕೋಟೆಯನ್ನು ಕಾಯುತ್ತಿದ್ದ ಇಂಗ್ಲಿಷ್ ಸೈನಿಕರಿಗೆ ಮಣ್ಣು ಮುಕ್ಕಿಸಿ, ಕೋಟೆಯನ್ನು ಸಂಪೂರ್ಣವಾಗಿ ವಶಪಡಿಸಿಕೊಳ್ಳುವವರೆಗೂ ಏನು ನಡೆಯುತ್ತಿತ್ತೆಂಬುದರ ಸಂಪೂರ್ಣ ಅರಿವು ಇಂಗ್ಲಿಷ್ ಕಂಪೆನಿಗೆ ಆಗಲಿಲ್ಲ!

ರಾಣಿ ಲಕ್ಷ್ಮೀಬಾಯಿಯು ಇಪ್ಪತ್ತು-ಇಪ್ಪತ್ತೆರಡರ ಸುಂದರ ಯುವತಿ. ಆದರೆ ಬದುಕು ನೀಡಿದ ಅನುಭವಗಳು ಆಕೆಗೆ ವಯಸ್ಸಿಗೆ ಮೀರಿದ ಗಾಂಭೀರ್ಯವನ್ನು ತಂದಿತ್ತಿದ್ದವು. ಧರ್ಮಶ್ರದ್ಧೆಯುಳ್ಳವಳೂ, ಮೃದುಹೃದಯಿಯೂ, ಉದಾರಿಯೂ ಆದ ರಾಣಿಯಲ್ಲಿ ಝಾನ್ಸಿಯ ಜನತೆ, ಸಂಪೂರ್ಣ ಭರವಸೆಯನ್ನು ಇಟ್ಟಿದ್ದರು. ಚತುರೆಯೂ, ಧೀರೆಯೂ ಆಗಿದ್ದ ಆಕೆಯ ರಾಷ್ಟ್ರಪ್ರೇಮದ ನುಡಿಗಳು ಜನರ ಮನಸ್ಸನ್ನು ಬಡಿದೆಬ್ಬಿಸಿ ಮೈಯಲ್ಲಿ ಮಿಂಚಿನ ಹೊಳೆಯನ್ನು ಹರಿಸುತ್ತಿದ್ದುವು. ತಾಯ್ನಾಡಿಗಾಗಿ ಪ್ರಾಣಾರ್ಪಣೆ ಮಾಡಲೂ ತಯಾರಾಗಿ ನಿಲ್ಲುವಷ್ಟು ಲಕ್ಷ್ಮೀಬಾಯಿಯ ವ್ಯಕ್ತಿತ್ವದ ಪ್ರಭಾವವಿದ್ದಿತು. ಒಂದೇ ಮಾತಿನಲ್ಲಿ ಹೇಳಬೇಕಾದರೆ ಅಗಾಧ ಇಚ್ಛಾಶಕ್ತಿಯುಳ್ಳ ಅಸಾಮಾನ್ಯ ಮಹಿಳೆಯಾಗಿದ್ದಳು. ರಾಣಿ ಲಕ್ಷ್ಮೀಬಾಯಿ ಯುದ್ಧಸನ್ನದ್ಧಳಾಗಿ ಆಕೆ ರಣರಂಗದಲ್ಲಿ ನಿಂತಳೆಂದರೆ, ಸಾಕ್ಷಾತ್ ದುರ್ಗೆಯೇ ಪ್ರತ್ಯಕ್ಷಳಾದಳೆಂಬಂತೆ ಸೈನಿಕರು ಭಾವಪರವಶರಾಗುತ್ತಿದ್ದರು. ಹೀಗಿರುವಾಗ ರಾಣಿಯು ಝಾನ್ಸಿಯ ಕೋಟೆಯನ್ನು ವಶಪಡಿಸಿಕೊಂಡು ದೇಶೀಯ ಸ್ವಚ್ಛ ಆಡಳಿತವನ್ನು ಪುನರಾ-

ರಂಭಿಸಿದ್ದು, ಜನರ ಆನಂದಕ್ಕೆ ಪಾರವಿಲ್ಲದಂತೆ ಮಾಡಿತು. ಆದರೆ ದೂರದರ್ಶಿತ್ವವುಳ್ಳ ರಾಣಿ, ಈ ಗೆಲುವು ದೀರ್ಘಕಾಲಿಕವಲ್ಲವೆಂಬುದನ್ನು ಅರಿತಿದ್ದಳು. ಆದ್ದರಿಂದಲೇ ಗೆಲುವಿನ ಗುಂಗಿನಲ್ಲಿ ಮೈಮರೆಯದೆ ಕೋಟೆಯನ್ನು ಭದ್ರಪಡಿಸುವ, ಸೈನ್ಯದ ಬಲವನ್ನು ಹೆಚ್ಚಿಸುವ ಕಾರ್ಯವನ್ನು ತತ್ ಕ್ಷಣ ಕೈಗೊಂಡಳು.

ಆಧುನಿಕ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿದಷ್ಟೇ ಅಲ್ಲದೆ, ಪ್ರತಿಯೊಂದು ಆಯಕಟ್ಟಿನ ಪ್ರದೇಶದ ರಕ್ಷಣೆಗೆ ಕೋಟೆಯನ್ನು ನಿರ್ಮಿಸಲಾಯಿತು. ಅಷ್ಟೇ ಅಲ್ಲ, ಜನರ ಅಭಿವೃದ್ಧಿಗಾಗಿ ಅಗತ್ಯವಾಗಿದ್ದ ಯೋಜನೆಗಳಿಗೂ ಗಮನ ಹರಿಸಿದಳು ಲಕ್ಷ್ಮೀಬಾಯಿ. ಮಲ್ಲಿಗೆಯ ಪರಿಮಳದಂತೆ ಪಸರಿಸಿದ ಆಕೆಯ ಕೀರ್ತಿ, ಜನರ ಹೃದಯಗಳಲ್ಲಿ ಅಭಿಮಾನದ ಹೊಳೆಯನ್ನು ಹರಿಯಿಸಿತು. ಆದರೂ ಬ್ರಿಟಿಷ್ ಕುಟಿಲೋಪಾಯಗಳ ದೈತ್ಯಶಕ್ತಿಯೆದುರು ಸ್ವಾತಂತ್ರ್ಯದ ಕಿರುಹಣತೆಯು ಬಹಳ ದಿನ ಉರಿಯಲಾರದೆ ಹೋಯಿತು.

ಮಾರ್ಚಿ ೧೮೫೮ ಝಾನ್ಸಿಯ ಪಾಲಿಗೆ ಕರಾಳ ದಿನಗಳು. ಹನ್ನೊಂದು ಸಾವಿರ ಸೈನಿಕರ ಬೆಂಬಲದೊಂದಿಗೆ ಬಂದ ಸರ್ ಹೆಗ್ ರೋಸನು ಕೋಟೆಗೆ ಮುತ್ತಿಗೆ ಹಾಕಿದನು. ಝಾನ್ಸಿಯ ಸೈನಿಕರು ಮಾತ್ರವಲ್ಲದೆ ಜನಸಾಮಾನ್ಯರೂ ಜೀವದ ಹಂಗು ತೊರೆದು ಕೋಟೆಯ ರಕ್ಷಣೆಗೆ ನಿಂತರು. ಮಕ್ಕಳು, ಮಹಿಳೆಯರು ಕೂಡಾ ಇದಕ್ಕೆ ಹೊರತಾಗಿರಲಿಲ್ಲ. ಅವಿಶ್ರಾಂತವಾದ ಅದಮ್ಯ ಆತ್ಮಶಕ್ತಿಯೊಡನೆ ಚೈತನ್ಯಮೂರ್ತಿಯಾಗಿದ್ದ ಲಕ್ಷ್ಮೀಬಾಯಿಯು ನಿರಂತರವಾಗಿ ತನ್ನವರನ್ನು ಹುರಿದುಂಬಿಸಿದಳು. ಅದೇ ಸಮಯದಲ್ಲಿ ರಾಣಿಯ ಸಹಾಯಕ್ಕಾಗಿ ಅಲ್ಲಿಗೆ ಧಾವಿಸಿ ಬಂದ ತಾತ್ಯಾಟೋಪೆಯು ಜನರಲ್ಲಿ ಹೊಸ ಭರವಸೆಯನ್ನೂ, ಉತ್ಸಾಹವನ್ನೂ ಮೂಡಿಸಿದನು.

ಯುದ್ಧಭೂಮಿಯಲ್ಲಿ ಮಹಾರಾಣಿಯನ್ನು ಸಂಧಿಸುತ್ತಿದ್ದಂತೆಯೇ ತಾತ್ಯಾಟೋಪೆಯ ಹೃದಯವು ಗೌರವಾದರ ಭಾವನೆಯಿಂದ ತುಂಬಿ ಬಂದಿತು. ಎಳೆ ವಯಸ್ಸಿನ ಸುಂದರ ಸ್ತ್ರೀಯಾಗಿದ್ದರೂ, ರಣಚಂಡಿಯಂತೆ ಹೋರಾಡುತ್ತಿದ್ದ ಆಕೆಯು ತಾತ್ಯಾಟೋಪೆಯ ಕಣ್ಣಿಗೆ ವೈರಾಗ್ಯಮೂರ್ತಿಯಂತೆಯೇ ಕಂಡುಬಂದಳು!

ಲಕ್ಷ್ಮೀಬಾಯಿಯು ತಾತ್ಯಾಟೋಪೆಗೆ ಅಪರಿಚಿತಳಾಗಿರಲಿಲ್ಲ. ಬಾಲ್ಯದ ಮುಗ್ಧ ದಿನಗಳಿಂದಲೂ ಆಕೆಯ ನಿರ್ಮಲ ಸ್ನೇಹದ ಸವಿಯನ್ನುಂಡವನು ಅವನು. ಸರ್ವಾಲಂಕಾರಭೂಷಿತೆ ಲಕ್ಷ್ಮಿಯು ಮಹಾರಾಣಿಯಾಗಿ ಪತಿಗೃಹಕ್ಕೆ ತೆರಳಿದ ಹೃದಯಸ್ಪರ್ಶಿ ದೃಶ್ಯವಿನ್ನೂ, ನಿನ್ನೆ ಮೊನ್ನೆ ನಡೆದ ಘಟನೆಯಂತೆ ಅವನ ನೆನಪಿನಲ್ಲಿ ಉಳಿದಿತ್ತು. ಮುಖತಃ ಭೇಟಿಯಾಗದ ಕಾಲದಲ್ಲೂ ಆಕೆಯ ಬಗೆಗಿನ ಎಲ್ಲಾ ಸಂಗತಿಗಳನ್ನೂ ಅವನು ತಿಳಿದುಕೊಂಡವನೇ ಆಗಿದ್ದ. ಬುದ್ಧಿವಂತಳಾದ ರಾಣಿಯು, ರಾಜಕೀಯ ಮುತ್ಸದ್ದಿತನದಲ್ಲೂ ತನ್ನ ಪತಿಗೆ ಹೆಗಲೆಣೆಯಾಗಿ ನಿಂತಿದ್ದ ವಿಚಾರ ತಾತ್ಯಾಟೋಪೆಯ ಅಭಿಮಾನವನ್ನು ಹೆಚ್ಚಿಸಿತ್ತು. ಅದೇ ರಾಣಿಯು ಪತಿಯನ್ನು ಕಳೆದುಕೊಂಡಿದ್ದೂ ಅಲ್ಲದೆ, ರಾಜ್ಯವಿಯೋಗಿಯೂ ಆದ ಸಂಗತಿ ತಿಳಿದು ಬಂದಾಗ, ಅಪಾರ ವ್ಯಥೆಯಾಗಿತ್ತು. ಇಂಗ್ಲಿಷರ ಕುಟಿಲತಂತ್ರಗಳನ್ನು ಚೆನ್ನಾಗಿ ಅರಿತಿದ್ದ ಅವನು, ರಾಣಿಯು ಝಾನ್ಸಿಯ

ಕೋಟೆಯನ್ನು ವಶಪಡಿಸಿಕೊಂಡಿದ್ದಾಗ್ಯೂ, ಆ ಗೆಲುವು ಶಾಶ್ವತವಲ್ಲವೆಂಬುದನ್ನು ಮನಗಂಡಿದ್ದನು. ಅಂತೆಯೇ ಸರ್ ಹಗ್ ರೋಸನು ಝಾನ್ಸಿಗೆ ಮುತ್ತಿಗೆ ಹಾಕಿದ ಸಂಗತಿ ತಿಳಿದ ತತ್‌ಕ್ಷಣ, ಸೈನ್ಯ ಸಮೇತನಾಗಿ ಅಲ್ಲಿಗೆ ಧಾವಿಸಿದನು.

ತಾತ್ಯಾ ಟೋಪೆಯ ಆಗಮನವು ಝಾನ್ಸಿಯ ಜನತೆಯಲ್ಲಿ ಹೊಸ ಹುರುಪು ಉಕ್ಕಿಸಿದುದು ನಿಜ. ಆದರೆ ಎಷ್ಟೇ ಕಲಿತನದಿಂದ ಕಾದಿದರೂ ಕೋಟೆಯನ್ನು ಉಳಿಸುವುದು ಅಸಾಧ್ಯವಾಗಿ ಹೋಯಿತು. ಅಪಾರ ಸೈನ್ಯ, ಅತ್ಯಾಧುನಿಕ ಯುದ್ಧತಂತ್ರದ ಎದುರು, ರಾಷ್ಟ್ರಪ್ರೇಮಿಗಳಿಗೆ ಉಳಿಗಾಲವಿಲ್ಲದಾಯ್ತು. ವೀರಮರಣವನ್ನು ಎದುರಿಸಲು ರಾಣಿಯು ಅಂಜದಿದ್ದರೂ ಆಕೆಯನ್ನು ಕಳೆದುಕೊಳ್ಳಲು ಝಾನ್ಸಿಯ ಜನತೆ ಸಿದ್ಧವಿರಲಿಲ್ಲ. ಅವಳ ಜೀವ ಅಪಾಯಕ್ಕೆ ಸಿಲುಕುತ್ತಿರುವುದನ್ನು ಗಮನಿಸಿದ ಅವರು ಆಕೆಗೆ ತಪ್ಪಿಸಿಕೊಳ್ಳಲು ಸೂಚಿಸಿದರು. ಅಂತೆಯೇ ರಾಣಿಯು ದತ್ತುಪುತ್ರ ದಾಮೋದರನನ್ನು ಬೆನ್ನಿಗೆ ಕಟ್ಟಿಕೊಂಡು, ಕೆಲವೇ ಜನ ಬೆಂಬಲಿಗರೊಡನೆ ಅಲ್ಲಿಂದ ನಿರ್ಗಮಿಸಿದಳು. ಕೋಟೆ ಇಂಗ್ಲಿಷರ ವಶವಾಯ್ತು. ಕೆಲವೇ ದಿನಗಳಲ್ಲಿ ತಾತ್ಯಾಟೋಪೆ ಮತ್ತು ಇನ್ನಿತರ ಮುಖ್ಯಸ್ಥರು ಕೂಡಾ ಕಲ್ಪಿಗೆ ಬಂದು ರಾಣಿಯನ್ನು ಜೊತೆಗೂಡಿದರು.

ತಾತ್ಯಾಟೋಪೆ ಮತ್ತು ರಾಣಿ ಲಕ್ಷ್ಮೀಬಾಯಿ ಇಬ್ಬರೂ ನಿರಂತರ ಆಶಾವಾದಿಗಳಾಗಿದ್ದರು. ಆದ್ದರಿಂದಲೇ ಕಲ್ಪಿಯಲ್ಲಿ ಇನ್ನೊಮ್ಮೆ ಅವರು ಇಂಗ್ಲಿಷರನ್ನು ಎದುರಿಸಿದರು. ಅನುಪಮ ಶೌರ್ಯ, ಸಾಹಸವನ್ನು ಮೆರೆದರಾದರೂ ಪರಿಸ್ಥಿತಿಯು ಸಂಪೂರ್ಣವಾಗಿ ಪ್ರತಿಕೂಲವಾಯ್ತು. ಇಂಗ್ಲಿಷ... ಈಗಾಗಲೇ ಉತ್ತರ ಭಾರತ ಮತ್ತು ಮ... ಭಾರತದ ಅನೇಕ ಕಡೆಗಳಲ್ಲಿ ದಂಗೆಯನ್ನು ಅಡಗಿಸುವುದರಲ್ಲಿ ಪೂರ್ಣ ಯಶಸ್ವಿಗಳಾದ್ದರು. ಅವರಿಗೆ ತಾಯ್ನಾಡಿನಿಂದ ಮಾ... ವಲ್ಲ, ಇತರ ವಸಾಹತುಗಳಿಂದಲೂ ಸೈನಿ... ಸಹಾಯ ದೊರೆತಿತ್ತು. ಎಷ್ಟೋ ಕ... ಸ್ವಾರ್ಥಸಾಧಕರಾದ ಭಾರತೀಯರೇ ಅವರಿ... ಬೆಂಬಲ ಕೊಟ್ಟಿದ್ದರು.

ಆಧುನಿಕ ಯುದ್ಧ ಶಸ್ತ್ರಾಸ್ತ್ರಗಳ ಕೊರ... ಯಿದ್ದ ಲಕ್ಷ್ಮೀಬಾಯಿ ಮತ್ತು ತಾತ್ಯಾ ಟೋಪೇಯು ಕಲ್ಪಿಯ ಯುದ್ಧದಲ್ಲಿ ಸೋತು ಹೋದರಾದರೂ ಸೆರೆ ಸಿಕ್ಕಲಿಲ್ಲ. ತಮ್ಮ ಆತ್ಮವಿಶ್ವಾಸವನ್ನು ಕಳೆದುಕೊಳ್ಳಲಿಲ್ಲ. ಆಕ್ರಮಣದ ಹೊಸ ಹಂಚಿಕೆಯನ್ನು ಹೂಡಿ ಗ್ವಾಲಿಯರ್‌ನಲ್ಲಿ ಮತ್ತೆ ಇಂಗ್ಲಿಷರನ್ನು ಎದುರಿಸಿದರು.

ಸಮರ ಸಮವಸ್ತ್ರವನ್ನು ಧರಿಸಿದ್ದ ಲಕ್ಷ್ಮೀಬಾಯಿಯು, ರಾಜಾಶ್ವವನ್ನೇರಿ, ರತ್ನಖಚಿತವಾದ ಖಡ್ಗವನ್ನು ಒರೆಯಿಂದ ಎಳೆದು ಮುನ್ನುಗ್ಗುವಂತೆ ತನ್ನ ಸೈನಿಕರನ್ನು ಹುರಿದುಂಬಿಸುತ್ತಾ ಕೊನೆಯ ಯುದ್ಧಕ್ಕೆ ಸಿದ್ಧಳಾದಳು.

ಸಮರಾಂಗಣದಲ್ಲಿ ಮುಖಾಮುಖಿಯಾಗಿ ನಿಂತ ಯುದ್ಧದೇವತೆಯನ್ನು ಕಂಡು ಒಂದು ಕ್ಷಣ ಅಪ್ರತಿಭನಾದ ಬ್ರಿಟಿಷ್ ದಂಡನಾಯಕ ಸರ್ ಹಗ್ ರೋಸ್. ಭೀಕರ ಯುದ್ಧದಲ್ಲಿ ತನ್ನ ಸೈನಿಕರ ಸಂಖ್ಯೆ ಹಾಗೂ ಶಕ್ತಿ ಕ್ಷೀಣಿಸುತ್ತಿದ್ದರೂ ಎದೆಗುಂದದೆ ತನ್ನ ಧೈರ್ಯ, ಸಾಹಸ ಮತ್ತು ತ್ಯಾಗವನ್ನು ಮೆರೆದಳು ಲಕ್ಷ್ಮೀಬಾಯಿ. ಆದರೆ ಆಕೆಯ ಜೀವ ಅಪಾಯದ ಅಂಚಿನಲ್ಲಿ ಬಂದ...

ನಿಂತಿತು! ಇದನ್ನರಿತ ರಾಣಿಯ ಯುದ್ಧಾಶ್ವವು ಒಡತಿಯ ಅಪ್ಪಣೆಗೂ ಕಾಯದೆ, ಮಿಂಚಿನ ವೇಗದಿಂದ ಓಡಿ, ಯುದ್ಧ ಭೂಮಿಯಿಂದ ತಪ್ಪಿಸಿಕೊಂಡಿತು. ರೆಕ್ಕೆ ಬಂದ ಹಕ್ಕಿಯಂತೆ ವಾಯುವೇಗದಲ್ಲಿ ಚಲಿಸುತ್ತಿದ್ದ ಕುದುರೆಯು ದುರದೃಷ್ಟವಶಾತ್ ಹೊಳೆಯೊಂದನ್ನು ದಾಟುವಾಗ ಮುಗ್ಗರಿಸಿತು. ಅದೇ ಸಮಯದಲ್ಲೇ ಶತ್ರು ಸೈನಿಕರ ಏಟಿಗೆ ಬಲಿಯಾದ ವೀರವನಿತೆ ಝಾನ್ಸಿ ರಾಣಿ ಲಕ್ಷ್ಮಿಬಾಯಿಯ ಶಿರವು ಧರೆಗೊರಗಿತು.

ಕಪ್ಪನೆಯ ಕಾರ್ಮೋಡವೊಂದು ಧುತ್ತೆಂದು ಬಂದು, ಸೂರ್ಯನನ್ನು ಮುಸುಕಿದಂತಾಯ್ತು ತಾತ್ಯಾಟೋಪೆಯ ಸ್ಥಿತಿ. ಯಾವುದೇ ಕ್ರಾಂತಿಕಾರೀ ಯುದ್ಧದ ಮುಂಚೂಣಿಯಲ್ಲಿ ಇರುತ್ತಿದ್ದವನು ತಾತ್ಯಾಟೋಪೆ. ಅವನ ಮಿಂಚಿನಗತಿಯನ್ನು ಕಂಡು ಬೆರಗಾಗದವರೇ ಇರಲಿಲ್ಲ. ಅವನನ್ನು ಸೆರೆಹಿಡಿಯುವುದಾಗಲಿ, ಹೊಡೆದುರುಳಿಸುವುದಾಗಲಿ ಯಾರಿಂದಲೂ ಸಾಧ್ಯವಾಗಿರಲಿಲ್ಲ. ಕಣ್ಣೆದುರೇ ಇದ್ದರೂ ಶತ್ರುಗಳ ಖಡ್ಗಕ್ಕೆ ಸಿಲುಕದ, ಗುಂಡೇಟಿಗೆ ಬಲಿಯಾಗದ ಚಾಣಾಕ್ಷನವನು. ಅಮೃತವನ್ನು ಕುಡಿದು ಹುಟ್ಟಿ ಬಂದವನೇನೋ ಎಂಬಂತೆ ಯುದ್ಧ ಭೂಮಿಯಲ್ಲಿ ಅವನ ಹೆಜ್ಜೆ ಗತಿಯಿರುತ್ತಿತ್ತು. ಅಂಥವನ ಗುಂಡಿಗೆಯೂ ಆತ್ಮ ಬಂಧುವಿನ ಸಾವಿನಿಂದಾಗಿ ವಿಚಲಿತವಾಯ್ತು. ಭಾರತದ ಮಣ್ಣಿನಲ್ಲಿ ಹೂತು ಹೋದ ಬ್ರಿಟಿಷ್ ಬೇರುಗಳನ್ನು ಕಿತ್ತೊಗೆಯುವುದು ಅತ್ಯಂತ ಕಠಿಣ ಸಾಧ್ಯವೆಂದು ಈಗ ಅವನಿಗನಿಸಿತು.............

ಕೌರವರನ್ನು ಸೋಲಿಸಲು ರಣಾಂಗಣದಲ್ಲಿ ನಿಂತ ಅರ್ಜುನನ ಪಕ್ಷದಲ್ಲಿ ಅಂದು ಶ್ರೀಕೃಷ್ಣನಿದ್ದ. ಆದರಿಂದು ಇಲ್ಲಿ....! ಎಲ್ಲಿ ಹೋದ ಆ ಆಪದ್ಭಾಂದವ? ಎಂದು ಪರಿತಪಿಸಿತು ರಾಷ್ಟ್ರಭಕ್ತನ ಹೃದಯ; ನಿಜ. ಬ್ರಿಟಿಷರು ಈ ನೆಲದ ಮಣ್ಣಿನಿಂದ ಕಾಲ್ತೆಗೆಯಲು ಕಾಲವಿನ್ನು ಬಹಳ....ಬಹಳ.... ದೂರದಲ್ಲಿತ್ತು! ಆದರೆ ಹಾಗೆ ಯೋಚಿಸಲು ತಾತ್ಯಾಟೋಪೆ ಸಿದ್ಧನಿರಲಿಲ್ಲ. ಅವನ ಯೋಚನೆಯೀಗ ಬೇರೆ ದಿಕ್ಕಿನಲ್ಲಿ ಹರಿಯತೊಡಗಿತು.

'ಸ್ವಾತಂತ್ರಕ್ಕಾಗಿ ಹೋರಾಟ. ಇಲ್ಲವೇ ವೀರಮರಣ' ಎಂಬ ಮಂತ್ರವನ್ನು ತನ್ನ ಉಸಿರಾಗಿಸಿಕೊಂಡ ತಾತ್ಯಾಟೋಪೆಯು ಇಂಗ್ಲಿಷರನ್ನು ಮುಖಾಮುಖಿಯಾಗಿ ಎದುರಿಸುವ ಬದಲಾಗಿ, ಬೇರೆ ತಂತ್ರವನ್ನು ಪ್ರಯೋಗಿಸಲು ನಿಶ್ಚಯಿಸಿದ. ಅದು ಮರಾಠಾ ನಾಯಕ ಶಿವಾಜಿ ತೋರಿಸಿಕೊಟ್ಟ ಗೆರಿಲ್ಲಾ ಯುದ್ಧತಂತ್ರ. ಬೆಟ್ಟಗುಡ್ಡಗಳಲ್ಲಿ ಅಡಗಿ ನಿಂತು ಇದ್ದಕ್ಕಿದ್ದಂತೆ ಶತ್ರುಗಳ ಮೇಲೆ ಅನಿರೀಕ್ಷಿತ ಧಾಳಿ ನಡೆಸುವುದು ಇಷ್ಟು ನಿರ್ಧಾರವಾದಮೇಲೆ ತನ್ನ ಕಾರ್ಯಸಾಧನೆಗೆ ಅವನು ತಡಮಾಡಲಿಲ್ಲ. ಹೊಸದಾಗಿ ಸೈನ್ಯವನ್ನು ಕಟ್ಟುತ್ತಾ, ಯುದ್ಧಾಸ್ತ್ರಗಳನ್ನು ಸಂಗ್ರಹಿಸುತ್ತಾ ಊರಿಂದ ಊರಿಗೆ ಅಲೆದ. ತಾತ್ಕಾಲಿಕವಾಗಿ ಸಾತಂತ್ರ್ಯಗಳಿಸಿಕೊಂಡಿದ್ದ ಎಲ್ಲಾ ರಾಜ್ಯಗಳು ಮತ್ತೆ ಇಂಗ್ಲಿಷರ ಕೈವಶವಾಗಿ ಹೋಗಿದ್ದರೂ ತಾತ್ಯಾ ತನ್ನ ಆತ್ಮವಿಶ್ವಾಸವನ್ನು ಕಳೆದುಕೊಳ್ಳಲಿಲ್ಲ. ಕಾಡುಮೇಡು, ಗುಡ್ಡಬೆಟ್ಟಗಳಲ್ಲಿ ಅಡಗಿ ನಿಂತು ಮಿಂಚಿನ ಧಾಳಿಯನ್ನು ನಡೆಸಿದ. ರಕ್ತದ ಹೊಳೆಯನ್ನು ಹರಿಯಿಸಿದ.

ಸಾವಿರಾರು ಮೈಲಿಗಳ ದೂರವನ್ನು ಅಶ್ವ ವೇಗದಲ್ಲಿ ಕ್ರಮಿಸುತ್ತಾ, ರಜಪುತಾನ, ಮಾಳವ ಮತ್ತು ಪಶ್ಚಿಮ ಭಾರತದ ಉದ್ದಕ್ಕೂ ಇಂಗ್ಲಿಷರಿಗೆ ಸಿಂಹಸ್ವಪ್ನವಾದ! ಶರಣಾಗತನಾಗುವಂತೆ ಅವರು ಮಾಡಿದ ಮನವಿಗೆ ತಾತ್ಯ ಕಿವಿಗೊಡಲೇ ಇಲ್ಲ. ಆಗ ಇಂಗ್ಲೆಂಡಿನ ಪಾರ್ಲಿಮೆಂಟಿನಲ್ಲಿಯೂ ಸಹಾ ಬಹು ವಿಧವಾಗಿ ಚರ್ಚಿತವಾಗುತ್ತಿದ್ದ ಹೆಸರು ತಾತ್ಯಾಟೋಪೆ!

ಈ ಸಂದರ್ಭದಲ್ಲಿ ತಾತ್ಯಾನು ದಿನ ವೊಂದಕ್ಕೆ ನಲ್ವತ್ತು-ಐವತ್ತು ಮೈಲಿಗಳ ದೂರವನ್ನು ಕ್ರಮಿಸಬಲ್ಲವನಾಗಿದ್ದ. ಅವನು ಬ್ರಿಟಿಷರ ಆಯುಧ ಶಾಲೆಗಳನ್ನು ಕೊಳ್ಳೆ ಹೊಡೆದ. ಖಜಾನೆಯನ್ನು ಲೂಟಿ ಮಾಡಿದ. ಅವನ ಲೋಹಚುಂಬಕ ವ್ಯಕ್ತಿತ್ವದಿಂದಾಗಿ ಜನ ಅವನ ಹಿಂಬಾಲಕರಾಗುತ್ತಿದ್ದರು. ಅವನಿಂದ ಸೈನಿಕ ತರಬೇತಿಯನ್ನು ಹೊಂದಲು ಹಾತೊರೆಯುತ್ತಿದ್ದರು. ಕಳೆದು ಕೊಂಡಷ್ಟೂ ಅವನು ಮತ್ತೆ ಮತ್ತೆ ಸೈನ್ಯ ವನ್ನು ಕಟ್ಟಬಲ್ಲವನಾಗಿದ್ದ. ತಾತ್ಯಾ ಟೋಪೆಯ ಹೆಸರು ಕೇಳುವುದಕ್ಕೂ ಇಂಗ್ಲಿಷರು ಥರಥರ ಕಂಪಿಸುವ ಸ್ಥಿತಿ ಉಂಟಾಗಿತ್ತು.

೧೮೫೮ರ ನವೆಂಬರ್ ತಿಂಗಳಿನಲ್ಲಿ ವಿಕ್ಟೋರಿಯಾ ರಾಣಿಯು ದಂಗೆಯಲ್ಲಿ ಪಾಲ್ಗೊಂಡವರಿಗೆಲ್ಲಾ ಸಾರ್ವತ್ರಿಕ ಕ್ಷಮಾದಾನವನ್ನು ಘೋಷಿಸಿದಳು. ಆದರೆ ಆ ಕ್ಷಮಾದಾನದ ಪಟ್ಟಿಯಲ್ಲಿ ತಾತ್ಯಾ ಟೋಪೆಯ ಹೆಸರು ಇರಲಿಲ್ಲ. ಇದ್ದಿದ್ದರೂ ಶರಣಾಗತನಾಗುವ ಮನಸ್ಸು ಆತನಿಗಿರಲಿಲ್ಲ. ಏಕೆಂದರೆ ಬ್ರಿಟಿಷರು ಭಾರತದ ಪ್ರಭುಗ ಳೆಂದು ಅವನೆಂದೂ ಪರಿಗಣಿಸಿರಲಿಲ್ಲ.

ಏಪ್ರಿಲ್ ೭-೧೮೫೯ರ ಮಧ್ಯರಾತ್ರಿ. ಬೆಚ್ಚನೆಯ ಮನೆಯೊಳಗೆ ಮೆತ್ತನೆಯ ಹಾಸಿಗೆಯಲ್ಲಿ ಸುಖನಿದ್ರೆಯನ್ನು ಮಾಡ ಬಹುದಾಗಿದ್ದ ಅವಕಾಶವನ್ನು ಧಿಕ್ಕರಿಸಿ, ದಟ್ಟ ಅರಣ್ಯದ ಮಧ್ಯದಲ್ಲಿ ಒರಟು ನೆಲದ ಮೇಲಿನ ಪರ್ಣ ಪಲ್ಲಂಗದಲ್ಲಿ, ಮರದ ಬೇರನ್ನೇ ದಿಂಬಾಗಿಸಿಕೊಂಡು ವಿಶ್ರಮಿಸಿದ್ದ ತಾತ್ಯಾಟೋಪೆ, ಅವಿಶ್ರಾಂತವಾದ ಹೋರಾಟದಿಂದಾಗಿ ದೇಹ ಜರ್ಝರಿತ ಗೊಂಡಿದ್ದರೂ, ಯೋಚನೆಯ ಗೂಡಾಗಿದ್ದ ಅವನ ಮನಸ್ಸು ನಿದ್ರೆಯನ್ನು ನಿರಾಕರಿಸು ತ್ತಿತ್ತು.

೧೮೫೭ರ ಮಹಾದಂಗೆಯು ಸಂಪೂರ್ಣ ವಾಗಿ ಸೋಲನ್ನು ಅನುಭವಿಸುವುದಕ್ಕೆ ಕಾರಣಗಳನ್ನು ವಿಶ್ಲೇಷಿಸುತ್ತಾ ಅವನು ಮಮ್ಮಲ ಮರುಗಿದ. ಸಂಕುಚಿತ ಸ್ವಾರ್ಥ ಬುದ್ಧಿಗೆ ದಾಸರಾದ ದೇಶೀಯ ರಾಜರು ಗಳು ಬ್ರಿಟಿಷರಿಗೆ ವಿಧೇಯರಾಗಿಯೇ ಉಳಿ ದರು. ಕೆಲವೇ ತಿಂಗಳ ಹಿಂದೆ ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡಿದ್ದ ಸಿಖ್ಖರು ಕೂಡಾ ಇಂಗ್ಲಿಷರನ್ನು ಎದುರಿಸುವ ಬದ ಲಾಗಿ ದೆಹಲಿಯನ್ನು ಮತ್ತೆ ವಶಪಡಿಸಿ ಕೊಳ್ಳಲು ನೆರವಾದರು. ದೆಹಲಿಯ ಗದ್ದುಗೆ ಏರಿದವನು ಓರ್ವ ಮುಸ್ಲಿಂ ದೊರೆ ಎಂಬುದು ಇದಕ್ಕೆ ಕಾರಣವಿದ್ದಿರಬಹುದೆ? ಬ್ರಿಟಿಷರ 'ಒಡೆದು ಆಳುವ ನೀತಿ!' ಛೀ. ಇದೇಕೆ ನಮ್ಮ ಜನರಿಗೆ ಅರ್ಥವಾಗುವುದಿಲ್ಲ? ನಿಟ್ಟುಸಿರಿಟ್ಟ ತಾತ್ಯಾಟೋಪೆ.

ಮರದ ಮೇಲಿನಿಂದ ಒಂದೆರಡು ನೀರ ಹನಿಗಳು ಬಿದ್ದವು. ಅರೆನಿದ್ರಾವಸ್ಥೆಗೆ ಜಾರು ತ್ತಿದ್ದ ತಾತ್ಯಾಗೆ, ಬಂಧನದಲ್ಲಿರುವ ತನ್ನ ತಾಯಿಯು ರೋದಿಸುತ್ತಿರುವಂತೆ ಭ್ರಮೆ

ಯಾಗಿ, 'ನಾನೇನು ಮಾಡಲಿ....? ನಾನೇನು ಮಾಡಲಿ....?' ಎಂದು ಕನವರಿಸಿಕೊಂಡ. ಹಾಗೆಯೇ ನಿಧಾನವಾಗಿ ಗಾಢನಿದ್ರೆಗೆ ಜಾರಿಕೊಂಡ ಸಮಯದಲ್ಲಿಯೇ ಬ್ರಿಟಿಷರ ಪ್ರಲೋಭನೆಗೆ ಒಳಗಾದ 'ಮಾನಸಿಂಗ' ನೆಂಬ ದೇಶೀಯನೊಬ್ಬನು ತಾತ್ಯಾಟೋಪೆಯು ಇರುವ ಜಾಗದ ಸುಳಿವನ್ನು ಬ್ರಿಟಿಷರಿಗೆ ಬಿಟ್ಟುಕೊಟ್ಟ!

ಬಂಧ ವಿಮೋಚನೆಗೊಳಗಾದ ಮಾತೆಯನ್ನು ಕನಸಿನಲ್ಲಿ ಕಾಣುತ್ತಿದ್ದ ಕಾಲದಲ್ಲಿಯೇ ತಾತ್ಯಾ ದೇಶೀಯನೊಬ್ಬನ ಪಿತೂರಿಗೆ ಬಲಿಯಾಗಬೇಕಾಯ್ತು! ಕೊನೆಗೂ ಅವನು ನಿದ್ರಿಸುತ್ತಿದ್ದ ಕಾಲದಲ್ಲಿ, ಹೇಡಿಗಳಂತೆ ಬಂದ ಇಂಗ್ಲಿಷರು ತಾತ್ಯಾನನ್ನು ಸೆರೆ ಹಿಡಿದು ಬಿಟ್ಟರು!

ಶಿಸ್ತುಪಾಲನೆಯ ನೆಪದಲ್ಲಿ, ಅಧಿಕಾರವನ್ನು ಉಳಿಸುವುದಕ್ಕಾಗಿ, ಪರಂಗಿಯವರು ನಡೆಸಿದ ನರಮೇಧಕ್ಕೆ ಮಿತಿಯುಂಟೇ....! ವಿಚಾರಣೆಯ ಅನಂತರ ತಾತ್ಯಾಟೋಪೆಗೆ ಗಲ್ಲು ಶಿಕ್ಷೆಯಾಯ್ತು. ಇದು ಅಖಂಡರಾಷ್ಟ್ರ ಪ್ರೇಮಿಯೊಬ್ಬನು ತನ್ನ ಸ್ವಾರ್ಥತ್ಯಾಗಕ್ಕೆ ತೆತ್ತಬೆಲೆ! ಸಾಯುವ ಕಾಲದಲ್ಲೂ ಅವನು ಅಳುಕಲಿಲ್ಲ, ಅಂಜಲಿಲ್ಲ—ಮುಖದಲ್ಲಿ ಸಾರ್ಥಕತೆಯ ಮಂದ ಹಾಸ! ಮನಸ್ಸು ಮೊರೆಯಿಡುತ್ತಿತ್ತು. 'ಓ....ದೇವರೇ ನನ್ನ ತಾಯ್ನಾಡನ್ನು ಬಂಧ ವಿಮೋಚನೆಗೊಳಿಸುವ ಮಹಾವ್ಯಕ್ತಿಯೊಬ್ಬ ಈ ಭೂಮಿಯಲ್ಲಿ ಜನ್ಮಿಸಲಿ....'

ಅವನ ಮೊರೆ ದೇವರಿಗೆ ತಲುಪಿತು. ಲಕ್ಷಾಂತರ ದೇಶಪ್ರೇಮಿಗಳ ಬಲಿದಾನದ ನಂತರ ಅಹಿಂಸಾತ್ಮಕವಾಗಿಯೇ ಹೋರಾಡಿ, ಪರಾತಂತ್ರ್ಯವನ್ನು ಕಿತ್ತೊಗೆಯಬಲ್ಲ ಮಹಾಪುರುಷನೊಬ್ಬನ ಅವತಾರ ಈ ಮಣ್ಣಿನಲ್ಲಿ ಆಯ್ತು.

ಎಷ್ಟು ಬಾರಿ ಅಸ್ತಂಗತನಾದರೇನು? ಈ ಭುವಿಗೆ ಬೆಳಕು ನೀಡಲು ಮತ್ತೆ ಹುಟ್ಟಿ ಬಾರನೇ ಸೂರ್ಯ?

"ದೇಶಪ್ರೇಮ ಹುಚ್ಚು ಹೊನಲಾಗಿ ಪ್ರವಹಿಸಬೇಕು! ಅದು ನಮ್ಮ ನರನಾಡಿಯನ್ನು ಕಾವೇರಿಸಬೇಕು! ದೇಹವನ್ನು ತ್ಯಜಿಸುವಂಥ ಸಂಕಲ್ಪಕ್ಕೆ ಅದು ಕಾರಣವಾಗಬೇಕು. ಈ ಸಮರ್ಪಣ ಬುದ್ಧಿಯಿಂದ ನಾವು ದೇಶ ಸೇವೆಗೆ ಸಿದ್ಧರಾದರೆ ಪ್ರಪಂಚದ ಯಾವ ಸಾಮ್ರಾಜ್ಯವೂ ನಮ್ಮನ್ನು ತುಳಿಯಲಾರದು."

—ಗೋಪಾಲಕೃಷ್ಣ ಗೋಖಲೆ

ಪ್ರೀತಿ

ಎಚ್. ಆರ್. ಚಂದ್ರವದನರಾವ್
೨೮೭೭/೧೦, ೬ನೇ ಕ್ರಾಸ್
ಚಾಮುಂಡಿಪುರಂ, ಮೈಸೂರು–೫೭೦ ೦೦೪

ಪ್ರೀತಿ ಎರಡು ವಿರುದ್ಧ ಮತಗಳ ಹಗೆತನವನ್ನು ಮೀರಬಲ್ಲದು ಎಂಬುದಕ್ಕೆ ಬೂಟಾಸಿಂಗ್‌ನ ಈ ಜೀವನವೇ ಸಾಕ್ಷಿ:

ನಿರಾಶ್ರಿತರ ಶಿಬಿರದಿಂದ ಹಾರಿಸಿಕೊಂಡು ಬಂದಿದ್ದ ಜೆನಿಬ್‌ಳನ್ನು ಒಂದು ಸಾವಿರದ ಐದು ನೂರು ರೂಪಾಯಿಗೆ ಕೊಂಡು ಬೂಟಾಸಿಂಗ್ ಮದುವೆಯಾಗಿದ್ದ. ಹನ್ನೊಂದು ತಿಂಗಳ ನಂತರ ಅವರಿಗೆ ಒಂದು ಹೆಣ್ಣು ಮಗುವಾಯಿತು. ಸಿಖ್ ಸಂಪ್ರದಾಯದಂತೆ ಸಿಖ್ಖರ ಪವಿತ್ರಗ್ರಂಥ 'ಗ್ರಂಥ್ ಸಾಹೀಬ್' ಅನ್ನು ನೋಡಿ 'ತ' ಯಿಂದ ಶುರುವಾಗುವ ಹೆಸರಿಡಬೇಕೆಂದು ತನ್ನ ಮಗಳಿಗೆ 'ತನ್ವೀರ್' ಎಂದು ಹೆಸರಿಟ್ಟ ಬೂಟಾಸಿಂಗ್.

ಕೆಲವು ವರ್ಷಗಳು ಕಳೆಯಿತು. ಬೂಟಾಸಿಂಗ್‌ನ ಇಬ್ಬರು ಸೋದರಳಿಯಂದಿರಿಗೆ ಆಸ್ತಿ ತಮಗೆ ಬಾರದೆ ಜೆನಿಬ್‌ಳ ಪಾಲಾಯಿತೆಂದು ಹೊಟ್ಟೆಕಿಚ್ಚು ಬಂತು. ನಿರಾಶ್ರಿತರು ವಲಸೆ ಹೋಗುತ್ತಿರುವಾಗ ಹೆಂಗಸರನ್ನು ಅಪಹರಿಸಿಕೊಂಡು ಬಂದು ಅವರನ್ನು ಮಾರುತ್ತಲೋ, ಮದುವೆಯಾಗುತ್ತಲೋ ಇದ್ದ ವಿಷಯ ಎರಡು ಸರ್ಕಾರಕ್ಕೂ ಗೊತ್ತಾಯಿತು. ಹೀಗೆ ಅಪಹರಿಸಿದ ಹೆಂಗಸರನ್ನು ಮದುವೆಯಾಗಿರಲಿ ಅಥವಾ ಆಗದೇ ಇರಲಿ ಅವರವರ ಸಂಸಾರಕ್ಕೆ ಹಿಂದಿರುಗಿಸಬೇಕೆಂದು ಎರಡು ರಾಷ್ಟ್ರಗಳು ಕರಾರು ಮಾಡಿಕೊಂಡವು. ಬೂಟಾಸಿಂಗ್‌ನ ಹೆಂಡತಿ ಅಪಹರಿಸಲ್ಪಟ್ಟ ಮಹಿಳೆಯೆಂದು ಬೂಟಾಸಿಂಗ್‌ನ ಸೋದರಳಿಯಂದಿರು ಸರ್ಕಾರಕ್ಕೆ ವರದಿ ಮಾಡಿದರು. ಅವಳನ್ನು ಪಾಕಿಸ್ತಾನದಲ್ಲಿರುವ ಅವಳ ಮನೆಯಿಂದ ಎಳೆದುಕೊಂಡು ಹೋಗಿ, ಶಿಬಿರದಲ್ಲಿಟ್ಟು, ಪಾಕಿಸ್ತಾನಕ್ಕೆ ಕಳುಹಿಸುವ ಏರ್ಪಾಡು ಮಾಡಿದರು.

ಬೂಟಾ ಸಿಂಗ್ ಹೆಂಡತಿಯನ್ನು ತುಂಬ ಪ್ರೀತಿಸುತ್ತಿದ್ದ, ಅವಳನ್ನು ಕಳೆದುಕೊಳ್ಳುವುದಕ್ಕೆ ಅವನಿಗೆ ಸ್ವಲ್ಪವೂ ಇಷ್ಟವಿಲ್ಲ. ಸಿಖ್ಖರಿಗೆ ದುಷ್ಕರ ಎನಿಸುವ ಕೂದಲನ್ನು ಬೂಟಾಸಿಂಗ್ ಕತ್ತರಿಸಿಕೊಂಡ, ಇಸ್ಲಾಂ ಮತಕ್ಕೆ ಸೇರಿ ಜಮೀಲ್ ಅಹಮದ್ ಎಂದು ಹೆಸರಿಟ್ಟುಕೊಂಡ. ಮಗಳಿಗೆ 'ಸುಲ್ತಾನಾ' ಎಂದು ಹೆಸರು ಬದಲಾಯಿಸಿದ. ನಂತರ ಪಾಕಿಸ್ತಾನದ ಹೈಕಮಿಷನರ್ ಬಳಿ ಹೋಗಿ ತನ್ನ ಹೆಂಡತಿಯನ್ನು ತನಗೆ ಕೊಡಿಸಬೇಕಾಗಿ

ಮೂಲ: 'ಫ್ರೀಡಂ ಎಟ್ ಮಿಡ್‌ನೈಟ್' ಕೃತಿಯಲ್ಲಿನ ಒಂದು ಸತ್ಯ ಘಟನೆ.

ಪ್ರಾರ್ಥಿಸಿದ. ಆದರೆ ಅವನ ಕೋರಿಕೆಯನ್ನು ಅಧಿಕಾರಿಗಳು ಮನ್ನಿಸಲಿಲ್ಲ, ಆರು ತಿಂಗಳು ಬೂಟಾಸಿಂಗ್ ತನ್ನ ಹೆಂಡತಿಯನ್ನು, 'ತಪ್ಪಿಸಿಕೊಂಡವರ ಶಿಬಿರ'ದಲ್ಲಿ ನಿತ್ಯವೂ ಹೋಗಿ ನೋಡಿಕೊಂಡು ಬರುತ್ತಿದ್ದ. ಅವಳ ಪಕ್ಕ ಕುಳಿತು, ಅಳುತ್ತಾ ಸುಖದ ಕನಸು ಕಾಣುತ್ತಿದ್ದ.

ಪಾಕಿಸ್ತಾನದಲ್ಲಿ ಜೆನಿಬ್‌ಳ ಸಂಬಂಧಿಕರು ಎಲ್ಲಿದ್ದಾರೆಂದು ಗೊತ್ತಾಯಿತು. ಅವಳು ಅಲ್ಲಿಗೆ ಹೊರಟಳು, ಹೋಗುವುದಕ್ಕೆ ಮುಂಚೆ, 'ನಾನು ವಾಪಸ್ಸು ಬರುತ್ತೇನೆ. ನಿಮ್ಮ ಜೊತೆ ಇರುತ್ತೇನೆ' ಎಂದು ಹೇಳಿ ಅಳುತ್ತ 'ನಿಮ್ಮನ್ನು ಮರೆಯುವುದಿಲ್ಲ' ಎಂದು ಪ್ರತಿಜ್ಞೆಮಾಡಿ, ಅವಳು ವಿದಾಯ ಹೇಳಿದಳು.

ಮುಸ್ಲಿಮನಾದ ಬೂಟಾ ಪಾಕಿಸ್ತಾನಕ್ಕೆ ವಲಸೆ ಹೋಗಲು ಅರ್ಜಿಸಲ್ಲಿಸಿದ. ಅದು ತಿರಸ್ಕಾರವಾಯಿತು. ಪ್ರವಾಸಿಯಾಗಿ ಹೋಗಲೂ ಅವನಿಗೆ ಪರವಾನಗಿಸಿಗಲಿಲ್ಲ ತನ್ನ ಮಗಳು ಸುಲ್ತಾನಾಳೊಡನೆ ಅವನು ಅನಧಿಕೃತವಾಗಿ ಗಡಿದಾಟಿದ. ಲಾಹೋರಿನಲ್ಲಿ ಮಗಳನ್ನು ಬಿಟ್ಟು ಹೆಂಡತಿ ಜೆನಿಬ್ ಇದ್ದ ಹಳ್ಳಿಗೆ ಹೋದ, ಅಲ್ಲಿ ಅವನಿಗೆ ಒಂದು ಆಘಾತ ಕಾದಿತ್ತು. ಅವನ ಹೆಂಡತಿ ಅವಳ ಬಂಧುವೊಬ್ಬನನ್ನು ಆಗಲೇ ಮದುವೆಯಾಗಿದ್ದಳು. ಬೂಟಾಸಿಂಗ್ ಅಳುತ್ತಾ ತನ್ನ ಪತ್ನಿಯನ್ನು ತನಗೆ ವಾಪಸ್ಸುಮಾಡಿ ಎಂದ. ಜೆನಿಬ್‌ಳ ಸಹೋದರರು ಇತರ ಸಂಬಂಧಿಗಳು ಅವನನ್ನು ಥಳಿಸಿ, ಪೊಲೀಸರಿಗೆ ಅವನೊಬ್ಬ ನ್ಯಾಯಬಾಹಿರ ವಲಸೆಗಾರನೆಂದು ತಿಳಿಸಿದರು.

ನ್ಯಾಯಾಲಯದಲ್ಲಿ ಬೂಟಾಸಿಂಗ್ ತಾನು ಮುಸ್ಲಿಮನೆಂದೂ, ತನ್ನ ಹೆಂಡತಿಯನ್ನು ತನಗೆ ಕೊಡಿಸಬೇಕೆಂದೂ ನ್ಯಾಯಾಧೀಶರನ್ನು ಬೇಡಿದ. ಕಡೇಪಕ್ಷ ಹೆಂಡತಿಯನ್ನು ನೋಡಿ ಅವಳು ಭಾರತಕ್ಕೆ ವಾಪಸ್ಸು ಬರುತ್ತಾಳೆಯೋ ಎಂದು ಕೇಳಲಾದರೂ ಅವಕಾಶ ಕೊಡಿ ಎಂದು ಬೇಡಿದ.

ನ್ಯಾಯಾಧೀಶರು ಒಪ್ಪಿದರು. ಜೆನಿಬ್‌ಳನ್ನು ಅವಳ ಸಂಬಂಧಿಕರು ನ್ಯಾಯಾಲಯಕ್ಕೆ ಕರೆದುಕೊಂಡು ಬಂದರು. ನ್ಯಾಯಾಧೀಶರು ಬೂಟಾಸಿಂಗ್‌ನ ಕಡೆ ಬೆರಳು ತೋರಿಸಿ ಅವಳನ್ನು ಕೇಳಿದರು—

"ನಿನಗೆ ಇವನು ಗೊತ್ತೇ?"

"ಗೊತ್ತು, ಅವನು ಬೂಟಾಸಿಂಗ್, ನನ್ನ ಮೊದಲನೇ ಪತಿ" ಎಂದು ನಡುಗುತ್ತಾ ಹೇಳಿದಳು. ತನ್ನ ಮಗಳನ್ನು ಗುರುತಿಸಿದಳು.

"ನೀನು ಅವನೊಡನೆ ಭಾರತಕ್ಕೆ ಹೋಗುತ್ತೀಯಾ?"

ಬೂಟಾಸಿಂಗ್ ಬೇಡುವ ಕಣ್ಣುಗಳಲ್ಲಿ ಅವಳನ್ನೇ ನೋಡುತ್ತಿದ್ದರೆ, ಅವಳ ಸಂಬಂಧಿಕರು ಆಕೆಯನ್ನು ಕೆಂಗಣ್ಣುಗಳಿಂದ ದುರುಗುಟ್ಟಿಕೊಂಡು ನೋಡುತ್ತಿದ್ದರು. ಅವಳು ಹೆದರಿ 'ಇಲ್ಲ' ಎಂದು ಮೆಲುಧ್ವನಿಯಲ್ಲಿ ಹೇಳಿದಳು.

ಬೂಟಾಸಿಂಗ್‌ಗೆ ಆದ ನಿರಾಶೆ ಅಷ್ಟಿಷ್ಟಲ್ಲ. ಅವನು ಮಾತನಾಡದೆ ಹಾಗೇ ಕೆಲವು ನಿಮಿಷ ನಿಂತ. ಅನಂತರ ಮಗಳನ್ನು ಕೊಠಡಿಯ ಒಳಗೆ ಕರೆದು, 'ಜೆನಿಬ್, ನಿನ್ನ ಮಗಳನ್ನು ನಿನ್ನಿಂದ ಬೇರ್ಪಡಿಸುವ ಇಚ್ಛೆ

ಇಲ್ಲ. ಅವಳನ್ನು ನಿನ್ನ ಬಳಿಯೇ ಬಿಡು ತ್ತೇನೆ' ಎಂದು ಹೇಳಿ ಜೋಬಿನಿಂದ ನೋಟಿನ ಕಂತೆಯನ್ನು ತೆಗೆದು ಮಗ ಳೊಡನೆ ಕೊಟ್ಟ. 'ನನ್ನ ಜೀವನ ಇಲ್ಲಿಗೆ ಮುಗಿಯಿತು' ಎಂದ.

ಜೆನಿಬ್‌ಳನ್ನು ನ್ಯಾಯಾಧೀಶರು, 'ಮಗು ವನ್ನು ನಿನ್ನ ವಶಕ್ಕೆ ತೆಗೆದುಕೊಳ್ಳುವ ಇಚ್ಛೆ ಇದೆಯೇ?' ಎಂದು ಕೇಳಿದರು. ನ್ಯಾಯಾಲಯದಲ್ಲಿದ್ದ ಅವಳ ಪುರುಷ ಸಂಬಂಧಿಕರು ಕೋಪದಿಂದ ತಲೆ ಅಲ್ಲಾಡಿಸಿ ದರು. ಅವರಿಗೆ ಅವರ ವಂಶದಲ್ಲಿ ಸಿಖ್‌ನ ರಕ್ತ ಸೇರುವುದು ಇಷ್ಟವಿರಲಿಲ್ಲ. ನಿರಾಶೆ ಕಣ್ಣುಗಳಿಂದ ನೋಡುತ್ತಾ ಅವಳು 'ಬೇಡ, ಮಗು ಬೇಡ' ಎಂದಳು. ಬೂಟಾಸಿಂಗ್‌ನ ಕಣ್ಣುಗಳಲ್ಲಿ ಧಾರಾಕಾರವಾಗಿ ನೀರು ಹರಿಯಿತು. ಜೆನಿಬ್‌ಳ ಕಣ್ಣುಗಳಲ್ಲೂ ನೀರು. ಮಗಳನ್ನು ಕರೆದುಕೊಂಡು ಬೂಟಾಸಿಂಗ್ ನ್ಯಾಯಾಲಯ ಬಿಟ್ಟ.

ದುಃಖಗೊಂಡ ಬೂಟಾಸಿಂಗ್ ಅಳುತ್ತಾ ಮಗಳೊಡನೆ ಮುಸ್ಲಿಂ ಸಂತ ಗಂಗ್‌ಭಕ್ಷನ ಸ್ಮಾರಕಕ್ಕೆ ಬಂದು ಮಲಗಿದ. ಬೆಳಿಗ್ಗೆ ಮಗಳನ್ನು ಅಂಗಡಿಗೆ ಕರೆದುಕೊಂಡು ಹೋಗಿ ಅವಳಿಗೆ ಹೊಸಬಟ್ಟೆ ಮತ್ತು ಜರಿ ಯಲ್ಲಿ ಕಸೂತಿಮಾಡಿದ ಪಾದರಕ್ಷೆಗಳನ್ನು ಕೊಂಡು ಕೊಟ್ಟನಂತರ ಅವರು ಷಾಧರ್ ರೈಲ್ವೆ ಸ್ಟೇಷನ್ನಿಗೆ ಬಂದರು. ಮಗಳಿಗೆ ಇನ್ನು ಅವಳು ತನ್ನ ತಾಯಿಯನ್ನು ನೋಡಲು ಆಗುವುದಿಲ್ಲವೆಂದು ತಿಳಿಸಿದ. ಅವಳನ್ನು ಎತ್ತಿಕೊಂಡು ಮುತ್ತಿಟ್ಟ. ಅವರು ಪ್ಲಾಟ್‌-ಫಾರಂನ ಅಂಚಿನಲ್ಲಿ ಬರುತ್ತಿದ್ದರು. ಹಳಿಗಳ ಮೇಲೆ ವೇಗವಾಗಿ ರೈಲು ಬರುತ್ತಿತ್ತು. ರೈಲು ಹತ್ತಿರ ಬಂದೊಡನೆ ಬೂಟಾಸಿಂಗ್ ಮಗಳ ಕೈ ಹಿಡಿದುಕೊಂಡು ಹಳಿಗಳ ಮೇಲೆ ಬಿದ್ದ. ಬೂಟಾಸಿಂಗ್ ಮೇಲೆ ರೈಲು ಹರಿದು ಅಂಗಾಂಗಗಳು ಕತ್ತರಿಸಿ ಹೋಗಿ ಅವನು ತಕ್ಷಣವೇ ಸತ್ತುಹೋದ. ಆದರೆ ಆಶ್ಚರ್ಯ ವೆನ್ನುವಂತೆ ಮಗಳು ದುರಂತದಿಂದ ಪಾರಾಗಿ ದ್ದಳು.

ಬೂಟಾಸಿಂಗ್‌ನ ಅಂಗಿಯಲ್ಲಿ ಅವನು ಹೆಂಡತಿಗೆ ಬರೆದ ಕಾಗದವಿತ್ತು. 'ಪ್ರೀತಿಯ ಜೆನಿಬ್, ನೀನು ನಿನ್ನ ಜನರ ಮಾತಿಗೆ ಓಗೊಟ್ಟು ನನ್ನೊಡನೆ ಬರಲಿಲ್ಲ. ನ್ಯಾಯಾಲಯದಲ್ಲಿ ನೀನು ಹೇಳಿದ ಮಾತು ಗಳು ಮನಃಪೂರ್ವಕವಾಗಿ ಹೇಳಿದ ಮಾತು ಗಳಲ್ಲ. ನನಗೆ ನಿಜವಾಗಿಯೂ ನಿನ್ನೊಡನೆ ಇರಬೇಕೆಂಬುದೇ ನನ್ನ ಕಡೆಯ ಆಸೆ. ನನ್ನನ್ನು ನಿಮ್ಮ ಹಳ್ಳಿಯಲ್ಲಿಯೇ ಹೂತು ಹಾಕಿ. ಆಗಾಗ್ಗೆ ನೀನು ಬಂದು ನನ್ನ ಸಮಾಧಿ ಮೇಲೆ ಹೂವನ್ನಿಡು.'

ಬೂಟಾಸಿಂಗ್‌ನ ಆತ್ಮಹತ್ಯೆ ಪಾಕಿಸ್ತಾನ ದಲ್ಲಿ ಒಂದು ತರಂಗ ಎಬ್ಬಿಸಿತು. ಅವನ ಸಂಸ್ಕಾರ ರಾಷ್ಟ್ರೀಯ ಪ್ರಾಮುಖ್ಯ ಪಡೆಯಿತು. ಜೆನಿಬ್‌ಳ ಸಂಸಾರ ಬೂಟಾ ಸಿಂಗ್‌ನ ದೇಹವನ್ನು ಅವರ ಹಳ್ಳಿಯಲ್ಲಿ ಹೂಳಲು ಅವಕಾಶಕೊಡಲಿಲ್ಲ. ಶವವನ್ನು ಹಳ್ಳಿಗೆ ತರುವುದಕ್ಕೂ ಅವಳ ಎರಡನೇ ಪತಿ ಅಡ್ಡಬಂದ. ಅಧಿಕಾರಿಗಳು ಶವವನ್ನು ಲಾಹೋರಿಗೆ ಕಳುಹಿಸಿದರು. ಅಲ್ಲಿ ಅದನ್ನು ಹೂವುಗಳಿಂದ ಅಲಂಕರಿಸಿ ಗೌರವದಿಂದ ಹೂಳಲಾಯಿತು. ಸತ್ತ ಬೂಟಾಸಿಂಗ್‌ಗೆ ದೊರೆತ ಗೌರವಕಂಡು ಜೆನಿಬ್‌ಳ ಕುಟುಂಬಕ್ಕೆ ಅಸೂಯೆಬಂದು ಕೆಲವರು ಲಾಹೋರಿಗೆ ಹೋಗಿ ಅವನ ದೇಹವನ್ನು ಗೋರಿಯಿಂದ ಈಚೆತೆಗೆದು ಹೊರಗೆ ಹಾಕಿ

ಅವಮರ್ಯಾದೆ ಮಾಡಿದರು. ಇದರಿಂದ ಉದ್ರಿಕ್ತರಾದ ನಗರದ ಜನತೆ ಪುನಃ ಹೂವುಗಳ ರಾಶಿಯಲ್ಲಿ ಅವನ ದೇಹವನ್ನು ಹೂತರು. ನೂರಾರು ಸ್ವಯಂಸೇವಕರು ಸಮಾಧಿಯನ್ನು ಕಾಯಲು ನಿಂತುಕೊಂಡರು.

ಬೂಟಾಸಿಂಗ್‌ನ ಮಗಳು ಸುಲ್ತಾನಾಳನ್ನು ಒಂದು ಮುಸ್ಲಿಂ ಸಂಸಾರ ದತ್ತು ತೆಗೆದುಕೊಂಡು ಲಾಹೋರಿನಲ್ಲಿ ಸಾಕಿತು. ಈಗ ಆಕೆ ಲಿಬಿಯಾದಲ್ಲಿದ್ದಾಳೆ. ಗಂಡ ಇಂಜನಿಯರ್. ಈ ದಂಪತಿಗಳಿಗೆ ಮೂವರು ಮಕ್ಕಳು.



ಧರ್ಮ ಧರ್ಮಗಳ ಮಧ್ಯೆ ಜಗಳವಿರಬಾರದು. ಆದರೆ ಎಲ್ಲ ಧರ್ಮಗಳೂ ಅಧರ್ಮದ ವಿರುದ್ಧ ಹೋರಾಡಬೇಕು.

—ಗಾಂಧೀಜಿ

"ಏಕತೆ ಎಂಬುದು ಬಾಹ್ಯ ಸಂಗತಿಯಲ್ಲ. ಅದು ಪ್ರಧಾನವಾಗಿ ಅಂತರಂಗಕ್ಕೆ ಸಂಬಂಧಿಸಿದ್ದು. ಆದ್ದರಿಂದ ನಾವು ಒಂದೇ ಅಖಂಡ ರಾಷ್ಟ್ರಕ್ಕೆ ಸೇರಿದವರು ಎಂಬ ಭಾವನೆ ಜನರಲ್ಲಿ ದೃಢಗೊಳ್ಳುವಂತೆ ಮಾಡಲು ಸತತ ಶಿಕ್ಷಣವೂ ಸಂಘಟನೆಯೂ ಅಗತ್ಯ. ಭಾಷೆ, ದಿರಸು, ಆಹಾರ ಶೈಲಿ ಮೊದಲಾದವು ಐಕ್ಯ ಭಾವನೆಗೆ ಪೋಷಕವಾದವೇ ಹೊರತು ಆ ಭಾವನೆಯನ್ನು ಸೃಷ್ಟಿಸಲಾರವು."

—ನೇತಾಜಿ

ಕೈಲಾಸಂ : ವ್ಯಕ್ತಿತ್ವ ಮತ್ತು ಧೋರಣೆಗಳು

ಪ್ರೊ|| ಜಿ. ಕೆ. ರಮೇಶ
ಮುಖ್ಯಸ್ಥರು, ಕನ್ನಡ ವಿಭಾಗ
ತುಂಗಾ ಕಾಲೇಜು
ತೀರ್ಥಹಳ್ಳಿ



ಟಿ. ಪಿ. ಕೈಲಾಸಂ

ಟಿ. ಪಿ. ಕೈಲಾಸಂ (೧೮೮೪–೧೯೪೬) ಇಪ್ಪತ್ತನೆಯ ಶತಮಾನದ ಮೊದಲ ನಾಲ್ಕು ದಶಕಗಳಲ್ಲಿ ಹೊಸ ನಾಟಕ ಸೃಷ್ಟಿಯಿಂದ ಕನ್ನಡ ನಾಟಕ ಕ್ಷೇತ್ರವನ್ನು ಬೆಳಗಿದ ಜನಪ್ರಿಯ ನಾಟಕಕಾರ. ಕೈ ಎಂಬ ಸಂಕ್ಷಿಪ್ತ ನಾಮದಿಂದ ಪ್ರಸಿದ್ಧರು—ಕನ್ನಡ ಕ್ಕೊಬ್ಬನೇ ಕೈ ! ಸ್ವಯಂ ಸುರಿತ ನಟರೂ ನಿರ್ದೇಶಕರೂ ಆಗಿದ್ದ ಕೈ ತಮ್ಮ ಅನೇಕ ನಾಟಕಗಳನ್ನು ಆಡಿಸಿದರು, ಅವುಗಳಲ್ಲಿ ಪಾತ್ರಧಾರಿಗಳಾದರು. ಸಾಹಿತಿಗಳಿಂದ ಮತ್ತು ಜನರಿಂದ ಸೈ ಎನಿಸಿಕೊಂಡರು.

ಸಾಹಿತಿಯೊಬ್ಬನ ವ್ಯಕ್ತಿತ್ವ ಮುಖ್ಯವೇ ಕೃತಿ ಮುಖ್ಯವೇ ಎಂಬ ಪ್ರಶ್ನೆ ಬಂದಾಗ ಕೃತಿಯೇ ಮುಖ್ಯ. ಇದರ ಎದುರು ವ್ಯಕ್ತಿತ್ವ ಗೌಣ ಎಂಬುದು ಸಾಮಾನ್ಯ

ಉತ್ತರ. ಕೈಲಾಸಂಗೆ ಕೂಡ ಇದೇ ಅಭಿಪ್ರಾಯವಿತ್ತು. ನಾಡಹಬ್ಬದ ಸಂದರ್ಭ ವೊಂದರಲ್ಲಿ ಅವರು "ನನ್ನ ವ್ಯಕ್ತಿ ಕುರಿತ ಭಾಷಣಗಳಿಗಿಂತ ನಾಟಕಗಳನ್ನು ಕುರಿತ

ಪ್ರದರ್ಶನಗಳು ಹೆಚ್ಚು ಇರಲಿ" ಎಂದಿದ್ದರು. ಕೃತಿಗಿಂತ ವ್ಯಕ್ತಿಯನ್ನೇ ಮುಂದೆ ಮಾಡು ವವರನ್ನು ಕುರಿತು "ನೀವು ಬಂಡಿಯನ್ನು ಕುದುರೆ ಎದುರು ಹೂಡುತ್ತಿದ್ದೀರಿ" ಎನ್ನು ತ್ತಿದ್ದರು. ಆದರೆ "ಕೈಲಾಸಂ ಕೃತಿಯಿಂದ ವ್ಯಕ್ತಿತ್ವವನ್ನು ಮರೆಸುವವರಲ್ಲ ವ್ಯಕ್ತಿತ್ವ ದಿಂದ ಕೃತಿಯನ್ನು ಮರೆಸುವವರು "ಎಂಬುದಾಗಿ ಅನಕೃ ಹೇಳುತ್ತಾರೆ. ಕೈಲಾಸಂ ಅವರನ್ನು ಪೂರ್ತಿ ಬಲ್ಲವರಿಗೆ ಈ ಮಾತಿನ ಸತ್ಯತೆ ಗೊತ್ತಿದೆ. ಇದು ನಿಜವಾಗಿರುವುದರಿಂದಲೇ ಹೊಸ ಪೀಳಿಗೆಯ ಜನರಿಗೆ ಕೈಲಾಸಂ ವ್ಯಕ್ತಿತ್ವ ಅತ್ಯಂತ ಕುತೂಹಲಕಾರಿಯೂ, ಆಕರ್ಷಕವೂ ಆಗುತ್ತದೆ.

ಕೈಲಾಸಂ ಹುಟ್ಟಿದ ದಿನಾಂಕವನ್ನು ಕುರಿತು ೧೮೮೪ ಆಗಸ್ಟ್ ಎಂಬುದು ಒಂದು ಹೇಳಿಕೆಯಾದರೆ, ೧೮೮೫ ಸೆಪ್ಟೆಂಬರ್ ಎಂಬುದು ಇನ್ನೊಂದು ಹೇಳಿಕೆ. ಜನನ ಮೈಸೂರಿನಲ್ಲಾಯಿತು ಎಂದು ಒಬ್ಬರೆಂದರೆ, ಬೆಂಗಳೂರಿನಲ್ಲಿ ಹುಟ್ಟಿದರು ಎಂಬುದು ಇನ್ನೊಬ್ಬರ ಅಂಬೋಣ.

ಶ್ರೀಮಂತರೂ ಶ್ರೇಷ್ಠ ನ್ಯಾಯಾಧೀಶರೂ ಆಗಿದ್ದ ತಂಜಾವೂರು ಪರಮಶಿವ ಅಯ್ಯರ್ ರವರ ಪುತ್ರರ ಪೈಕಿ ಕೈಲಾಸಂ ಒಬ್ಬರು. ಅವರ ನಾಮಕರಣದ ಹೆಸರು ಟಿ. ಪಿ. ಸ್ವಾಮಿನಾಥನ್, ಅನಂತರ ಟಿ. ಪಿ. ಕೈಲಾಸಂ, ಇಲ್ಲಿನ ಟಿ. ಪಿ. ಎಂಬುದಕ್ಕೆ ಎರಡು ಬಗೆಯ ವಿವರಗಳಿವೆ. ಒಂದು ತ್ಯಾಗರಾಜ ಪರಮಶಿವ ಕೈಲಾಸಂ ಎಂಬುದು. ಇನ್ನೊಂದು ತಂಜಾವೂರು ಪರಮಶಿವ ಕೈಲಾಸಂ ಎಂಬುದು. ಸರ್ಕಾರಿ ದಾಖಲೆ ಗಳಲ್ಲಿ ಎರಡನೆಯ ರೂಪವೇ ಇದೆಯಂತೆ.

ಕೈಲಾಸಂಗೆ ತಾಯಿಯ ಬಗ್ಗೆ ಅತಿ ಪ್ರೀತಿ. ತಂದೆಯ ಬಗ್ಗೆ ಅನಗತ್ಯ ಭಯ. ಅಧ್ಯಾಪಕರನ್ನು ಗೇಲಿ ಮಾಡಿ ಗೋಳು ಹೊಯ್ದುಕೊಳ್ಳುವ ತುಂಟತನದೊಂದಿಗೆ ತರಗತಿಗೆ ಮೊದಲಿಗನಾಗಿ ಉತ್ತೀರ್ಣ ನಾಗುವ ಜಾಣತನ. ವಿಲಾಯಿತಿಗೆ ಹೋದಾಗಲೂ ದೊಡ್ಡವರೊಂದಿಗಿನ ಒಡನಾಟವಿಲ್ಲದೆ ಸಾಮಾನ್ಯರೊಂದಿಗೆ ಹೆಚ್ಚಾಗಿ ಬೆರೆಯುವ ಸ್ವಭಾವ. ನಾಟಕ ಕಾರರ ನಟ ನಟಿಯರ ಸಹವಾಸ. ದಿವಾನರ ಬಂಧುವರ್ಗದ ಹುಡುಗನಿಗೆ ಆಳುವುದು ಬೇಕಾಗಲಿಲ್ಲ. ಕರೆದುಕೊಟ್ಟ ಸರ್ಕಾರಿ ನೌಕರಿ ನಾಲ್ಕೇ ವರ್ಷಕ್ಕೆ ಬೇಡವಾಯಿತು. ಅತ್ಯಂತ ಶ್ರೀಮಂತನ ಮಗ, ಬಡತನದ ಬದುಕು, ಭವ್ಯ ಬಂಗಲೆ ವೈಟ್ ಹೌಸ್‌ನಲ್ಲಿ ಹಿಂಭಾಗದ ಮೂಲೆ ಇವರ ಮನೆ. ಮೆತ್ತನೆ ತಲ್ಪಗಳಿದ್ದೂ, ದಿಂಬಿಲ್ಲದ ಚಾಪೆಯ ಪಕ್ಕ ದಲ್ಲಿ ಮಲಗುವ ವ್ರತ ಹಿಡಿದಿದ್ದರು. ಮಡದಿ ಮನೆಯೊಳಗೇ ಇದ್ದೂ ಊಟ ಉಪಚಾ ರಕ್ಕೆ ಪರಿಚಾರಕನನ್ನೇ ಜೀವಮಾನವೆಲ್ಲ ಅವಲಂಬಿಸಿದರು. ಸಂಗಾತಿ ಇದ್ದೂ ಏಕಾಂಗಿ ಯಾಗಿದ್ದರು. ಬಯಕೆ ಪೂರೈಕೆಗೆ ಪೂರಕ ಪರಿಸರದಲ್ಲಿ ಬದುಕಿದ್ದೂ, ಬಯಸಿ ಬರು ವವರೇ ಬೇಕಷ್ಟು ಜನರಿದ್ದಾಗ್ಯೂ ಲಂಪಟ ನಾಗದೇ ಶುಚಿಯಾಗಿದ್ದರು. ಬಡವರ ಅಸಹಾಯಕರ ಬಗೆಗೆ ಪ್ರೀತಿಯ ಮಹಾ ಪೂರವನ್ನೇ ಹರಿಸಿದರು. ಸ್ವತಃ ದುಃಖಿಗಳ ಸೇವೆಗೆ ನಿಲ್ಲುವ ಉಪಕಾರಿ ಮನೋಭಾವ ಹೊಂದಿದ್ದರು. ಆಂತರಿಕವಾಗಿ ಇಷ್ಟೊಂದು ಪರಿಶುದ್ಧರಾಗಿದ್ದ ಇವರು ಬಹಿರಂಗವಾಗಿ ಅತ್ಯಂತ ಕೊಳಕು ಮನುಷ್ಯ ಎನಿಸಿಕೊಂಡಿ ದ್ದರು. ಚಪ್ಪಟೆ ಮೂಗಿನ ಸಣ್ಣಕಾಲಿನ,

ಅಸುಂದರ ದೇಹದ ಕೈಲಾಸಂಗೆ ಶುಚಿತ್ವದ ಬಗೆಗೆ ಗಮನ ಇರಲಿಲ್ಲ. ದೇಹವೇ ಕೊಳಕು. ಅದಕ್ಕೆ ಹೊಲಸುತನ, ಹೊರಗಿನಿಂದ ಎಲ್ಲಿ ಬಂತು ಎಂಬುದು ಇವರ ವಾದ. ಕಗ್ಗತ್ತಲ, ಕಮಟು ವಾಸನೆಯು, ಕಸಕಡ್ಡಿಯಿಂದ ಆವೃತವಾದ ಪರಿಸರವೇ ಆಪ್ಯಾಯಮಾನ. ಜೊತೆಗೆ ಸಿಗರೇಟು, ಕುಡಿತಗಳ ದುಶ್ಚಟ. ಸ್ಥಿರವಾಗಿ ಒಂದೆಡೆ ನಿಲ್ಲದ ಸಂಚಾರ. ಹೆಂಡತಿ ಮಕ್ಕಳು ಇದ್ದೂ ಗತಿ ಹೀನನಂತೆ ದಾರುಣವಾದ ಕೊನೆಯ ದಿನಗಳನ್ನು ಕಳೆದು ಮಿತ್ರನ ಮನೆಯಲ್ಲಿ ಕಣ್ಮುಚ್ಚಿದ ಕರುಣ ಕಥೆ ಅವರದು. ದುಃಖಸಾಗರವನ್ನೇ ಅವಿತಿಟ್ಟುಕೊಂಡು ಸದಾ ನಗುತ್ತಾ, ನಗಿಸುತ್ತಾ ಇದ್ದ ಕೈಲಾಸಂ ಅವರದು ಒಟ್ಟಾರೆ ಆಶ್ಚರ್ಯಕರವೂ, ಅನುಕಂಪ-ನೀಯವೂ ಆದ ಬದುಕು.

ಕೈಲಾಸಂರವರ ವೈಯಕ್ತಿಕ ಬದುಕು ಹೀಗಾಗುವಲ್ಲಿ ಅವರ ಕೌಟುಂಬಿಕ ಸಂಬಂಧಗಳು ಕೆಟ್ಟದ್ದು ಮುಖ್ಯ ಕಾರಣ ಎನಿಸುತ್ತದೆ. ನೌಕರಿ ಮುಂತಾದ ಶಾಶ್ವತ ಆದಾಯ ಮೂಲಗಳನ್ನು ತೊರೆದು ಮಗ ದೀನರೊಂದಿಗೆ ಸಂಚಾರಿ ಬದುಕು ಪ್ರಾರಂಭಿಸಿದ್ದು, ಕಲೆಯ ಆರಾಧನೆಯಲ್ಲಿ ತೊಡಗಿದ್ದು ತಂದೆ ಇವರನ್ನು ತಿರಸ್ಕರಿಸಲು ಕಾರಣ ಎನ್ನಲಾಗಿದೆ. ಕೇವಲ ಈ ಕಾರಣಕ್ಕಾಗಿಯೇ ತನ್ನ ಆರ್ಜಿತದಲ್ಲಿ ಚಿಕ್ಕ ಭಾಗವನ್ನೂ ಹೆತ್ತ ಮಗನಿಗೆ ಕೊಡದಂತಹ ಕೃಪಣತೆಯನ್ನು ತಂದೆ ತೋರಿದರೇ? ಎಂಬ ಬಗ್ಗೆ ಸಂಶಯ ಮೂಡುತ್ತದೆ. ತಿರಸ್ಕಾರಕ್ಕೆ ಪ್ರತಿಯಾಗಿ ಮಗ ತಂದೆಯನ್ನು ಗೌರವಿಸುತ್ತಿದ್ದರೆಂಬುದನ್ನು ಇಲ್ಲಿ ಮರೆಯಬಾರದು. ತಂದೆ ಸತ್ತಾಗ ಅವರಿಗಾಗಿ ದುಃಖಿಸಿ ಸಂಸ್ಕಾರದಲ್ಲಿ ಪಾಲ್ಗೊಂಡಿದ್ದರು ಕೈಲಾಸಂ. ಕೇವಲ ತಂದೆಯ ಕಡೆಯಿಂದ ಮಾತ್ರ ಪ್ರತೀಕಾರ ಸಂದಿದ್ದೇಕೆ?

ಇನ್ನು ಪತ್ನಿಯೊಂದಿಗೆ ಅವರ ಸಂಬಂಧ ಕಡಿದು ಹೋದದ್ದು ಕುತೂಹಲದ ಸಂಗತಿಯೇ ಆಗಿದೆ. ಮದುವೆಯಾದ ಮೊದಲಲ್ಲಿ ದಂಪತಿಗಳು ಅನ್ಯೋನ್ಯವಾಗಿದ್ದು ಪರಿಣಾಮವಾಗಿ ಇಬ್ಬರು ಹೆಣ್ಣು ಮಕ್ಕಳು ಅವರಿಗಾಗಿವೆ. ಅನಂತರದಲ್ಲಿ ಯಾವಾಗಲೋ ಇವರ ನಡುವೆ ಬಿರುಕು ಕಾಣಿಸಿಕೊಂಡಿತು.

ಧೋರಣೆಗಳು ದಂದ್ವಗಳು :

ಸರ್ ಶೇಷಾದ್ರಿ ಅಯ್ಯರ್‌ರವರ ಸ್ವಜನ ಪಕ್ಷಪಾತಕ್ಕೆ ಸಾಕ್ಷಿಗಳಾಗಿರುವವರ ಮನೆಯಲ್ಲಿ ಹುಟ್ಟಿ ಶ್ರೀಮಂತಿಕೆ, ಅಧಿಕಾರ ಎರಡನ್ನೂ ತಿರಸ್ಕರಿಸಿದ್ದು, ಟಾಲ್‌ಸ್ಟಾಯ್‌ನಂತೆ ಸಾಮಾನ್ಯನಾಗಿ ಸಾಮಾನ್ಯನಿಗಾಗಿ ಬದುಕಿದ್ದು ಕೈಲಾಸಂ ಅವರಲ್ಲಿ ಎದ್ದು ಕಾಣುವ ಗುಣ. ತಮಿಳರು ಕನ್ನಡಿಗರನ್ನು ಆಳಬೇಕಾದವರು. ಕನ್ನಡ ಜನರೊಂದಿಗೆ ಅವರು ಬೆರೆಯುವುದು ಅವಮಾನದ ಸಂಗತಿ ಎಂಬುದು ಕೈಲಾಸಂ ತಂದೆಯವರಾದಿಯಾಗಿ ಮನೆತನದ ಎಲ್ಲರ ಧೋರಣೆ. ತದ್ವಿರುದ್ಧವಾಗಿ ನಡೆದದ್ದರಿಂದಲೇ ಮಗನ ಬಗ್ಗೆ ತಂದೆಗೆ ತಾತ್ಸಾರ. "ನನ್ನ ತಂದೆ ಮತ್ತು ಮಂದಿ ಕುರಿತಂತೆ ನಾನು ಅಪ್ಪಟ ಕನ್ನಡಿಗ" ಎಂದು ಕೈಲಾಸಂ ಅವರೇ ಹೇಳಿದ್ದಾರೆ. ತಮ್ಮ ಕುಲದವರನ್ನೇ 'ಅಂಗದನ ಅವಲಾದಿಗಳು' ಎಂದು ವ್ಯಂಗ್ಯವಾಡಿದ್ದಾರೆ. ಶ್ರೀಸಾಮಾನ್ಯರೊಂದಿಗಿನ ಒಡನಾಟ ಅವರ ಸಾಹಿತ್ಯ ರಚನೆಗೆ ಬೇಕಾದ ಸಾಮಗ್ರಿಯನ್ನು ಒದಗಿಸಿದೆ.

ಶ್ರೀಮಂತಿಕೆಯನ್ನು ತಿರಸ್ಕರಿಸಿಯೂ ಸಾಮ್ರಾಜ್ಯಶಾಹಿಯ ಬಗ್ಗೆ ಕೈಲಾಸಂಗೆ ವಿಶೇಷ ಗೌರವವಿತ್ತು. ಮೈಸೂರು ರಾಜ ಮನೆತನಕ್ಕೆ ಅವರು ತುಂಬಾ ವಿಧೇಯರಾಗಿದ್ದರು. ಇದಕ್ಕಿಂತ ಹೆಚ್ಚಾಗಿ ಬ್ರಿಟಿಷ್ ಸಾಮ್ರಾಜ್ಯಶಾಹಿಯನ್ನು ಅವರು ಒಪ್ಪಿಕೊಂಡಿದ್ದರೇನೋ ಎನಿಸುತ್ತದೆ. ಸ್ವಾತಂತ್ರ್ಯ ಪೂರ್ವದ ಭಾರತದಲ್ಲಿ ಅದೂ ಸ್ವಾತಂತ್ರ್ಯ ಸಂಗ್ರಾಮ ತುಟ್ಟತುದಿಯ ತೀವ್ರತೆಯಲ್ಲಿದ್ದ ಕಾಲದಲ್ಲಿ ಬದುಕಿದ್ದ ಕೈಲಾಸಂ ಅವರು, ಗಾಂಧೀಜಿಯವರಲ್ಲಿ ದೇವರೆ ಅವರೆಂಬ ಭಕ್ತಿಭಾವವನ್ನು ಹೊಂದಿದ್ದರು. ಕೈಲಾಸಂ, ಸ್ವಾತಂತ್ರ್ಯ ಪ್ರೇಮದ ಬಗ್ಗೆ ಬರೆಯದಿದ್ದದ್ದು ಎಲ್ಲಿಯೂ ಬ್ರಿಟಿಷರ ವಿರುದ್ಧ ಧ್ವನಿ ಎತ್ತದಿರುವುದು ಆಶ್ಚರ್ಯ ಹುಟ್ಟಿಸುವ ಸಂಗತಿಗಳಾಗಿವೆ. ಇಂಗ್ಲೆಂಡಿನಲ್ಲಿ ಎಂಟು ವರ್ಷ ಇದ್ದು ಬಂದ ಅವರಿಗೆ ಅಲ್ಲಿನ ಪರಿಸರವೇ ಪ್ರಿಯವಾಗಿ ಬ್ರಿಟಿಷರನ್ನು ದೂಷಿಸುವುದು ಸಾಧ್ಯವಾಗದೇ ಹೋಗಿರಬಹುದೇ? ಅಪ್ಪೊಂದು ಸಂಖ್ಯೆಯ ಸಾಮಾಜಿಕ ಸಾಹಿತ್ಯ ಕೃತಿಗಳಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಪ್ರಸ್ತಾಪವಿಲ್ಲದಿರುವುದು ವಿಪರ್ಯಾಸವೆನಿಸುತ್ತದೆ. ಅದೇ ಕಾಲದ ಇನ್ನೊಬ್ಬ ಶ್ರೇಷ್ಠ ಸಾಹಿತಿ, ಕೈಲಾಸಂ ಅವರ ಸಹಪಾಠಿ ಬಿ. ಎಂ. ಶ್ರೀ ಅವರೂ ಇಂತಹುದೆ ಮನೋಭಾವವನ್ನು ಹೊಂದಿದ್ದರೆಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಈ ಮಿತ್ರ ವರ್ಗ ಆಂಗ್ಲರನ್ನು ಕುರಿತು ಭಯದಿಂದಲೋ ಭಕ್ತಿಯಿಂದಲೋ ಮೃದು ಧೋರಣೆ ತಾಳಿರುವಂತೆ ತೋರುತ್ತದೆ.

ಸಂಪ್ರದಾಯಗಳನ್ನು, ಗೊಡ್ಡು ಆಚರಣೆಗಳನ್ನು ಕೈಲಾಸಂ ಕಟುವಾಗಿ ಟೀಕಿಸುತ್ತಾರೆ. ನಮ್ ಬ್ರಾಹ್ಮಣಿಕೆ, ಬಹಿಷ್ಕಾರ ಮುಂತಾದ ನಾಟಕಗಳು ಇದೇ ಉದ್ದೇಶವನ್ನು ಹೊಂದಿವೆ. ಆದರೆ ಈ ಟೀಕೆ ಪ್ರತಿಭಟನೆಯಾಗಿ ಪರಿವರ್ತಿತವಾಗುವುದಿಲ್ಲ. ಅವರ ನಾಟಕದ ಪಾತ್ರಗಳೆಲ್ಲ ಸಾಂಪ್ರದಾಯಕತೆಯಿಂದ ಒದಗಿದ ಸಂಕಟವನ್ನು ಅನುಭವಿಸುತ್ತೇವೆಯೇ ಹೊರತು ಸಿಡಿದುಸೆಡ್ಡು ಹೊಡೆದು ನಿಲ್ಲುವುದಿಲ್ಲ. ಹೊಸತನ್ನು ಆಹ್ವಾನಿಸುವುದಿಲ್ಲ. ಸ್ವೀಕರಿಸುವುದಿಲ್ಲ. ಹೀಗಾಗಿ ಒಂದು ಬಗೆಯಲ್ಲಿ ಕೈಲಾಸಂ ಸಾಂಪ್ರದಾಯಿಕತೆಯನ್ನು ಘೋಷಿಸಿಕೊಂಡು ಬರುತ್ತಾರೆ. ಕರ್ಣ ನಾಟಕದ ಮೂಲಕ ಬ್ರಾಹ್ಮಣತ್ವದ ಪ್ರತಿಪಾದನೆಯನ್ನೂ ಮಾಡಿಬಿಡುತ್ತಾರೆ. ವೈಯಕ್ತಿಕ ಬದುಕಿನ ನೆಲೆಯಲ್ಲಿ ಅವರೇ ಸಂಪ್ರದಾಯಸ್ಥರಾಗಿದ್ದಾರೆ. ತಂದೆಯ ಸಂಸ್ಕಾರ, ತಾಯಿಯ ಶ್ರಾದ್ಧಾಚರಣೆ ಮುಂತಾದವುಗಳಲ್ಲಿ—ಹೀಗಾಗಿ ಇಲ್ಲಿ ದ್ವಂದ್ವ ಅವರನ್ನು ಬಿಡುವುದಿಲ್ಲ.

ಸ್ತ್ರೀಯರನ್ನು ಕುರಿತು ವಿಶೇಷ ಗೌರವ ಸಹಾನುಭೂತಿ ಕೈಲಾಸಂ ಅವರಿಗಿತ್ತು. ದುಃಖಿಗಳಾದ ಹೆಂಗಸರ ಬಗೆಗೆ ಅನುಕಂಪವಿತ್ತು. ಅವರ ನಾಟಕಗಳಲ್ಲಿ ಜೀವ ತಳೆದಿರುವ ಭಾಗೀರಥಮ್ಮ, ಸುಬ್ಬಮ್ಮ, ನಾಗತ್ತೆ ಮುಂತಾದ ತಾಯಂದಿರಲ್ಲಿ, ವಿಧವೆಯಲ್ಲಿ ಈ ಭಾವವನ್ನು ನಾವು ಕಾಣಬಹುದು. ಆಧುನಿಕತೆ ನಾಗರಿಕತೆಗಳನ್ನು ಸ್ವಾಗತಿಸುತ್ತಲೇ ಅದೇಕೋ ಹೊಸ ಪೀಳಿಗೆಯ ಹೆಂಗಸರ ಬಗ್ಗೆ ಕೈಲಾಸಂ ಬಿಗು ನಿಲುವು ತಾಳಿರುವಂತೆ ತೋರುತ್ತದೆ. ಪಾತು, ಸರೋಜ, ಮುಂತಾದ ಸೊಸೆಯಂದಿರು ಅವರ ಈ ಧೋರಣೆಗೆ ಸಾಕ್ಷಿಯಾಗಿದ್ದಾರೆ.

ಶಿಕ್ಷಣವನ್ನು ಕುರಿತಂತೆ ಕೈಲಾಸಂ ವಿಚಾರಗಳುತುಂಬಾಆರೋಗ್ಯಕರವಾದವು. ಅವರು ಅಂಕಗಳಿಂದ ಬುದ್ಧಿವಂತಿಕೆಯನ್ನು ಅಳೆಯುವ ಇಂಗ್ಲೀಷ್ ಶಿಕ್ಷಣ ಕ್ರಮವನ್ನು ತೀವ್ರವಾಗಿ ವಿರೋಧಿಸಿ ಗುಣಕ್ಕೆ ಪ್ರಾಧಾನ್ಯ ನೀಡಿದರು. ವ್ಯಕ್ತಿತ್ವದ ಪೂರ್ಣ ವಿಕಾಸಕ್ಕೆ ಮಹತ್ವ ಕೊಟ್ಟರು. ಟೊಳ್ಳುಗಟ್ಟಿ, ಪೋಲಿ ಕಿಟ್ಟಿ ಮುಂತಾದ ಅವರ ಬಹುತೇಕ ನಾಟಕಗಳಲ್ಲಿ ಈ ಧೋರಣೆ ಪ್ರತಿಧ್ವನಿತವಾಗುತ್ತದೆ.

ಸಾಹಿತ್ಯ ಸೃಷ್ಟಿಯಿಂದ ಯಾವ ಪ್ರತಿಫಲವನ್ನೂ ಅವರು ನಿರೀಕ್ಷಿಸಿದವರಲ್ಲ. ಹಣಗಳಿಕೆ ಪದವಿ ಗಳಿಕೆಯ ಮಾತಂತಿರಲಿ. ಹೊಗಳಿಕೆ ತೆಗಳಿಕೆ ಕಡೆಗೂ ಅವರು ಗಮನ ಕೊಟ್ಟವರಲ್ಲ. ಆತ್ಮತೃಪ್ತಿ, ಇತರರ ಆನಂದ ಇವುಗಳು ಮಾತ್ರ ಅವರ ಸಾಹಿತ್ಯದ ಗುರಿಯಾಗಿದ್ದವು. ಕಲೆಗಾಗಿ ಕಲೆ ಎಂಬುದು ಅವರ ನಿಲುವಾಗಿತ್ತು. ತದ್ವಿರುದ್ಧವಾಗಿ ಅವರ ಬಹಿಷ್ಕಾರ, ಸೂಳೆ ಮುಂತಾದ ನಾಟಕಗಳ ಟ್ರೂತ್ ನೇಕೆಡ್, ಎ ಮಾನೊಲಾಗ್, ಚೋರನ ಚಾರದಂಥ ಪದ್ಯಗಳು ಸಾಮಾಜಿಕ ಕಳಕಳಿಯಿಂದ ಕೂಡ ಕೈಲಾಸಂ ನಂಬಿದ್ದ ತತ್ವವನ್ನು ಮೀರಿ ನಿಂತಿವೆ. ಸಾಹಿತ್ಯ ಪರಿಷತ್ತನ್ನು ಸಾಹಿತ್ಯ ಷರಬತ್ ಎಂದು ಗೇಲಿ ಮಾಡುತ್ತಿದ್ದ ಅವರೇ ೧೯೪೫ರಲ್ಲಿ ಮದರಾಸು ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರಾದರು.

ಕೈಲಾಸಂ ಕನ್ನಡದಲ್ಲಿ ಬರೆದದ್ದು ಒಂದು ಆಕಸ್ಮಿಕ ಎನಿಸುತ್ತದೆ. ವಾಸ್ತವವಾಗಿ ಅದು ಬರದದ್ದಲ್ಲವಷ್ಟೆ. ಹೇಳಿದ್ದು, ವಿದ್ಯಾಭ್ಯಾಸದ ಯಾವ ಹಂತದಲ್ಲೂ ಅವರು ಕನ್ನಡವನ್ನು ಕಲಿತವರಲ್ಲ. ಮನೆ ಮಾತು ಕನ್ನಡವಲ್ಲ. ಒಡನಾಟದಿಂದಾಗಿ ಮಾತನಾಡುವುದಷ್ಟೇ ಅವರಿಗೆ ಬರುತ್ತಿದ್ದದು. ಹೀಗಾಗಿ ಕನ್ನಡದ ಬಗ್ಗೆ ವಿಶೇಷ ಬದ್ಧತೆ ಅವರ ಬರವಣಿಗೆಯಲ್ಲಿ ಕಾಣುವುದಿಲ್ಲ. ಅವರಿಗೆ ತಮಿಳು, ಮಲೆಯಾಳಂ,ತೆಲಗು,ಉರ್ದು, ಇಂಗ್ಲೀಷ್ ಎಲ್ಲವೂ ಒಂದೇ. ಮಿತ್ರ ಶ್ರೀಕಂಠಯ್ಯನವರಂತೆ ಕನ್ನಡ ಪರ ಹೋರಾಟದಲ್ಲಿ ಎಂದೂ ಅವರು ತಮ್ಮನ್ನು ತೊಡಗಿಸಿಕೊಳ್ಳಲಿಲ್ಲ. ಮಾಸ್ತಿ ಮುಂತಾದವರ ಮನೆ ಮಾತು ಬೇರೆಯಾದರೂ ಕನ್ನಡ ಚಳುವಳಿಗಳಲ್ಲಿ ಕೆಲಸ ಮಾಡಿರುವುದನ್ನು ಕಾಣುತ್ತೇವೆ. ಬದಲಿಗೆ ಕೈಲಾಸಂ ದಕ್ಷಿಣ ಭಾರತವೆಲ್ಲ ಒಂದಾಗಬೇಕೆಂಬ ಧೋರಣೆ ಹೊಂದಿದ್ದರು. ಮದರಾಸಿನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠದಿಂದ ಅವರು ಮಾಡಿದ ಭಾಷಣದಲ್ಲಿ ಈ ಅಂಶ ಸ್ಪಷ್ಟವಾಗಿದೆ. ಈಗ ಬೆಂಗಳೂರಿನಲ್ಲಿದ್ದುಕೊಂಡು ದ್ರಾವಿಡರು ಮಾತನಾಡಿದಾಗಿನ ಧ್ವನಿಯೇ ಕೈಲಾಸಂ ಅವರ ಅಂದಿನ ಮಾತುಗಳಿಂದಲೂ ಹೊಮ್ಮುತ್ತದೆ. ಹೀಗಾಗಿ ಅವರು ಕನ್ನಡ ಪರಿಸರದಲ್ಲಿ ಬದುಕಿದ್ದು ಕನ್ನಡಿಗರ ಭಾಗ್ಯ ಎಂಬ ಸಮಾಧಾನ ಸರಿಯಾದದ್ದೆನಿಸುತ್ತದೆ.

ಇಷ್ಟಾಗಿ ಕೈಲಾಸಂ ಅವರ ಅಪ್ಪಟ ಪ್ರತಿಭೆಯನ್ನು ಯಾರೂ ಪ್ರಶ್ನಿಸುವಂತಿಲ್ಲ. ಅವರ ಅನುಕರಣ ಪಟುತ್ವ ಅಭಿನಯ ಚಾತುರ್ಯ, ನಾಟಕ ಕಲ್ಪನಾ ಕೌಶಲ, ಸದ್ಯೋಜಾತ ಹಾಸ್ಯಪ್ರಜ್ಞೆ ಇವುಗಳಲ್ಲಿ ಅವರನ್ನು ಸರಿಗಟ್ಟುವವರು ಯಾರೂ ಇಲ್ಲ. ಈ ವಿಚಾರಗಳಲ್ಲಿ ಇನ್ನೂ ಅವರು ಕನ್ನಡ ಕ್ಕೊಬ್ಬರೆ ಆಗಿ ಉಳಿದಿದ್ದಾರೆ.

ಹೀಗೊಂದು ಬದುಕು

ಡಿ. ಎನ್. ಶ್ರೀನಾಥ್
ನವನೀತ, ೩ನೇ ಕ್ರಾಸ್,
ಅಣ್ಣಾಜಿರಾವ್ ಲೇ ಔಟ್, ೧ನೇ ಹಂತ
ವಿನೋಬಾನಗರ, ಶಿವಮೊಗ್ಗ-೫೭೭ ೨೦೪

"ಸ್ವಾಮಿ! ಸ್ವಾಮಿ!"

ಆಗ ನಾನು ಅಡುಗೆ ಮನೆಯಲ್ಲಿ ಅನ್ನ ಬೇಯಿಸುತ್ತಿದ್ದೆ. ಸೌದೆ ಸರಿಯಾಗಿ ಉರಿಯುತ್ತಿರಲಿಲ್ಲ. ಪದೇ-ಸದೇ ಊದುಗೊಳವೆಯಿಂದ ಗಾಳಿ ಹಾಕುತ್ತಿದ್ದೆ; ಕಣ್ಣುಗಳಲ್ಲಿ ಹೊಗೆ ಸೇರಿಕೊಂಡು ಅತೀವ ನೋವು ಬಾಧಿಸುತ್ತಿತ್ತು. ನನ್ನ ಮೇಲೆ ನನಗೇ ಸಿಟ್ಟು ಬರುತ್ತಿತ್ತು. ಇಂಥ ವೇಳೆಯಲ್ಲಿ, ಹೊರಗೆ ಮಧುರವಾಗಿ ಕರೆದ ಧ್ವನಿ ಕೇಳಿಸಿತು. ಯಾರಿರಬಹುದೆಂದು ಹೊರ ಬಂದು ನೋಡಿದೆ. ನನ್ನ ನೋಡಿ ಅವರಿಬ್ಬರಿಗೂ ಆಶ್ಚರ್ಯದೊಂದಿಗೆ ಲಜ್ಜೆಯೂ ಮೂಡಿತು. ಅವರು ಬಂದ ಉದ್ದೇಶದ ಅರಿವಾದರೂ ಪ್ರಶ್ನಿಸಿದೆ, "ಏನು-ಏನು?"

"ಸೌದೆ ಕೊಂಡುಕೊಳ್ತೀರ?" ಒಬ್ಬಳು ನನ್ನನ್ನೇ ಗಮನಿಸಿದಳು. ನಾನು ಬೆಲೆ ವಿಚಾರಿಸುತ್ತಾ ಅವರ ಸಮೀಪಕ್ಕೆ ಬಂದು, ಅವರ ಬುಟ್ಟಿಯಲ್ಲಿದ್ದ ಸೌದೆ ತುಂಡುಗಳನ್ನು ನೋಡಿದೆ. ಇನ್ನೊಬ್ಬಳ ಸೌದೆ ಆಗಲೇ ಮಾರಾಟವಾಗಿತ್ತು. ತನ್ನ ಸೌದೆಯೂ ಮಾರಾಟವಾಗಲೆಂದು ಮೊದಲನೆಯವಳು, "ಸೌದೆ ಚೆನ್ನಾಗಿದೆ ಸ್ವಾಮಿ, ಕೊಂಡುಕೊಳ್ಳಿ" ಎಂದಳು.

"ದುಡ್ಡೆಷ್ಟು?"

"ಐದು ರೂಪಾಯಿ."

"ಜಾಸ್ತಿಯಾಯ್ತು. ಮೂರೂವರೆ ಕೊಡ್ತೀನಿ."

"ಬರಲ್ಲ, ಸ್ವಾಮಿ. ಐದು ರೂಪಾಯಿ ಕೊಡಿ. ಸೌದೆ ತುಂಬಾ ಚೆನ್ನಾಗಿ ಒಣಗಿದೆ."

"ಆದ್ರೆ, ಈ ಸೌದೆ ತುಂಬಾ ಚಿಕ್ಕವು. ಹೋಗ್ಲಿ ಒಂದು ರೂಪಾಯಿಗೆ ಎಷ್ಟು ತುಂಡು ಕೊಡ್ತೀಯಾ?"

"ಆರು."

"ತುಂಬಾ ಜಾಸ್ತಿಯಾಯ್ತು....ಎಂಟಾಣೆ ಜಾಸ್ತಿ ಕೊಡ್ತೀನಿ....ನಾಲ್ಕು ರೂಪಾಯಿಗೆ ಕೊಟ್ಟುಬಿಡು."

"ಬರಲ್ಲ, ಸ್ವಾಮಿ."

ಇಬ್ಬರೂ ಮರಳಿ ಹೋಗಲು ಹೊರಳಿದರು. ನನ್ನ ಬಳಿ ಸಾಕಷ್ಟು ಸೌದೆಯಿತ್ತು, ಹೀಗಾಗಿ ಕೊಳ್ಳಲು ಬೆಲೆ ಹೆಚ್ಚಿಸಲಿಲ್ಲ. ನಾನು ಅಡುಗೆ ಮನೆಗೆ ಬಂದು, ಆರಿದ ಬೆಂಕಿಯನ್ನು ಮತ್ತೆ ಹೊತ್ತಿಸಿ, ಬೇಗ ಅನ್ನ ಮಾಡಲು ಯತ್ನಿಸಿದೆ. ಅವರಿಬ್ಬರೂ ಬೇರೆ ಮನೆಗಳಿಗೆ ಸೌದೆ ಮಾರಲು ಹೋದರು.

ಮೂಲ : ಇಬೋಹಲ ಸಿಂಹ ಕಾಂಗಜಮ್ ಅವರ ಮಣಿಪುರಿ ಭಾಷೆಯ ಕಥೆ.

ಆದರೆ ಬಹುಶಃ ಯಾರೂ ಸೌದೆಯನ್ನು ಕೊಳ್ಳಲಿಲ್ಲ. ಕಡೆಗೆ ಅವರು ಮತ್ತೆ ನನ್ನ ಮನೆಗೇ ಬಂದು, "ಸ್ವಾಮಿ, ಸೌದೆಯನ್ನು ತೆಗೆದುಕೊಳ್ಳಿ" ಎಂದರು.

"ನಾಲ್ಕು ರೂಪಾಯಿಗೆ ಮಾತ್ರ ನಾನು ತೆಗೆದುಕೊಳ್ಳೋದು" ನಾನು ಅಡುಗೆ ಮನೆಯಿಂದಲೇ ಕೂಗಿ ಹೇಳಿದೆ.

"ಎಂಟಾಣಿ ಜಾಸ್ತಿ ಮಾಡಿಕೊಡಿ, ನಾನು ಎಂಟಾಣಿ ಕಡಿಮೆ ಮಾಡಿ ಕೊಡ್ತೀನಿ."

"ಹಾಗಾದ್ರೆ, ನನಗೆ ಸೌದೆ ಬೇಡ."

ಅವರು ಮತ್ತೆ ಮರಳಿ ಸ್ವಲ್ಪ ದೂರ ಹೋದಂತೆ ಭಾಸವಾಯಿತು. ಅಲ್ಲಿ ಸ್ವಲ್ಪ ನಿಂತು, ತಮ್ಮ ಭಾಷೆಯಲ್ಲಿ ಏನೋ ಮಾತಾಡಿಕೊಂಡು ಮತ್ತೆಮರಳಿ ಬಂದರು. ನನ್ನ ಕ್ವಾರ್ಟರ್ಸ್‌ನ ವರಾಂಡದೆದುರು ಬುಟ್ಟಿಯಿಂದ ಸೌದೆಗಳನ್ನು ಸುರಿದು, ಮೊದಲನೆಯವಳು ಮುಗುಳ್ನಗುತ್ತಾ "ತಗೊಳ್ಳಿ ಸ್ವಾಮಿ, ದುಡ್ಡು ಕೊಡಿ" ಎಂದಳು.

ನಾನು ಕೋಣೆಗೆ ಹೋಗಿ ಪರ್ಸ್‌ನಿಂದ ನಾಲ್ಕು ರೂಪಾಯಿಗಳನ್ನು ತಂದು ಅವಳಿಗೆ ಕೊಟ್ಟೆ. ಅವಳು ಸಂತೋಷದಿಂದ ಅದನ್ನು ತೆಗೆದುಕೊಂಡು ತನ್ನ ಗೆಳತಿಯೊಂದಿಗೆ ಹೊರಟು ಹೋದಳು.

ಅಂದು ಅವಳನ್ನು ಮೊದಲ ಬಾರಿಗೆ ನಾನು ನೋಡಿದ್ದೆ.

ಪರ್ವತೀಯ ಕ್ಷೇತ್ರಗಳಲ್ಲಿ, ಕ್ವಾರ್ಟರ್ಸ್‌ನಲ್ಲಿ ಜೀವನ ಸಾಗಿಸುವುದೂ ಒಂದು ವಿಧದಲ್ಲಿ ಆನಂದದಾಕಯವಾಗಿತ್ತು. ನಿತ್ಯ ಶಾಲೆಗೆ ಹೋಗುವುದು, ಸ್ವಲ್ಪ ಹೊತ್ತು ಮಕ್ಕಳಿಗೆ ಪಾಠ ಬೋಧಿಸುವುದು, ಶಾಲೆ ಮುಗಿದ ನಂತರ ಕ್ವಾರ್ಟರ್ಸ್‌ಗೆ ಮರಳಿ ಬರುವುದು, ಊಟ ಮಾಡುವುದು, ಮಲಗುವುದು, ಸ್ವಲ್ಪ ಹೊತ್ತು ಅಡ್ಡಾಡಿಕೊಂಡು ಬರುವುದು, ಕೆಲವರೊಂದಿಗೆ ಹರಟುವುದು—ಇದನ್ನು ಹೊರತು ಪಡಿಸಿದರೆ ಬೇರೇನೂ ವಿಶೇಷತೆ ಇರಲಿಲ್ಲ. ಸಂಜೆ ಯಾವಾಗ ಆಯಿತೆಂಬುದರ ಅರಿವೇ ಆಗುತ್ತಿರಲಿಲ್ಲ. ಒಮ್ಮೊಮ್ಮೆ ದಿನ ಕಳೆಯುವುದೇ ಕಷ್ಟವಾಗಿ ಬಿಡುತ್ತಿತ್ತು. ಕೆಲಸದಲ್ಲಿ ನನಗೆ ಗಂಡು-ಹೆಣ್ಣಿನ ಬೇಧವಿರಲಿಲ್ಲ—ಒಮ್ಮೆ ಒಂದು ಕೆಲಸದಲ್ಲಿ ನಾನೇ ಹೆಣ್ಣಾದರೆ, ಅದೇ ಕೆಲಸದಲ್ಲಿ ಇನ್ನೊಮ್ಮೆ ಗಂಡಾಗಿ ಬಿಡುತ್ತಿದ್ದೆ. ಅಡುಗೆ ಮಾಡುತ್ತಿದ್ದೆ, ಪಾತ್ರೆಗಳನ್ನು ತೊಳೆಯುತ್ತಿದ್ದೆ, ಪೇಟೆಗೆ ಹೋಗುತ್ತಿದ್ದೆ, ನನ್ನ ಬಟ್ಟೆಗಳನ್ನು ಸ್ವಚ್ಛಮಾಡಿಕೊಳ್ಳುತ್ತಿದ್ದೆ. ಈ ಕೆಲಸಗಳನ್ನೆಲ್ಲಾ ನಾನೇ ಮಾಡಿಕೊಳ್ಳದಿದ್ದರೆ ಕಾಲ ಕಳೆಯುವುದೇ ಕಷ್ಟವಾಗುತ್ತಿತ್ತು. ಈ ಕೆಲಸವನ್ನು ಸೆಲ್ಫ್-ಸಪೋರ್ಟ್ ಎಂದು ತಿಳಿದು ಸದ್ಭಾವನೆಯಿಂದ ಔಟ್-ಪೋಸ್ಟ್‌ನಲ್ಲಿ ವಾಸಿಸುತ್ತಿದ್ದೆ. ನನ್ನ ಈ ಕೆಲಸ ಒಂದು ರೀತಿಯಲ್ಲಿ ದೇಶ ಸೇವೆಯೆಂದೂ ಯೋಚಿಸುತ್ತಿದ್ದೆ. ಆದರೆ ವಾಸ್ತವವಾಗಿ ನಾನು ಸಂಬಳಕ್ಕಾಗಿಯೇ ಈ ಕೆಲಸವನ್ನು ಮಾಡುತ್ತಿದ್ದೆ. ಬದುಕಿನ ಸಂಘರ್ಷದಲ್ಲಿ ಅವಶ್ಯವೆನಿಸಿದ ವಸ್ತುಗಳನ್ನು ಪಡೆಯಲೋಸುಗವೇ ಹಣ ಸಂಪಾದಿಸುತ್ತಿದ್ದೆ. ಹಣ ಸಂಪಾದಿಸುವುದಕ್ಕಾಗಿಯೇ ಮನೆ, ಮೆತ್ತನೆ ಹಾಸಿಗೆ, ತಂದೆ-ತಾಯಿ, ಹೆಂಡತಿ, ಮಕ್ಕಳು, ಸಹೋದರರು-ಸಹೋದರಿಯರಿಂದ ದೂರವಿದ್ದು ಪರ್ವತೀಯ ಕ್ಷೇತ್ರದಲ್ಲಿ ಜೀವನದ ಕೆಲವು ಅಧ್ಯಾಯಗಳನ್ನು ಕಳೆಯಲು ಯತ್ನಿಸು

ತ್ತಿದ್ದೆ....ಈ ದಿಶೆಯಲ್ಲಿ ನಾನೊಬ್ಬನೇ ಅಲ್ಲ, ಪ್ರತಿಯೊಬ್ಬರೂ ಒಂದಲ್ಲ ಒಂದು ವಿಧದಲ್ಲಿ ಹಣ ಸಂಪಾದಿಸುವ ಮಾರ್ಗವನ್ನು ಕಂಡು ಕೊಳ್ಳುತ್ತಾರೆ.

ಸೌದೆ ಮಾರುವ ಆ ಹೆಣ್ಣು ಪದೇ ಪದೇ ನನ್ನ ಮನೆಗೆ ಸೌದೆ ಮಾರಲು ಬರುತ್ತಿದಳು. ಮನೆಯಲ್ಲಿ ಸೌದೆ ಸಾಕಷ್ಟಿದ್ದರೂ, ಅವಳು ಬಂದಾಗ ನಾನು ಸೌದೆಯನ್ನು ಅವಶ್ಯವಾಗಿ ಕೊಳ್ಳುತ್ತಿದ್ದೆ. ಒಮ್ಮೊಮ್ಮೆ ಅವಳ ಗೆಳತಿಯರು ತಂದ ಸೌದೆ ಮಾರಾಟವಾಗುತ್ತಿದ್ದು ಇವಳು ತಂದ ಸೌದೆ ಮಾರಾಟವಾಗದೆ ಉಳಿದುಬಿಡುತ್ತಿತ್ತು. ಅಂಥ ಸಮಯದಲ್ಲಿ ಇವಳು ಬೆವರಿನಿಂದ ತೊಯ್ದು ಸೌದೆ ತುಂಬಿದ ಬುಟ್ಟಿಯನ್ನು ಹೊತ್ತು ಅದರ ಮಾರಾಟಕ್ಕಾಗಿ ಅಲ್ಲಿ ಇಲ್ಲಿ ಅಲೆಯುತ್ತಿದ್ದಳು. ಅವಳ ಈ ಸ್ಥಿತಿ ನನ್ನಿಂದ ನೋಡಲಾಗುತ್ತಿರಲಿಲ್ಲ. ಅಂಥ ಸಮಯದಲ್ಲಿ ಅವಳು ಸಾಮಾನ್ಯವಾಗಿ ನನ್ನ ಕ್ವಾರ್ಟರ್ಸ್‌ಗೆ ಬಂದು ಸೌದೆಯನ್ನು ಹಾಕುತ್ತಿದ್ದಳು. ನಾನು ಚೌಕಾಸಿ ಮಾಡಲೂ ಬಿಡದೆ ಸೌದೆಯ ಬೆಲೆಯನ್ನು ಕಡಿಮೆಯೇ ತೆಗೆದು ಕೊಳ್ಳುತ್ತಿದ್ದಳು. ನಾನೂ 'ವ್ಯಾಪಾರ' ಮಾಡದೆ ಅವಳು ಹೇಳಿದಷ್ಟು ಬೆಲೆಯನ್ನು ಕೊಟ್ಟುಬಿಡುತ್ತಿದ್ದೆ. ಅವಳು ನನ್ನನ್ನು 'ಮೇಸ್ಟ್ರೆ' ಎಂದು ಕರೆಯುತ್ತಿದ್ದಳು. ನಾನು ಒಮ್ಮೊಮ್ಮೆ 'ಮಗಳೆ' ಎಂದರೆ (ಈ ಸಂಬೋಧನೆ ಅವಳಿಗಿಷ್ಟವಿರಲಿಲ್ಲ) ಒಮ್ಮೊಮ್ಮೆ 'ಲೈಶಾ' ಎನ್ನುತ್ತಿದ್ದೆ. (ಅವಿವಾಹಿತ ಹೆಣ್ಣಿಗೆ ಲೈಶಾ, ಲೈಶಾಬಿ ಎಂದು ಕರೆಯಲಾಗುತ್ತದೆ). ನನಗೆ ಸೌದೆ ಮಾರಿದ ಮೇಲೆ ಅವಳು ಪೇಟೆಗೆ ಹೋಗಿ ಸಾಮಾನುಗಳನ್ನು ಖರೀದಿಸುತ್ತಿದ್ದಳು. ಚಿಕ್ಕವಯಸ್ಸಿನಲ್ಲಿ ಅವಳು ಪಡುವ ಶ್ರಮ ಕಂಡು ನನಗೆ ಅವಳ ಬಗ್ಗೆ ಸಹಾನುಭೂತಿ ಯುಂಟಾಗುತ್ತಿತ್ತು. ಬಹು ದೂರದ ತನ್ನ ಹಳ್ಳಿಯಿಂದ ಸೌದೆಯ ಬುಟ್ಟಿಯನ್ನು ಹೊತ್ತು ಬರುವುದು ಅವಳ ನಿಯಮಿತ ಕೆಲಸವಾಗಿತ್ತು. ಮನೆಗೆ ಮರಳಿ ಹೋದ ಮೇಲೂ ಅವಳು ಮಾರನೆಯ ದಿನಕ್ಕಾಗಿ ಸೌದೆಯನ್ನು ಒಟ್ಟು ಮಾಡು ಬೇಕಾಗುತ್ತಿತ್ತು; ಈ ವಿಷಯವನ್ನು ಅವಳೇ ನನಗೆ ಹೇಳಿದ್ದಳು. ಬದುಕಲು ಅಗತ್ಯವಾದ ವಸ್ತುಗಳಿಗಾಗಿ ಮತ್ತು ಹಣಕ್ಕಾಗಿ ಇದನ್ನೆಲ್ಲಾ ಅವಳು ಮಾಡುತ್ತಿದ್ದಳು. ಅವಳನ್ನು ವಿಚಾರಿಸಿದಾಗ ಅವಳ ತಂದೆ-ತಾಯಿ ಬದುಕಿರುವ ವಿಷಯ ತಿಳಿಯಿತು.

"ಹಾಗಾದ್ರೆ ಇಷ್ಟೆಲ್ಲಾ ಯಾಕೆ ಕಷ್ಟ ಪಡ್ತೀಯಾ?" ನಾನು ಅವಳನ್ನು ಪ್ರಶ್ನಿಸಿದೆ.

"ಮಾಡಬೇಕಾಗುತ್ತೆ, ಅದಕ್ಕೇ" ಎನ್ನುತ್ತಿದ್ದಳು. ಅವಳು ಕೆದಕಿ ಪ್ರಶ್ನಿಸಿದಾಗ ನಾಚಿ ಉತ್ತರಿಸದೆ, ಇದ್ದುಬಿಡುತ್ತಿದ್ದಳು. ನನಗೆ ಅವಳ ಭಾಷೆ ಮತ್ತು ಅವಳಿಗೆ ನನ್ನ ಭಾಷೆ ಸ್ಪಷ್ಟವಾಗಿ ಅರ್ಥವಾಗುತ್ತಿರಲಿಲ್ಲ. ನನಗೆ ವಾಸ್ತವವಾಗಿಯೂ ಅವಳ ಬಗ್ಗೆ ಸಹಾನುಭೂತಿಯಿತ್ತು. ಬದುಕಿನ ಯುದ್ಧ-ಭೂಮಿಯಲ್ಲಿ ನಿಂತ ಓರ್ವ ಸೈನಿಕನಂತೆ ಆಗಿತ್ತು. ಅವಳ ಪರಿಸ್ಥಿತಿ!

ಇತ್ತ ಅವಳು ಸೌದೆ ಮಾರಲು ಬರದೆ ಒಂದು ತಿಂಗಳೇ ಕಳೆದಿತ್ತು. ಹೊಲದಲ್ಲಿ ದುಡಿಯುವ ಸಮಯವಾದ್ದರಿಂದ ಬಹುಶಃ ಅವಳು ಆ ಕೆಲಸಕ್ಕೆ ಹೋಗಿರಬೇಕೆಂದು ಯೋಚಿಸಿದೆ. ನಮ್ಮಿಬ್ಬರ ಪರಿಚಯವಾಗಿ ಹೆಚ್ಚು ದಿನಗಳಾಗಿರಲಿಲ್ಲ. ಆದರೆ ಅವಳು

ಸೌದೆ ಮಾರಲು ಬರದಿದ್ದದ್ದು ನನ್ನನ್ನು ವ್ಯಗ್ರನನ್ನಾಗಿ ಮಾಡಿತ್ತು. ಅವಳು ಮತ್ತೆ ಬರಲಿ ಎಂದು ಮನಸ್ಸು ಹಾತೊರೆಯುತ್ತಿತ್ತು. ಮನೆಯಲ್ಲಿ ಸಾಕಷ್ಟು ಸೌದೆಯಿದ್ದರೂ ಅವಳು ತರುವ ಸೌದೆಯನ್ನು ಕೊಳ್ಳಲು ಬಯಸುತ್ತಿದ್ದೆ. ಅವಳನ್ನು ಕಾಣದೆ, ನನ್ನ ಊಟ-ನಿದ್ದೆ ಅಪೂರ್ಣವಾಗುತ್ತಿದೆಯೆಂದು ನನಗನ್ನಿಸುತ್ತಿತ್ತು. ನನ್ನ ಹೃದಯ ಏನು ಬಯಸುತ್ತಿತ್ತೆಂದು ನನಗರ್ಥವಾಗುತ್ತಿರಲಿಲ್ಲ. ಅವಳು 'ಸುಂದರಿ' ಯಾಗಿರಲಿಲ್ಲ. ಬಹುಶಃ ಅವಳ ಕಣ್ಣುಗಳು ತುಂಬಾ ಆಕರ್ಷಕವಾಗಿದ್ದುವು.

ಅದೊಂದು ದಿನ ನಾನು ಮಿತ್ರರೊಂದಿಗೆ ತಿರುಗಾಡುವ ಇಚ್ಛೆಯಿಂದ ಹಳ್ಳಿಯಿಂದ ಮೂರ್‍ನಾಲ್ಕು ಮೈಲಿ ದೂರಕ್ಕೆ, ಹೋದೆ. ಅಲ್ಲಿ ಬೆಟ್ಟದ ದಿಣ್ಣೆಯಲ್ಲಿ ಒಂದು ಚಿಕ್ಕ ಹಳ್ಳಿಯಿತ್ತು. ಮಿತ್ರರಿಗೆ ಪರಿಚಿತರಾದವರ ಮನೆಯಲ್ಲಿ ಚಹಾ ಸೇವಿಸಿ ವಿಶ್ರಾಂತಿ ಪಡೆದು ಇನ್ನೇನು ನಮ್ಮ ಕ್ವಾರ್ಟರ್ಸ್‌ಗೆ ಮರಳಿ ಹೋಗಬೇಕೆಂದಿದ್ದೆವು, ಅಷ್ಟರಲ್ಲಿ ಯಾರೋ ಒಮ್ಮೆಲೇ ನನ್ನನ್ನು ಕರೆದಂತಾಯಿತು. ಹೊರಳಿ ನೋಡಿದೆ. ಎದುರಿಗೆ ಆ ಸೌದೆ ಮಾರುವವಳನ್ನು ಕಂಡು ಆಶ್ಚರ್ಯದೊಂದಿಗೆ ಸಂತೋಷವೂ ಆಯಿತು.

'ಯಾಕೆ, ಇಷ್ಟು ದಿನಗಳಾದರೂ ಸೌದೆ ಮಾರಲು ನೀನು ಬರಲೇ ಇಲ್ಲ?" ಹರಕು ಮುರುಕು ಭಾಷೆಯಲ್ಲಿ ಪ್ರಶ್ನಿಸಿದೆ.

"ತೋಟದ ಕೆಲಸವಿದ್ದುದರಿಂದ ಬರಲಾಗಲಿಲ್ಲ." ಅವಳೀಗ ತೋಟದ ಕೆಲಸವನ್ನು ಮುಗಿಸಿಕೊಂಡೇ ಬರುತ್ತಿದ್ದಳು. ತುಂಬಾ ಸೊರಗಿದಂತೆ ಕೂಡ ಕಂಡಳು. ಅವಳು ತೋಟದಿಂದ ತಾನು ತಂದಿದ್ದ ಅನಾನಾಸ್ ತಿನ್ನಲು ನಮಗೆ ಆಗ್ರಹಿಸಿದಳು. ನನ್ನ ಮಿತ್ರರೊಂದಿಗೆ ಅವಳನ್ನು ಹಿಂಬಾಲಿಸಿದೆ. ನಡುವೆ ಅವಳು ಅದೂ-ಇದೂ ಮಾತನಾಡುತ್ತಾ ಹೋದಳು. ಅವಳ ಮನೆಗೆ ಹೋದ ಮೇಲೆ ನಮ್ಮಿಬ್ಬರಿಗೂ ಒಂದೊಂದು ಜಿಂಕೆಯ ಚರ್ಮವನ್ನು ಹಾಸಿ ಅದರ ಮೇಲೆ ನಮಗೆ ಕೂರಲು ಹೇಳಿದಳು. ಸಾಕಷ್ಟು ದಣಿವಿದ್ದಾಗ್ಯೂ ನಮಗೆ ಅನಾನಾಸ್ ಹಣ್ಣನ್ನು ಹೆಚ್ಚಿಕೊಟ್ಟಳು. ಮುಖದಲ್ಲಿ ಅದೇ ಹಿಂದಿನ ಮುಗುಳ್ನಗೆ ಲಾಸ್ಯವಾಡುತ್ತಿತ್ತು. ನಾವು ಅನಾನಾಸ್ ತಿನ್ನುತ್ತಿರುವಾಗ ಪಕ್ಕದ ಕೋಣೆಯಿಂದ ಮದ್ಯದಮಲಿನಲ್ಲಿದ್ದ ಪುರುಷನೊಬ್ಬ ಬಂದ. ಅವನು ನಮ್ಮೆಡೆಗೆ ಕಿರುನೋಟ ಬೀರಿ ತನ್ನ ಭಾಷೆಯಲ್ಲಿ ಅವಳಿಗೆ ಏನೋ ಸಿಟ್ಟಿನಿಂದ ನಿಂದಿಸಿದ. ಅವಳು ತುಂಬಾ ಶಾಂತಳಾಗಿ ಅವನ ಮಾತಿಗೆ ಉತ್ತರಿಸಿದಳು. ನನ್ನ ಮಿತ್ರರೂ ಅವನಿಗೆ ಏನೋ ಹೇಳಿದರು. ನನಗೊಂದೂ ಅರ್ಥವಾಗಲಿಲ್ಲ. ಹಣ್ಣು ತಿಂದಾದ ಮೇಲೆ ನಾವಿಬ್ಬರೂ "ಇನ್ನು ಬರುತ್ತೇವೆ" ಎಂದು ಅಲ್ಲಿಂದ ಹೊರಟೆವು.

ಆ ಪುರುಷನನ್ನು ಎಲ್ಲೋ ನೋಡಿದ ನೆನಪಾಯಿತು. ಯೆಲಹಾಜ ಪೇಟೆಯಲ್ಲಿ ದಿನವೆಲ್ಲಾ ಅವನು ಮದ್ಯದ ಅಮಲಿನಲ್ಲಿ ಓಲಾಡುತ್ತಿದ್ದ ದೃಶ್ಯ ನೆನಪಾಯಿತು. ಅದೊಂದು ದಿನ, ನನ್ನ ಪರಿಚಯವಿಲ್ಲದಿದ್ದರೂ ಅವನು ನನ್ನ ಮಾರ್ಗದಲ್ಲಿ ಅಡ್ಡ ಬಂದು ಮದ್ಯಕ್ಕಾಗಿ ಹಣ ಯಾಚಿಸಿದ್ದ. ಜಗಳ ಮಾಡಬಾರದೆಂದು ಯೋಚಿಸಿ ಅವನಿಗೆ ದುಡ್ಡು ಕೊಟ್ಟಿದ್ದೆ, ಅವನು ಇನ್ನೂ ಹೆಚ್ಚು ಕೇಳಿದಾಗ, ಕೊಡುವುದಿಲ್ಲವೆಂದು ಹೇಳಿ ಮುಂದಕ್ಕೆ ಹೊರಟು ಹೋಗಿದ್ದೆ.

ಅವನು ಸಿಟ್ಟಿನ ಆವೇಶದಲ್ಲಿ ಏನೇನೋ ನಿಂದಿಸಿದ್ದ. ಅವನೇ ಸೌದೆ ಮಾರುವವಳ ಪತಿಯೇ? ಅವನು ಅವಳೆದುರು ಅವಳ ಮನೆಯಲ್ಲಿ ವರ್ತಿಸಿದ ರೀತಿ ಕಂಡು ನನಗೆ ಅವನೇ ಅವಳ ಪತಿಯೆಂದು ಅನ್ನಿಸಿತು.

ಅವಳ ಕಾಲುಗಳು ಭಾರವಾಗಿವೆಯೆಂದು ಕಂಡಿತು ನಾನು ಅವಳನ್ನು ಆಗಾಗ್ಗೆ 'ಲೈಶ್' ಎಂದು ಕರೆಯುತ್ತಿದ್ದೆ. ಆಗ ಅವಳು 'ಕುಮಾರಿ' ಎಂದು ಯೋಚಿಸುತ್ತಿದ್ದೆ. ಆ ಪುರುಷ ಅವಳ ಪತಿಯಾಗದೆ ಇರಲಿ ಎಂದೂ ಬಯಸುತ್ತಿದ್ದೆ.

ಅಕಸ್ಮಾತ್ ಅವಳು ಅದೊಂದು ದಿನ ಮತ್ತೆ ಸೌದೆ ಮಾರಲು ಬಂದಳು. ನಾನು ಸೌದೆ ಕೊಳ್ಳುತ್ತಿರುವಾಗ ನನ್ನ ಮಿತ್ರರೂ ಅಲ್ಲಿಗೆ ಬಂದರು. ಮಿತ್ರರು ಬಂದಿದ್ದರಿಂದಾಗಿ ಅವಳು ಆ ಕೂಡಲೇ ನನ್ನಿಂದ ಹಣ ಪಡೆದು ಹೋದಳೆಂದು ನನಗನ್ನಿಸಿತು. ಅವಳು ಹೋದ ಮೇಲೆ ಮಿತ್ರರು ನನಗೆ, "ಅವಳೊಂದಿಗೆ ಇನ್ನು ಮೇಲೆ ಸಂಪರ್ಕವಿಟ್ಟುಕೊಳ್ಳಬೇಡಿ" ಎಂದರು. ನಾನು ಕಾರಣ ವಿಚಾರಿಸಿದೆ. ಆಗ ಅವರು, "ಅವಳ ಗಂಡ ಸದಾ ಮದ್ಯ ಸೇವಿಸುತ್ತಾನೆ. ಅವಳು ಬೇರೆಯವರೊಂದಿಗೆ ಮಾತನಾಡುವುದನ್ನು ಕಂಡಾಗ ಅವಳಿಗೆ ಮನಸಾರೆ ಹೊಡೆಯುತ್ತಾನೆ, ನಿಂದಿಸುತ್ತಾನೆ, ಅವನಿಗೆ ನಿಮ್ಮ ಬಗ್ಗೆಯೂ ಅನುಮಾನವಿದೆ" ಎಂದರು. ಈ ಮಾತು ಕೇಳಿ ತುಂಬಾ ಬೇಸರವಾಯಿತು. ಸದಾ ಕುಡಿತದಲ್ಲೇ ಇರುವ ಪತಿ! ಆದರೆ ಅವನ ಹೆಂಡತಿ ಸದಾ ದುಡಿಮೆಯಲ್ಲಿ ಬದುಕು ಸವೆಸುವುದು—ಇದೆಂಥಾ ಜೋಡಿ! ಅವಳು ಬಸುರಿ ಬೇರೆ—ಆದಾಗ್ಯೂ ತೋಟದಲ್ಲಿ ಮೈ ಮುರಿದು ಕೆಲಸ; ಸೌದೆ ಕಡಿದು ದೂರದ ಹಳ್ಳಿಗೆ ಮಾರಲು ಹೋಗುವ ಅವಳ ಸ್ನಿಗ್ಧ ಮುಖ ನನ್ನೆದುರು ಸುಳಿದಾಗ ಕರುಳು 'ಚುರುಕ್' ಎಂದಿತು.

ಆದರೆ ನಾನೇಕೆ ಅವಳ ಬಗ್ಗೆ ಇಷ್ಟೊಂದು ವ್ಯಾಕುಲನಾಗಿರುವೆ? ಅವಳಿಗೂ ನನಗೂ ಏನು ಸಂಬಂಧ? ಅವಳು ಸೌದೆ ಮಾರುವ ಒಂದು ಹೆಣ್ಣು. ನಾನು ಅವಳಿಂದ ಸೌದೆ ಖರೀದಿಸುವ ಒಂದು ಗಂಡು ಮಾತ್ರ ತಾನೆ?....

ನೀನೇನು ಕೊಡಬಲ್ಲೆ ಎನ್ನುವುದರ ಮೇಲೆ ನಿನ್ನ ಸುಖ ನಿಂತಿದೆಯೇ ಹೊರತು ನೀನೇನು ತೆಗೆದುಕೊಳ್ಳಬಲ್ಲೆ ಎನ್ನುವುದರ ಮೇಲಲ್ಲ.

—ಗಾಂಧೀಜಿ

ಸರ್ವಧರ್ಮ ಸಮ್ಮೇಳನ

ಡಾ|| ಸ. ಜ. ನಾಗಲೋಟಿಮಠ
೨೫ 'ಶಾಂತಾ' ಬಸವ ಕಾಲನಿ
ಬೆಳಗಾವಿ-೫೯೦ ೦೧೦

ಖಾಜಿ ಸಾಹೇಬರು ಹುಬ್ಬಳ್ಳಿಯ ಸಮೀಪದ ಹಳ್ಳಿಯವರು. ಅವರಿಗೆ ಈಗ ಸುಮಾರು ೬೦ ವರ್ಷ ವಯಸ್ಸು. ದಿನಾಲು ತಪ್ಪದೇ ನಮಾಜು ಹಾಕುವದು ಅವರ ರೂಢಿ. ಚೆನ್ನಾಗಿ ಕುರಾನ್ ಓದಿ ತಿಳಿದುಕೊಂಡವರು. ಬೇರೆ ಮತಗಳ ವಿದ್ವಾಂಸರೊಡನೆ ಧರ್ಮದ ಬಗ್ಗೆ ಚರ್ಚಿಸಿ 'ಶಭಾಶ್' ಎನಿಸಿಕೊಂಡವರು. ಮನೆತನದಿಂದ ಶ್ರೀಮಂತರಲ್ಲದಿದ್ದರೂ ಬಡವರಾಗಿರಲಿಲ್ಲ. ಅವರ ಬಗ್ಗೆ ಬಹಳ ಜನರು ಆದರ ತೋರುತ್ತಿದ್ದರು.

ಒಂದು ಸಲ ಅವರು ಉತ್ತರ ಹಿಂದೂಸ್ತಾನಕ್ಕೆ ಹೋಗಬೇಕಾಯಿತು. ಬಿಹಾರದಲ್ಲಿ ಒಂದು ಕಡೆಗೆ ಅವರು ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಬೇಕಾಗಿತ್ತು. ಖಾಜಿ ಅವರು ಮತ್ತೆ ಮತ್ತೆ ಕುರಾನ್ ಓದಿ ಪೂರ್ಣ ತಯಾರಿಯೊಡನೆ ಪ್ರಯಾಣ ಬೆಳಸಿದರು. ಇವರನ್ನು ಅಲ್ಲಿಯ ಕಾರ್ಯಕರ್ತರು ಆದರದಿಂದ ಬರಮಾಡಿಕೊಂಡರು. ಸರ್ವಧರ್ಮ ಸಮ್ಮೇಳನವೂ ಪ್ರಾರಂಭವಾಯಿತು. ಎಲ್ಲ ಮತದ ಪಂಡಿತರು ತಮ್ಮ ಉಪನ್ಯಾಸಗಳನ್ನು ಇತ್ತರು. ತಮ್ಮ ಧರ್ಮದಲ್ಲಿದ್ದ ಅಮೂಲ್ಯ ವಿಚಾರಗಳನ್ನು ಮಂಡಿಸಿದರು. ಖಾಜಿ ಸಾಹೇಬರೂ ಮಾತಾಡಿದರು. ಎಲ್ಲರೂ ತಮ್ಮ ಧರ್ಮವೇ ಶ್ರೇಷ್ಠ ಎಂದು ವಾದಿಸಿದರು. ಸಮ್ಮೇಳನವು ಮುಗಿಯಿತು. ಬಂದ ಪಂಡಿತರೆಲ್ಲ ಸುತ್ತಲಿನ ಕ್ಷೇತ್ರ ಹಾಗೂ ಪ್ರವಾಸಿ ಸ್ಥಾನಗಳನ್ನು ನೋಡಲು ಹೊರಟರು. ಒಂದು ಕಡೆಗೆ ಇವರು ಆ ಸ್ಥಳವನ್ನು ಸಂದರ್ಶಿಸುವಾಗ ಬಿಸಿಲು ಬಹಳವಿತ್ತು. ಬೀಸುವ ಬಿಸಿಗಾಳಿ ಜನರ ದೇಹದಲ್ಲಿಯ ನೀರನ್ನು ಕುಡಿದು ಮುಗಿಸಿತ್ತು. ಎಲ್ಲರಿಗೂ ಬಾಯಾರಿಕೆ ವಿಚಿತ್ರ ಬಾಯಾರಿಕೆ. ತುಟಿ ನಾಲಿಗೆಗಳು ಒಣ ಕೊರಡಿನಂತೆ ಆದವು. ಕುಡಿಯಲು ನೀರು ಬೇಕು. ಆದರೆ ನೀರು ದೊರೆಯುತ್ತಿಲ್ಲ.

ಅಷ್ಟರಲ್ಲಿ ದಾರಿಯ ಪಕ್ಕದ ಗಿಡದ ಕೆಳಗೆ ಒಂದು ಮುದುಕಿ ಕುಳಿತಿದ್ದಳು. ಆಕೆಯ ದೇಹ ಹಣ್ಣಾಗಿತ್ತು. ನೋಡಲು ಉತ್ತತ್ತಿಯಂತೆ ಕಾಣುತ್ತಿತ್ತು. ಅವಳ ಎದುರು ಒಂದು ಮಣ್ಣಿನ ಕೊಡ. ಕೊಡದ ಮೇಲೆ ಒಂದು ಮುಚ್ಚಳ. ಅದರ ಮೇಲೆ ಒಂದು ಮಗಿ. ಆಕೆಗೆ ಕಣ್ಣು ಸರಿಯಾಗಿ ಕಾಣುತ್ತಿರಲಿಲ್ಲ. ಆಕೆಯನ್ನು ಧರ್ಮದ ಪಂಡಿತರು ನೋಡಿದ್ದಿಲ್ಲ. ಬಾಯಾರಿದರೂ ಅವರ ಮಾತುಗಳು ಮುಗಿದಿರಲಿಲ್ಲ. ಇವರಿಗೆ ಕುಡಿಯಲು ನೀರು ಬೇಕೆಂಬುದು ಅವಳಿಗೆ ಕೇಳಿಸಿತು. ಆಗ ಆಕೆ ಕರೆದಳು "ಏ ಅಣ್ಣಂದಿರಾ, ಇಲ್ಲಿ ಬನ್ನಿ, ನಿಮಗಾಗಿ ನಾನು ಮಣ್ಣಿನ ಕೊಡದ ತಣ್ಣೀರು ತಂದಿರುವೆ. ಬಿಸಿಲಿನಲ್ಲಿ ಹಾಗೆಯೇ ಹೋದರೆ

ಬಹಳ ತೊಂದರೆ. ತಣ್ಣೀರು ಕುಡಿದು ಮುಂದೆ ಪ್ರಯಾಣಿಸಿರಿ."

ಆ ಧ್ವನಿಬಂದ ಕಡೆಗೆ ಎಲ್ಲರೂ ಚಲಿಸಿದರು. ಆಕೆ ಮಗಿಯನ್ನು ತುಂಬಿ ತುಂಬಿ ಕೊಡುತ್ತ ಹೋದಳು ಪಂಡಿತರೆಲ್ಲ ನೀರು ಕುಡಿದರು. ಸಂತೋಷಪಟ್ಟರು, ಅವರಿಗಂತೂ ದೇವರೇ ಎದುರು ನಿಂತಂತೆಕಂಡಿತು. ಆಕೆಯ ವಯಸ್ಸು. ಅವಳ ಸುಕ್ಕುಗಟ್ಟಿದ ಚರ್ಮ, ತೇಪೆ ತೇಪೆಯಾದ ಸೀರೆ ಕುಪ್ಪುಸ ಕಂಡು ಮರುಕಪಟ್ಟರು. ಅವರಿಗೆ ಅರಿವಿಲ್ಲದಂತೆ ಕೈಗಳು ಕಿಸೆಯೊಳಗೆ ಸೇರಿದವು. ಪಾಕೀಟು ಹೊರಬಂದವು, ಎಲ್ಲರೂ ಒಂದೆರಡು ರೂಪಾಯಿ ತೆಗೆದು ಅವಳ ಹತ್ತಿರ ಬಂದು 'ತಾಯಿ ನೀನು ದೇವರಂತೆ ಬಂದು ನಮಗೆ ನೀರನ್ನಲ್ಲ ಅಮೃತ ಕುಡಿಸಿರುವಿ. ನಿನಗೆ ಧನ್ಯವಾದಗಳು. ನಿನ್ನ ಖರ್ಚಿಗೆಂದು ಸ್ವಲ್ಪ ಹಣವನ್ನು ಇಡುತ್ತಿರುವೆವು ಸ್ವೀಕರಿಸು" ಎಂದು ವಿನಂತಿಸಿದರು. ಎಲ್ಲರಿಗೂ ಮುದುಕಿ ಸಂತೋಷ ಪಡುವಳೆಂದು ಖಾತ್ರಿ ಆಗಿತ್ತು. ಆದರೆ ಅವರ ಎಣಿಕೆ ಸುಳ್ಳಾಯಿತು. ಮುದುಕಿ ಸಿಟ್ಟಿಗೆದ್ದಳು. ಜೋರಿನಿಂದ ಚೀರಿದಳು—"ಏನು ನಾನು ನಿಮ್ಮ ಹಣಕ್ಕಾಗಿ ನೀರು ಕೊಟ್ಟೆನೆಂದು ತಿಳಿದಿರೋ? ನೀರಡಿಸಿದವರಿಗೆ ನೀರು ಉಣಿಸುವದು ನನ್ನ ಧರ್ಮ. ನನ್ನ ಧರ್ಮವನ್ನು ನಾನು ಬಿಡಲೇ? ಅಧರ್ಮಿ ಎಂದು ನರಕಕ್ಕೆ ಸೇರಲೇ? ಎಂಥ ಅಣ್ಣಂದಿರು ನೀವು?"

ಪಾಕೀಟನಿಂದ ಹೊರಬಂದ ಚಿಲ್ಲರೆ ಹಣವು ಆ ಮುದುಕಿಯ ಎದರು ನಿಜವಾಗಿ ಚಿಲ್ಲರೆ ಎನಿಸಿತು. ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿ ಉಪನ್ಯಾಸಮಾಡಿದ ಅಣ್ಣಂದಿರಿಗೆ ಮುದುಕಿಯ ಧರ್ಮದ ಬಗ್ಗೆ ಆಗ ತಿಳಿಯಿತು. ಅವರಲ್ಲಿ ಒಬ್ಬರೂ ಸಹ ಆಕೆಯ ಈ ಧರ್ಮದ ಬಗ್ಗೆ ಮಾತಾಡಿರಲಿಲ್ಲ. ಚಿಲ್ಲರೆ ಹಣ ಮರಳಿ ಕಿಸೆ ಸೇರಿತು. ಆ ಹಣಕ್ಕೂ ನಾಚಿಕೆ ಎನಿಸಿತು.

ಮುದುಕಿ ಒಟಗುಟ್ಟುತ್ತ ಕುಳಿತಿತ್ತು "ನಾನು ಹಳೆಯ ಕಾಲದವಳು ಹಣಕೊಟ್ಟರೆ ಸ್ವರ್ಗ ಸಿಗುವುದಿಲ್ಲ. ಹಣವು ಧರ್ಮವನ್ನು ಹಾಳುಮಾಡೀತು ಎಚ್ಚರದಿಂದಿರಿ ಅಣ್ಣಗಳಿರಾ" ಧರ್ಮದ ಪಂಡಿತರೊಡನೆ ಖಾಜಿ ಸಾಹೇಬರು ಮನದಲ್ಲಿ ಅಲ್ಲಾಹನನ್ನು ನೆನೆಯುತ್ತ ಮುದುಕಿಗೆ, ಆಕೆಯ ಧರ್ಮಕ್ಕೆ ನಮಸ್ಕರಿಸುತ್ತ ಪ್ರಯಾಣ ಬೆಳೆಸಿದರು. ನಿಜವಾಗಿಯೂ ಮುದುಕಿಯ ಮಾತು ಸರ್ವಧರ್ಮ ಸಮ್ಮೇಳನವನ್ನು ಪೂರ್ಣಗೊಳಿಸಿತು. ಅದೇ ಅಧ್ಯಕ್ಷೀಯ ಭಾಷಣ ಎನಿಸಿತು.

ಪ್ರಪಂಚದ ಸಕಲ ಮತ ಧರ್ಮಗಳ ಸಮಸ್ತ ಗ್ರಂಥಗಳನ್ನೂ ಪುನಾರೂಪಿಸಬೇಕೆಂಬ ಸಲಹೆಯನ್ನು ವಿಶ್ವಸಂಸ್ಥೆಯಲ್ಲಿ ಮಂಡಿಸಲಾಯಿತು: ಪರಧರ್ಮ ಅಸಹಿಷ್ಣುತೆಗೆ ಅಥವಾ ಕ್ರೌರ್ಯಕ್ಕೆ ಇಂಬುಗೊಡುವ ಎಲ್ಲವನ್ನೂ ಅವುಗಳಿಂದ ನಿವಾರಿಸಬೇಕು; ವ್ಯಕ್ತಿಯ ಘನತೆಗೆ ಮಾರಕವಾಗುವ ಸಮಸ್ತವನ್ನೂ ನಾಶಗೊಳಿಸಬೇಕು. ಈ ಸಲಹೆಯ ಮಂಡನಕಾರ ಜೀಸಸ್ ಕ್ರೈಸ್ಟ್ ಎಂದು ತಿಳಿದಾಗ ಪತ್ರಕರ್ತರು ಆತನ ನಿವಾಸಕ್ಕೆ ಧಾವಿಸಿದರು. ಕ್ರೈಸ್ಟ್ ನೀಡಿದ ವಿವರಣೆ ತೀರ ಸರಳವಾಗಿತ್ತು: "ವ್ರತದಂತೆ ಧರ್ಮಗ್ರಂಥವೂ ಮಾನವನಿಗಾಗಿ ಇರುವಂಥದು, ಧರ್ಮಗ್ರಂಥಕ್ಕಾಗಿ ಮಾನವ ಅಲ್ಲ."

ಅಂತೋಣಿ ಡಿಮೆಲ್ಲೊ, ಎಸ್‌ಜೆ

ಮೈಲಿಬೇನೆ ಮರುಕಳಿಸುತ್ತಿದೆಯೇ ?

ಡಾ|| ಕರವೀರಪ್ರಭು ಕ್ಯಾಲಕೊಂಡ
ಆರೋಗ್ಯಾಧಿಕಾರಿಗಳು
ಸಮುದಾಯ ಆರೋಗ್ಯ ಕೇಂದ್ರ
ಬಾದಾಮಿ–೧೮೭ ೨೦೧

“ಹಾವಿನ ದರ, ಕೆಮ್ಮು, ಮೈಲಿಬೇನೆಯನ್ನು ಬಹಳ ದಿನಗಳ ಕಾಲ ಮುಚ್ಚಿಡಲಾಗುವುದಿಲ್ಲ” ಎಂಬ ಹಡಿನುಡಿ ಅರ್ಥಗರ್ಭಿತವಾಗಿದೆ. ಮೈಲಿಬೇನೆಯ ನಿರ್ಮೂಲನೆಗೆ ಬ್ರಹ್ಮಾಸ್ತ್ರವಾಗಿ ಬಳಕೆಯಾದ ಲಸಿಕೆ(ದೇವಿ ಹಾಕುವುದು) ಸಂಶೋಧನೆಯ ಶತಮಾನೋತ್ಸವದ ಸಂಭ್ರಮ, ಸಂತೋಷದಲ್ಲಿರುವಾಗ, ಗರಬಡಿಯುವ ಸುದ್ದಿಯೊಂದು ಮಹಾರಾಷ್ಟ್ರದಿಂದ ಹೊರಬಿದ್ದಿದೆ. ಹರ್ಷೋನ್ಮಾದದಲ್ಲಿ ಹರಿದಾಡುವ ಹಾವಿಗೆ ಗಿಡಗ ಎರಗಿದಂತಾಗಿದೆ. ಭಾರತೀಯ ವೈದ್ಯವಿಜ್ಞಾನಿಗಳ ನಿದ್ದೆಗೆ ಭಂಗ ತಂದಿದೆ. ವಿಶ್ವದಲ್ಲಿಯೇ ಮೊಟ್ಟ ಮೊದಲ ಭಫೆಲೋ ಪಾಕ್ ವೈರಸ್ (ಬಿ.ಪಿ.ವಿ) ಮನುಷ್ಯರಿಂದ ಮನುಷ್ಯರಿಗೆ ಪ್ರಸಾರವಾದ ಪ್ರಕರಣ ವಿಜ್ಞಾನಿಗಳ ಗಮನಕ್ಕೆ ಬಂದಿದೆ.

ಮಾರುವೇಷದ ಮಾರಿ :

ಬಿ.ಪಿ.ವಿ. ೧೫ ವರ್ಷಗಳ ಹಿಂದೆ ಪ್ರಪಂಚದಿಂದ ನಿರ್ಮೂಲನಗೊಂಡ ಮೈಲಿಬೇನೆ ವೈರಸ್‌ದ ಸೋದರ ಸಂಬಂಧಿ. ಸಾಮಾನ್ಯವಾಗಿ ನಿರಪಾಯಕಾರಿ. ಅದು ಎಮ್ಮೆಗಳಲ್ಲಿ ಮೈಲಿಬೇನೆ ಉಂಟುಮಾಡುತ್ತಿತ್ತು. ಅದು ಸೋಂಕಿಗೀಡಾದ ಎಮ್ಮೆಗಳಿಂದ ಮನುಷ್ಯರಿಗೆ ಹರಡುವುದು ಗೊತ್ತಿತ್ತು. ಆದರೆ ಮನುಷ್ಯರಿಂದ ಮನುಷ್ಯರಿಗೆ ಹರಡುತ್ತಿರಲಿಲ್ಲ. ಇತ್ತೀಚೆಗೆ ಮಹಾರಾಷ್ಟ್ರದಲ್ಲಿ ಬಿ. ಪಿ. ವಿ. ಮನುಷ್ಯರಿಂದ ಮನುಷ್ಯರಿಗೆ ಕಲೆಯನ್ನು ಕರಗತಮಾಡಿಕೊಂಡು ಸ್ಫೋಟಗೊಂಡಿರುವುದರಿಂದ ವಿಜ್ಞಾನಿಗಳು ಗಾಬರಿಯಾಗಿದ್ದಾರೆ. ಬಿ. ಪಿ. ವಿ. ಮಾರ್ಪಾಡುಗಳನ್ನು ಹೊಂದುತ್ತಿದೆ. ದಿನಗಳೆದಂತೆ ಗುಣವಿಶೇಷಗಳಲ್ಲೂ ರೂಪಾಂತರ ಕಂಡು ಬಂದು ಸಾರ್ವಜನಿಕರ ಆರೋಗ್ಯ ಸಮಸ್ಯೆಯಾಗಿ ಬೆಳೆಯುವ ಸಾಧ್ಯತೆಗಳಿವೆ ಎಂದು ವಿಜ್ಞಾನಿಗಳು ಎಚ್ಚರಿಕೆ ನೀಡಿದ್ದಾರೆ. ಈ ನಾಡಿನಿಂದ ನಿರ್ಮೂಲನಗೊಂಡ ಮಾರಿ ಮೈಲಿಬೇನೆ ಮಾರುವೇಷದಿಂದ ಮತ್ತೆ ಮರುಕಳಿಸುತ್ತಿದೆಯೇ? ಎಂಬ ಯಕ್ಷಪ್ರಶ್ನೆ ಅವರನ್ನು ಹಗಲಿರುಳು ಕಾಡುತ್ತಿದೆ. ವಿಜ್ಞಾನಿಗಳು ದೆಹಲಿಯಲ್ಲಿರುವ ವಿಶ್ವ ಆರೋಗ್ಯ ಸಂಸ್ಥೆಯ ಕಚೇರಿಗೆ ಸಂದೇಶವನ್ನು ಆಗಲೇ ತಲುಪಿಸಿದ್ದಾರೆ. ದೃತಿಗೆಟ್ಟ ವಿಶ್ವ ಆರೋಗ್ಯ ಸಂಸ್ಥೆ ಚುರುಕಿನಿಂದ ಮಾಹಿತಿ ಸಂಗ್ರಹಿಸಲು ಪ್ರಾರಂಭಿಸಿದೆ....

ಇತಿಹಾಸದ ಗತಪುಟಗಳಲ್ಲಿ ಓದಿದ ಮೈಲಿಬೇನೆ ಸುದ್ದಿಗಳೇ ಭೀಕರವಾಗಿರುತ್ತಿದ್ದವು. ಮಾರುವೇಷದಿಂದ ಮೈಲಿಬೇನೆ

ಮರುಕಳಿಸುತ್ತಿದೆಯೇ ? ಎಂಬ ವಿಜ್ಞಾನಿಗಳ ಸಂಶಯವೇ ಜನರನ್ನು ಸಾಕಷ್ಟು ತಲ್ಲಣಿಸಿದೆ ; ಇತಿಹಾಸ ಮರುಕಳಿಸುವುದು ಸಾಂಕ್ರಾಮಿಕ ರೋಗಕ್ಕೆ ಎಂದೂ ಬೇಡ, ಅದು ಮೈಲಿಬೇನೆಗಂತೂ ಬೇಡವೇ ಬೇಡ ;

ನಡೆದು ಬಂದ ದಾರಿ :

ಭಾರತ ಮತ್ತು ಪಾಕಿಸ್ತಾನ ಉಪಖಂಡಗಳಲ್ಲಿ ದನಗಳಲ್ಲಿ ; ಎಮ್ಮೆ, ಎತ್ತು, ಆಕಳುಗಳಲ್ಲಿ ಮೈಲಿಬೇನೆ ಹಾವಳಿ (ಬಿ. ಪಿ. ವಿ.) ಗಣಾಳರಿಂದಲೂ ಮನೆಮಾಡಿಕೊಂಡಿದೆ. ರೋಗ ಹಿಂಡುವ ಎಮ್ಮೆಯ ಆಕಳಿನ ಕೆಚ್ಚಲು ಮತ್ತು ಮೊಲೆಯ ತೊಟ್ಟುಗಳಲ್ಲಿ ಹುಣ್ಣುಗಳನ್ನುಂಟು ಮಾಡುತ್ತದೆ. ಹುಣ್ಣಿನ ನೋವಿನಿಂದ ನರಳುವ ಹಿಂಡುವ ದನಗಳ ಕೆಚ್ಚಲು ಮೊದಮೊದಲು ಬಾತು ಬಿಗಿದುಕೊಂಡು ಬಿಡುತ್ತವೆ. ಇದರಿಂದಾಗಿ ಹಾಲು ಕರೆಯುವಾಗ ವಿಪರೀತ ನೋವು ಉಂಟಾಗುವುದರಿಂದ ಅವು ಚಡಪಡಿಸುತ್ತವೆ. ದಿನಗಳೆದಂತೆ ಬಿಗಿದ ಕೆಚ್ಚಲು ಬತ್ತಿಹೋಗುತ್ತದೆ. ಬರಡುತನದ ಬಳುವಳಿ ದೊರೆಯುತ್ತದೆ.

ಬಿ.ಪಿ.ವಿ. ಸೋಂಕಿನ ಸುಳಿಯಲ್ಲಿ ಸಿಕ್ಕ ದನಗಳ ಸಂಪರ್ಕಕ್ಕೆ ಬಂದ ಮನುಷ್ಯರಿಗೆ ದನಪಾಲಕರು, ಗಾಳಿಗಳಿಗೆ ಈ ಮೈಲಿಬೇನೆಯು ಉಡುಗೊರೆ ದೊರೆಯುತ್ತಿತ್ತು. ನಸಿನಸಿಜ್ವರ, ಮೈ ಕೈ ನೋವು, ತಲೆಸಿಡಿತ, ನಿರಾಸಕ್ತಿ, ನಿಶ್ಶಕ್ತಿ ನರ್ತಿಸುತ್ತಿದ್ದವು. ಮೈಲಿಬೇನೆಯಲ್ಲಿ ಕಾಣುತ್ತಿದ್ದಂತಹಗುಳ್ಳೆ ಮತ್ತು ಬೊಕ್ಕೆಗಳು ಕೈಗಳಲ್ಲಿ ಕಾಣುತ್ತಿದ್ದವು. ನೋವಿನ ನೆರಳು ನಲಿಯುತ್ತಿತ್ತು. ಸ್ಥಳೀಯ ದುಗ್ಧರಸ ಗ್ರಂಥಿಗಳು ಊದಿಕೊಳ್ಳುತ್ತಿದ್ದವು.

ಬಿತ್ತರಗೊಂಡ ಭೀಕರ ಸುದ್ದಿ :

ಪುಣೆಯಲ್ಲಿರುವ ರಾಷ್ಟ್ರೀಯ ವೈರಾಲಜಿ ಸಂಸ್ಥೆಯ ವಿಜ್ಞಾನಿಗಳು ಮಹಾರಾಷ್ಟ್ರದ ಬೀಡ್ ಜಿಲ್ಲೆಯಲ್ಲಿ ಇತ್ತೀಚೆಗೆ ಸ್ಫೋಟಗೊಂಡ ಈ ರೋಗದ ಸುತ್ತ ಗಸ್ತು ಹೊಡೆದಿದ್ದಾರೆ. ದನಗಳ ಸಮೀಪ ಸುಳಿಯದ ಐದು ಹಸುಗೂಸುಗಳಲ್ಲಿ ಬಿಪಿವಿ ರೋಗವನ್ನು ಪತ್ತೆಹಚ್ಚಿದ್ದಾರೆ. ಹೆತ್ತವರಿಂದಲೇ ಈ ಹಸುಗೂಸುಗಳಿಗೆ ಈ ರೋಗ ಹರಡಬಹುದೆಂಬ ಗುಮಾನಿ ವಿಜ್ಞಾನಿಗಳಲ್ಲಿ ಮೊಳಕೆಯೊಡೆಯಿತು. ಹೆತ್ತವರ ನೆತ್ತರ ಪರೀಕ್ಷೆ ಮಾಡಿ ಬೆಫೆಲೊ ಪಾಕ್ಸ್ ವೈರಸ್‌ನ್ನು ಬೇರ್ಪಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಇದೇ ಅವಧಿಯಲ್ಲಿ ಮಹಾರಾಷ್ಟ್ರದ ಮತ್ತೊಂದು ಜಿಲ್ಲೆಯಲ್ಲಿ ೫೮ ಬಿ. ಪಿ. ವಿ. ರೋಗಿಗಳು ಪತ್ತೆಯಾದರು. ಹನ್ನೆರಡು ತಿಂಗಳ ಕೂಸು ಮತ್ತು ಗರ್ಭಿಣಿ ಹೆಣ್ಣುಮಗಳು ಇದರಲ್ಲಿ ಸೇರಿದ್ದರು. ಹೆತ್ತವರಿಂದ ಕೂಸಿಗೆ ರೋಗದ ಕಾಣಿಕೆ ದೊರೆತಿರುವುದು, ಗಾಳಿ ಗಂಡನಿಂದ ಗರ್ಭಿಣಿಗೆ ರೋಗ ಹರಡಿರುವುದನ್ನು ವಿಜ್ಞಾನಿಗಳು ಪರೀಕ್ಷೆಯಿಂದ ಸಾದರಪಡಿಸಿದ್ದಾರೆ. ಹೀಗಾಗಿ ಮನುಷ್ಯರಿಂದ ಮನುಷ್ಯರಿಗೆ ರೋಗ ಹರಡುವ ಸಿದ್ಧಾಂತ ಗಟ್ಟಿಗೊಂಡಿದೆ.

ಎನ್. ಐ. ವಿ. (ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ವೈರಾಲಜಿ) ನಿರ್ದೇಶಕರಾದ ಡಾ॥ ಕಲ್ಯಾಣ ಬ್ಯಾನರ್ಜಿ—"ಈ ದೇಶದಲ್ಲಿ ಬಿ.ಪಿ.ವಿ. ಸೋಂಕು ಒಬ್ಬರಿಂದ ಇನ್ನೊಬ್ಬರಿಗೆ ಹರಡುವ ಸ್ಥಿತಿಯನ್ನು ಕಾಣುತ್ತಿದ್ದೇವೆ. ಭೀಕರ ಭವಿಷ್ಯ ಮುಂದೆ ಕಾದಿದೆಯೇನೋ" ಎಂದು ಎಚ್ಚರಿಕೆಯ ಗಂಟೆ

ಮೊಳಗಿಸಿದ್ದಾರೆ. ಇದನ್ನು ನಮ್ಮ ಆರೋಗ್ಯ ಇಲಾಖೆ ಉಪೇಕ್ಷಿಸಿದಲ್ಲಿ ನಮ್ಮ ಜಡತ್ವದ ಸದುಪಯೋಗ ಮಾಡಿಕೊಂಡು "ಹೋದೆಯಾ ಪಿಶಾಚಿ ಎಂದರೆ ಬಂದೆ ಗವಾಕ್ಷೀಲಿ" ಎಂಬಂತೆ ಮೈಲಿಬೇನೆ ಭಾರತದಲ್ಲಿ ಮರುಕಳಿಸೀತು; ಹೊಸ ಶಕ್ತಿಯೊಂದಿಗೆ, ಹೊಸವೇಷದೊಂದಿಗೆ.

ಡಾ॥ ಬ್ಯಾನರ್ಜಿಯವರ ಸಹೋದ್ಯೋಗಿಗಳ ಸಮೂಹ ಈಗಾಗಲೇ ಜನರ ರಸಿಕಾ (ಸೀರೋಲಜಿಕಲ್) ಸಮೀಕ್ಷೆಯನ್ನು ಮಾಡಿದೆ. ಸೋಂಕಿಗೆ ತುತ್ತಾದ ಮನುಜರಲ್ಲಿ ಪ್ರತಿಕಾಯಗಳನ್ನು ಪತ್ತೆ ಹಚ್ಚುವುದರ ಜೊತೆಗೆ, ಇವರ ಸಂಪರ್ಕಕ್ಕೆ ಬಂದ ಪ್ರತಿಶತ ೭೦ ಜನರಲ್ಲಿ ಮತ್ತು ರೋಗಿಗಳ ಅಥವಾ ರೋಗಿಷ್ಟ ದನಗಳ ಸಂಪರ್ಕಕ್ಕೆ ಬಂದ ಪ್ರತಿಶತ ೧೭ ಜನರಲ್ಲಿ ಬಿ. ಪಿ. ವಿ. ಪ್ರತಿಕಾಯಗಳು ಕಂಡುಬಂದಿದೆ. ಹೀಗಾಗಿ ಈ ರೋಗ ಬೂದಿ ಮುಚ್ಚಿದ ಕೆಂಡದ ಸ್ಥಿತಿಯಲ್ಲಿರುವುದು ಸ್ಪಟಿಕದಷ್ಟೇ ಸ್ಪಷ್ಟ. ಸಾರ್ವಜನಿಕರು ಈ ಸೋಂಕುಕಾರಕದ ಸಂಪರ್ಕಕ್ಕೆ ಬಂದಿಲ್ಲಾ ಒಂದು ರೀತಿಯಲ್ಲಿ ಬಂದಿದ್ದಾರೆ ಎಂದೇ ಇದರ ಅರ್ಥ." ಇದೊಂದು ಅಪಶಕುನ. ಈ ವೈರಸ್ ಮನುಷ್ಯರಿಗೆ ಮೇಲಿಂದ ಮೇಲೆ ಮುತ್ತಿಗೆ ಹಾಕಿ ಮಾರ್ಪಾಟು ಹೊಂದಿ ಉಗ್ರತೆಯನ್ನು ಮೈಗೂಡಿಕೊಂಡಲ್ಲಿ ಭೀಕರ ಭವಿಷ್ಯ ಬರಬಹುದು" ಎಂದು ಡಾ॥ ಬ್ಯಾನರ್ಜಿ ಹೇಳಿರುವುದು ಔಚಿತ್ಯಪೂರ್ಣವಾಗಿದೆ.

ಇತ್ತೀಚಿನ ದಿನಗಳಲ್ಲಿ ಎಮ್ಮೆಗಳಲ್ಲಿ ಈ ಮೈಲಿಬೇನೆಯ ಹಾವಳಿ ಹಾಹಾಕಾರ ಹೆಚ್ಚುತ್ತಿರುವುದು ವಿಜ್ಞಾನಿಗಳಿಗೆ ಹೆಚ್ಚು ಚಿಂತೆ ಮಾಡಹಚ್ಚಿದೆ. ದಂಶಕ್ ಪ್ರಾಣಿಗಳು ಈ ರೋಗಕಾರಕದ ಮೂಲವಾಗಿರುವ ವಿಷಯ ಬೆಳಕಿಗೆ ಬಂದಿದೆ. ಈ ಎರಡೂ ಅಂಶಗಳು ಮನುಷ್ಯರಿಗೆ ರೋಗ ಮುತ್ತುವುದಕ್ಕೆ ಹೆಚ್ಚು ಅವಕಾಶ ನೀಡುತ್ತಿವೆ. ಹೀಗಾಗಿ ಪ್ಲೇಗ್ ಸ್ಫೋಟದ ನಾಡಿನ ಜನರಿಗೆ ಮತ್ತೊಂದು ವಿಷಗಳಿಗೆ ಕಾದಿದೆ ಎಂಬುದರಲ್ಲಿ ಸಂಶಯವಿಲ್ಲ.

ಅಲಕ್ಷ್ಯದಿಂದ ಅಪಾಯ

ಈಗಲೂ ಕಾಲ ಮಿಂಚಿಲ್ಲ. ಪತ್ತೆಯಾದ ಪ್ರತಿಯೊಂದು ಮಾನವ ಪ್ರಕರಣಗಳಲ್ಲಿ ವೈರಸ್ ಅನ್ನು ಬೇರ್ಪಡಿಸಿ, ಕೂಲಂಕುಷವಾಗಿ ಪರೀಕ್ಷಿಸಬೇಕು. ಬದಲಾವಣೆ ಹೊಂದುತ್ತಿರುವುದನ್ನು, ರೂಪಾಂತರಗೊಳ್ಳುತ್ತಿರುವುದನ್ನು ಆಳವಾಗಿ ಅಧ್ಯಯನ ಮಾಡಬೇಕಾಗಿದೆ. ಅಲಕ್ಷಿಸಿದಲ್ಲಿ ಅಪಾಯಕ್ಕೆ ಆಹ್ವಾನ ನೀಡಿದಂತೆ ಎಂದು ಎನ್.ಐ.ವಿ.ಯ ಹಿಂದಿನ ನಿರ್ದೇಶಕರಾದ ಡಾ॥ ಗುಪ್ತಾ ಹೇಳಿದ್ದಾರೆ.

ಮೂವತ್ತೈದು ವರ್ಷಗಳ ಹಿಂದೆ ಹಿಸ್ಸಾರ ಮತ್ತು ಹರಿಯಾಣಗಳಲ್ಲಿ ಕಾಣಿಸಿಕೊಂಡ ಮೂಲ ತಳಿಗಿಂತ ಭಿನ್ನವಾದ ಜೀನೋಮ್‌ನ್ನು ಈಗ ಮಹಾರಾಷ್ಟ್ರದಲ್ಲಿ ಹಾವಳಿ ಎಬ್ಬಿಸಿರುವ ವೈರಸ್ ಹೊಂದಿರುವುದು ಆಳವಾದ ಅಧ್ಯಯನದಿಂದ ತಿಳಿದು ಬಂದಿದೆ ಎಂದು ಹೇಳಿರುವ ಡಾ॥ ಬ್ಯಾನರ್ಜಿ ಮಾನವರಿಂದ ಮೂರು ತಳಿಗಳನ್ನು ಜಾನುವಾರುಗಳಿಂದ ಏಳು ತಳಿಗಳ ವೈರಸ್‌ಗಳನ್ನು ಪ್ರತ್ಯೇಕಿಸಿರುವ ವಿವರವಾದ ವರದಿಯನ್ನು ವಿಶ್ವ ಆರೋಗ್ಯ ಸಂಸ್ಥೆಗೆ ಸಲ್ಲಿಸಿದ್ದಾರೆ.

ಮಹಾರಾಷ್ಟ್ರದಲ್ಲಿ ಇತ್ತೀಚೆಗೆ ಸ್ಫೋಟಗೊಂಡ ಬಿ.ಪಿ.ವಿ. ಸೋಂಕು ಜನರಿಗೆ ದೀರ್ಘಕಾಲಿಕ ಬಳಲಿಕೆ, ತಾಳಲಸಾಧ್ಯವಾದ ತೊಡಕು ತೊಂದರೆಗಳನ್ನು ನೀಡಿದೆ. ಬಿ.ಪಿ.ವಿ.ಗೆ ಬಲಿಯಾದವರು ೧೦೪°F ಯಷ್ಟು ಜ್ವರದಿಂದ ತತ್ತರಿಸಿರುವರು. ಹಿಂದೆ ಒಂದೆರಡು ಬೊಕ್ಕೆಗಳ ಕಾಣಿಕೆ ನೀಡುತ್ತಿದ್ದ ಕಾಯಿಲೆ, ಈಸಾರೆ ಸಾಕಷ್ಟು ಗುಳ್ಳೆ, ಬೊಕ್ಕೆಗಳ ಕೊಟ್ಟಿತ್ತು. ೧೯೯೭ರಲ್ಲಿ ಈ ಸೋಂಕು ಸೌಮ್ಯ ಸ್ವರೂಪದ್ದಿತ್ತು. ಇದರ ಬಾಹುಬಂಧನದಲ್ಲಿ ಬಂಧಿತರಾದವರು ವಾರದಲ್ಲಿ ಗುಣಮುಖರಾಗುತ್ತಿದ್ದರು. ಇವೆಲ್ಲವುಗಳನ್ನು ಪರಿಶೀಲಿಸಿದಾಗ "ಬಿ.ಪಿ.ವಿ. ಈಗಾಗಲೇ ಉಗ್ರತೆಯ ಉಡುಪು ತೊಟ್ಟಿದೆ" ಎಂದು ದೆಹಲಿಯಲ್ಲಿರುವ ರಾಷ್ಟ್ರೀಯ ಸಾಂಕ್ರಾಮಿಕ ರೋಗಗಳ ಸಂಸ್ಥೆಯ ನಿರ್ದೇಶಕರಾದ ಡಾ|| ಕೃಷ್ಣಕುಮಾರ ದತ್ತಾ ಹೇಳಿದ್ದಾರೆ. ಮೈಲಿಬೇನೆಗೆ ನೀಡುತ್ತಿದ್ದ ಲಸಿಕೆಯಿಂದ ಈ ರೋಗದಿಂದ ರಕ್ಷಣೆ ಪಡೆಯಲು ಸಾಧ್ಯವಿಲ್ಲ ಎಂದು ಡಾ|| ಬ್ಯಾನರ್ಜಿ ಸ್ಪಷ್ಟಪಡಿಸಿದ್ದಾರೆ.

ಗಡ್ಡಕ್ಕೆ ಬೆಂಕಿಬಿದ್ದಾಗ ಬಾವಿತೋಡಲು ಓಡಾಡುವ ನಾವು ಈಗ ಎಚ್ಚರಗೊಳ್ಳದೇ ವಿಧಿಯಿಲ್ಲ. ನಮ್ಮನ್ನಾಳುವ ಪ್ರಭುಗಳಿಗೆ ಜನರ ಜೀವದ ಬೆಲೆಗೊತ್ತಿಲ್ಲ. ಬೇರೆಯವರ ಮನೆಗೆ ಬೆಂಕಿಬಿದ್ದಾಗ ಬೆಚ್ಚಗಿರಲು ಯತ್ನಿಸುವ ಹುಚ್ಚು ಹವ್ಯಾಸಗಳನ್ನು ಇಂದೇ ಬಿಟ್ಟುಕೊಡಬೇಕು. ಎಲ್ಲ ರಾಜ್ಯದವರೂ ಸಮರೋಪಾದಿಯಲ್ಲಿ ಸಜ್ಜಾಗಿ ಸೊಡ್ಡು ಹೊಡೆಯಬೇಕು. ಪ್ರತಿಬಂಧಕೋಪಾಯಗಳನ್ನು ಗುರುತಿಸಿ, ಅವುಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಕ್ಕೆ ತರಬೇಕು. ಇಲ್ಲದಿದ್ದಲ್ಲಿ ಮಾರುವೇಷದ ಈ ಮೈಲಿಬೇನೆ ಮನುಕುಲಕ್ಕೆ ಮಾರಿಯಾದೀತು ; ಭವಿಷ್ಯ ಭಯಾನಕವಾಗಿರುತ್ತದೆ ! ಭೀಕರವಾಗಿರುತ್ತದೆ. ಆ ಕೆಟ್ಟದಿನಗಳು ಭಾರತೀಯರಿಂದ ಸೃಷ್ಟಿಯಾಗುವದು ಬೇಡ !!

ಕುಡಿದೌಷಧಂ ಬಾಯ್ಗೆ ಕಹಿಯಾದೊಡಂ ಒಡಲ ನಿಗ್ರಹಂ ಮಾಳ್ಪುದು.

—ರಾಘವಾಂಕ

ರೋಗಪಾಸಿಗೆ ಕಹಿ ಔಷಧ ಮೆಲ್ಲಲೇ ಬೇಕಾಗುವುದು. ಗುಣಕಾರಿಯೂ ಸಿಹಿಯೂ ಆದ ಔಷಧವನ್ನೇ ಅರಸಿದರೆ ದೊರಕೀತೆ ?

—ಜಾಣ್ನುಡಿ

ಸಂಕೋಲೆಯಲ್ಲೊಂದು ದೇಶ

ಜಿ. ಕುಮಾರಪ್ಪ
ಸಹಾಯಕ ಮಾಹಿತಿ ಅಧಿಕಾರಿ
ಕನ್ನಡ ವಿಭಾಗ, ರಾಷ್ಟ್ರೀಯ ಗ್ರಂಥಾಲಯ
ಕಲ್ಕತ್ತಾ–೭೦೦ ೦೨೭

ಬರ್ಮಾದ ಆಗ್ನೇಯ ದಿಕ್ಕಿನ ಪರ್ವತ ಪ್ರದೇಶದಲ್ಲಿ ವಾಸಿಸುತ್ತಿರುವ ಪಾರ್ ಪ್ಯಾನಿಗೆ ಬೇರೆ ದಾರಿಯೇ ಇರಲಿಲ್ಲ. ಆ ದೇಶದ ಸೈನ್ಯದ ಆದೇಶದಂತೆ ಅವನು ಪರ್ವತದ ದಾರಿಯಲ್ಲಿ ಅವರ ಸಾಮಾನು ಸರಂಜಾಮುಗಳನ್ನು ಕೊಂಡೊಯ್ಯಬೇಕಾಗುತ್ತಿತ್ತು. ಇಪ್ಪತ್ತೆಂಟು ವರ್ಷದ ಪಾರ್ ಪ್ಯಾ ಮತ್ತು ಅವನಂತೆಯೆ ದರಿದ್ರರಾಗಿದ್ದ ಅಲ್ಲಿನ ಕೃಷಿಕರು ಸೈನ್ಯದ ಆದೇಶದಂತೆ ರಸ್ತೆಗೆ ಹರಡುವ ನುರುಜುಗಲ್ಲನ್ನು ಅಗೆದು ಕೊಡಬೇಕಾಗುತ್ತಿತ್ತು.

ಕಳೆದ ಜನವರಿ ತಿಂಗಳಿನಲ್ಲಿ ಅವನ ಎಂಟು ತಿಂಗಳ ಮಗಳು ಕಾಯಿಲೆ ಬಿದ್ದಳು. "ಇದಕ್ಕಾಗಿ ನನಗೆ ಕೆಲವು ದಿನಗಳ ರಜೆಯನ್ನು ಅವರು ಖಂಡಿತ ಕೊಡುತ್ತಾರೆ" ಎಂದು ತನ್ನ ಹೆಂಡತಿಗೆ ಅವನು ಹೇಳಿದ.

ಆ ದಿನ ಸಂಜೆ ಹತ್ತು ಜನ ಸೈನಿಕರು ಅವನ ಹಳ್ಳಿಗೆ ಬಂದರು. ಪಾರ್ ಪ್ಯಾ ಸೈನಿಕರ ಮುಖ್ಯಸ್ಥನ ಬಳಿ ರಜೆ ಕೇಳಲು ಹೋದನು. ಅವನ ಅಹವಾಲನ್ನು ಕೇಳುತ್ತಿದ್ದಂತೆಯೇ ಒಬ್ಬ ಸೈನಿಕ, ಯಾವ ಎಚ್ಚರಿಕೆಯನ್ನು ನೀಡದೆ, ತನ್ನ ಬಂದೂಕನ್ನೆತ್ತಿ ಗುಂಡು ಹಾರಿಸಿಯೇ ಬಿಟ್ಟ. ತನ್ನ ಮೂವರು ಮಕ್ಕಳೊಂದಿಗೆ ಇದೆಲ್ಲವನ್ನು ನೋಡುತ್ತಿದ್ದ ಪಾರ್ ಪ್ಯಾನ ಹೆಂಡತಿ ಭೀತಳಾಗಿ ಮಕ್ಕಳೊಂದಿಗೆ ಕಾಡನ್ನು ಸೇರಿದಳು.

ಪಾರ್ ಪ್ಯಾ ಮತ್ತು ಅವನ ಕುಟುಂಬಕ್ಕೆ ಒದಗಿದ ಇಂತಹ ದುಃಸ್ಥಿತಿ ಬರ್ಮಾದ ತುಂಬೆಲ್ಲಾ ಘಟಿಸುತ್ತಲೇ ಇದೆ. ದೇಶದ ಮೂಲೆ ಮೂಲೆಗಳಿಂದ, ಜನರನ್ನು-ಅವರ ಮನೆಗಳಿಂದ, ರಸ್ತೆಯಲ್ಲಿ ನಡೆದಾಡುತ್ತಿರುವಾಗ, ಬಸ್ಸುಗಳಲ್ಲಿ ಪ್ರಯಾಣಿಸುವಾಗ— ಬರ್ಮೀಸ್ ಪೊಲೀಸರು ಮತ್ತು ಸೈನಿಕರು ಎಳೆದುಕೊಂಡು ಹೋಗಿದ್ದಾರೆ. ಹೀಗೆ ಎಳೆದುಕೊಂಡು ಹೋದ ಜನರಲ್ಲಿ ಬಹುಪಾಲು ಜನರನ್ನು ಒತ್ತಾಯದ ಶ್ರಮಕ್ಕೆ ದೂಡಲಾಗಿದೆ. ಹೀಗೆ ಶೋಷಿಸುತ್ತಿರುವುದು ರಾಜ್ಯ ಶಾಂತಿ ಮತ್ತು ಅಭಿವೃದ್ಧಿ ಮಂಡಳಿ ಎನ್ನುವ ಹೆಸರಿನ ಸಂಘಟನೆ. ಇದು ಬರ್ಮಾದ ಸೈನಿಕ ಸರ್ವಾಧಿಕಾರಿ ಶಕ್ತಿಯ ಸಂಘಟನೆ. ಈ ಸಂಘಟನೆಯ ಹಿಂಸೆ ಮತ್ತು ಶೋಷಣೆಯಿಂದಾಗಿ ಸಾವಿರಾರು ಜನರು ಸಾವನ್ನಪ್ಪಿದ್ದಾರೆ.

೧೯೯೧ರ ಜನವರಿಯ 'ರೀಡರ್ಸ್ ಡೈಜೆಸ್ಟ್' ಪತ್ರಿಕೆಯಲ್ಲಿ ಪ್ರಕಟವಾದ ಬ್ರಿಯಾನ್ ಎಡ್ಸ್ ಅವರ "ಎ ನೇಷನ್ ಇನ್ ಚೈನ್ಸ್" ಎಂಬ ಲೇಖನದ ಅನುವಾದ.

ಈಗ ಒಂಬತ್ತು ವರ್ಷಗಳಿಂದ ನಿರಂಕುಶಾಧಿಕಾರ ನಡೆಸುತ್ತಿರುವ ಈ ಸರ್ವಾಧಿಕಾರಿ ಸಂಘಟನೆ, ಬರ್ಮಾದ ಒಟ್ಟು ನಾಲ್ಕೂವರೆ ಕೋಟಿ ಜನರಲ್ಲಿ ಶೇ. ೬೦ ರಷ್ಟು ಜನರನ್ನು ಯಾವುದೇ ಪ್ರತಿಫಲ ನೀಡದೆ ದುಡಿಸಿಕೊಳ್ಳುತ್ತಿದೆ. ಕೆಲವೊಮ್ಮೆ ಬಂದೂಕಿನ ಬೆದರಿಕೆಯಿಂದ ಕೆಲಸ ಮಾಡಿಸಿಕೊಂಡರೆ, ಮತ್ತೆ ಕೆಲವೊಮ್ಮೆ ಅವರನ್ನು ಸರಪಳಿ ಬಿಗಿದು ಕೆಲಸ ಮಾಡಿಸಿಕೊಳ್ಳುತ್ತಿದೆ. ಇಂಥ ಶೋಷಿತ ಜನರು ದೇಶಾದ್ಯಂತ ರಸ್ತೆಗಳು, ರೈಲು ಮಾರ್ಗ, ಅಣೆಕಟ್ಟು, ವಿಮಾನ ನಿಲ್ದಾಣ, ಇತ್ಯಾದಿಗಳನ್ನು ಕಟ್ಟುತ್ತಿದ್ದಾರೆ ಎಂದು ಏಷಿಯಾದ ಮಾನವಾಧಿಕಾರ ಸಂಘಟನೆಯು ಹೇಳಿದೆ.

ಅನೇಕ ದಶಕಗಳವರೆಗೆ ಆಳಿದ ನೆವಿನ್‌ನ ನಿರಂಕುಶಾಧಿಕಾರದಿಂದ ಬೇಸತ್ತ ಜನರು ಬದಲಾವಣೆಗಾಗಿ ೧೯೮೮ರಲ್ಲಿ ರಂಗೂನ್‌ನಲ್ಲಿ ಅತಿ ದೊಡ್ಡ ಪ್ರದರ್ಶನ ನಡೆಸಿದರು. ಈ ಪ್ರದರ್ಶನಕಾರರ ಮೇಲೆ ಸೈನ್ಯ ಹಲ್ಲೆ ನಡೆಸಿತು. ಸುಮಾರು ೩೦೦೦ ಜನರು ಸಾವನ್ನಪ್ಪಿದರು. ಕೊನೆಗೆ ಸೈನ್ಯದ ಹಿರಿಯ ಅಧಿಕಾರಿಗಳು ಆಡಳಿತವನ್ನು ತಮ್ಮ ಕೈಗೆ ತೆಗೆದುಕೊಂಡರು.

ತಮ್ಮ ಆಡಳಿತವನ್ನು ಅಧಿಕೃತಗೊಳಿಸಲಿಕ್ಕಾಗಿ ಅವರು ಮೇ ೧೯೯೦ರಲ್ಲಿ ಬಹು ಪಕ್ಷಗಳ ಸಾರ್ವತ್ರಿಕ ಚುನಾವಣೆ ನಡೆಸಿದರು. ಆದರೆ ಜನತೆ ಈ ಚುನಾವಣೆಯಲ್ಲಿ ಸೈನ್ಯದ ಪರವಾಗಿ ನಿಂತಿದ್ದ ಅಭ್ಯರ್ಥಿಗಳನ್ನು ಬಹುಮತಗಳಿಂದ ಸೋಲಿಸಿತು. ಆದರೆ, ರಾಜ್ಯ ಶಾಂತಿ ಮತ್ತು ಅಭಿವೃದ್ಧಿ ಮಂಡಳಿಯು ಚುನಾವಣೆಯನ್ನು ಅನೂರ್ಜಿತಗೊಳಿಸಿತು. ಸೈನಿಕರ ಸಂಖ್ಯೆಯನ್ನು ಇಮ್ಮಡಿಗೊಳಿಸಿ ನಾಲ್ಕು ಲಕ್ಷಕ್ಕೆ ಏರಿಸಿತು.

"ರೈಲು ಮಾರ್ಗ, ರಸ್ತೆ, ಇತ್ಯಾದಿಗಳ ನಿರ್ಮಾಣಕ್ಕೆ ಒತ್ತಾಯದ ದುಡಿಮೆ ಅತ್ಯಾವಶ್ಯಕ. ಇದರಿಂದ ದೇಶವನ್ನು ನಿಯಂತ್ರಣದಲ್ಲಿ ಇರಿಸಿಕೊಳ್ಳುವುದು ಸುಲಭ. ಅಲ್ಲದೇ ವಿದೇಶಿ ಬಂಡವಾಳಗಾರರನ್ನು ಇದರಿಂದ ಆಕರ್ಷಿಸಬಹುದು" ಎನ್ನುವುದು ಸೈನ್ಯ ಸರ್ವಾಧಿಕಾರದ ವಾದ.

ಮಾಂಡಲೆಯಲ್ಲಿ ಅರಮನೆಯ ಸುತ್ತ ೧೦ ಅಡಿ ಆಳ ೧೦ ಕಿ.ಮೀ. ಸುತ್ತಳತೆಯ ಕಂದಕವನ್ನು ಹೀಗೆ ಒತ್ತಾಯದ ದುಡಿಮೆಯಿಂದ ತೆಗೆಸಲಾಯಿತು. ಇದಕ್ಕಾಗಿ ಸಾವಿರಾರು ಜನ ನಾಗರಿಕರು, ನೂರಾರು ಜನ ಖೈದಿಗಳು ಒಂದು ವರ್ಷ ಪೂರ್ತಿ ಯಾವ ಪ್ರತಿಫಲವೂ ಇಲ್ಲದೆ ದುಡಿದರು. ಹಾಗೆಯೇ ಸಿತ್‌ವೇ ನಗರದಲ್ಲಿ ಪ್ರವಾಸೋದ್ಯಮ ಮಂತ್ರಿಯ ಮಗನಿಗಾಗಿ ಒಂದು ಹೋಟೆಲನ್ನು ಕಟ್ಟಿಸಲಾಯಿತು. ಇನ್ನೊಂದೆಡೆ ಕಡಲ ತೀರಲ್ಲಿ ವಿಹಾರ ಸ್ಥಳಕ್ಕೆ ಹಲವಾರು ಕಿ.ಮೀ.ಗಳ ರಸ್ತೆಯನ್ನು ಹತ್ತಿರದ ಹಳ್ಳಿಗರಿಂದ ಮಾಡಿಸಲಾಯಿತು.

ರಂಗೂನ್ ನಗರವನ್ನು ಸುಂದರಗೊಳಿಸಲಿಕ್ಕಾಗಿ ಐದು ಲಕ್ಷ ಜನರನ್ನು ನಗರ ಕೇಂದ್ರದಿಂದ ನಗರದ ಹೊರಭಾಗಕ್ಕೆ ದಬ್ಬಲಾಯಿತು. ರಂಗೂನಿನ ಕೇಂದ್ರದಲ್ಲಿದ್ದ ಸ್ಮಶಾನವನ್ನು ಅವರು ಬಿಟ್ಟಿಲ್ಲ. ನಾನು ಕಳೆದ ವರ್ಷ ಆ ನಗರಕ್ಕೆ ಭೇಟಿ ಕೊಟ್ಟಾಗ ಅಲ್ಲಿನ ದೃಶ್ಯ ಸ್ಮಶಾನ ಸದೃಶವಾಗಿತ್ತು. ಎಲ್ಲೆಲ್ಲೂ ಅಗೆದ ಗೋರಿಗಳು. ಮುರಿದು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ಗೋರಿಕಲ್ಲುಗಳು. ಇಲ್ಲಿ ಹೊಸ ಬಡಾವಣೆಗಳು ಏಳತ

ತ್ತಿವೆ. ಈ ಬಡಾವಣೆಗಳನ್ನು ಕಟ್ಟುವ ಡೆವಲಪರ್‌ಗಳಲ್ಲಿ ಒಬ್ಬ ಖುನ್ ಸಾ. ಅವನೊಬ್ಬ ಖದೀಮ, ಮಾದಕ ವಸ್ತುಗಳ ಸಾಗಾಣಿಕೆ ದಾರ.

ಎಲ್ಲ ಬಗೆಯ ಭಯವನ್ನು ಒಡ್ಡಿ ಸೈನ್ಯ ಒತ್ತಾಯದ ದುಡಿಮೆಗಾಗಿ ಜನರನ್ನು ಹಚ್ಚಿದೆ. "ನಿನ್ನ ಜನರು ಕೆಲಸಕ್ಕೆ ಬರದಿದ್ದಲ್ಲಿ ಬಂದೂಕಿನ ಗುಂಡುಗಳು ನಿನ್ನನ್ನು ಹುಡುಕಿಕೊಂಡು ಬರುತ್ತವೆ" ಎನ್ನುವ ಅರ್ಥದ ಕರಪತ್ರಗಳನ್ನು ಹಳ್ಳಿಯ ಮುಖ್ಯಸ್ಥರಿಗೆ ಪ್ರಾದೇಶಿಕ ಸೈನ್ಯದ ಅಧಿಕಾರಿಗಳು ಕಳುಹಿಸಿಕೊಡುತ್ತಾರೆ.

ತಲೆಯ ಮೇಲೆ ಸರಕನ್ನು ಕೊಂಡೊಯ್ಯುವ ಹಮಾಲರಿಗೆ ಹಣದ ರೂಪದಲ್ಲಿ ಏನನ್ನೂ ನೀಡುವುದಿಲ್ಲ. ಕೊಟ್ಟರೆ ಒಂದಿಷ್ಟು ಆಹಾರ ಮಾತ್ರ. ಹೀಗಾಗಿ ಇಂಥ ಕೆಲಸಗಾರರು ಬದುಕಿ ಉಳಿಯುವುದೇ ಕಷ್ಟ. ಬದುಕಿ ಉಳಿದವರು ಹೇಳುವಂತೆ, ಬಂದೂಕಿನ ತುದಿಯಿಂದ ಇಲ್ಲವೇ ಉರಿವ ಸಿಗರೇಟಿನಿಂದ ಅವರೆಲ್ಲರನ್ನೂ ಹಿಂಸೆಗೆ ಒಳಪಡಿಸಲಾಗುತ್ತಿತ್ತು. ಸೈನಿಕರಿಂದ ಅತ್ಯಾಚಾರಕ್ಕೆ ಒಳಗಾದ ವಿವರಗಳನ್ನು ಇಲ್ಲಿನ ಹೆಂಗಸರು ಹೇಳುತ್ತಾರೆ. ಹಳ್ಳಿಗರು ತಪ್ಪಿಸಿಕೊಂಡು ಹೋಗದಿರುವಂತೆ ಎಲ್ಲರನ್ನೂ ಒಂದೆಡೆ ಕೂಡಿಹಾಕಿ ಕಾವಲು ಕಾಯಲಾಗುತ್ತದೆ. ಸರ್ವಾಧಿಕಾರಿಗಳನ್ನು ವಿರೋಧಿಸುವ ಗುಂಪುಗಳು ನೆಲದಲ್ಲಿ ಹೂಳಿಟ್ಟ ಸ್ಫೋಟಕಗಳು ಸಿಡಿಯುವಂತೆ ಮಾಡಲು ಸೈನ್ಯ ತನ್ನ ಮುಂದೆ ಹಮಾಲರು ನಡೆಯುವಂತೆ ಮಾಡುತ್ತದೆ.

ಒತ್ತಾಯದ ದುಡಿಮೆ ತಪ್ಪಿಸಿಕೊಳ್ಳಲು ಇರುವ ಒಂದೇ ಒಂದು ಮಾರ್ಗ ಎಂದರೆ ಇದಕ್ಕಾಗಿ ವಿಧಿಸಿದ ಟ್ಯಾಕ್ಸ್ ನೀಡುವುದು. "ತೆರಿಗೆ ನೀಡು ಇಲ್ಲವೆ ಪುಕ್ಕಟೆ ದುಡಿ, ಇಲ್ಲವೇ ಓಡಿ ಹೋಗು" ಬರ್ಮಾದ ಜನರಿಗೆ ಇರುವುದು ಈ ಮೂರೇ ಮಾರ್ಗಗಳು. ಹೀಗಾಗಿ ಥಾಯ್ ಗಡಿಯಲ್ಲಿನ ನಿರಾಶ್ರಿತರ ಶಿಬಿರಗಳಿಗೆ ಜನರು ಧಾವಿಸಿಬರುತ್ತಿದ್ದಾರೆ. ಜನರಲ್ಲಿ ಸ್ವಾತಂತ್ರ್ಯದ ಬಯಕೆಯನ್ನು ಹತ್ತಿಕ್ಕಲು ಸೈನ್ಯ ಸದಾ ಅವರನ್ನು ದುಡಿಮೆಯಲ್ಲಿ ತೊಡಗಿಸುತ್ತದೆ. ಅಥವಾ ಸಾವಿರಗಟ್ಟಲೆ ಹಳ್ಳಿಗರನ್ನು ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸುತ್ತಿರುತ್ತದೆ. ವಿಶ್ವಸಂಸ್ಥೆಯ ಮಾನವಾಧಿಕಾರ ಸಂಘಟನೆಯ ಅಂದಾಜಿನಂತೆ, ೧೯೯೬ರಲ್ಲಿ ಆರು ನೂರು ಹಳ್ಳಿಗಳ ಸುಮಾರು ಒಂದು ಲಕ್ಷ ಜನರನ್ನು ಹೀಗೆ ಸ್ಥಳಾಂತರ ಮಾಡಲಾಗಿದೆ—ಇದೂ ಶಾನ್ ಎನ್ನುವ ಒಂದು ರಾಜ್ಯದಲ್ಲಿ ಮಾತ್ರ. ಆದುದರಿಂದ ಸಾವಿರ ಸಾವಿರ ಸಂಖ್ಯೆಯಲ್ಲಿ ಜನರು ನಿರಾಶ್ರಿತರ ರೂಪದಲ್ಲಿ ನೆರೆಯ ದೇಶಗಳಾದ ಬಾಂಗ್ಲಾದೇಶ, ಭಾರತ ಮತ್ತು ಥಾಯ್‌ಲ್ಯಾಂಡ್‌ಗಳಿಗೆ ಬರುತ್ತಿದ್ದಾರೆ.

ಗಾಯಕ್ಕೆ ಉಪ್ಪನ್ನು ಹಚ್ಚುವಂತೆ ಸೈನ್ಯದಲ್ಲಿ ಲಂಚ ತುಂಬಿ ತುಳುಕುತ್ತಿದೆ. ಸೈನ್ಯಾಧಿಕಾರಿಗಳು ತಮ್ಮ ಸ್ವಂತಕ್ಕಾಗಿ ಇಲ್ಲವೇ ತಮ್ಮ ರೆಜಿಮೆಂಟಿಗಾಗಿ ವ್ಯವಸಾಯ ಮಾಡುತ್ತಿರುವ ಜಮೀನನ್ನು ವಶಪಡಿಸಿಕೊಳ್ಳುತ್ತಾರೆ ಮತ್ತು ಅಲ್ಲಿನ ರೈತರನ್ನು ಒತ್ತಾಯದ ದುಡಿಮೆಗೆ ಹಚ್ಚುತ್ತಾರೆ. ಮಾಂಡಲೆಯ ಸುತ್ತ ಮುತ್ತ ಕಳೆದ ಆರೇಳು ವರ್ಷಗಳಲ್ಲಿ ಹನ್ನೆರಡು ಸಾವಿರಕ್ಕೂ ಹೆಚ್ಚು ಹೆಕ್ಟೇರು ಜಮೀನನ್ನು ಹೀಗೆ ವಶಪಡಿಸಿಕೊಳ್ಳಲಾಗಿದೆ. ಅಲ್ಲಿನ ಜನ ತಮ್ಮ ಪ್ರಭುಗಳಿಗಾಗಿ ತಮ್ಮದೇ ಹೊಲಗಳಲ್ಲಿ ಒಂದಿಷ್ಟು ಊಟಕ್ಕಾಗಿ ದುಡಿಯುತ್ತಿದ್ದಾರೆ. . . . . ✽

ಸೈನ್ಯದ ಸರ್ವಾಧಿಕಾರ ಆರಂಭವಾದ ಮೇಲೆ ಬರ್ಮಾದಲ್ಲಿ ಅಫೀಮು ಬೆಳೆಯುವುದು ಎರಡು ಪಟ್ಟು ಹೆಚ್ಚಾಗಿದೆ.

ಸಕ್ಕರೆ ಕಾರ್ಖಾನೆ ಮತ್ತು ವಿದ್ಯುಚ್ಛಕ್ತಿ ಉತ್ಪಾದನೆ, ಸೈನ್ಯಾಧಿಕಾರಿಗಳಿಗೆ ಹಣ ಮಾಡುವ ಇತರ ಎರಡು ದಾರಿಗಳು. ವಿದ್ಯುತ್ತನ್ನು ನೆರೆಯ ರಾಜ್ಯ ಥಾಯ್‌ಲ್ಯಾಂಡ್‌ಗೆ ಮಾರಲಾಗುತ್ತಿದೆ. ಇದರ ಲಾಭ ಸೈನ್ಯದ ಸರ್ವಾಧಿಕಾರಿಗಳಿಗೆ. "ಕ್ಯಾಪ್ಟನ್‌ಗಿಂತ ಮೇಲ್ದರ್ಜೆಯ ಸೈನ್ಯಾಧಿಕಾರಿಗಳೆಲ್ಲರೂ ದಿನದಿಂದ ದಿನಕ್ಕೆ ಶ್ರೀಮಂತರಾಗುತ್ತಿದ್ದಾರೆ. ಅವರಿಗೆ ಯಾವುದೇ ಕಾನೂನು ಅನ್ವಯಿಸದು. ಅವರು ಏನು ಬೇಕಾದರೂ ಮಾಡಬಲ್ಲರು" ಎಂದು ಒಬ್ಬ ಕ್ರೈಸ್ತ ಮಿಷನರಿ ನನಗೆ ಹೇಳಿದರು.

೧೯೯೬ರ ಜನವರಿಯಲ್ಲಿ ಪ್ರಸಿದ್ಧ ಹಾಸ್ಯ ನಟನೊಬ್ಬನನ್ನು ಬಂಧಿಸಲಾಯಿತು. ಕಾರಣ ಅವನೊಂದು ಜೋಕ್ ಹೇಳುತ್ತಿದ್ದ. "ಹಿಂದಿನ ಕಾಲದಲ್ಲಿ ಕಳ್ಳರನ್ನು ಕಳ್ಳರು ಎಂದು ಕರೆಯುಲಾಗುತ್ತಿತ್ತು. ಈಗ ಅವರನ್ನು ಸರಕಾರಿ ಅಧಿಕಾರಿಗಳು ಎಂದು ಕರೆಯಲಾಗುತ್ತಿದೆ." ಇದೇ ಅಪರಾಧ. ಸುಳ್ಳು ಸುದ್ದಿ ಹರಡುತ್ತಿದ್ದುದಕ್ಕಾಗಿ ಶಿಕ್ಷೆ. ಕೇವಲ ಏಳು ವರ್ಷಗಳ ಕಠಿಣ ಶಿಕ್ಷೆ. ಕಾಲಿಗೆ ಸಂಕೋಲೆ.

ದೇಶದಲ್ಲಿ ಒಟ್ಟು ಒಂಬತ್ತು ಲೇಬರ್ ಕ್ಯಾಂಪ್‌ಗಳಿವೆ. ಈ ಕ್ಯಾಂಪ್‌ಗಳಿಗೆ ಶಿಕ್ಷೆ ಅನುಭವಿಸಲು ಬಂದ ಎಷ್ಟೋ ಜನರು ಹಿಂತಿರುಗುವುದೇ ಇಲ್ಲ. ಅಮ್ನೆಸ್ಟಿ ಇಂಟರ್‌ನ್ಯಾಷನಲ್ ಅವರ ಪ್ರಕಾರ ಹೀಗೆ ಸತ್ತವರ ಸಂಖ್ಯೆ ೧೩೦೦.

ಒತ್ತಾಯದ ದುಡಿಮೆಯಲ್ಲಿ ಮಕ್ಕಳನ್ನು ಹೀನಾಯವಾಗಿ ದುಡಿಸಿಕೊಳ್ಳಲಾಗುತ್ತಿದೆ. ರೈಲ್ವೆ ಹಳಿಗಳನ್ನು ಹಾಕುವ ಒಂದೆಡೆ ನೂರು ಮಕ್ಕಳು ನರಕಸದೃಶ ವಾತಾವರಣದಲ್ಲಿ ಕೆಲಸ ಮಾಡುತ್ತಿದ್ದಾರೆ.

ಸರಕಾರದ ಹೇಳಿಕೆ ಪ್ರಕಾರ ಇಂತಹ ಒತ್ತಾಯದ ದುಡಿಮೆಜನರು ಸ್ವಇಚ್ಛೆಯಿಂದ ಮಾಡುತ್ತಿರುವ ದುಡಿಮೆಯಾಗಿದೆ. ಸರಕಾರದ ಪ್ರಕಟಣೆಯಂತೆಯೇ ಇಂತಹ ಸೇವಾಕರ್ತರ ಸಂಖ್ಯೆ ರೈಲ್ವೆಹಳಿ ಹಾಕಲು ಮೂರು ಲಕ್ಷ ಜನರೂ, ಬೇರೊಂದೆಡೆ ಒಂಬತ್ತು ಲಕ್ಷ ಜನರೂ ಸೇವೆ ನೀಡುತ್ತಿದ್ದಾರೆ. ಜಿನಿವಾದಲ್ಲಿರುವ ವಿಶ್ವಸಂಸ್ಥೆಯ ಬರ್ಮಾ ಪ್ರತಿನಿಧಿ ಹೇಳುವಂತೆ ಜನರು ಹೀಗೆ ಸೇವೆ ಸಲ್ಲಿಸುವುದರಿಂದ "ಅವರಲ್ಲಿ ಮಾನಸಿಕ ಮತ್ತು ದೈಹಿಕ ಸದೃಢತೆ ಬರುತ್ತದೆ." ಆದರೆ ಬಹುಪಾಲು ರೈಲ್ವೆ ಅಧಿಕಾರಿಗಳೇ ಇದನ್ನು ಒಪ್ಪುತ್ತಿಲ್ಲ. ಅವರ ಪ್ರಕಾರ ಇದೆಲ್ಲ ಬೆದರಿಕೆಯಿಂದ ಮಾಡಿಸಿಕೊಳ್ಳುತ್ತಿರುವ ಶ್ರಮ. ಇಲ್ಲೆಲ್ಲ ಮೂಲಭೂತ ಅವಶ್ಯಕತೆಗಳಾದ ಆಹಾರ, ವಸತಿ, ವೈದ್ಯಕೀಯ ಸೌಲಭ್ಯಗಳು ನಗಣ್ಯವಾಗಿವೆ.

ಜನರನ್ನು ಹೀಗೆ ಅತ್ಯಾಚಾರಕ್ಕೆ ಒಳಪಡಿಸುತ್ತಿರುವುದನ್ನು ತಿಳಿದ ಅನೇಕ ವಿದೇಶಿ ಕಂಪನಿಗಳು ತಮ್ಮ ವ್ಯಾಪಾರ ವಹಿವಾಟನ್ನು ಬರ್ಮಾದೊಂದಿಗೆ ನಿಲ್ಲಿಸಿವೆ.

"ಆದರೂ ಜನರ ಮೇಲಿನ ದಬ್ಬಾಳಿಕೆ, ಅತ್ಯಾಚಾರಗಳು ಈಗಲೂ ನಡೆಯುತ್ತಲೇ ಇವೆ" ಎಂದಿದ್ದಾರೆ. ಬರ್ಮಾದಲ್ಲಿ ಮಾನವಾಧಿಕಾರಗಳನ್ನು ಗಮನಿಸುವ ವಿಶ್ವಸಂಸ್ಥೆಯ ಪ್ರತಿನಿಧಿ ರಾಜ್‌ಸೂಮರ್ ಲಲ್ಲ.

ದೆಹಲಿಗೆ ರೈಲಿನಲ್ಲಿ

ಡಾ|| ಟಿ. ಶ್ರೀವೆಂಕಟರಮಣ
ಪ್ರಾಧ್ಯಾಪಕರು, ಸಂಖ್ಯಾಶಾಸ್ತ್ರ ವಿಭಾಗ
ಬೆಂಗಳೂರು ವಿಶ್ವವಿದ್ಯಾನಿಲಯ
ಬೆಂಗಳೂರು-೫೬೦ ೦೫೬

ಸುದೀರ್ಘ ರೈಲು ಪಯಣದ ಸಂದರ್ಭದಲ್ಲಿ ಎಂಥೆಂಥ ವಿಸ್ಮಯಕರ ಅನುಭವಗಳು— ಕಣ್ ತೆರೆದವನಿಗೆ, ಮನ ಹರಿಯಲು ಬಿಟ್ಟವನಿಗೆ, ಕಿವಿಗೆ ಗಿಟ್ಟ ಹಾಕಿಕೊಳ್ಳದವನಿಗೆ, ಮಿಗಿಲಾಗಿ, ತೆಪ್ಪಗೆ ಬಾಯಿ ಮುಚ್ಚಿಕೊಂಡು ಕೂತಿರುವಾತನಿಗೆ!

ದೂರದೂರದ ಊರುಗಳಿಗೆ ಪಯಣಿಸಲು ಉಗಿಬಂಡಿ ತುಂಬ ಅನುಕೂಲ, ಹಾರುವುದನ್ನು ಹೊರತುಪಡಿಸಿ. ಈ ಬಂಡಿಯನ್ನು ಎಳೆಯಲು ಡೀಸಲ್ ಯಾ ವಿದ್ಯುತ್ ಚಾಲಿತ ಇಂಜಿನುಗಳಿರುವ ಈ ದಿವಸಗಳಲ್ಲಿ 'ಉಗಿಬಂಡಿ' ಎನ್ನುವ ಪದ ಅಂಶಿಕವಾಗಿ ಐತಿಹಾಸಿಕ. ಬೆಂಗಳೂರಿನಿಂದ ದೆಹಲಿಗೆ ಹೋಗಲೇಬೇಕಿದೆಯೆಂದು ಭಾವಿಸಿ. ರೈಲು ಪಯಣದಲ್ಲಿ ಈ ದೂರವನ್ನು ಇಂದಿನ ದಿನಗಳಲ್ಲಿ ಸುಮಾರು ನಲ್ವತ್ತು ಗಂಟೆಗಳಲ್ಲಿ ಕ್ರಮಿಸಬಹುದು, ಶ್ರೀ ಗಣೇಶನ ಕೃಪೆಯಿಂದ ನಡುವೆ ವಿಶೇಷ ವಿಘ್ನಗಳು ಇದಿರಾಗದಿದ್ದರೆ. ಮುಂದಾಗಿ ಜಾಗ ಕಾದಿರಿಸಿ, ಮನೆಯಿಂದ ಮೂಟೆ ತುಂಬ ತಿಂಡಿತೀರ್ಥ ಕಟ್ಟಿಸಿಕೊಳ್ಳಿ, ಹಾಸಿಗೆ ದಿಂಬು ಮತ್ತು ಚೊಂಬು ಜೊತೆಗಿರಲಿ—ನಿಮ್ಮ ಪಯಣ ಗ್ಯಾರಂಟಿಯಾಗಿ ಸುಖಕರ. ನಿಮ್ಮ ಆರಾಮಕ್ಕೆ ಇನ್ನೇನು ಬೇಕು?

ಬೆಂಗಳೂರಿನಲ್ಲಿ ಕ್ಲುಪ್ತ ಸಮಯಕ್ಕೆ ರೈಲು ನಿಲ್ದಾಣ ತಲುಪಿ, ನಿಮ್ಮ ಜಾಗದಲ್ಲಿ ಸುಖಾಸೀನರಾಗಿ. ಅಲ್ಲಿಗೆ ನಿಮ್ಮ ಮುಖ್ಯ ಜವಾಬ್ದಾರಿ ಮುಗಿದಂತೆ. ನೀವು ನಿಷ್ಕ್ರಿಯರಾದರೂ ಎಲ್ಲರೊಂದಿಗೆ ದೆಹಲಿ ಸೇರುವುದು ಬಹುತೇಕ ಖಚಿತ. ನಿಮ್ಮ ಭಾರ (ಸುರಕ್ಷೆಯು) ರೈಲ್ವೆ ವಿಭಾಗಕ್ಕೆ ತನ್ಮೂಲಕ ಭಗವಂತನಿಗೆ ಸೇರಿದ್ದು. ಜೊತೆಗಿರುವ ಲಗೇಜನ್ನು ಭದ್ರ ಮೂಲೆಗಳಲ್ಲಿಡಿ ಯಾ ಸಂಕೋಲೆಗಳಿಂದ ಕಂಬಗಳಿಗೆ ಬಿಗಿಯಿರಿ. ಅಪಹರಣಕಾರರು ಸಾಧ್ಯವಾದರೆ ಇಡಿಯ ಗಾಡಿಯನ್ನು ಲಪಟಾಯಿಸಲಿ, ನಿಮ್ಮ ಲಗೇಜನ್ನು ಏಕೈಕವಾಗಿ ಒಯ್ಯುವಂತಾಗದಿರಲಿ ಎಂಬುದು ಇಲ್ಲಿಯ ಮರ್ಮ. ಹಸಿವುದಾಹಗಳ ಪರಿಹಾರಕ್ಕೆ ಬೇಕಾದದು, ಜೊತೆಗೆ ಸಮಯ ಕಳೆಯಲು ಬೇಕಾಗುವ ಸರಕು ನಿಮಗೆ ಸುಲಭದಲ್ಲಿ ಸಿಗುವಂತಿರಲಿ. ಇದು ನಿಶ್ಚಿಂತ ಆಹ್ಲಾದಕರ ಪಯಣಕ್ಕೆ ನಾಂದಿ. ಮುಂದಿನದು "ಅವರವರ ದರುಶನಕೆ!"

ನಿಮಗೆ ಮೀಸಲಿಟ್ಟ ಜಾಗದಲ್ಲಿ ಕುಳಿತ ಬಳಿಕ, ಬ್ಯಾಟಿಂಗ್ ಮಾಡಲೆಂದು ಮೈದಾನಕ್ಕಿಳಿದ ದಾಂಡಿಗ ಜಯಸೂರ್ಯ

ಸುತ್ತಲೂ ವೀಕ್ಷಿಸುವಂತೆ, ಆಚೆಈಚೆ ಜಾಗರೂಕರಾಗಿ ದೃಷ್ಟಿ ಹಾಯಿಸಿ. ಎದುರು ಯಾರಿದ್ದಾರೆ, ಅಕ್ಕಪಕ್ಕದಲ್ಲಿ ಯಾರು, ಅಲ್ಲಿ ದೂರದ ಬೌಂಡರಿ ಜಾಗದಲ್ಲಿ ಯಾರು ಇತ್ಯಾದಿ ವಿವರ ನಿಮ್ಮ ಮನಸ್ಸಿನಲ್ಲಿ ಅಚ್ಚೊತ್ತಿರಲಿ. ನಿಮ್ಮ ಹಾಸ್ಯಚಟಾಕಿಗಳನ್ನು, ಟೀಕೆ ಟಿಪ್ಪಣಿಗಳನ್ನು ನೀವು ಔಟಾಗದಂತೆ ಹಾರಿಸಲು, ಓಡಿಸಲು ಇಂಥ ಚಿತ್ರಣ ಸ್ಪಷ್ಟವಿರಬೇಕು. ಆದರೂ ನಿಮಗೂ ಜಯಸೂರ್ಯ ಅವರಿಗೂ ಒಂದು ವ್ಯತ್ಯಾಸ ಮಾತ್ರ ಖಾತ್ರಿಯಾಗಿ ಇರಲಿ. ಅವರು ಕಣಕ್ಕಿಳಿದ ಕ್ಷಣವೇ ಚೆಂಡನ್ನು ರಭಸದಿಂದ ಹೊಡೆಯಲು ಆರಂಭಿಸುತ್ತಾರೆ. ನೀವು ಮಾತ್ರ ನಿಧಾನಿಸಿ. ನಿಮ್ಮ ಸರಕು ಸುಮಾರು ನಲ್ವತ್ತು ಗಂಟೆಗಳ ಕಾಲ ಬರಬೇಕು. ಆದ್ದರಿಂದ ನೀವು ಆಸೀನರಾದ ತರುಣದಲ್ಲಿ ನಿಮ್ಮ ಕುಲ, ಗೋತ್ರ, ಕಸುಬು, ನೀವು ವಿವಾಹಿತರೇ ಇಲ್ಲವೇ ಎಂಬೆಲ್ಲ ವಿವರ ನಿಮಗೆ ಮಾತ್ರ (ಭಗವಂತನನ್ನು ಹೊರತುಪಡಿಸಿ) ತಿಳಿದಿದ್ದರೆ ಸಾಕು. ನಿಮ್ಮ ಮನೆಮಾತೇನು, ನೀವು ಶಾಕಾಹಾರಿಗಳೇ ಯಾ ವ್ಯಾಘ್ರವಂಶಜರೇ ಎನ್ನುವ ವಿವರ ಕೂಡ ಅದಷ್ಟು ಹೊತ್ತು ಗೋಪ್ಯವಿರಲಿ. ನೀವು ಗಂಡಸೇ, ಹೆಂಗಸೆ, ಎಂಬ ವಿಚಾರ ತೋರಿಕೆಗೆ ಬಹುತೇಕ ಖಚಿತವಾಗುವುದರಿಂದ ಬೇರೆ ಉಪಾಯವಿಲ್ಲ. ಅದನ್ನೂ ಮರೆಮಾಚುವಂತಿದ್ದರೆ ಇನ್ನೂ ಅನುಕೂಲ. ಪೂರ್ಣರಹಸ್ಯದ ಗುಡಿಯೇ ನೀವಾಗಬಹುದು. ಮುಂದಿನ ನಲ್ವತ್ತು ಗಂಟೆಗಳ ಕಾಲ ಎಲ್ಲ ವಿಚಾರವನ್ನು ಬಿಡಿಬಿಡಿಯಾಗಿ, ಎಳೆಎಳೆಯಾಗಿ ಎಳೆದೆಳೆದು ತಿಳಿಸುವ ಕಾಲಾವಕಾಶ ನಿಮಗೆ ಗ್ಯಾರಂಟಿಯಾಗಿ ಇದೆ ತಾನೇ? ನಿಮಗೆ ಯಾಕೆ ಅತಿ ತವಕ?

ಮುಂದೆ ದೂರ ತುಸು ಸವೆದು, ಅಕ್ಕಪಕ್ಕದವರೆಲ್ಲ ಸುಖಸ್ಥರಾದಾಗ ನಿಮ್ಮ ಮಾತಿನ ಚಳಕವನ್ನಾರಂಭಿಸಲು ಸಕಾಲ. ಇಲ್ಲೊಂದು ಜಾಣತನವನ್ನು ತೋರಿಸಲು ಅವಕಾಶವಿದೆ. ಜಾಗ ಕಾಯ್ದಿರಿಸಿದವರ ಪಟ್ಟಿಯನ್ನು ಮೊದಲೇ ಅಭ್ಯಸಿಸಿ ಅಕ್ಕಪಕ್ಕದವರ ಹೆಸರು, ವಯಸ್ಸು (ಮತ್ತು ಲಿಂಗ) ಅಂದಾಜಿಸಲು ಸಾಧ್ಯ. ಆದ್ದರಿಂದ ನೀವು ಪಕ್ಕದ ಅಪರಿಚಿತರನ್ನು 'ನೀವು ನೀಲೇಶ್ ಕುಲಕರ್ಣಿಯಲ್ಲವೇ?' ಎಂದು ಮಾತಾಡಿಸಿ ಎಲ್ಲರನ್ನೂ ಚಕಿತಗೊಳಿಸಬಹುದು. 'ಹೌದು, ನಿಮಗೆ ಹ್ಯಾಗ್ರೀ ಗೊತ್ತು?' ಎಂಬ ಪ್ರತಿಕ್ರಿಯೆ ಬಂದರೆ ನಿಮಗೆ ಮಾತಿನ ಕ್ರಿಕೆಟಿನಲ್ಲಿ ಒಂದು ರನ್ ದೊರೆತಂತೆ.

ಕ್ಷೇತ್ರದ ಜಯಸೂರ್ಯವಲೋಕನದ ಪ್ರಸ್ತಾಪ ಮೇಲೆ ಮಾಡಿದೆ. ಅದು ಅತ್ಯವಶ್ಯ. ಇಲ್ಲದಿದ್ದರೆ ಮುಜುಗರದ ಕ್ಷಣ ಒದಗಬಹುದು ಯಾ ಅನಾಹುತವೇ ಆಗಬಹುದು. ಉದಾಹರಣೆಗೆ, ಮಹಿಳೆಗೆ ಸಮಾನ ಅವಕಾಶ ಅನಗತ್ಯವೆಂದು ನೀವು ಉಸುರಿದರೆ, ಮುಂದುಗಡೆ ಮೂಲೆಯಲ್ಲಿ ಕುಳಿತಿರುವ ನೀರೆ ಅಪೇಕ್ಷಿಸಿ ನಿಮ್ಮನ್ನು 'ಕಾಟ್ ಎಟ್ ಸಿಲ್ಲಿ ಪಾಯಿಂಟ್' ಮಾಡಬಹುದು. ಅದೇ ರೀತಿ ಅಯೋಧ್ಯೆಯಲ್ಲಿ ಶ್ರೀರಾಮ ದೇಗುಲ ಆಗಲೇಬೇಕೆಂದು ನೀವು ಅಭಿಪ್ರಾಯ ವ್ಯಕ್ತಪಡಿಸಿದರೆ ಹಿಂದಿರುವ ಅದ್ರಿಯೊಬ್ಬರು ನಿಮ್ಮನ್ನು ಸ್ಟಂಪ್ಡ್ ಔಟ್ ಆಗಿಸಬಹುದು. ಆದ್ದರಿಂದ ನಿಮ್ಮ ಮಾತಿನ ಹೊಡೆತ ಮತ್ತು ಓಟ ಯಾವ ಕ್ಷೇತ್ರ ರಕ್ಷಕ (ಕಿ) ಗೂ ನೇರಹೋಗದಂತೆ ನೀವು ಜಾಣ್ಮೆ ವಹಿಸಬೇಕಾಗುತ್ತದೆ. ಇದೇ ಸಂಭಾಷಣಾ ಕ್ರಿಕೆಟಿನ ಕೌಶಲ್ಯ. ಇಲ್ಲದಿದ್ದರೆ

ನಿಮ್ಮ ಆಟ ಮೊಟಕುಗೊಳ್ಳುವುದು ಖಂಡಿತ. ಹಾಗೆಂದು ನೀವು ಮೌನಿಯಾಗಿರುವುದು ಉಚಿತವಲ್ಲ. ಆಗ ಸಮಯ ಕಳೆದರೂ, ಊರುಗಳು ಬಂದು ಹೋದರೂ ನಿಮ್ಮ ಸ್ಕೋರ್ ಏರದು. ಇದೇ ಮೌನ ನೀತಿಯನ್ನು ಅಲ್ಲಿಯ ಎಲ್ಲರೂ ಪಾಲಿಸಿದರೆ ಏಕಾದಶಿಯಂದು ಬಾಳೆಯ ಹಣ್ಣನ್ನು ಕೈಯಲ್ಲಿ ಹಿಡಿದು ಮಟಮಟ ನೋಡುತ್ತ ಕುಳಿತು ಉಪವಾಸ ಮಾಡಿದ ಮಂಗಗಳ ಮಂಗಳ ವೃತ್ತಾಂತ ನಿಮ್ಮದಾಗುತ್ತದೆ. ಅದೇನೂ ನಿಮಗೆ ಬೇಕಿಲ್ಲವಲ್ಲ!

ಇನ್ನು ಆಟ ಬಿಟ್ಟು ಊಟಕ್ಕೆ ಬರೋಣ. ನೇಸರ ನೆತ್ತಿಗೇರುತ್ತಿದ್ದಂತೆ ಊಟದ ಬುತ್ತಿಗಳು ಸೂರ್ಯಕಾಂತಿಯಂತೆ ಅರಳುತ್ತವೆ. ಆದರೆ ಅವುಗಳಿಂದ ಸೂಸುವ ವಾಸನೆ ಮಾತ್ರ ವಿವಿಧ. ರೈಲ್ವೆಯವರು ನೀಡಿದ ರಜತಪತ್ರ ಆಚ್ಛಾದಿತ ನೀರಸ ಆಹಾರ, ಪಕ್ಕದ ಕುಲಕರ್ಣಿ ತೆರೆಯುವ ಪತ್ಲಾನ್ನ—ಮೊಸರನ್ನ, ಅಯ್ಯಂಗಾರಿಯ ಪುಳಿಯೋಗರೆ, ಎದುರುಗಡೆಯವರ ಭವಿಷ್ಯ ಕುಕ್ಕುಟದ ಆಮ್ಲೆಟ್, ಮಸಾಲೆ ಮತ್ತು ಬೆಳ್ಳುಳ್ಳಿ, ಘಮಘಮಿಸುವ ಅದೇನೇನೋ ಅಡುಗೆ ವಿಶೇಷಗಳು—ಹೀಗೆ ಪಂಚತಾರಾ ಹೋಟೆಲಿನ ಬಾಣಸಿಗರು ತೋರುವ ಕೈಚಳಕದ ಫಲ ಗಾಡಿಯೊಳಗೆ ಏಕತ್ರ ಕಾಣಿಸಿಕೊಳ್ಳುತ್ತದೆ. ಮೂಗು, ಬಾಯಿ ಮತ್ತು ಕಣ್ಣುಗಳಿಂದ ತಿನ್ನುವವರಿಗೆ ಇದಕ್ಕಿಂತ ಪ್ರಶಸ್ತ ಸಮಯ ಬೇರೆ ಇರದು.

ಊಟದ ಬಳಿಕ ನಿದ್ದೆ, ದೂರಪಯಣದ ಗಾಡಿಗಳಲ್ಲಿ ಶಯನಸೌಲಭ್ಯಕ್ಕೆಂದೇ ವಿಶೇಷ ಶುಲ್ಕವಿರುತ್ತದೆ. ಹಣತೆತ್ತ ಬಳಿಕ ನಿದ್ರಿಸದೆ ಬೇರೆ ಮಾರ್ಗವಿಲ್ಲ ತಾನೇ? ಅದರಿಂದ ಅಪಾಯವೂ ಇಲ್ಲದ್ದರಿಂದ ಜನ ಧಾರಾ[illegible] ವಾಗಿಯೇ ನಿದ್ರಿಸುತ್ತಾರೆ. ಆರಾಮ[illegible] ಭೂಸಮಾಂತರ ಸ್ಥಿತಿಯದು. ಅದಲ್ಲ[illegible] ಕೊಳಾಯಿ ನೀರು ತುಂಬಲೆಂದೋ, ಬೀ[illegible] ನಾಯಿ ಬೊಗಳಿದಾಗ ಗೇಟಿನಲ್ಲಿ ಅಪರಿಚಿ[illegible] ಆಗಂತುಕ ಯಾರೆಂದು ತಿಳಿಯಲೆಂದೋ ಮನೆಯಲ್ಲಾಗುವ ನಿಧ್ರಾಭಂಗದ ಪ್ರಮೇ[illegible] ಯವೂ ಇಲ್ಲಿಲ್ಲ. ಬರಿಯ ನೀವು, ನಿಮ[illegible] ದಿಂಬು ಮತ್ತು ನಿಮ್ಮದೇ ನಿದ್ರೆ: ಅಷ್ಟೇ[illegible] ನಿದ್ರಾದೇವಿ ಎಂದೂ ಉಚಿತವೇ. ಹಾ[illegible] ಒಂದನ್ನು ತಿಳಿಸಲು ಮರೆತೆ. ಬಂಡಿಯ[illegible] ಸಿಂಹ ಕುಲದವರಿದ್ದರೆ ಗಾಡಿಚಲನೆಯ ಏಕತಾನದೊಂದಿಗೆ ಅವರ ಗರ್ಜನೆ (ಗೊರಕೆ[illegible] ಲಯಬದ್ಧವಾಗಿ ಮಿಲಿತಗೊಂಡು ಸುಂದ[illegible] ಸ್ವರಪ್ರಪಂಚವೇ ಅಲ್ಲಿ ಸೃಷ್ಟಿಗೊಳ್ಳುತ್ತದೆ[illegible] ಇದೊಂದು ಸ್ವರ್ಗೀಯ ಸನ್ನಿವೇಶವೇ ಸರಿ[illegible] ನಿಲ್ದಾಣಗಳಲ್ಲಿ ಬಂಡಿ ನಿಂತಾಗ ಅಲ್ಲಿ[illegible] ಮೌನ ಬಿರಿದು ಕಾಫಿ, ಚಹ, ಬೀಡಿಸಿ[illegible] ರೇಟು, ವಿಲಕ್ಷಣ ತಿಂಡಿ ಇತ್ಯಾದಿ ಮಾ[illegible] ವವರ ಏರುದನಿ ಗಾಡಿಯೊಳಗೆ ನುಗ್ಗುತ್ತದೆ[illegible] ಓಡಿ ನಿಂತ ತುಂಗೆಗೆ ನಿಂತು ಓಡುವ ಭದ್ರೆ ಸೇರಿಕೊಳ್ಳುವಂತೆ. ನಿಷ್ಕ್ರಿಯತೆ ಮತ್ತು ಕ್ರಿಯತೆಗಳ ಅತ್ಯಂತ ಸುಂದರ ಸಮ್ಮಿಲ[illegible] ವಿದು. ಈ ವ್ಯವಹಾರದಿಂದ ಹಣಕಾಸು ಕೈ ಬದಲಾಯಿಸುವುದು, ನಿಲ್ದಾಣದ ಭಿಕ್ಷು[illegible] ಮತ್ತು ಪ್ರಾಣಿವರ್ಗಕ್ಕೆ ಅಭೀಷ್ಟದ ತುಸು ಸಿದ್ಧಿ, ಕುದಿಕುದಿಯುವ ಎಣ್ಣೆಯ[illegible] ಧಾರಾಳವಾಗಿ ಮುಳುಗೆದ್ದ ತಿಂಡಿಗಳನ್ನು ಖರೀದಿಸಿ ತಿಂದ ಬಾಯಿಚಪಲದವ[illegible] ಉದರಶೂಲೆಗೆ ನಾಂದಿ ಕೂಡ [illegible] ಪರಿಸರದಲ್ಲಿ ನಡೆಯುತ್ತದೆ. ಲೋಕೋ ಭಿನ್ನರುಚಿ.

ಬೆಂಗಳೂರಿನಿಂದ ದೆಹಲಿಗೆ ಧಾವಿಸುವ ಗಾಡಿ ಹಲವು ರಾಜ್ಯಗಳ ಮೂಲಕ ಹಾದು ಹೋಗುತ್ತದೆ. ಆಂಧ್ರದ ತೆಲುಗಿನ ಕಂಪು, ಮಹಾರಾಷ್ಟ್ರದ ಮರಾಠಿಯ ಠೀವಿ, ಮಧ್ಯ ಮತ್ತು ಉತ್ತರ ಪ್ರದೇಶಗಳ ಹಿಂದಿಯ ಹಿರಿಮೆ ಇವೆಲ್ಲ ಕನ್ನಡದ ಇಂಪನ್ನು ಹಿಂಬಾಲಿಸಿಕೊಂಡು ಬರುತ್ತವೆ. ಅದೇ ರೀತಿಯಲ್ಲಿ ಜನರ ಉಡುಗೆ-ತೊಡುಗೆ, ಊಟ-ತಿಂಡಿಗಳ ವೈವಿಧ್ಯ ಪ್ರಕೃತಿಯ ವೈವಿಧ್ಯದ ಹಿಮ್ಮೇಳದಲ್ಲಿ ಎದ್ದು ಕಾಣು ತ್ತವೆ. ಅರಸುವ ಕಣ್ಣುಳ್ಳವರಿಗೆ ನಲ್ವತ್ತು ಗಂಟೆಗಳ ಸಮಯ ನಲ್ವತ್ತು ನಿಮಿಷಗಳಂತೆ ಮಸುಳಿಹೋಗುತ್ತದೆ. ಅದಿಲ್ಲದೆ ಎಲ್ಲೆಲ್ಲೂ ಬರಿಯ ಬೋರನ್ನೇ ಕಾಣುವವರು ಇಸ್ಪೀಟು ಎಲೆಗಳನ್ನೋ, ಕಿವಿಗಂಟಿಸಿ ಕೊಳ್ಳುವ ಹಾಡುಯಂತ್ರಗಳನ್ನೋ ಯಾ ನಿದ್ರಾದೇವಿಯನ್ನೋ ಮೊರೆಹೋಗ ಬೇಕಷ್ಟೇ. ಅಂಥವರು 'ದಿಲ್ಲಿ ಬಂತೇ, ದಿಲ್ಲಿ ಬಂತೇ' ಎಂದು ತವಕಿಸುತ್ತ ಇರು ತ್ತಾರೆ, ದಿಲ್ಲಿ ಬರಲಾರದು, ತಾವಲ್ಲಿಗೆ ಹೋಗಬೇಕೆಂಬುದನ್ನು ಮರೆತು. ಹಜರತ್ ನಿಜಾಮುದ್ದೀನ್ ದಾಟಿ ದೆಹಲಿ ಸನಿಹವಾದಾಗ ಮನ ಮುದಗೊಳ್ಳುವುದು ಸಹಜ. ನೀವು ಹಿರಿಯರಾಗಿದ್ದರೆ ಕಿರಿ ಯರು ಇದಿರುಗೊಳ್ಳಲು ನಿಲ್ದಾಣಕ್ಕೆ ಬರ ಬಹುದು, ಇನಿಯರಾಗಿದ್ದರೆ ಇನಿಯೆಯ ದರ್ಶನ, ಅಧಿಕಾರಿಯಾಗಿದ್ದರೆ ಸೇವಕ ವರ್ಗದ ಸಲಾಂ ಇತ್ಯಾದಿ ಅಲ್ಲಿ ಸಾಧ್ಯ. ನೀವು ಇದು ಯಾವುದೂ ಆಗಿರದೆ ಬರಿಯ ಶ್ರೀಸಾಮಾನ್ಯ (ನ್ಯೆ) ಯಾಗಿದ್ದರೆ ಅಲ್ಲಿಯ ವಿಶಾಲ ಜನಜಂಗುಳಿಯಲ್ಲಿ ಮಸುಳಿ ನಿಮ್ಮ ಗುರಿಗೆ ಸದ್ದುಗದ್ದಲವಿಲ್ಲದೆ ಬಸ್ಸೋ, ರಿಕ್ಷಾವನ್ನೋ ಹಿಡಿದು ಸೇರಬಹುದು. ಅಂತೂ ರೈಲು ಪಯಣ ಭಾರತದರ್ಶನ ದೊಂದಿಗೆ ದೇಶೀಯ ಜೀವನಕ್ರಮದ ಸನಿಹ ಪರಿಚಯವನ್ನೂ ಒದಗಿಸಬಲ್ಲದು. ಈ ಅನುಭವವನ್ನು ಮತ್ತೆ ಮತ್ತೆ ಮೆಲುಕು ಹಾಕುತ್ತಿದ್ದರೆ ಮನಸ್ಸು ಮತ್ತೆ ಮತ್ತೆ ಮುದಗೊಳ್ಳುವುದು ಖಚಿತ.

ಕೊನೆಗೊಂದು ಮಾತು. ದೆಹಲಿಗೆ ತಲಪಿ ದವರು ಅಲ್ಲಿಯ ಸುತ್ತಮುತ್ತ ಸುತ್ತಾಡಿ, ದೂರದ ಜಯಪುರಕ್ಕೋ, ಶಿಮ್ಲಾ ವೈಷ್ಣೋ ದೇವಿಗಳಿಗೋ, ಇಲ್ಲ ಕೇದಾರನಾಥ, ಬದರೀನಾಥ ದರ್ಶನಕ್ಕೋ ಹೋಗಿಬನ್ನಿ; ಜೀವನ ಪಾವನವಾಗಿಸಿಬಿಡಿ, ಆದರೆ ದೆಹಲಿ ಯಲ್ಲೇ ಸ್ಥಿರವಾಗಿ ಬಿಡಬೇಡಿ, ದೇಶದ ಪ್ರಧಾನಿಪದ ದೊರೆತರೂ ಮಣ್ಣಿನ ಮಗ ಹಸ್ತಿನಾವತಿ ಸಿಂಹಾಸನದಲ್ಲಿ ಬಹುಕಾಲ ಉಳಿಯಲು ಬಿಡುವುದೇ ಅವನ ಮಣ್ಣಿನ ವಾಸನೆ? ದೆಹಲಿಯ ಉಸಿರು ಆರೋಗ್ಯ ಮಾರಕವಂತೆ. ವಾಯುಮಾಲಿನ್ಯಕ್ಕೆ ಅಂತಾರಾಷ್ಟ್ರೀಯ ಕುಖ್ಯಾತಿಯನ್ನು ದೆಹಲಿ ಪಡೆಯುತ್ತಿದೆ. ಆದ್ದರಿಂದ ಆದಷ್ಟು ಬೇಗ ಮರುಪಯಣ ಬೆಳೆಸಿದರೆ ಕ್ಷೇಮ, ಹಕ್ಕಿ ಮರಳಿ ಗೂಡನ್ನು ಸೇರುವಂತೆ. ದೆಹಲಿಗೆ ಹೋಗುವ ಮಜ ಅಲ್ಲಿಯೇ ಇರಲು ಇರದು. ನಿಮ್ಮ ಮರು ಪಯಣ ಹಾರು ಮಾರ್ಗದ ಮೂಲಕವೂ ಆಗಬಹುದು, ಅದಕ್ಕೆ ತಗಲುವ ಖರ್ಚನ್ನು ಇನ್ನೂ ಯಾರೋ ಭರಿಸುವಂತಿದ್ದರೆ. ಅಂತೂ ನೀವೊಮ್ಮೆ ದೆಹಲಿಗೆ ಹೋಗಿ, ಬನ್ನಿ. ನಿಮಗೆ ಶುಭವಾಗಲಿ.

ಬೈಜಿಕ ಸಮರದ ಪರಿಣಾಮಗಳು

ಮೇ॥ ಜ॥ ಎಸ್. ಜಿ. ಒಂಬತ್ತುಕೆರೆ (ನಿವೃತ್ತ)
೪೭೫, ಏಳನೆಯ ಮುಖ್ಯ ರಸ್ತೆ
ವಿಜಯನಗರ, ಒಂದನೆಯ ಹಂತ
ಮೈಸೂರು-೫೭೦ ೦೧೭

ಪ್ರಪಂಚದ ಬೈಜಿಕ ಕೂಟದ (ನ್ಯೂಕ್ಲಿಯರ್ ಕ್ಲಬ್) ತೀರ ಈಚೆಗಿನ ಸದಸ್ಯ ರಾಷ್ಟ್ರಗಳು ಭಾರತ ಮತ್ತು ಪಾಕಿಸ್ತಾನ. ಅಂದರೆ ಅದು (ಪರಮಾಣು ಯುದ್ಧ ಸಂಭಾವ್ಯತೆ) ನಮ್ಮ ಭೂಖಂಡದಲ್ಲೇ ತನ್ನ ಅಸ್ತಿತ್ವ ಟಂಕಿಸಿದಂಥ ಘೋರ ಪರಿಸ್ಥಿತಿ. ಕೇವಲ ರಾಜಕಾರಣಿಗಳಿಗೆ ಮತ್ತು ವಿಜ್ಞಾನಿಗಳಿಗೆ ಸೀಮಿತವಾಗುವ ವಿಷಯ ಇದಲ್ಲ—ಸಾಕ್ಷಾತ್ ಮನುಕುಲದ ಮೂಲಕ್ಕೇ ಅಪಾಯ ಕಾದಿರುವಂಥ ಸಂದರ್ಭ. ಬೈಜಿಕ ಸಮರ (ಅಂದರೆ ಪರಮಾಣು ಯುದ್ಧ) ಸಂಭವಿಸಿದರೇನಾದೀತು ? ಜನರು ಈ ವಿವರಗಳನ್ನು ತಿಳಿದಿರಬೇಕು, ವಿವೇಚಿಸಬೇಕು ಮತ್ತು ಪ್ರತಿಯೊಂದು ರಾಷ್ಟ್ರದ ಪ್ರಜ್ಞೆ, ಬೈಜಿಕಾಸ್ತ್ರಗಳನ್ನು ಆಮೂಲಾಗ್ರವಾಗಿ ಉಚ್ಚಾಟನೆಗೊಳಿಸುವತ್ತ ಜಾಗೃತವಾಗಬೇಕು. ಭಾರತ ಸೇನೆಯಲ್ಲಿ ವರಿಷ್ಠಾಧಿಕಾರಿಗಳಾಗಿದ್ದ ಮೇಜರ್ ಜನರಲ್ ಎಸ್. ಜಿ. ಒಂಬತ್ತುಕೆರೆಯವರು ನೀಡಿರುವ ಈ ವಿವರಣೆ ವರ್ತಮಾನ ದಿನಗಳಲ್ಲಿ ಅತಿ ಪ್ರಸ್ತುತವಾಗಿದೆ.

ಸಾಮಾನ್ಯವಾಗಿ ಪ್ರತಿಯೊಬ್ಬನಿಗೂ "ಆ್ಯಟಮ್ ಬಾಂಬ್" ಪದ (ಪರಮಾಣು ಬಾಂಬ್) ಸುಪರಿಚಿತ. ದೀಪಾವಳಿ ಪಟಾಕಿಗಳಲ್ಲಿ ಅತಿ ಹೆಚ್ಚು ಸದ್ದು ಮಾಡುವ ಮತ್ತು ಬಲು ದುಬಾರಿ ಬೆಲೆಯವನ್ನು ಪರಮಾಣು ಬಾಂಬುಗಳೆಂದೇ ಕರೆಯುವುದು ವಾಡಿಕೆ. ಆದರೆ ಭಾಷೆಯಲ್ಲಿಯ ನಾಜೂಕುತನದ ಕಾರಣವಾಗಿ ಇವುಗಳಿಗೆ ಬೈಜಿಕ ಬಾಂಬ್‌ಗಳು ಅಥವಾ ನ್ಯೂಕ್ಸ್ ಎಂಬ ಹೆಸರುಗಳು ಬಳಕೆಗೆ ಬಂದಿವೆ. ಬೈಜಿಕ ಬಾಂಬ್‌ಗಳನ್ನು ಹೊಂದಿರುವ ದೇಶ ಬೈಜಿಕ ರಾಷ್ಟ್ರ. ಭಾರತವೀಗ, ಅಧಿಕೃತವಾಗಿ, ಒಂದು ಬೈಜಿಕ ರಾಷ್ಟ್ರ.

ಎರಡು ಬಗೆಯ ಬೈಜಿಕಾಸ್ತ್ರಗಳಿವೆ: ವಿದಲನ (ಅಂದರೆ ಒಡೆತ ಅಥವಾ ಛೇದನ), ಸಂಲಯನ (ಕೂಡಿಕೆ ಅಥವಾ ಸಂಕಲನ). ಐವತ್ತುಮೂರು ವರ್ಷಗಳ ಹಿಂದೆ, ೧೯೪೫ ಆಗಸ್ಟ್ ೬ ಮತ್ತು ೯ರಂದು, ಅಮೆರಿಕ

ಇಂಗ್ಲಿಷ್ ಮೂಲ: "ದಿ ಇಫೆಕ್ಟ್ಸ್ ಆಫ್ ಎ ನ್ಯೂಕ್ಲಿಯರ್ ವಾರ್."
ಅನುವಾದ: ಟಿ. ಎಸ್. ಲಲಿತ. ೭೦೨ ಮೊದಲನೆಯ ಮಹಡಿ, ೧೭ ನೆಯ ಮುಖ್ಯ ರಸ್ತೆ ಸರಸ್ವತೀಪುರ, ಮೈಸೂರು-೫೭೦ ೦೦೯.

ದೇಶ ಜಪಾನ್ ದೇಶದ ಹಿರೋಶಿಮಾ ಮತ್ತು ನಾಗಸಾಕಿ ನಗರಗಳ ಮೇಲೆ ಎಸೆದ ಬಾಂಬುಗಳು ವಿದಲನ ಸಾಧನಗಳು. ಇಂಥ ಒಂದು ಬಾಂಬಿನ ತಿರುಳಿನಲ್ಲಿ ಯುರೇನಿಯಮ್ ಅಥವಾ ಪ್ಲೂಟೋನಿಯಮ್ ಇರುವುದು. ಸಂಲಯನ ಬಾಂಬಿನ ತಿರುಳಿನಲ್ಲಿರುವುದು ಹೈಡ್ರೊಜನ್. ಎಂದೇ ಇದು ಹೈಡ್ರೊಜನ್ ಬಾಂಬ್.

ಬಾಂಬಿನ ಗಾತ್ರವೆಂದರೆ ಅದರ ಭೌತ ಗಾತ್ರ ಅಲ್ಲ, ಸ್ಫೋಟನ ಶಕ್ತಿಯ ಮಾನಕ. ಸಾಂಪ್ರದಾಯಿಕ ಬಾಂಬಿನಲ್ಲಿಯ ಸ್ಫೋಟನ ವಸ್ತು ಟಿ ಎನ್ ಟಿ (ಟ್ರೈ-ನೈಟ್ರೊ-ಟಾಲ್ವೀನ್). ಯಾವುದೇ ಬೈಜಿಕ ಬಾಂಬಿನ ಸ್ಫೋಟನದಿಂದ ಉದ್ಭವಿಸುವಷ್ಟು ಶಕ್ತಿಯನ್ನು ಎಷ್ಟು "ತೂಕ"ದ ಟಿಎನ್‌ಟಿಗಳ ಸ್ಫೋಟನೆಯಿಂದ ಉತ್ಪಾದಿಸಬಹುದು ಎಂಬುದೇ ಇಲ್ಲಿಯ ಮಾನಕ. ಉದಾಹರಣೆಗೆ, ಸುಮಾರು ೨೫೦ ಕೆಜಿ ತೂಕದ ಬೃಹತ್ಸಾಂಪ್ರದಾಯಿಕ ಟಿಎನ್‌ಟಿ ಬಾಂಬನ್ನು ತಯಾರಿಸಲಾಗಿದೆ. ಇದರೊಳಗಿನ ಟಿಎನ್‌ಟಿ ಹೂರಣದ ತೂಕ ಸುಮಾರು ೧೦೦ ಕೆಜಿ (ಮಿಕ್ಕುದು ಬಾಂಬಿನ ಕವಚ ಇತ್ಯಾದಿಗಳಲ್ಲಿ ವಿತರಣೆಗೊಂಡಿರುವುದು). ಈಗ, ವಿದಲನ ಬಾಂಬ್‌ಗಳನ್ನು ನೂರಾರು ಕಿಲೊಟನ್ ಟಿಎನ್‌ಟಿಯಲ್ಲಿಯೂ ಸಂಲಯನ ಬಾಂಬ್‌ಗಳನ್ನು ನೂರಾರು ಮೆಗಟನ್ ಟಿಎನ್‌ಟಿಯಲ್ಲಿಯೂ ಅಳೆಯಲಾಗುವುದು. (೧೦೦೦ ಕೆಜಿ = ೧ ಟನ್, ೧೦೦೦ ಟನ್ = ೧ ಕಿಲೊಟನ್, ೧,೦೦೦,೦೦೦ ಟನ್ = ೧೦೦೦ ಕಿಲೊಟನ್ = ೧ ಮೆಗಟನ್). ಹಿರೋಶಿಮಾ ಮತ್ತು ನಾಗಸಾಕಿ ನಗರಗಳ ಮೇಲೆ ಎಸೆದ ಒಂದೊಂದು ವಿದಲನ ಬಾಂಬಿನ ತೂಕ ೧೦–೧೫ ಕಿಲೊಟನ್. ಆ ಮಹಾಸ್ಫೋಟನದ ಶಕ್ತಿ ಪ್ರಮಾಣ ಏಕಕ್ಷಣದಲ್ಲಿ ಒಂದೆಡೆ ೧೦,೦೦೦–೧೫,೦೦೦ ಟನ್ ಟಿಎನ್‌ಟಿ ಸ್ಫೋಟಿಸಿದಾಗ ಬಿಡುಗಡೆ ಆಗುವ ಶಕ್ತಿಗೆ ಸಮಾನ.

ಐವತ್ತಮೂರು ವರ್ಷಗಳ ಹಿಂದೆ ಬೈಜಿಕಾಸ್ತ್ರವನ್ನು ಆ ಜಪಾನೀ ಮುಗ್ಧರ ಮೇಲೆ ಪ್ರಯೋಗಿಸಿದ ಬಳಿಕ ಮತ್ತೆಲ್ಲೂ ಎಂದೂ ಜನನಾಶಕ್ಕಾಗಿ ಅದನ್ನು ಬಳಸಿಲ್ಲ. ಇದೊಂದು ಅದೃಷ್ಟ. ಆದರೆ ಬೈಜಿಕ ಬಾಂಬ್ ನಿರ್ಮಾಣ, "ಶಾಂತಿಗಾಗಿ ಪರಮಾಣು" ಪ್ರಯೋಗ ಪರೀಕ್ಷೆಗಳು ಮುಂತಾದವು ಈ ಭಸ್ಮಾಸುರ ಹಸ್ತವನ್ನು ಜೀವಂತವಾಗಿಟ್ಟಿವೆ. ಮುಖ್ಯವಾಗಿ ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್, ಚೈನ ಮತ್ತು (ಮಾಜಿ) ಸೋವಿಯತ್ ರಷ್ಯಾ ದೇಶಗಳು ನೆಲಮಟ್ಟದಲ್ಲೂ ಕೆಳಗೂ ಅಂತೆಯೇ ನೀರಿನ ಕೆಳಗೂ ಬಾಂಬ್ ಸ್ಫೋಟನಗಳನ್ನು ಪರೀಕ್ಷಾರ್ಥ ಪ್ರಯೋಗಿಸುತ್ತ ಬಂದಿವೆ. ಅಮೆರಿಕ ದೇಶವೊಂದೇ ೧೨೦೦ಕ್ಕೂ ಮಿಕ್ಕಿ ಬೈಜಿಕ ಸಾಧನಗಳನ್ನು ಪರೀಕ್ಷಿಸಿದೆ. ಅಲ್ಲಿಯ ದಾಸ್ತಾನಿನಲ್ಲಿ ಸುಮಾರು ೧೫,೦೦೦ ಬೈಜಿಕಾಸ್ತ್ರಗಳು ಇರಬಹುದೆಂದು ಅಂದಾಜು. ಇವುಗಳ ತೂಕವ್ಯಾಪ್ತಿ ಕೆಲವು ಕಿಲೊಟನ್‌ಗಳಿಂದ ಮೆಗಟನ್‌ಗಳ ವರೆಗಿರುವುದು.

ಸಮರ ಕ್ರಿಯೆಗಳಲ್ಲಿ ಎರಡು ಮುಖ್ಯ ವಿಭಾಗಗಳಿವೆ: ವ್ಯೂಹರಚನೆ (ಸ್ಟ್ರ್ಯಾಟಜಿ), ತಂತ್ರ ಕೌಶಲ (ಟ್ಯಾಕ್ಟಿಕ್ಸ್). ಮೊದಲನೆಯದು ಯೋಜನೆ, ಎರಡನೆಯದು ನಿರ್ವಹಣೆ. ಹತ್ತಾರು ಕಿಲೊಟನ್ ಸ್ಫೋಟಕ

ಶಕ್ತಿ ಉತ್ಸರ್ಜಿಸುವ ಸಾಧನಗಳನ್ನು ತಂತ್ರಾಯುಧಗಳೆಂದೂ ಅಧಿಕ ಸಾಮರ್ಥ್ಯದವನ್ನು ವ್ಯೂಹಾಯುಧಗಳೆಂದೂ ಹೇಳುತ್ತೇವೆ. ಪ್ರಪಂಚದಲ್ಲಿ ಇಂದು ಜಮೆ ಆಗಿರುವ ಸಮಸ್ತ ತಂತ್ರ—ಮತ್ತು ವ್ಯೂಹ—ಆಯುಧಗಳ ವಿನಾಶಕ ಸಾಮರ್ಥ್ಯ ಪ್ರಪಂಚಜನಸಂಖ್ಯೆಯನ್ನು ಹಲವು ಬಾರಿ ನಿರ್ನಾಮಗೈಯುವಷ್ಟು ಇದೆ. ಸರಾಸರಿಯಲ್ಲಿ ಪ್ರತಿಯೊಬ್ಬ ಮನುಷ್ಯನಿಗೂ ೧೦ ಟನ್‌ಗಳಷ್ಟು ಸ್ಫೋಟಕ ಸಾಮಗ್ರಿ ಇಂದಿನ ಬೈಜಿಕ ಶಸ್ತ್ರಾಗಾರಗಳಲ್ಲಿ ಸಂಚಿತವಾಗಿದೆ. ಲೆಕ್ಕಾಚಾರ ಹಾಗಿರಲಿ. ಈಗ, ಬೈಜಿಕಾಸ್ಫೋಟನೆಯ ದುಷ್ಪರಿಣಾಮಗಳೇನೆಂಬುದನ್ನು ಗಮನಿಸೋಣ.

ಹಿರೋಶಿಮಾ ಮತ್ತು ನಾಗಸಾಕಿ ನಗರಗಳಲ್ಲಿ ಅಳಿಯದೇ ಉಳಿದವರ ಅನುಭವಗಳು, ಆಸ್ಫೋಟನೆಗಳ ಅಂತೆಯೇ ತರುವಾಯದ ಛಾಯಾಚಿತ್ರಗಳು ಮತ್ತು ತತ್ಸಂಬಂಧವಾದ ವೈದ್ಯಕೀಯ-ಎಂಜಿನಿಯರಿಂಗ್-ವೈಜ್ಞಾನಿಕ ಅಧ್ಯಯನಗಳು ಎಲ್ಲವನ್ನೂ ಕ್ರೋಡೀಕರಿಸಿ ಬೈಜಿಕ ಹನನದ ಪರಿಣಾಮಗಳನ್ನು ಅಭ್ಯಸಿಸಲಾಗಿದೆ. ಇವು ಹೊರಗೆಡಹುವ ಭೀಕರ ದೃಶ್ಯ ಅತಿಭಯಂಕರ; ನಮ್ಮನ್ನು ದಿಗ್ಭ್ರಾಂತರನ್ನಾಗಿಸುವಂತಿದೆ. ಕೇವಲ ಅರ್ಧ ಕೆಜಿ ಟಿಎನ್‌ಟಿ ಆಸ್ಫೋಟನೆ ಒಬ್ಬನನ್ನು ಛಿನ್ನ ವಿಚ್ಛಿನ್ನಗೊಳಿಸಲು ಸಾಕು. ಅಂದ ಮೇಲೆ ಹಲವು ಮಿಲಿಯನ್ ಟನ್ ತೂಕದ ಟಿಎನ್‌ಟಿ (ಅಂದರೆ ಬೈಜಿಕ ಬಾಂಬ್) ಅದೆಂಥ ಘೋರ ವಿನಾಶಕ ಶಕ್ತಿಯನ್ನು ಗರ್ಭಸಿಕೊಂಡಿರಬೇಡ!

ನೆಲಮಟ್ಟದಲ್ಲಿ ಅಥವಾ ಇದರಿಂದ ಎತ್ತರದಲ್ಲಿ ಬಾಂಬ್ ಸ್ಫೋಟನೆ ಸಂಭವಿಸುವ ಸ್ಥಳಕ್ಕೆ ಶೂನ್ಯಬಿಂದು ಎಂದು ಹೆಸರು. ಬಾಂಬ್ ಸ್ಫೋಟನೆಯ ಕ್ಷಣದಲ್ಲಿ ಶೂನ್ಯ ಬಿಂದುವಿನಲ್ಲಿಯೂ ಇದರ ಸನ್ನಿಹದ ಆಸಪಾಸಿನಲ್ಲಿಯೂ ಸಮಸ್ತ ಜೀವರಾಶಿ ತತ್‌ಕ್ಷಣವೇ ಆವಿಯಾಗಿಹೋಗುತ್ತದೆ. ಬೈಜಿಕ ಶಕ್ತಿಯ ಹಠಾತ್ ವಿಮೋಚನೆಯಿಂದ ಥಳುಕುವ ಮಿಂಚು ಸಾಕ್ಷಾತ್ ಸೂರ್ಯ ಧರೆಗಿಳಿದು ಬಂದಂತಿರುವುದು (ನ್ಯೂ ಮೆಕ್ಸಿಕೋದ ನಿರ್ಜನ ಪ್ರದೇಶದಲ್ಲಿ ಪ್ರಥಮ ಪ್ರಾಯೋಗಿಕ ಪರಮಾಣು ಬಾಂಬನ್ನು ಸ್ಫೋಟಿಸಿದಾಗ ಹಠಾತ್ತನೆ ಪ್ರಜ್ವಲಿಸಿದ ಆ ಪ್ರಖರ ಜ್ಯೋತಿ ಗಮನಿಸಿದ ರಾಬರ್ಟ್ ಆಪ್ಪನ್‌ಹೀಮರ್—ಬಾಂಬಿನ ನಿರ್ಮಾಪಕ ವಿಜ್ಞಾನಿ—ಭಗವದ್ಗೀತೆಯ ಶ್ಲೋಕವನ್ನು ನೆನಪಿಸಿಕೊಂಡರಂತೆ: "ದಿವಿಸೂರ್ಯ ಸಹಸ್ರಸ್ಯ ಭವೇದ್ಯುಗಪದುತ್ಥಿತಾ। ಯದಿಭಾಃ ಸದೃಶೀ ಸಾಸ್ಯಾದ್ಭಾಸಸ್ತಸ್ಯ ಮಹಾತ್ಮನಃ॥" ಅರ್ಥ: ಸಹಸ್ರ ಸೂರ್ಯಪ್ರಭೆ ಒಂದೇ ಸಲ ಆಕಾಶದಲ್ಲಿ ಉಂಟಾದರೆ ಅದನ್ನು ಆ ಮಹಾತ್ಮನ ತೇಜಸ್ಸಿಗೆ ಹೋಲಿಸಬಹುದು.

ಇನ್ನು ಶೂನ್ಯ ಬಿಂದುವಿನಲ್ಲಿ ಉತ್ಪಾಟಿತವಾಗುವ ಶಾಖ ಅಲ್ಲಿಂದ ೫ ಕಿಮೀ ಒಳಗೆ ಸಮಸ್ತ ದಹ್ಯವಸ್ತುಗಳನ್ನೂ—ಮರ, ಬಟ್ಟೆ, ಮಾಂಸ, ಪಾಪ ಇತ್ಯಾದಿ—ಸುಟ್ಟು ಕರಕಲಾಗಿಸುತ್ತದೆ. ಅಲ್ಲಿ ಆ ಗಳಿಗೆ ವಾಯು ಅತಿ ಸಂಮರ್ದಿತವಾಗಿ ಮರುಗಳಿಗೆ ಅಲ್ಲಿಂದ ಶ್ರವಣಾತೀತ (ಶಬ್ದದ ವೇಗಕ್ಕಿಂತ ಅಧಿಕ) ವೇಗದಲ್ಲಿ ಸುತ್ತಲೂ ವಿಸ್ತರಿಸತೊಡಗುತ್ತದೆ. ಇದರ ಹೆಸರು ಸ್ಫೋಟನಮುಖ ಅಥವಾ ಸ್ಫೋಟನದ ಧಕ್ಕಾತರಂಗ. ಈ ಸಂಮರ್ದಿತ ವಾಯುವಿನ ಭಿತ್ತಿ ಇತನಗೆ ಎಷ್ಟು

ರಾಗುವ ಪ್ರತಿಯೊಂದು ಪದಾರ್ಥವನ್ನೂ ಧ್ವಂಸಮಾಡಿಬಿಡುತ್ತದೆ. ಅಲ್ಲದೇ ಶೂನ್ಯ ಬಿಂದುವಿನ ಸುತ್ತ ಆಂಶಿಕ ನಿರ್ವಾತವನ್ನೂ ಸೃಜಿಸುತ್ತದೆ. ಧಕ್ಕಾತರಂಗದ ಆರ್ಭಟ ಮತ್ತು ವೇಗ ತಗ್ಗುತ್ತಿದ್ದಂತೆ ಈ ಆಂಶಿಕ ನಿರ್ವಾತವನ್ನು ಭರ್ತಿ ಮಾಡಲು ಸುತ್ತಲಿಂದ ಗಾಳಿ ಅಲ್ಲಿಗೆ ಮುನ್ನುಗ್ಗಿ ಧಾವಿಸುತ್ತದೆ. ಇದರ ವೇಗ ಗಂಟೆಗೆ ೫೦೦ ಕಿಮೀ ವರೆಗೂ ಇರಬಹುದು. ಕೇವಲ ಕೆಲವೇ ಕ್ಷಣಗಳಲ್ಲಿ ಇದು ನಡೆದುಹೋಗುತ್ತದೆ. ಆ ಮೊದಲಿನ ಧಕ್ಕಾತರಂಗವನ್ನು ಎದುರಿಸಿ ನಿಂತಿರಬಹುದಾದ ಭದ್ರ ಸೌಧಗಳನ್ನು ಈ ಅಂತರ್ಮುಖೀ ಮಾರುತಗಳು ಮಟ್ಟಹಾಕಿಬಿಡುತ್ತವೆ. ತಾಂಡವ ನೃತ್ಯದ ಈ ರಂಗದಲ್ಲಿ ಜನ ಉಳಿಯುವುದುಂಟೇ ?

ಕಟ್ಟಡ ಕುಸಿತಗಳ ತತ್‌ಕ್ಷಣದ ಪರಿಣಾಮ ಅಗ್ನಿವರ್ಷ—ವಿದ್ಯುತ್ತಿನ ಹ್ರಸ್ವ ಮಂಡಲಗಳು (ಶಾರ್ಟ್ ಸರ್ಕ್ಯೂಟ್ಸ್), ಅಡುಗೆಮನೆ ಬೆಂಕಿ, ಸೋರುವ ಎಣ್ಣೆಡಬ್ಬಗಳು ಮತ್ತು ಬೀಸುವ ಗಾಳಿ ಜತೆಯಾದಾಗ ಬೇರೇನು ಬೇಕು ಬೆಂಕಿ ಚಾಚಲು, ಎಲ್ಲವನ್ನೂ ಕಬಳಿಸಲು ! ಅಂದರೆ ಕೇವಲ ೨೦–೩೦ ನಿಮಿಷಗಳ ಅವಧಿಯಲ್ಲಿ ಹಲವು ದಶಲಕ್ಷ ಸ್ಥಳೀಯವಾಸಿಗಳು ನಿಶ್ಶೇಷರಾಗಿ ಹೋಗುತ್ತಾರೆ. ಅಕಸ್ಮಾತ್ತಾಗಿ ಕೆಲವಂದಿ ಏನಾದರೂ ಉಳಿದಿದ್ದರೆ ಅವರು ನೋವು ಸಂಕಟಗಳಿಂದ ಶೀಘ್ರವಾಗಿ ಮಡಿಯುತ್ತಾರೆ. ಉಳಿದು ನರಳದ ಇವರು ನಿಜಕ್ಕೂ ಭಾಗ್ಯವಂತರು. ಉಳಿದವರ ಪಾಡು ?

ನೆಲದಲ್ಲಿಯ ಶೂನ್ಯ ಬಿಂದುವಿನಿಂದ ದೂರ ಇರುವ ಜನ ಸ್ಫೋಟನೆಯ ತತ್‌ಕ್ಷಣದ ಪರಿಣಾಮಗಳಿಂದ ಬಾಧಿತರಾಗದಿದ್ದರೂ ಬೈಜಿಕ ವಿಕಿರಣದ ಪ್ರಬಲ ತಾಡನೆಗೆ ಈಡಾಗುವುದಂತೂ ಖಾತ್ರಿ: ಚರ್ಮದ ಮೇಲೆ ವಿಕಿರಣ ವ್ರಣಗಳು ಏಳುತ್ತವೆ, ಆಂತರಿಕ ಅಂಗಗಳಿಗೆ ತೀವ್ರ ಗಾಸಿ ತಟ್ಟುತ್ತದೆ. ಇಂಥವರು ೨ ವಾರಗಳಿಂದ ೨ ತಿಂಗಳ ತನಕ ನರಳಿ ನವೆದು ಮಡಿಯುತ್ತಾರೆ. ಇವರ ಕಳೇಬರಗಳೂ ವಿಕಿರಣಪಟು ಆಗಿರುವುವು. ಆಸ್ಪತ್ರೆಗಳು ನೆಲಸಮ, ಕುಡಿವ ನೀರಿಲ್ಲ, ಪ್ರಾಥಮಿಕ ವೈದ್ಯಕೀಯ ಶುಶ್ರೂಷೆಯೂ ಸೊನ್ನೆ.

೧೦೦ ಕಿಮೀಗಿಂತ ದೂರದಲ್ಲಿರುವ ಜನರು ಕೂಡ ವಿಕಿರಣಮುಕ್ತರಾಗುವುದಿಲ್ಲ : ವಾಯುಮಂಡಲ ಸೇರಿದ ವಿಕಿರಣಪಟು ಧೂಳು ೨೦೦ ಕಿಮೀಗಿಂತಲೂ ಹೆಚ್ಚು ದೂರ ಬೀಸುಗಾಳಿ ಜೊತೆ ತೇಲಿ ಹರಡಿ ನೆಲಕ್ಕೆ ಬೀಳುತ್ತದೆ, ಮಳೆನೀರಿನೊಡನೆ ಬೆರೆತು ವಿಕಿರಣಪಟು ಮಳೆಗೆ ಕಾರಣವಾಗುತ್ತದೆ, ಹುಲ್ಲು ಗಿಡಮರ ಹಸುರೆಲ್ಲವನ್ನೂ ವಿಕಿರಣಮಯವಾಗಿಸುತ್ತದೆ. ದನದ ಹಾಲು, ಪ್ರಾಣಿಮಾಂಸ, ದವಸಧಾನ್ಯ ಎಲ್ಲವೂ ವಿಕಿರಣ ಕಲ್ಮಷಲೇಪಿತವಾಗಿರುತ್ತವೆ. ಇನ್ನು ಮನುಷ್ಯನನ್ನು ಈ ಕಬಂಧ ಬಾಹು ಬಿಡುವುದೇ ? ಕ್ಯಾನ್ಸರ್, ಜನನಸಂಬಂಧಿ ವ್ಯಾಧಿಗಳು, ಅಂಗವಿಕಲ ಶಿಶುಗಳ ಹೆರಿಗೆ, ಜೀನ್ ಸಂಬಂಧೀ ವಿಕೃತಿಗಳು (ಮ್ಯುಟೇಶನ್ಸ್) ವಿಕಿರಣದ ಇತರ ಕೆಲವು ದುಷ್ಪರಿಣಾಮಗಳು ಇಂಥಲ್ಲಿ ಜೀವಿಗಳಿಗೆ (ಸಸ್ಯ ಮತ್ತು ಪ್ರಾಣಿ ಸಮುಚ್ಚಯ) ಭವಿಷ್ಯ ಉಂಟೇ ?

ಇಲ್ಲಿಯತನಕ ಜನರ ಮತ್ತು ಇತರ ಜೀವಿಗಳ ಮೇಲೆ ಬಾಂಬಿನ ದುಷ್ಪರಿಣಾಮಗಳನ್ನ ಪ್ರಸ್ತಾಪಿಸಿದ್ದಾಯಿತು. ಇಷ್ಟೇ

ಅಲ್ಲ. ಹಿರೋಶಿಮಾ-ನಾಗಸಾಕಿ ಪ್ರದೇಶಗಳಲ್ಲಿ ಈ ಬಾಂಬುಗಳು ಅಲ್ಲಿಯ ಸಮಾಜವನ್ನೇ ಅಳಿಸಿಹಾಕಿದುವು. ನೆಲಗುರುತುಗಳೆಲ್ಲವೂ ನಿರ್ನಾಮ. ಮೃತರ ಬಂಧು, ಬಾಂಧವ, ಮಿತ್ರರು ಅಲ್ಲಿ ಏನನ್ನು ಹೇಗೆ ಪತ್ತೆಹಚ್ಚಬೇಕು ? ಇವರೆದುರಿಸಿದ್ದು ಒಟ್ಟು ಗೊಂದಲ, ರಾಡಿ, ರುದ್ರಭೀಷಣದೃಶ್ಯ, ಕುರುಕ್ಷೇತ್ರ ಸಾಪೇಕ್ಷವಾಗಿ ಪುಟ್ಟ ಬಾಂಬುಗಳೇ ಇಂಥ ಘೋರ ಸರ್ವನಾಶಕ್ಕೆ ಕಾರಣವಾಗಬಹುದಾದರೆ, ಇಂದು ಬೈಜಿಕ ರಾಷ್ಟ್ರಗಳ ಶಸ್ತ್ರಾಲಯಗಳಲ್ಲಿ "ನಿದ್ರಿಸುತ್ತಿರುವ" ಬೃಹದ್ಬಾಂಬುಗಳ ಚಂಡಾಟವೇನಾದರೂ ಆರಂಭವಾದರೆ ಪರಿಸ್ಥಿತಿ ಏನಾದೀತು ?

ನಿಜ ಸಂಗತಿ ಏನೆಂದರೆ ಬೈಜಿಕ ಸಮರದ ಪರಿಣಾಮಗಳು ನಮಗೆ ತಿಳಿದಿಲ್ಲ : ಅಂಥ ಒಂದು ಯುದ್ಧ ಇಲ್ಲಿಯತನಕ ಸಂಭವಿಸದಿರುವುದು ಮನುಕುಲದ ಅದೃಷ್ಟ, ಇಂದಿನ ಬೈಜಿಕ ಆಹವ ಮೆಗಟನ್ ಬೈಜಿಕಾಸ್ತ್ರಗಳ ಕಾದಾಟವಾದೀತೇ ವಿನಾ ೧೯೪೫ರ ೧೫ ಕಿಲೊಟನ್ "ಪಟಾಕಿ" ಸಿಡಿತಗಳಲ್ಲ. ಇಂಥ ಒಂದು ಮೆಗಟನ್ ಸಮರವನ್ನು ಗಣಕಗಳಲ್ಲಿ ಕೃತಕವಾಗಿ ಹೂಡಿ ಫಲಿತಾಂಶಗಳನ್ನು ಪರಿಶೀಲಿಸಲಾಗಿದೆ : ಕಾರ್ಲ್ ಸಗಾನ್ ಮತ್ತು ಪಾಲ್ ಎಹ್ರ್ಲಿಚ್ ಎಂಬ ಇಬ್ಬರು ಮುಂಚೂಣಿ ವಿಜ್ಞಾನಿಗಳು ಈ ಗಣಕ ಪ್ರಯೋಗ ಕರ್ತೃಗಳು. ಇವರ ಅಧ್ಯಯನಗಳು ಶ್ರುತಪಡಿಸುವ ಪ್ರಕಾರ ೧೯೪೫ರ ಘೋರ ಪರಿಣಾಮಗಳು ಇನ್ನೂ ಘೋರತರವಾಗಿ ಸಂಭವಿಸುತ್ತವೆ, ಬಾಂಬ್ ತಾಡಿತ ಪ್ರದೇಶಗಳು ಹಲವಾರು ತಿಂಗಳು ಪರ್ಯಂತ ಅಪ್ರವೇಶ್ಯವಾಗುತ್ತವೆ, ಪರಿಣಾಮಗಳೆಲ್ಲವೂ ಭೌಗೋಲೀಯ ಪ್ರಮಾಣದಲ್ಲಿದ್ದು ಸಮಸ್ತ ಭೂಮಂಡಲವನ್ನೂ ಆಕ್ರಮಿಸುತ್ತವೆ, ಈ ದಿಶೆಯಲ್ಲಿ ಇವರು ಕೆಲವು ಹೆಗ್ಗುರುತುಗಳನ್ನು ಕಂಡುಕೊಂಡು "ನ್ಯೂಕ್ಲಿಯರ" ವಿಂಟರ್" (ಬೈಜಿಕ ಚಳಿಗಾಲ) ಎಂಬ ಕೃತಿಯಲ್ಲಿ ಪ್ರಕಾಶಿಸಿದ್ದಾರೆ.

ಭವಿಷ್ಯದ ಮಾರಕ ಆಹವದಲ್ಲಿ ಪ್ರಯೋಗವಾಗುವ ಮೆಗಟನ್ ಬಾಂಬುಗಳು ಕ್ಷಣಾರ್ಧದಲ್ಲಿ ನಗರ ಸಮೂಹಗಳನ್ನೇ ನೆಕ್ಕಿದಟ್ಟ ಹೊಗೆ ಉರುಚುತ್ತವೆ. ಆಗ ಉದ್ಭವಿಸುವ ಪ್ರಚಂಡಾಗ್ನಿಮಾರುತಗಳು ಸುತ್ತಲೂ ಗಗನಾಭಿಮುಖವಾಗಿ ಧಾವಿಸಿ ೨೦ ಕಿಮೀಗಿಂತಲೂ ಎತ್ತರದಲ್ಲಿರುವ ಊರ್ಧ್ವವಾಯುಮಂಡಲಕ್ಕೆ (ಟ್ರೋಪೊಸ್ಫಿಯರ್) ಜಮೆಯಾಗಿ ಅಲ್ಲೇ ಪರಿಚಲಿಸಲು ಆರಂಭಿಸುತ್ತವೆ—ಅಂದರೆ ಈ ಭಗ್ನಾವಶೇಷಗಳು ಕೆಳವಾಯುಮಂಡಲಕ್ಕಾಗಲೀ ನೆಲಕ್ಕಾಗಲೀ ಮರಳುವುದಿಲ್ಲ. ಹೋಲಿಕೆಗೆ, ದಿನನಿತ್ಯ ಮನೆ, ಕಾರ್ಖಾನೆ, ವಾಹನಾದಿಗಳಿಂದ ಹೊಮ್ಮುವ ಹೊಗೆ ೨ ಕಿಮೀಗಿಂತ ಎತ್ತರಕ್ಕೆ ಹೋಗುವುದಿಲ್ಲ. ಕ್ರಮೇಣ ಇದು ಕೆಳಸರಿದು ಇಂಗಾಲ ಕಣಗಳಾಗಿ ಉದುರಬಹುದು, ಮಳೆ ನೀರಿನೊಡನೆ ಬೆರೆತು ನೆಲಕ್ಕೋ ಕಡಲಿಗೋ ಬೀಳಬಹುದು.

ಪ್ರಚಂಡಾಗ್ನಿ ಮಾರುತಗಳ ಕಥೆಯೇ ಬೇರೆ. ಈ ಹೊಗೆ ಊರ್ಧ್ವವಾಯುಮಂಡಲದಲ್ಲಿ ಪರಿಚಲಿಸುತ್ತಿರುವುದು. ಹಿಂದೆ ಇಂಡೊನೇಶ್ಯದ ಕ್ರಕಟೋವಾ ಜ್ವಾಲಾಮುಖಿ ಸ್ಫೋಟಿಸಿ ಧೂಮ-ಧೂಳು-ಅನಿಲ ಮಿಶ್ರಣವನ್ನು ಚಿಮ್ಮಿಸಿತ್ತು. ತೀರ ಈಚೆಗೆ ಫಿಲಿಪ್ಪೀನ್ಸ್‌ನಲ್ಲಿ ಪಿನಟೂಬ ಕೂಡ ಸ್ಫೋಟಿಸಿದೆ. ಈ ಕಣಗಳು ಊರ್ಧ್ವವಾಯುಮಂಡಲಕ್ಕೆ ಜಮೆಯಾಗಿರುವುದು

ತಿಳಿದಿದೆ. ನೆಲದಿಂದ ೨೦ ಕಿಮೀಗಿಂತಲೂ ಹೆಚ್ಚಿನ ಎತ್ತರದ ವಾಯುಮಂಡಲದಲ್ಲಿ ಇಂಥ ಧೂಳರಾಶಿ ನಿಬಿಡವಾದರೆ ಏನಾದೀತು ? ಸೌರವಿಕಿರಣವನ್ನು (ಬೆಳಕು, ಶಾಖ ಇತ್ಯಾದಿ) ಈ ಪದರ "ಸೋಸಿ" ಉಳಿಕೆಯನ್ನು ಕೆಳಕ್ಕೆ (ಭೂಮಿಗೆ) ಜಿನುಗಲು ಬಿಡುತ್ತದೆ. ಇಂಥ ಪರಿಸ್ಥಿತಿ ಹಲವು ವಾರ ಮುಂದುವರಿದರೆ ಭೂಮಿ ಪಡೆಯುವ ಸೂರ್ಯಪ್ರಕಾಶ ಕುಸಿಯುತ್ತದೆ, ಶಾಖ ತಗ್ಗುತ್ತದೆ, ಫಲವಾಗಿ ಸಸ್ಯಗಳಲ್ಲಿ ದ್ಯುತಿಸಂಶ್ಲೇಷಣೆ ಕುಂಠಿತವಾಗುತ್ತದೆ, ೧೦° ಸೆಲ್ಸಿಯಸಿನಷ್ಟು ಇಳಿಯುವ ವಾಯುಮಂಡಲ ಉಷ್ಣತೆ ದ್ಯುತಿಸಂಶ್ಲೇಷಣೆಗೆ ಇನ್ನಷ್ಟು ಮಾರಕವಾಗುತ್ತದೆ. ಪೈರು ಫಸಲು ಉತ್ಪಾದನೆಯಲ್ಲಿ ಇಳಿತ, ಆಹಾರ ಪದಾರ್ಥಗಳ ಪೂರೈಕೆಯಲ್ಲಿ ಕಡಿತ, ಹವೆಯಲ್ಲಿ ಶೈತ್ಯದ ಕೊರೆತ. ಈ ಮನುಷ್ಯಕೃತ ಬೈಜಿಕ ಚಳಿಗಾಲ, ಬರಗಾಲಗಳಲ್ಲಿ ಜೀವಿಗಳು ನಿಧಾನ ಮರಣ ಅಪ್ಪುವುದು ದಿಟ. ಹಲವು ವರ್ಷ ಪರ್ಯಂತ ಈ ದುಷ್ಕಾಲ ಮುಂದುವರಿಯಬಹುದು.

ಇಷ್ಟೆಲ್ಲ ವಿವರಗಳು ಸಾಕ್ಷ್ಯಾಧಾರ ಸಹಿತ ತಿಳಿದಿದ್ದೂ ಯಾವುದೇ ದೇಶ ಇನ್ನೊಂದರ ಮೇಲೆ ಮೆಗಟನ್ ಬೈಜಿಕಾಸ್ತ್ರವನ್ನು ಕೆಡೆದದ್ದೇ ಆದರೆ ಅದೇ ವೇಳೆ ಈ ಎರಡನೆಯದು ಮೊದಲನೆಯದರ ಮೇಲೆ ಮೃತ್ಯು ಬಾಂಬನ್ನು ಎಸೆಯುವುದು ದಿಟ. ಫಲಿತಾಂಶ: ಸರ್ವನಾಶ, ಭಸ್ಮಾಸುರ ದಹನ. ಬೈಜಿಕ ಬಾಂಬ್ ಧಾಳಿಗೆ ಮೊದಲ ಗುರಿ ನಿಬಿಡ ನಗರಗಳು ಪರಮಾಣು ಸಂಸ್ಕರಣ ಕೇಂದ್ರಗಳು ಸೇನಾವಸಾಹತುಗಳು, ಸರ್ಕಾರೀ ಕೇಂದ್ರಗಳು ಇತ್ಯಾದಿ. ಮುಂಬೈ, ನವದೆಹಲಿ, ಕಲ್ಕತ್ತ, ಬೆಂಗಳೂರು ಮುಂತಾದ ಮಹಾನಗರಗಳು ಹಾಗಿರಲಿ ನಮ್ಮ ಶಾಂತ ಸುಂದರ ಮೈಸೂರು ನಗರವೂ ಸುಲಭ ಗುರಿಯಾಗುವ ಸಾಧ್ಯತೆ ಇದೆ: ನಗರದ ಹೊರವಲಯದಲ್ಲಿ ನಿಗೂಢವಾಗಿ ಕ್ರಿಯಾಶೀಲವಾಗಿರುವ ರಟ್ನಹಳ್ಳಿಯ ಯುರೇನಿಯಮ್ ಸಂವರ್ಧನ ಕೇಂದ್ರ. ಮಾರ್ಗದರ್ಶಿತ ಕ್ಷಿಪಣಿಗಳು (ಗೈಡೆಡ್ ಮಿಸೈಲ್ಸ್) ಎಲ್ಲಿಂದ ಎಲ್ಲಿಗೆ ಬೇಕಾದರೂ ಧಾವಿಸಿ ಕರಾರುವಾಕ್ಕಾಗಿ ಗುರಿ ಹೊಡೆಯಬಲ್ಲವು.

ಇಂಥ ಒಂದು ದುರ್ಭರ ಸಂದರ್ಭದಲ್ಲಿ ದೇಶಗಳಿಗೆ ಶಾಂತಿ, ಸುರಕ್ಷಣೆ, ಪ್ರಗತಿ, ಅಭಿವೃದ್ಧಿ ಮುಂತಾದವು ಒದಗಲು ಇರುವ ಏಕೈಕ ಮಾರ್ಗವೆಂದರೆ—ಎಲ್ಲ ರಾಷ್ಟ್ರಗಳಿಂದ ಎಲ್ಲ ಬಗೆಯ ಬೈಜಿಕಾಸ್ತ್ರಗಳ ಸಂಪೂರ್ಣ ವಿಸರ್ಜನೆ ಮತ್ತು ನಿಶ್ಶಸ್ತ್ರೀಕರಣ. ಶಾಂತಿಯನ್ನು ಗಳಿಸಲು ಮಾನವ ತೆರಬೇಕಾದ ಶುಲ್ಕ ಯುದ್ಧ ನಿರಾಕರಣೆ.

"ಮೂರನೆಯ ಪ್ರಪಂಚ ಯುದ್ಧ ಯಾವ ತೆರನಾಗಿ ಕಾದಾಡಲ್ಪಟ್ಟೀತೆಂದು ನನಗೆ ತಿಳಿದಿಲ್ಲ ; ಆದರೆ ನಾಲ್ಕನೆಯದರಲ್ಲಿ ಅವರು ಏನು ಬಳಸುವರೆಂಬುದು ಗೊತ್ತಿದೆ —ಕಲ್ಲುಗಳು !" ಆಲ್ಬರ್ಟ್ ಐನ್‌ಸ್ಟೈನ್.

ಪುಸ್ತಕ ಪರಿಚಯ

'ನಡುರಾತ್ರಿಯಲ್ಲಿ ಸ್ವಾತಂತ್ರ್ಯ' ಮೂಲ: ಲ್ಯಾರಿ ಕಾಲಿನ್ಸ್ ಮತ್ತು ಡೊಮಿನಿಕ್ ಲೇಪಿಯರ್ ಅವರ 'ಫ್ರೀಡಂ ಎಟ್ ಮಿಡ್‌ನೈಟ್'— ಅನುವಾದ: ಎಚ್. ಆರ್. ಚಂದ್ರವದನರಾವ್ ; ಪ್ರಕಾಶಕರು : ಸಂವಹನ ೧೫೫೦, ಈವ್ನಿಂಗ್ ಬಜಾರ್ ಹಿಂದೆ. ಶಿವರಾಮಪೇಟೆ, ಮೈಸೂರು–೫೭೦ ೦೦೧; ಪುಟ ೨೬೨+viii ಡೆಮಿ ೧/೮; ಬೆಲೆ ೧೨೫–೦೦ ರೂ.

೫೦೦ ಟನ್ ಭಾರದ ಹೆಕ್ಟರ್ ಹಡಗಿನಲ್ಲಿ ವ್ಯಾಪಾರದ ಸರಕುಗಳನ್ನು ಹೇರಿಕೊಂಡು ೧೬೦೦ ರ ಅಗಸ್ಟ್ ೨೪ ರಂದು ಮುಂಬೈನ ಉತ್ತರದ ಸೂರತ್ ರೇವಿಗೆ ಬಂದಿಳಿದ ಬ್ರಿಟಿಷರು ಈ ದೇಶವನ್ನು ಮೂರು ಶತಮಾನಗಳಿಗೂ ಮಿಗಿಲಾಗಿ ಆಳಿ, ರಾಷ್ಟ್ರದ ಸಂಪತ್ತನ್ನು ಕೊಳ್ಳೆ ಹೊಡೆದು, ದೇಶವನ್ನು ಇಬ್ಭಾಗವಮಾಡಿ ೧೯೪೭ ರಲ್ಲಿ ಇಲ್ಲಿಂದ ಕಾಲ್ತೆಗೆದರು.

ದೇಶ ಸ್ವಾತಂತ್ರ್ಯ ಪಡೆದ ಸಂದರ್ಭದಲ್ಲಿ ಹಲವು ಹನ್ನೊಂದು ಘಟನೆಗಳು ಈ ದೇಶದಲ್ಲಿ ನಡೆದುವು: ಕಡೆಯ ವೈಸ್‌ರಾಯ್ ಲೂಯಿಮೌಂಟ್ ಬೇಟನ್ ನೇಮಕ, ಜಿನ್ನಾನ ಹಠಮಾರಿತನದಿಂದ ದೇಶದ ಇಬ್ಭಾಗ, ಬ್ರಿಟಿಷರಿಂದ ಅಧಿಕಾರದ ಹಸ್ತಾಂತರ, ಆಸ್ತಿ ಆಡಳಿತಗಳ ಹಂಚಿಕೆ, ಇಬ್ಭಾಗದ ಸಂದರ್ಭದಲ್ಲಿ ದೆಹಲಿ, ಮುಂಬಯಿ, ಕಲ್ಕತ್ತ ಮುಂತಾದ ಕಡೆಗಳಲ್ಲಿ ಎದ್ದ ಕೋಮು ದಳ್ಳುರಿ, ಇದರಿಂದ ಗಾಂಧಿ ಅನುಭವಿಸಿದ ಯಾತನೆ, ಮುಂತಾದ ಹಲವಾರು ಘಟನೆಗಳನ್ನು ನಡುರಾತ್ರಿಯಲ್ಲಿ ಸ್ವಾತಂತ್ರ್ಯ ಕೃತಿಯು ಅನಾವರಣ ಮಾಡುತ್ತಾ, ಗಾಂಧೀಜಿ ಹತ್ಯೆಯಲ್ಲಿ ಪರಿಸಮಾಪ್ತಿಯಾಗುತ್ತದೆ.

ಈ ಎಲ್ಲ ಸಂಗತಿಗಳನ್ನು 'ಫ್ರೀಡಂ ಎಟ್ ಮಿಡ್ ನೈಟ್' ಕೃತಿಯಲ್ಲಿ ಲೇಖಕರಾದ ಲ್ಯಾರಿಕಾಲಿನ್ಸ್ ಮತ್ತು ಡೊಮಿನಿಕ್ ಲೇಪಿಯರ್ ಅವರು ಕಣ್ಣಿಗೆ ಕಟ್ಟಿದಂತೆ, ಹೃದಯಕ್ಕೆ ತಾಗಿದಂತೆ ಚಿತ್ರಿಸಿದ್ದಾರೆ. ಇದಕ್ಕಾಗಿ ಲೇಖಕರು ಸಾವಿರಾರು ಮೈಲುಗಳ ದೂರ ಸಂಚರಿಸಿದ್ದಾರೆ. ನೂರಾರು ಜನರನ್ನು ಸಂದರ್ಶಿಸಿದ್ದಾರೆ. ದಾಖಲಾತಿಗಳನ್ನು ತಲಸ್ಪರ್ಶಿಯಾಗಿ ಜಾಲಾಡಿದ್ದಾರೆ. ಹಲವು ಹನ್ನೊಂದು ಗ್ರಂಥಗಳನ್ನು ಅಧ್ಯಯನ ಮಾಡಿದ್ದಾರೆ. ಮೂರು ವರ್ಷಗಳ ಸತತ ಶ್ರಮದ ಫಲವಾಗಿ ಸತ್ಯಕ್ಕೆ

ಸಮೀಪವಾದ 'ಫ್ರೀಡಂ ಎಟ್ ಮಿಡ್ ನೈಟ್' ಕೃತಿಯು ರೂಪಗೊಂಡಿದೆ. ಈ ಐತಿಹಾಸಿಕ ಕೃತಿಯು ಹತ್ತಾರು ಭಾಷೆಗಳಿಗೆ ಅನುವಾದಗೊಂಡು ಜಗತ್ತಿನಾದ್ಯಂತ ಲಕ್ಷಾಂತರ ಓದುಗರ ಕುತೂಹಲ ತಣಿಸಿದೆ.

'ನಡುರಾತ್ರಿಯಲ್ಲಿ ಸ್ವಾತಂತ್ರ್ಯ' ಕನ್ನಡ ಆವೃತ್ತಿಯಲ್ಲಿ ಮುದ್ರಣ ದೋಷ ಅಲ್ಲಲ್ಲಿ ಇದ್ದು, ಆರ್.ಎಸ್.ಎಸ್. ಕೊನೆಯವರೆಗೂ ಆರ್.ಎಸ್.ಎಸ್.ಎಸ್. ಆಗಿಯೇ ಉಳಿದುಕೊಂಡಿದೆ. ಕೃತಿಯಲ್ಲಿರುವ ನಾಲ್ಕಾರು ಚಿತ್ರಗಳು ಅಮೂಲ್ಯವಾಗಿದ್ದು, ಇವು ಇನ್ನೂ ಉತ್ತಮವಾಗಿ ಮುದ್ರಣವಾಗಬಹುದಿತ್ತು. ಗಾಂಧೀಜಿ ಎದೆಗೆ ಗುಂಡುತಾಕಿ ಚಿರ ನಿದ್ರೆಯಲ್ಲಿ ಮಲಗಿರುವ ಚಿತ್ರ ನಿಂತಿರುವ ಭಂಗಿಯಲ್ಲಿ ಮುದ್ರಣವಾಗಿರುವುದು ಅಭಾಸವಾಗಿದೆ.

ಎಚ್.ಆರ್. ಚಂದ್ರವದನರಾವ್ ಅವರು ಮೂಲ ಕೃತಿಯ ಆಶಯಕ್ಕೆ ಮೆರಗು ನೀಡಿ 'ನಡುರಾತ್ರಿಯಲ್ಲಿ ಸ್ವಾತಂತ್ರ್ಯವನ್ನು' ಕನ್ನಡಿಸಿದ್ದಾರೆ. "ಶ್ರೀ ಎಚ್. ಆರ್. ಚಂದ್ರವದನರಾವ್ ಅವರ ಗ್ರಂಥವನ್ನೋದುವಾಗ ಅದು ಭಾಷಾಂತರದಂತೆ ಕಾಣಿಸುವುದಿಲ್ಲ. ದೇಶ ವಿಭಜನೆಯ ಸಂದರ್ಭದಲ್ಲಿ ನಡೆದ ಘಟನೆಗಳನ್ನು ತಾವೇ ಪ್ರತ್ಯಕ್ಷವಾಗಿ ನೋಡಿದಂತೆ ಸರಾಗವಾಗಿ, ಚಿತ್ರವತ್ತಾಗಿ, ಸ್ವಾರಸ್ಯವಾಗಿ ವರ್ಣಿಸುತ್ತಾರೆ. ಉಚಿತ ರುಚಿರ ಪದ ಪ್ರಯೋಗಗಳಿಂದ, ಸುತ್ತು ಬಳಸಿಲ್ಲದ ಪೆಡಸಿಲ್ಲದ ಸರಳ ಸ್ಫಟಿಕ ಸದೃಶ ವಾಕ್ಯ ರಚನೆಯಿಂದ ಈ ಕತೆ ಎಲ್ಲಿಯೂ ಕುಂಟದೆ, ಎಡಹದೆ ಮುಗ್ಗರಿಸದೆ ಜುಳು ಜುಳು ನಿನಾದದೊಡನೆ ಹರಿಯುತ್ತದೆ. ಓದು ಬಲ್ಲವರೆಲ್ಲರೂ ಓದಬೇಕಾದ ಪ್ರತಿಯೊಂದು ಗ್ರಥಭಂಡಾರವೂ ಸಂಗ್ರಹಿಸಬೇಕಾದ ಗ್ರಂಥವಿದು." ಎಂದು ಡಾ|| ದೇಜಗೌ ಅವರು ಕೃತಿಯನ್ನು ಕುರಿತು ವ್ಯಕ್ತಪಡಿಸಿರುವ ಅಭಿಪ್ರಾಯ ಕೃತಿಯ ಮೌಲ್ಯಮಾಪನ ಆಗಿದೆ.

ಭಾರತ ಸ್ವಾತಂತ್ರ್ಯದ ಪ್ರಮುಖ ಮಜಲುಗಳನ್ನು ಸಾಕ್ಷ್ಯಾಧಾರಗಳಿಂದ ದಾಖಲಿಸಿರುವ ಅಮೂಲ್ಯ ಗ್ರಂಥ ಇದಾಗಿದ್ದು, ಭಾರತದ ಪ್ರಜ್ಞಾವಂತ ಪ್ರಜೆ ಅರಿಯಲೇಬೇಕಾದ ವಿಷಯ ಒಳಗೊಂಡಿದೆ. ಈ ಗ್ರಂಥವನ್ನು ಕನ್ನಡಿಸಿದ ಶ್ರೀ ಎಚ್. ಆರ್. ಚಂದ್ರವದನರಾವ್ ಅವರು ಅಭಿನಂದನಾರ್ಹರು, ಕೃತಿ ಪ್ರಕಟಿಸಿದ ಸಂವಹನ ಪ್ರಕಾಶನ ಬಳಗ ಕೃತಜ್ಞತೆಗೆ ಪಾತ್ರರು.

* * * * *

೧. ಸ್ವಾತಂತ್ರ್ಯಕ್ಕೆ ಐವತ್ತು ವರ್ಷ—ಲೇಖಕರು: ವ್ಯಾಸರಾಯ ಬಲ್ಲಾಳ ಪುಟಗಳು: ೧೦೪.

೨. ಸ್ವಾತಂತ್ರ್ಯ ಸಂಗ್ರಾಮದ ಹೆಜ್ಜೆಗಳು—ಲೇಖಕರು: ಬಿ. ವಿ. ಕಕ್ಕಿಲ್ಲಾಯ ಪುಟಗಳು: ೧೦೪.

೩. ಮಾಧ್ಯಮ ಮತ್ತು ಸ್ವಾತಂತ್ರ್ಯ—ಲೇಖಕರು: ಜಿ. ಎಸ್. ಮೋಹನ್ ಪುಟಗಳು ೧೦೪.

೪. ಸ್ವಾತಂತ್ರ್ಯೋತ್ತರ ಕೃಷಿರಂಗ—ಲೇಖಕರು : ವೈ. ವಿ. ಕೃಷ್ಣರಾವ್ ಸಂಗ್ರಹಾನುವಾದ : ಕೆ. ಎಲ್. ಗೋಪಾಲ ಕೃಷ್ಣರಾವ್ ಪುಟಗಳು : ೧೨೦.

ಸ್ವಾತಂತ್ರ್ಯ ಸುವರ್ಣೋತ್ಸವ ಮಾಲಿಕೆಯಲ್ಲಿ ಪ್ರಕಟವಾಗಿರುವ ಈ ನಾಲ್ಕೂ ಕೃತಿಗಳ ಬೆಲೆ : ೩೫–೦೦ ರೂ.ಗಳು.

ಪ್ರಕಾಶಕರು : ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್ ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು–೫೬೦ ೦೦೧.

೧ 'ಸ್ವಾತಂತ್ರ್ಯಕ್ಕೆ ಐವತ್ತು ವರ್ಷ'

ಸ್ವಾತಂತ್ರ್ಯಗಳಿಸಿದ ಐದು ದಶಕಗಳ ಅವಧಿಯಲ್ಲಿ ದೇಶವು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ವೈಜ್ಞಾನಿಕ ಹೀಗೆ ಹಲವು ಹತ್ತು ಕ್ಷೇತ್ರಗಳಲ್ಲಿ ಪ್ರಗತಿ ಸಾಧಿಸಿದೆ, ಸಾಧಿಸುತ್ತಿದೆ. ಆದರೆ ಸ್ವಾತಂತ್ರ್ಯ ಪೂರ್ವದಲ್ಲಿ ಕಂಡ ಕನಸು ನನಸಾಗಿದೆಯೆ ? ಸ್ವಾತಂತ್ರ್ಯ ಗಳಿಕೆಯ ಉದ್ದೇಶ ಸಫಲವಾಗಿದೆಯೆ ? ಎಂದು ಪ್ರಜ್ಞಾವಂತ ಪ್ರಜೆ ಪ್ರಶ್ನಿಸಿಕೊಂಡಾಗ, ಪ್ರಶ್ನೆ ಪ್ರಶ್ನೆಯಾಗಿಯೇ ಉಳಿಯುತ್ತದೆ. ಇಂಥ ಪ್ರಶ್ನೆಗಳ ಸರಮಾಲೆಯನ್ನು ಓದುಗರ ಮುಂದಿರಿಸಿ ಚಿಂತನೆಗೆ ಈಡುಮಾಡುವ ಕೃತಿ 'ಸ್ವಾತಂತ್ರ್ಯಕ್ಕೆ ಐವತ್ತು ವರ್ಷ' ಈ ಕೃತಿಯು ರಾಜನಿಷ್ಠೆ. ನಾಗರಿಕ-ಪ್ರಜ್ಞೆ, ಸಾಮಾಜಿಕ ನ್ಯಾಯ, ಲಂಚಾವತಾರ, ನಾವಿರೋದೆ ಹೀಗೆ, ಅಸ್ವಸ್ಥ ಭಾರತ, ಅನುಬಂಧ, ಎಂಬ ೭ ಲೇಖನಗಳನ್ನು ಒಳಗೊಂಡಿದೆ. ನಾಡಿನ ಹಿರಿಯ ಚಿಂತನಶೀಲ ಲೇಖಕರಾದ ವ್ಯಾಸರಾಯ ಬಲ್ಲಾಳರು ವಿವಿಧ ಸಂದರ್ಭಗಳಲ್ಲಿ ಬರೆದ ಲೇಖನಗಳಾಗಿವೆ. ಈ ಲೇಖನಗಳು ಸಂದರ್ಭಕ್ಕನುಗುಣವಾಗಿ ರಚನೆಯಾದರೂ, ಶಾಶ್ವತ ಮೌಲ್ಯಗಳನ್ನು ಒಳಗೊಂಡಿದ್ದೆ, ಓದುಗರನ್ನು ಚಿಂತನೆ ಒರೆಗಲ್ಲಿಗೆ ಹಚ್ಚುತ್ತವೆ.

೨ ಸ್ವಾತಂತ್ರ್ಯ ಸಂಗ್ರಾಮದ ಹೆಜ್ಜೆಗಳು

ಈ ಕೃತಿಯು ಸ್ವಾತಂತ್ರ್ಯ ಚಳವಳದ ಆರಂಭ, ಹಲವು ತೊರೆಗಳು, ಕೆಂಪು ತಾರೆಯ ಉದಯ, ಸಾಮೂಹಿಕ ಚಳವಳದ ಹಾದಿ, ಸ್ವಾತಂತ್ರ್ಯದ ಹೊಸ್ತಿಲಲ್ಲಿ, ರಾಷ್ಟ್ರೀಯ ಏಕತೆ ಸಾಧನೆ, ನಮ್ಮ ಸಂವಿಧಾನ : ವ್ಯಾಪ್ತಿ, ಪರಿಮಿತಿ ಎಂದು ಏಳು ಅಧ್ಯಾಯಗಳಲ್ಲಿ ವಿಷಯ ನಿರೂಪಣೆಯಾಗಿದೆ, ಭಾರತ ಸ್ವಾತಂತ್ರ್ಯಗಳಿಸಲು ಗಾಂಧೀಜಿಯವರ ಅಹಿಂಸಾತ್ಮಕ ಚಳುವಳಿಯು ಪ್ರಧಾನ ಅಂಶವಾದರೂ ಇದರ ಹಿಂದೆ ಅಡಗಿರುವ ಇತರ ಶಕ್ತಿಗಳ ಕಾಣಿಕೆಯೂ ಅಪಾರ. ಕೃತಿಯು ಪ್ರಧಾನವಾಗಿ ಕಾರ್ಮಿಕ ಪಾತ್ರದ ಹಿನ್ನಲೆಯಲ್ಲಿ ಕಮ್ಯುನಿಸ್ಟ್ ಛಾಯೆಯನ್ನು ಪ್ರತಿಬಿಂಬಿಸುತ್ತದೆ. ಕಮ್ಯುನಿಸ್ಟ್ ಚಳುವಳಿಯ ಸಕ್ರಿಯ ಕಾರ್ಯಕರ್ತರಾದ ಲೇಖಕರಿಗೆ ಇದು ಅನಿವಾರ್ಯ ಅಂಶವಾಗಿದೆ. ಲೇಖಕರು ಪ್ರಮುಖವಾಗಿ ರಾಜಕಾರಣಿಯಾದರೂ ಸಾಹಿತ್ಯ ಕ್ಷೇತ್ರಕ್ಕೆ ಗಣನೀಯ ಸೇವೆ ಸಲ್ಲಿಸಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪುರಸ್ಕೃತರಾಗಿದ್ದಾರೆ.

೩. ಮಾಧ್ಯಮ ಮತ್ತು ಸ್ವಾತಂತ್ರ್ಯ

ನಾಲ್ಕನೆಯ ಆಸ್ತಿ, ಹಿಂಬಾಗಿಲ ಮೂಲಕ, ಜಪ್ಪಿಗೆಯ ಉತ್ಪಾದನೆ, ಮತ್ತೆ ತುರ್ತುಪರಿಸ್ಥಿತಿ, ಸುದ್ದಿಯ ಉತ್ಪಾದನೆ, ಕಂಪನಿ ಪತ್ರಿಕೋದ್ಯಮ, ಕೋಮುವಾದದ ಅಲೆ, ಪ್ರಸಾರ ಭಾರತಿ, ಹಾಗೂ ಐದನೆಯ ಆಸ್ತಿ ಎಂಬ ಒಂಬತ್ತು ಪ್ರಮುಖ ಅಂಶಗಳನ್ನು ಕೃತಿ ಒಳಗೊಂಡಿದೆ.

ಸ್ವಾತಂತ್ರ್ಯ ಪೂರ್ವದ ಪತ್ರಿಕೆಗಳಿಗೂ ಸ್ವಾತಂತ್ರ್ಯಾನಂತರದ ಪತ್ರಿಕೆಗಳಿಗೂ ಇರುವ ಅಂತರ ಅಪಾರ. ಈ ಅಂತರ ಅನಿವಾರ್ಯವೂ ಹೌದು. ಇಂದು ಹೊಸ ಹೊಸ ಮಾಧ್ಯಮಗಳು ಜನ್ಮ ತಳೆಯುತ್ತಿದ್ದು, ಸಮಗ್ರ ವಿಶ್ವವನ್ನೇ ಪ್ರಸಾರ ಮಾಧ್ಯಮ ಒಂದಾಗಿ ಬೆಸೆಯುವ ಪ್ರಬಲ ಸಾಧನಗಳಾಗಿ ರೂಪುಗೊಳ್ಳುತ್ತಿದೆ.

ಹೊಸ ಆವಿಷ್ಕಾರದೊಂದಿಗೆ ಒಂದೆಡೆ ದೇಶೀಯ ಪತ್ರಿಕೆಗಳು ಸ್ಪರ್ಧೆ ನಡೆಸುತ್ತಿದ್ದರೆ, ಇನ್ನೊಂದೆಡೆ ವಿದೇಶೀ ಪತ್ರಿಕೆಗಳು ಧಾಳಿ ಇಡುವ ಮುನ್ಸೂಚನೆಗಳು ಗೋಚರವಾಗುತ್ತಿದ್ದು, ಈ ಎಲ್ಲ ಅಂಶಗಳನ್ನು ಪತ್ರಿಕಾಮಾಧ್ಯಮದ ಒಳ ಹೊರಗನ್ನು ಹತ್ತಿರದಿಂದ ಕಂಡ ಲೇಖಕರಾದ ಪತ್ರಕರ್ತ ಜಿ. ಎನ್. ಮೋಹನ್ ಅವರು ಪರಿಣಾಮಕಾರಿಯಾಗಿ ಪ್ರತಿಪಾದಿಸಿದ್ದಾರೆ.

೪ ಸ್ವಾತಂತ್ರ್ಯೋತ್ತರ ಕೃಷಿರಂಗ

ಭಾರತವು ಕೃಷಿ ಪ್ರಧಾನ ದೇಶವಾಗಿದ್ದು ಶ್ರಮಿಕ ವರ್ಗದ ಬಹುಪಾಲು ಕೃಷಿ ಅವಲಂಬಿತರು. ಈ ಕಾರಣಗಳಿಂದಾಗಿ ಕೃಷಿಯು ಈ ದೇಶದ ಪ್ರಮುಖ ಆರ್ಥಿಕ ಅಂಶವಾಗಿದೆ. ಪ್ರಸ್ತುತ ಕೃತಿಯಲ್ಲಿ ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯಾನಂತರದಲ್ಲಿ ಕೃಷಿ, ಕೃಷಿಯಲ್ಲಿ ತೊಡಗಿಸಿದ ಹಣ ಹಾಗೂ ಸಾಧಿಸಿದ ಪ್ರಗತಿ, ನಿಗದಿತ ಗುರಿಮುಟ್ಟದಿರಲು ಕಾರಣ, ಗ್ರಾಮಾಭಿವೃದ್ಧಿ ಹಾಗೂ ಬಡತನ ನಿವಾರಣೆ ಯೋಜನೆಗಳು, ಗ್ಯಾಟ್-ಪೇಟೆಂಟ್-ಉದಾರೀಕರಣ ಮುಂತಾದ ಹಲವು ಹತ್ತು ವಿಷಯಗಳನ್ನು ಕುರಿತು ಕೃತಿಯಲ್ಲಿ ಪ್ರಸ್ತಾಪ ಇದೆ. ಈ ಕ್ಷೇತ್ರವನ್ನು ಅಧಿಕಾರಯುತವಾಗಿ ಬಲ್ಲ ಲೇಖಕ ಶ್ರೀ ವೈ. ವಿ. ಕೃಷ್ಣರಾವ್ ಅವರ ವಿಷಯ ಪ್ರತಿಪಾದನೆಯಲ್ಲಿ ನಿಖರತೆ ಇದೆ. ಶ್ರೀ ಕೆ. ಎಲ್. ಗೋಪಾಲಕೃಷ್ಣರಾವ್ ಅವರ ಸಂಗ್ರಹಾನುವಾದವು ಸ್ವತಂತ್ರ ಕೃತಿ ಎನ್ನುವಷ್ಟರಮಟ್ಟಿಗಿದೆ.

ಸುವರ್ಣೋತ್ಸವ ಮಾಲಿಕೆಯ ಪ್ರಧಾನ ಸಂಪಾದಕರಾದ ಡಾ|| ಜಿ. ರಾಮಕೃಷ್ಣ ಅವರು ಈ ಕೃತಿಗಳಿಗೆ ಬರೆದಿರುವ 'ಓದುಗರೊಡನೆ.........' ಸಂಪಾದಕೀಯ ಲೇಖನ ಓದುಗರನ್ನು ಚಿಂತನೆಗೆ ತೊಡಗಿಸಿ, ಕೃತಿಯನ್ನು ಓದಬೇಕೆಂಬ ಹಂಬಲ ಉಂಟುಮಾಡುತ್ತದೆ. ಮೌಲಿಕ ವಿಷಯಗಳನ್ನೊಳಗೊಂಡಂತೆ ಸರ್ವಾಂಗ ಸುಂದರವಾಗಿ ಈ ಕೃತಿಗಳನ್ನು ಪ್ರಕಟಿಸಿ ಸುವರ್ಣ ಸ್ವಾತಂತ್ರ್ಯೋತ್ಸವಕ್ಕೆ ಅರ್ಥಪೂರ್ಣ ಕೊಡುಗೆ ನೀಡಿರುವ ನವಕರ್ನಾಟಕ ಪ್ರಕಾಶನ ಅಭಿನಂದನಾರ್ಹರು.

ಚಂದ್ರಶೇಖರಾರಾಧ್ಯ

೧೪೫, 'ಇಂಚರ', ಎಂ. ಬ್ಲಾಕ್

೨ ನೆಯ ಹಂತ, ಕುವೆಂಪುನಗರ, ಮೈಸೂರು-೨೩

ಸೆಪ್ಟೆಂಬರ್ ೮, ಅಂತರ್ರಾಷ್ಟ್ರೀಯ ಸಾಕ್ಷರತಾ ದಿನ

೧೯೬೫ ರ ಸೆಪ್ಟೆಂಬರ್ ೮ ರಿಂದ ೧೮ ರ ವರೆಗೆ ವಯಸ್ಕ ಶಿಕ್ಷಣ ಸಮ್ಮೇಳನ ಒಂದು ಯುನೆಸ್ಕೊ ಸಂಸ್ಥೆಯ ಆಶ್ರಯದಲ್ಲಿ ಇರಾನ್ ರಾಜಧಾನಿ ಟೆಹರಾನ್‌ನಲ್ಲಿ ನಡೆಯಿತು. ಈ ಸಮ್ಮೇಳನದಲ್ಲಿ ಪ್ರಪಂಚದ ೮೫ ರಾಷ್ಟ್ರಗಳ ಶಿಕ್ಷಣ ಸಚಿವರು, ವಯಸ್ಕ ಶಿಕ್ಷಣ ತಜ್ಞರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಪಾಲ್ಗೊಂಡಿದ್ದರು.

ಸಮ್ಮೇಳನದಲ್ಲಿ ಅದುವರೆವಿಗೆ ಆಯಾ ರಾಷ್ಟ್ರಗಳಲ್ಲಿ ಜಾರಿಯಾಗುತ್ತಿದ್ದ ಸಾಕ್ಷರತಾ ಕಾರ್ಯಕ್ರಮದ ಬಗ್ಗೆ ಸುದೀರ್ಘವಾಗಿ ಚರ್ಚಿಸಲಾಯಿತು. ನಿರೀಕ್ಷಿತ ಗುರಿ ಮುಟ್ಟದಿರುವುದಕ್ಕೆ 'ಸಾಕ್ಷರತಾ ಕಾರ್ಯಕ್ರಮ'ವು ಕೇವಲ ಅಕ್ಷರ ಕಲಿಕೆಗೆ ಮಾತ್ರ ಸೀಮಿತಗೊಂಡು ದೈನಂದಿನ ಜೀವನ ನಿರ್ವಹಣೆಗೆ ಈ ಕಲಿಕೆಯು ಸಹಕಾರಿಯಾಗಿಲ್ಲ ಎಂಬ ಪ್ರಮುಖ ಅಂಶ ವ್ಯಕ್ತವಾಯಿತು. ಇದಕ್ಕೆ ಪರಿಹಾರವಾಗಿ ಸಾಕ್ಷರತೆಯೊಂದಿಗೆ ಜನತೆಯ ದೈನಂದಿನ ಅಗತ್ಯತೆಗಳನ್ನು ಸಮನ್ವಯಗೊಳಿಸಿ 'ಕ್ರಿಯಾತ್ಮಕ ಸಾಕ್ಷರತೆ' ಎಂಬ ಹೊಸರೂಪದ ಕಾರ್ಯಕ್ರಮ ಜಾರಿಗೊಳಿಸಲು ಕರೆಯಿತ್ತಿತು. ಇದರಿಂದಾಗಿ ಸಾಕ್ಷರತಾ ಕಾರ್ಯಕ್ರಮವು ಹೊಸ ತಿರುವು ಕಂಡುಕೊಂಡಿತು. ಇಲ್ಲಿಂದ ವಯಸ್ಕ ಶಿಕ್ಷಣ ಚರಿತ್ರೆಯಲ್ಲಿ ' ಟೆಹರಾನ್ ಸಮ್ಮೇಳನ ' ಎಂಬ ವಿಶಿಷ್ಟ ಅಧ್ಯಾಯ ಪ್ರಾರಂಭವಾಯಿತು.

ಇದರ ನೆನಪಿಗಾಗಿ ಪ್ರತಿವರ್ಷ 'ಸೆಪ್ಟೆಂಬರ್ ೮' ಅನ್ನು 'ಅಂತರ್ರಾಷ್ಟ್ರೀಯ ಸಾಕ್ಷರತಾದಿನ'ವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳು ಆಚರಿಸುತ್ತವೆ.

ಸೆಪ್ಟೆಂಬರ್ ೮ ರಿಂದ ಒಂದು ವಾರ ಕಾಲ ಕಲಿಯದವರು ಕಲಿಯುವಂತೆ ಪ್ರೇರಿತರಾಗಲು ಮತ್ತು ಕಲಿಯದವರ ಹೊಣೆ ಕಲಿತವರ ಮೇಲಿದೆ ಎಂಬ ಕರ್ತವ್ಯವನ್ನು ಜಾಗೃತಿಗೊಳಿಸಲು, ಸಭೆ, ಸಮಾರಂಭ, ವಿಚಾರ ಸಂಕಿರಣ, ಸನ್ಮಾನ, ಪ್ರಶಸ್ತಿ ವಿತರಣೆ ಮುಂತಾದ ಹಲವು ಹತ್ತು ಕಾರ್ಯಕ್ರಮಗಳನ್ನು ವಿಶ್ವದ ಉದ್ದಗಲಕ್ಕೂ ಹಮ್ಮಿಕೊಂಡು 'ಅಂತರ್ರಾಷ್ಟ್ರೀಯ ಸಾಕ್ಷರತಾ ಸಪ್ತಾಹ' ಆಚರಿಸಲಾಗುವುದು.

ಸಂ

ಮಹಿಳಾ ಶಿಕ್ಷಣ : ಸಾಮಾಜಿಕ ಅಡೆತಡೆಗಳು ಮತ್ತು ಪರಿಹಾರಗಳು

ಡಾ|| ಎ. ಎಸ್. ರಾಘವಕುಮಾರಿ
ರೀಡರ್, ಶಿಕ್ಷಣಶಾಸ್ತ್ರ ವಿಭಾಗ
ಮಾನಸ ಗಂಗೋತ್ರಿ, ಮೈಸೂರು–೬

ಸಂಸ್ಕೃತಿಯ ಚೌಕಟ್ಟಿನಲ್ಲಿಯೇ ಜನ್ಮ ತಳೆದು, ಅಲ್ಲಿಯೇ ಬೆಳೆದು ಬಾಳುವಂಥ ಪ್ರತಿಯೊಬ್ಬ ವ್ಯಕ್ತಿಯೂ ತಾನು ವಾಸ ಮಾಡಲು ಯುಕ್ತ ಸ್ಥಳವೊಂದನ್ನು ಆಯ್ಕೆ ಮಾಡಿಕೊಳ್ಳುವುದಿದೆ. ಇದಕ್ಕೆ 'ಮನೆ' ಎಂಬ ಹೆಸರು ಇದೆ. ಈ ಸ್ಥಳದಲ್ಲಿ ವ್ಯಕ್ತಿಗೆ ಅಗತ್ಯ ಹಾಗೂ ಅನಗತ್ಯಗಳೆಂಬ ವಸ್ತುಗಳು ಇರುವುದರ ಜೊತೆಗೆ ಆ ಮನೆಯ ಇತರ ಸದಸ್ಯರೂ ಇರುತ್ತಾರೆ. ಈ ಎಲ್ಲ ಅಂಶಗಳಿರುವ ಸನ್ನಿವೇಶವನ್ನು ಪರಿಸರ ಅಥವಾ ವಾತಾವರಣ ಎಂದು ಕರೆಯುತ್ತಾರೆ. ಇವು ವ್ಯಕ್ತಿಯ ಸಾಮಾಜಿಕ ಬೆಳವಣಿಗೆಗೆ ಪಾತ್ರ ನಿರ್ವಹಣೆಗೆ, ಇತರ ವ್ಯಕ್ತಿಗಳೊಡನೆ ವ್ಯವಹರಿಸುವ ಬಗೆ ಮುಂತಾದವಕ್ಕೆ ಎಡೆಮಾಡಿ ಕೊಡುವಂಥ ಕಾರಕಾಂಶಗಳೆನಿಸುತ್ತವೆ. ಕಲಿಕೆ, ಸಾಧನೆ, ಚಿಂತನೆ, ವ್ಯಕ್ತಿತ್ವ ನಿರ್ಮಾಣ, ವರ್ತನೆ, ವ್ಯವಹಾರ ಮುಂತಾದವುಗಳಿಗೆ ಪರಿಸರದಲ್ಲಿರುವ ಕೆಲವು ಅಂಶಗಳು ಉತ್ತೇಜಕಗಳೆನಿಸಿದರೆ ಮತ್ತೆ ಕೆಲವು ವ್ಯಕ್ತಿ ಯಾವುದೇ ಒಂದು ಕೆಲಸವನ್ನೂ ನಿರ್ವಹಿಸದಂತೆ ಆತನಿಗೆ ಅಡಚಣೆಗಳನ್ನು ಒಡ್ಡುತ್ತವೆ. ಒಂದು ರೀತಿಯಲ್ಲಿ ಹೇಳುವುದಾದರೆ ಇಂಥವು ವ್ಯಕ್ತಿಯನ್ನು ಬಂಧಿಸುತ್ತವೆ ಇಲ್ಲವೆ ಆತನಿಗೆ ಸವಾಲು ಎಸಗುತ್ತವೆ. ಇವುಗಳನ್ನೇ ಕಾರ್ಯರೂಪದೆದುರು ಒದಗುವ ಅಡೆತಡೆಗಳು ಇಲ್ಲವೆ ಪ್ರತಿಬಂಧಕಗಳು ಎಂದು ಕರೆಯುವುದಿದೆ. ಉದಾಹರಣೆಗೆ ಸಮಾಜದಲ್ಲಿ ಕಾಣಬರುವ ಅಂತರ್ಜಾತೀಯ ವಿವಾಹ, ಕುಟುಂಬದಲ್ಲಿ ಅನುಸರಿಸುತ್ತಿರುವ ಪ್ರಾಚೀನಪದ್ಧತಿ, ಮೂಢನಂಬಿಕೆ ಮುಂತಾದವು. ಇವು ಸಮಾಜದಲ್ಲಿನ ಪ್ರತಿಯೊಬ್ಬ ವ್ಯಕ್ತಿಯ ಮೇಲೂ ಪ್ರಭಾವ ಬೀರುವಂಥಅಂಶಗಳಾಗಿವೆ.

ಪುರುಷನೊಬ್ಬನ ಪರಿಸ್ಥಿತಿಯನ್ನು ಅಂದರೆ, ಆತ ಕೆಲಸ ಮಾಡುವ ಪರಿ, ವ್ಯವಹರಿಸುವ ರೀತಿನೀತಿಗಳು, ಕಾರ್ಯನಿರ್ವಹಣೆ ಮುಂತಾದವನ್ನು — ಗಮನಿಸಿದಾಗ ಮನದಟ್ಟಾಗುವ ವಿಚಾರಗಳು ಇವು: ತನ್ನ ಕೆಲಸದ ನಿರ್ವಹಣೆಗೆ ಸಮಾಜ ಇಲ್ಲವೆ ಕುಟುಂಬ ಹಾಕಿರುವ ನಿರ್ಬಂಧ ಮತ್ತು ಕಟ್ಟಳೆಗಳು, ಕಡಿವಾಣ ; ಇವಕ್ಕೆ ತಾತ್ಕಾಲಿಕವಾಗಿ ಸಮ್ಮತಿಸಿದಂತೆ ವರ್ತಿಸಿದರೂ ಅನಂತರ ಆತ ಇವುಗಳಿಂದ ಮುಕ್ತನಾಗಿ

ಧೃತಿಯಿಂದ ಹೊರಬಂದು ಸ್ವತಂತ್ರವಾಗಿ ನಿಂತು ತನ್ನ ಕೆಲಸಗಳನ್ನು ಪೂರ್ಣ ಮಾಡಲು ಯತ್ನಿಸುತ್ತಾನೆ, ಇದಕ್ಕಾಗಿ ಬಲು ಕಷ್ಟಪಡುತ್ತಾನೆ. ಆದರೆ ಇಷ್ಟು ಧೈರ್ಯ ಸಾಹಸಗಳನ್ನು ಮಹಿಳೆಯೊಬ್ಬಳು ಪಡೆದುಕೊಂಡಿದ್ದರೂ ಅವನ್ನು ಬಳಸಿಕೊಳ್ಳಲಾರಳು. ಏಕೆಂದರೆ ಪುರುಷನಿಗಿಂತ ಮಹಿಳೆಗೆ ಹೆಚ್ಚಿನ ಸಂಖ್ಯೆಯ ಕಟ್ಟುಪಾಡುಗಳು ಹಾಗೂ ಅಡೆತಡೆಗಳು ಇರುತ್ತವೆ. ಅವನ್ನು ದಾಟಿಕೊಂಡು ಮುಂದೆ ಹೋದ ಮಹಿಳೆಯ ಬಗ್ಗೆ ಸಮಾಜದಲ್ಲಿನ ಇತರರು ಆಡುವ ಚುಚ್ಚುಮಾತುಗಳು ಆಕೆಯನ್ನು ತುಂಬ ನೋಯಿಸುತ್ತವೆ. ಹೀಗಾಗಿ ಆಂತರಿಕ ಹಾಗೂ ಬಾಹ್ಯನಿರ್ಬಂಧಗಳಿಂದ ಆಕೆಗೆ ವಿಮುಕ್ತಿಯೇ ಇಲ್ಲವೇನೋ ಎಂದು ಅನಿಸುತ್ತದೆ. ಆದರೆ ಮನಸ್ಸಿದ್ದಲ್ಲಿ ಮಾರ್ಗ ವಿದೆ ಎಂಬ ಹೇಳಿಕೆಯಂತೆ ಆಕೆ ಮತ್ತೆ ಮತ್ತೆ ಪ್ರಯತ್ನಿಸಿದರೆ ಪರಿಹಾರ ಮಾರ್ಗ ಲಭ್ಯವಾಗುತ್ತದೆ. ಬದಲಾಗುತ್ತಿರುವ ಸಮಾಜದ ರೀತಿನೀತಿಗಳನ್ನು ಗಮನದಲ್ಲಿರಿಸಿಕೊಂಡು ಅಂದರೆ, ದಿಟ್ಟತನದಿಂದ ಮಹಿಳೆ ಮುನ್ನಡೆದರೆ ಅವಳ ದಾರಿ ಸುಗಮವಾಗುತ್ತದೆ ಎಂದು ಅನಿಸುತ್ತದೆ. ಆದರೆ ಈ ದಿಟ್ಟತನ, ದೃತಿ, ಧೈರ್ಯ ಮುಂತಾದವೆಲ್ಲ ಯುಕ್ತ ಶಿಕ್ಷಣದಿಂದ ಮಾತ್ರ ಲಭ್ಯವಾಗುವುವು. ನಿತ್ಯಜೀವನದಲ್ಲಿ ಮನೆಯ ಪರಿಸರದಲ್ಲಿಯೇ ಅಡೆತಡೆಗಳಿರುವಾಗ ಶಿಕ್ಷಣ ಪಡೆಯಬೇಕಾದರೆ ಆಕೆ ಇನ್ನೆಷ್ಟೊ ಅಡೆತಡೆಗಳನ್ನು ಎದುರಿಸಬೇಕಾಗಿದೆ ಮತ್ತು ಇವುಗಳಿಗೆ ಇರುವ ಪರಿಹಾರಗಳನ್ನು ಕುರಿತು ಪ್ರಸ್ತುತ ಈ ಲೇಖನದಲ್ಲಿ ಚರ್ಚಿಸಲಾಗಿದೆ.

ಮಹಿಳೆಗೆ ಶಿಕ್ಷಣದ ಅವಶ್ಯಕತೆ

ಭಾರತ ಅಭಿವೃದ್ಧಿ ಹೊಂದುತ್ತಿರುವ ದೇಶ. ಸಾಮಾಜಿಕ ಬದಲಾವಣೆಯ ಸಾಧನವನ್ನಾಗಿ ಇಂದು ಶಿಕ್ಷಣವನ್ನು ಬಳಸಿಕೊಳ್ಳಬೇಕಾಗಿದೆ. ಸಂವಿಧಾನದ ಪ್ರಕಾರ ಆಸಕ್ತಿ ಇರುವ ಪ್ರತಿಯೊಬ್ಬ ವ್ಯಕ್ತಿಯೂ ಶಿಕ್ಷಣ ಪಡೆಯಲು ಅರ್ಹರಾದ್ದರಿಂದ ಅಂಥ ವ್ಯಕ್ತಿ ಯಾರೇ ಆಗಿರಲಿ ಶಿಕ್ಷಣ ನೀಡಬೇಕಾಗಿದೆ. ಗಂಡು–ಹೆಣ್ಣುಗಳು ಜೀವನವೆಂಬ ರಥದ ಚಕ್ರಗಳೋಪಾದಿಯಲ್ಲಿದ್ದು ಶಿಕ್ಷಣದಿಂದ ಪ್ರಗತಿ ಸಾಧಿಸಬೇಕಾಗಿದೆ. ಸಂತೋಷ ಮತ್ತು ಆರೋಗ್ಯಕರ ಮನೆಗಳು, ಸಮಾಜದ ಸುಧಾರಣೆ, ಆರ್ಥಿಕ ಅಭಿವೃದ್ಧಿ ಹಾಗೂ ರಾಷ್ಟ್ರೀಯ ದೃಢತೆ ಮುಂತಾದವುಗಳಿಗಾಗಿ ಮಹಿಳೆಯರಿಗೆ ಶಿಕ್ಷಣ ನೀಡುವುದು ಅತ್ಯಗತ್ಯ. ಮಹಿಳೆಯರಿಗೆ ಶಿಕ್ಷಣ ನೀಡದಿದ್ದರೆ ಶಿಕ್ಷಣ ಪಡೆದ ಜನರಿರಲು ಸಾಧ್ಯವಿಲ್ಲ ಎಂಬ ಅಂಶವನ್ನು ಶಿಕ್ಷಣ ತಜ್ಞರು ಒತ್ತಿ ಹೇಳಿದ್ದಾರೆ. ಒಬ್ಬ ಹುಡುಗನಿಗೆ ಕೊಡುವ ಶಿಕ್ಷಣ ವ್ಯಕ್ತಿಯೊಬ್ಬನಿಗೆ ಮಾತ್ರ ನೀಡಿದಂತೆ ಆದರೆ ಹುಡುಗಿಯೊಬ್ಬಳಿಗೆ ಶಿಕ್ಷಣ ಕೊಡುವುದರಿಂದ ಇಡೀ ಕುಟುಂಬಕ್ಕೆ ಶಿಕ್ಷಣ ನೀಡಿದಂತೆ ಆಗುತ್ತದೆ ಎಂಬ ವಿಚಾರದನ್ನು ಪಂಡಿತ ಜವಾಹರ್‌ಲಾಲ್ ನೆಹರೂ ಅವರು ತಿಳಿಸಿದ್ದಾರೆ. ಸಾಮಾಜಿಕ ನ್ಯಾಯವನ್ನು ಪರಿಗಣಿಸಿ ಮಾತ್ರವಲ್ಲ ಸಾಮಾಜಿಕ ಪರಿವರ್ತನೆಯ ವೇಗವನ್ನು ಹೆಚ್ಚಿಸುವ ಸಲುವಾಗಿಯೂ ಮಹಿಳಾ ಶಿಕ್ಷಣಕ್ಕೆ ಪ್ರಾಶಸ್ತ್ಯ ಕೊಡಬೇಕು ಎಂಬುದನ್ನು ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯು ಸ್ಪಷ್ಟಪಡಿಸಿದೆ. ನಮ್ಮಲ್ಲಿರುವ ಕೋಟ್ಯಂತರ ಮಹಿಳೆಯರೆಲ್ಲರೂ ಈ ಮೂಲಭೂತ

ಹಕ್ಕನ್ನು ಪಡೆಯಲಾಗಿಲ್ಲ. ಕುಟುಂಬದಲ್ಲಿ ಪುರುಷನ ಪ್ರಗತಿ, ವಿಕಾಸ ಹಾಗೂ ಸಾಧನೆಗಳಿಗೆ ಒತ್ತಾಸೆಯಾಗಿ, ಎಲೆಮರೆಕಾಯಾಗಿ ಇರುವವಳು ಮಹಿಳೆ ಎಂಬುದನ್ನು ಎಲ್ಲರೂ ಬಲ್ಲವರೇ. ತಾನು ಶಿಕ್ಷಣ ಪಡೆಯದಿದ್ದರೂ ತನ್ನ ಕರ್ತವ್ಯಕ್ಕೆ ಚ್ಯುತಿಬಾರದಂತೆ ನಡೆದುಕೊಳ್ಳುತ್ತಿರುವವಳು ಮಹಿಳೆ. ಇಂಥ ಮಹಿಳೆಗೆ ಶಿಕ್ಷಣ ನೀಡಿದರೆ ರಾಷ್ಟ್ರವಿಕಾಸ ಹಾಗೂ ಶಾಂತಿ ಸಾಧನೆಗಳಿಗೆ ತಳಹದಿ ಹಾಕಿದಂತಾಗುತ್ತದೆ ಎಂಬುದು ವೇದ್ಯ. ಆಕೆಗೆ ಶಿಕ್ಷಣ ನೀಡುವುದರಿಂದ ಪುರುಷನ ಎಲ್ಲ ಕಾರ್ಯಗಳಲ್ಲೂ ಸಹಕಾರ–ಸಹಭಾಗಿತ್ವಗಳು ಲಭ್ಯವಾಗುವುವು. ಇದಲ್ಲದೆ ಅನೇಕ ಶತಮಾನಗಳಿಂದ ಮಹಿಳೆಯರು ತಮ್ಮ ಕುಟುಂಬಗಳಲ್ಲಿ ಮಾತ್ರವಲ್ಲ ಸಮಾಜದಲ್ಲಿಯೂ ವಿವಿಧ ಪಾತ್ರಗಳನ್ನು ನಿರ್ವಹಿಸುತ್ತಿದ್ದಾರೆ. ಕುಟುಂಬಕ್ಕೆ ಸಂಬಂಧಿಸಿದಂತೆ ಹೇಳುವುದಾದರೆ ಕೆಲವು ಸಂದರ್ಭಗಳಲ್ಲಿ ಪುರುಷರಿಗಿಂತ ಮಹಿಳೆಯರೇ ವಿಭಿನ್ನ ಪಾತ್ರಗಳನ್ನು ನಿರ್ವಹಿಸುತ್ತಿದ್ದಾರೆ ಎಂಬುದು ಗಮನಾರ್ಹ.

ಸಾಮಾಜಿಕ ಅಡೆತಡೆಗಳು :

ಪ್ರದೇಶ ಯಾವುದೇ ಆಗಿರಲಿ ಪರಿಸರ ಯಾವುದೇ ಆಗಿರಲಿ ಜೀವನದಲ್ಲಿ ಅಡೆತಡೆಗಳು ಬರುವುದು ಸಹಜ. ಇವುಗಳನ್ನು ಎದುರಿಸಬೇಕಾದರೆ ಮಹಿಳೆಗೆ ಕೆಲವೊಂದು ಸಾಮರ್ಥ್ಯ, ಕೌಶಲ, ಅರಿವು ಮುಂತಾದವು ಅಗತ್ಯ. ಇವುಗಳನ್ನು ಆಕೆ ಶಿಕ್ಷಣದ ಮೂಲಕ ಪಡೆಯುತ್ತಾಳೆ ಇಲ್ಲವೆ ಬೆಳೆಸಿಕೊಳ್ಳುತ್ತಾಳೆ. ಆದ್ದರಿಂದಲೇ ನಗರ ಪ್ರದೇಶದಲ್ಲಿರುವ ಮಹಿಳೆಯರು ತಾವು ವಿದ್ಯಾವಂತರು ಎಂಬ ಕಾರಣದಿಂದ ಲಭ್ಯವಿರುವ ಅವಕಾಶಗಳನ್ನು ಬಳಸಿಕೊಂಡೋ ಇಲ್ಲವೆ ಪಡೆದುಕೊಂಡೋ ತಂತಮ್ಮ ಕುಟುಂಬಗಳ ಪದ್ಧತಿ ಮತ್ತು ಸಂಪ್ರದಾಯಗಳಿಗೆ ದಕ್ಕೆ ಬಾರದಂತೆ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಒಂದು ವೇಳೆ ಇಂಥ ಅವಕಾಶಗಳು ಒದಗಿಬಂದರೂ ಮಹಿಳೆಯರು ಉದ್ಯೋಗಗಳಿಗೆ ಹೋಗಲಾಗುವುದಿಲ್ಲ. ಏಕೆಂದರೆ ಇಲ್ಲಿ ಮಹಿಳೆಯರು ಹಾಗೂ ಹೆಣ್ಣುಮಕ್ಕಳಿಗೆ, ಈ ಮುಂದೆ ಪಟ್ಟಿ ಮಾಡಿರುವ, ಅಡೆತಡೆಗಳು ಎದುರಾಗುತ್ತವೆ.

—ಪ್ರಾಚೀನ ಸಂಪ್ರದಾಯಗಳು (ಧಾರ್ಮಿಕ ಕುಟುಂಬ)
—ಪದ್ಧತಿಗಳು
—ಸಂಸ್ಕೃತಿ
—ಸಾಮಾಜಿಕ ನಿರ್ಬಂಧಗಳು
—ಸಾಮಾಜಿಕ ನಿಷಿದ್ಧಗಳು ಹಾಗೂ ಮೂಢನಂಬಿಕೆಗಳು
—ಶಿಕ್ಷಣದ ಅನುಕೂಲಗಳ ಬಗ್ಗೆ ಹಿರಿಯರಿಗೆ ಅರಿವಿಲ್ಲದಿರುವಿಕೆ
—ಕುಟುಂಬದ ಸದಸ್ಯರ ಮನೋಭಾವಗಳು
—ಕುಟುಂಬದ ಸದಸ್ಯರ ಅಸಹಕಾರ ಹಾಗೂ ಆಕ್ಷೇಪಣೆಗಳು
—ಮಹಿಳೆಯರ ಬಹುಮುಖ ಪಾತ್ರಗಳು ಮತ್ತು ಹೊಣೆಗಾರಿಕೆಗಳು
—ಬಡತನ
—ವಿಶಾಲ ಮನೋಧರ್ಮದ ಅಭಾವ
—ತಾಯಿ ಇಲ್ಲವೆ ಹಿರಿಯ ಮಗಳ ಮೇಲೆ ಕುಟುಂಬದ ಇತರ ಸದಸ್ಯರು ಮತ್ತು ಮಕ್ಕಳ ಅತಿಯಾದ ಅವಲಂಬನೆ

—ಪ್ರೋತ್ಸಾಹ ಮತ್ತು ಅಭಿಪ್ರೇರಣೆಗಳ ಅಭಾವ

—ಹೆಣ್ಣಿನ ಬಗ್ಗೆ ಇತರರು ಬೆಳೆಸಿಕೊಂಡಿರುವ ಮನೋಭಾವ ಮುಂತಾದವು.

ಈ ಅಡೆತಡೆಗಳು ಎಲ್ಲ ಮಹಿಳೆಯರಿಗೂ ಅನ್ವಯವಾಗುತ್ತವೆ ಎಂಬುದು ಗಮನಾರ್ಹ. ಇವುಗಳ ಒತ್ತಡವನ್ನು ಸ್ವಲ್ಪ ಮಟ್ಟಿಗಾದರೂ ಕಡಿಮೆ ಮಾಡಿಕೊಳ್ಳಲು ಸಾಮಾನ್ಯವಾಗಿ ಮಹಿಳೆಯರಿಗೆ, ಪ್ರಮುಖವಾಗಿ ಗ್ರಾಮೀಣ ಪ್ರದೇಶಗಳಂತಿರುವ ಪರಿಸರಗಳಲ್ಲಿನ ಮಹಿಳೆಯರು ಮತ್ತು ಹೆಣ್ಣುಮಕ್ಕಳಿಗೆ ಸಹಾಯವೆಸಗುವಂಥ ಕೆಲವು ಕ್ರಮಗಳ ಬಗ್ಗೆ ಗಮನಹರಿಸಿ ಅವನ್ನು ಜಾರಿಗೆ ತಂದರೆ ಪರಿಸ್ಥಿತಿ ಉತ್ತಮಗೊಳ್ಳುವುದು ಸಾಧ್ಯವಾಗುತ್ತದೆ. ಕೆಲವೊಂದು ಕ್ರಮಗಳು ಹೀಗಿವೆ.

೧ ಸಮಾಜ ಇಲ್ಲವೆ ಕುಟುಂಬದಲ್ಲಿನ ತಮ್ಮ ಸ್ಥಾನವನ್ನು ಶಿಕ್ಷಣದ ಮೂಲಕ ಸುಧಾರಿಸಿಕೊಳ್ಳಲು ಇಲ್ಲವೆ ಸರಿಪಡಿಸಿಕೊಳ್ಳಲು ಮಹಿಳೆಯರಿಗೆ ಸ್ಫೂರ್ತಿ ನೀಡುವುದು.

೨ ಶಿಕ್ಷಣ ಪಡೆಯುವುದಕ್ಕೆ ಅಗತ್ಯವಾದ ಆಸಕ್ತಿ, ಮನೋಭಾವ ಮತ್ತು ಪರಿಸರಗಳಿಗಾಗಿ ಲಭ್ಯ ಸಾಮಾಗ್ರಿಗಳನ್ನು ಬಳಸಿಕೊಳ್ಳಲು ಪ್ರೇರಣೆ.

೩ ಪರಿಸ್ಥಿತಿಗಳ ಬದಲಾವಣೆಗಾಗಿ ರೇಡಿಯೊ ಮತ್ತು ದೂರದರ್ಶನಗಳಿಗೆ ಕಾರ್ಯಕ್ರಮಗಳನ್ನು ತಯಾರಿಸುವುದು.

೪ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರಿಂದ ಲಭ್ಯವಾಗುವ ಅನುಕೂಲಗಳ ಬಗ್ಗೆ ತಿಳಿಯಲು ಅವರುಗಳಿಗೆ ಸಹಾಯವೆಸಗುವುದು.

೫ ಆರ್ಥಿಕ ಸುಧಾರಣೆಗೆ ಉಪಯುಕ್ತವಾಗುವಂಥ ಕೆಲವು ಸಾಮರ್ಥ್ಯಗಳು ಮತ್ತು ಕೌಶಲಗಳನ್ನು ಬೆಳೆಸಿಕೊಳ್ಳಲು ಮತ್ತು ಬಲಪಡಿಸಿಕೊಳ್ಳಲು ಅವರಿಗೆ ಉತ್ತೇಜನ ನೀಡುವುದು.

೬ ಕಲಿಯಲು ಮತ್ತು ತರಗತಿಗಳಿಗೆ ಹಾಜರಾಗಲು ತಮ್ಮ ಕೆಲಸಗಳಿಂದ ಬಿಡುವು ಮಾಡಿಕೊಳ್ಳಲು ಪ್ರೇರಣೆ, ಉಪಾಯ ಮುಂತಾದವುಗಳನ್ನು ನೀಡುವುದು.

ಪರಿಹಾರಗಳು

ಅರ್ಹವಿದ್ಯಾರ್ಥಿಗಳ ಪಟ್ಟಿಯನ್ನು ತಯಾರಿಸುವ ಸಲುವಾಗಿ ವಿವಿಧ ಪರಿಸರಗಳಲ್ಲಿರುವ ಮಹಿಳೆಯರು ಮತ್ತು ಹೆಣ್ಣು ಮಕ್ಕಳನ್ನು ಅವಲೋಕಿಸಬೇಕು. ಇಲ್ಲಿ ಎರಡು ರೀತಿಯ ಯೋಜನೆಗಳನ್ನು ಮಾಡಿಕೊಳ್ಳುವುದು ಉಚಿತ. ಅವುಗಳು ಇಂತಿವೆ :

ಅ) ಶಾಲೆಗೆ ಹೆಚ್ಚಾಗಿ ಗೈರುಹಾಜರಾಗುತ್ತಿರುವ ಮಕ್ಕಳಿಗಾಗಿ :

೧ ಅರ್ಹ ವಿದ್ಯಾರ್ಥಿಗಳ ಪಟ್ಟಿಯನ್ನು ತಯಾರಿಸುವುದು.

೨ ಆಗಾಗ್ಗೆ ಅವರು ಶಾಲೆಗೆ ಹಾಜರಾಗದಿರುವುದಕ್ಕೆ ಇಲ್ಲವೆ ತಂದೆ-ತಾಯಿಗಳು ಪೋಷಕರು ಅವರುಗಳನ್ನು ಶಾಲೆಗೆ ಕಳುಹಿಸದಿರುವುದಕ್ಕೆ ಕಾರಣಗಳನ್ನು ಪತ್ತೆ ಹಚ್ಚುವುದು.

೩ ಅವರ ಮೂಲ ಸಮಸ್ಯೆಗಳನ್ನು ಅಧ್ಯಯನಮಾಡಿ ಪರಿಹಾರಗಳನ್ನು ನೀಡುವ ಭರವಸೆ.

೪ ಕುಟುಂಬದ ಹಿರಿಯ ಮಗಳಾಗಿ ಮನೆಯಲ್ಲಿ ಇವಳು ಯಾರನ್ನು ನೋಡಿಕೊಳ್ಳಬೇಕಾಗಿದೆಯೋ ಆ ಮಗುವಿನೊಡನೆ ಶಾಲೆಗೆ ಹಾಜರಾಗಲು ಅನುಮತಿ ಹಾಗೂ ಸೌಲಭ್ಯಗಳನ್ನು ನೀಡುವುದು.

೫ ಹೆಣ್ಣು ಮಕ್ಕಳನ್ನು ಆಕರ್ಷಿಸಲು ಮತ್ತು ಅವರುಗಳನ್ನು ಶಾಲೆಗಳಲ್ಲಿ ಉಳಿಸಿಕೊಳ್ಳಲು ಅವರುಗಳಿಗೆ ಉಪಯುಕ್ತವಾಗುವಂಥ ಕಾರ್ಯಕ್ರಮಗಳ ಸಂಘಟನೆ.

೬ ಹೆಣ್ಣುಮಕ್ಕಳ ಬಗೆಗಿರುವ ಹಿರಿಯರ ಮನೋಭಾವಗಳು ಮತ್ತು ಶಿಕ್ಷಕರ ನಡವಳಿಕೆಗಳನ್ನು ಸರಿಪಡಿಸಿಕೊಳ್ಳಲು ಸಲಹೆ ಮತ್ತು ನಿರ್ದೇಶನ.

೭ ಬೋಧನೆ ಮತ್ತು ಮೌಲ್ಯಮಾಪನಗಳಿಗಾಗಿ ಹೊಸ ಹೊಸ ವಿಧಾನ ಮತ್ತು ತಂತ್ರಗಳ ಬಳಕೆ.

೮ ಕಡೆಯಪಕ್ಷ ಕೆಳಹಂತಗಳಿಗಾದರೂ ತರಬೇತಿ ಪಡೆದಿರುವ ಮಹಿಳಾ ಶಿಕ್ಷಕಿಯರ ನೇಮಕ.

೯ ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸಲೆಂದು ಅವರ ತಂದೆ ತಾಯಿಗಳಿಗೆ ಪ್ರೋತ್ಸಾಹಕ ವಸ್ತುಗಳನ್ನು ಕೊಡುವುದು.

೧೦ ಚಿತ್ರಪ್ರದರ್ಶನ ಹಾಗೂ ಉಪನ್ಯಾಸಗಳನ್ನು ಏರ್ಪಡಿಸುವುದರ ಮೂಲಕ ತಂದೆ ತಾಯಿಗಳ ಮನೋಭಾವಗಳನ್ನು ಬದಲಾಯಿಸುವುದು.

೧೧ ಮಹಿಳಾ ಶಿಕ್ಷಕಿಯರಿಂದ ಶಾಲಾರಹಿತ ಶಿಕ್ಷಣಕೇಂದ್ರಗಳ ಸ್ಥಾಪನೆ ಮತ್ತು ನಿರ್ವಹಣೆ.

೧೨ ಹಾಡುಗಾರಿಕೆ, ಬಟ್ಟೆ ಹೊಲಿಯುವುದು, ಗೃಹಾಲಂಕಾರ ಮುಂತಾದವುಗಳಿಗೆ ಅಗತ್ಯವಾದ ವೃತ್ತಿಕೌಶಲಗಳ ಜೊತೆಗೆ ಕ್ರಿಯಾತ್ಮಕ ಸಾಕ್ಷರತೆಯನ್ನು ಒದಗಿಸುವುದು.

೧೩ ಮನೆ ಮನೆಗೆ ಹೋಗಿ ಕಾರ್ಯಕ್ರಮಗಳನ್ನು ಸಂಘಟಿಸುವುದರ ಮೂಲಕ ವಯಸ್ಕರಿಗೂ ಶಿಕ್ಷಣ ಒದಗಿಸುವುದು.

೧೪ ಶಾಲೆಯ ಕೆಲಸದ ಅವಧಿಯನ್ನು ಬದಲಾಯಿಸುವುದು. ಉದಾ : ಎರಡು ಗಂಟೆಗಳ ಕಾರ್ಯಕ್ರಮವಾಗಿದ್ದಲ್ಲಿ ಮನರಂಜನಾ ಕೌಶಲಗಳು, ನೃತ್ಯ, ಹಾಡುಗಾರಿಕೆ ಮುಂತಾದವುಗಳಿಗೆ ೪೦ ಮಿನಿಟುಗಳ ಕಾಲ ತರಬೇತಿ ನೀಡುವುದು.

೧೫ "ಹಿಡಿ ಮತ್ತು ಬೋಧಿಸು" ಎಂಬ ತತ್ತ್ವದ ಅನುಸರಣೆ.

೧೬ ಅನೌಪಚಾರಿಕ ಶಿಕ್ಷಣ ಕೇಂದ್ರಗಳಿಂದ ಹಾಲು, ಹಣ್ಣು ಮುಂತಾದ ಪೌಷ್ಟಿಕಾಂಶಯುತ ಆಹಾರವನ್ನು ಒದಗಿಸುವುದು.

೧೭ ಶಿಕ್ಷಕರಿಗೆ ತರಬೇತಿ ಮತ್ತು ಸೌಲಭ್ಯಗಳು.

ಆ) ಶಾಲೆಗೆ ಹೋಗದಿರುವ ಹೆಣ್ಣು ಮಕ್ಕಳು ಮತ್ತು ಮಹಿಳೆಯರಿಗಾಗಿ:

೧ ಹೆಣ್ಣು ಮಕ್ಕಳು ಮತ್ತು ಮಹಿಳೆಯರೊಡನೆ ಉತ್ತಮ ಸಂಬಂಧವನ್ನು ಬೆಳೆಸಿಕೊಳ್ಳುವುದು.

೨ ಶಿಕ್ಷಣದ ಮೂಲಕ ಅವರು ಪಡೆಯುವ ಲಾಭಗಳ ಬಗ್ಗೆ ತಿಳಿಸುವುದು.

೩ ಗ್ರಾಮೀಣ ಪ್ರದೇಶಗಳಲ್ಲಿರುವ ಹೆಣ್ಣು ಮಕ್ಕಳು ಮತ್ತು ಮಹಿಳೆಯರ ಸಾಮರ್ಥ್ಯ, ಕೌಶಲ, ಆಸಕ್ತಿ ಮುಂತಾದವುಗಳನ್ನು ಪಟ್ಟಿ ಮಾಡುವುದು.

೪ ಹೆಣ್ಣುಮಕ್ಕಳು ಮತ್ತು ಮಹಿಳೆಯರನ್ನು ಅವರವರ ಮನೆಗಳಲ್ಲಿ ಭೇಟಿ ಮಾಡಿ ಅವರ ಹವ್ಯಾಸ, ಅಭ್ಯಾಸ, ಬಿಡುವನ್ನು ಉಪಯೋಗಿಸುವ ರೀತಿ ಮುಂತಾದವುಗಳ ಬಗ್ಗೆ ಮಾಹಿತಿ ಸಂಗ್ರಹಣೆ.

೫ ಸಾಕ್ಷರತೆಯ ಪರಿಕಲ್ಪನೆಯನ್ನು ಶಿಕ್ಷಣದ ಪರಿಕಲ್ಪನೆಗೆ ಬದಲಾಯಿಸುವುದು.

೬ ಶಾಲೆಗೆ ಹೋಗದಿರುವ ಸೇರದಿರುವ ಕಾರಣಗಳನ್ನು ಪತ್ತೆಹಚ್ಚುವುದು.

೭ ಮೂಲಭೂತ ಹಾಗೂ ಮುಖ್ಯಾಂಶಗಳನ್ನು ಕಲಿಯುವ ಹಕ್ಕು ಮತ್ತು ಅಗತ್ಯಗಳ ಬಗ್ಗೆ ತಿಳಿಸುವುದು.

೮ ಕಲಿಯಲು ಉತ್ತೇಜನ ಮತ್ತು ಪ್ರೋತ್ಸಾಹ.

೯ ರೇಡಿಯೊ, ದೂರದರ್ಶನ ಹಾಗೂ ಇತರ ಕಾರ್ಯಕ್ರಮಗಳ ಮೂಲಕ ಸಾಮರ್ಥ್ಯ, ಕೌಶಲ, ಆಸಕ್ತಿ ಮುಂತಾದವುಗಳ ಬೆಳವಣಿಗೆ ಹಾಗೂ ಅಭಿವರ್ಧನೆಗಳಿಗೆ ಅವಕಾಶಗಳನ್ನು ಸೃಷ್ಟಿಸುವುದು.

೧೦ ಧ್ವನಿಮುದ್ರಿಸಿದ ಸುರುಳಿಗಳು ಹಾಗೂ ಸ್ವಯಂ ಕಲಿಕಾ ಸಾಮಗ್ರಿಗಳ ಸಹಾಯದಿಂದ ಕಲಿಯುವುದಕ್ಕೆ ಅರಿವನ್ನು ಬೆಳೆಸುವುದು.

೧೧ ಕ್ರಮಬದ್ಧವಾಗಿ ಕಾಲಕಾಲಕ್ಕೆ ಕಲಿತ ವಿಷಯ ಮತ್ತು ಸಾಧನೆಗಳ ಮೌಲ್ಯಮಾಪನಕ್ಕೆ ಅವಕಾಶ.

೧೨ ಮಾಡಿದ ತಪ್ಪುಗಳನ್ನು ತಿದ್ದಿಕೊಳ್ಳಲು ಸೂಚನೆ, ಸಲಹೆ, ಪುನರ್ವಿಮರ್ಶೆ ಮತ್ತು ಮುಂದುವರೆಯಲು ಬೆಂಬಲ ಹಾಗೂ ಉತ್ತೇಜನ

೧೩ ಅಗತ್ಯವಿದ್ದಲ್ಲಿ ಅವರ ಕುಟುಂಬಗಳಿಗೆ ಉತ್ತೇಜನ ಮತ್ತು ಪ್ರೇರಕಗಳನ್ನು ಒದಗಿಸುವುದು.

೧೪ ಅವರ ಕುಟುಂಬದ ಸಮಸ್ಯೆ ಹಾಗೂ ಅನುಮಾನಗಳಿಗೆ ಪರಿಹಾರ ಸೂಚಿಸುವುದು.

೧೫ ಯುಕ್ತ ಶಿಕ್ಷಕರನ್ನು ಒದಗಿಸುವುದು.

೧೬ ಕಲಿಕೆಗೆ ಅಗತ್ಯವಿರುವ ಸಾಧನ ಸೌಲಭ್ಯಗಳನ್ನು ಒದಗಿಸುವುದು ಮುಂತಾದುವು.

ಉಪಸಂಹಾರ

ಹೆಣ್ಣನ್ನೂ ಸಮಾಜದ ಪ್ರಮುಖ ವ್ಯಕ್ತಿಯನ್ನಾಗಿ ಪರಿಗಣಿಸಿ ಊಟ, ಉಪಚಾರ, ಮರ್ಯಾದೆ, ಸೌಲಭ್ಯ ಮುಂತಾದವುಗಳು ಹೇಗೆ ವ್ಯಕ್ತಿಗೆ

ಅಗತ್ಯವೋ ಹಾಗೆಯೇ ಶಿಕ್ಷಣ ಅಗತ್ಯ ಎಂಬುದನ್ನು ಅರಿತು ಕೆಲಸ ಮಾಡಲು ಯುಕ್ತ ಯೋಜನೆಗಳ ಅಡಿಯಲ್ಲಿ ಮುಂದುವರಿಯಬೇಕು. ಹೀಗಾದಲ್ಲಿ ಕುಟುಂಬದ ಪ್ರಗತಿ ಮಾತ್ರವಲ್ಲ ರಾಜ್ಯ ಹಾಗೂ ರಾಷ್ಟ್ರಗಳ ಪ್ರಗತಿ ಮತ್ತು ವಿಕಾಸಗಳ ಬಗ್ಗೆ ಬೆಳೆಸಿಕೊಂಡಿರುವ 'ಕಲ್ಪನೆ ಕನಸಲ್ಲ, ನನಸು" ಎಂಬುದನ್ನು ಶೀಘ್ರವಾಗಿಯೇ ನಿರೂಪಿಸಿ ಮಹಿಳಾ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟಂತೆ ಆಗುತ್ತದೆ. ಭವಿಷ್ಯದಲ್ಲಿ ಎದುರಾಗುವ ಅಡೆತಡೆಗಳನ್ನು ಯುಕ್ತ ರೀತಿಯಲ್ಲಿ ಎದುರಿಸಿ ಅವಕ್ಕೆ ಸಂದರ್ಭೋಚಿತ ಪರಿಹಾರಗಳನ್ನು ಕಂಡುಕೊಳ್ಳುವಂತೆಯೂ ಆಗುತ್ತದೆ. ಹೆಣ್ಣು ಕುಟುಂಬದ ಕಣ್ಣು ಎಂಬ ಹೇಳಿಕೆಯ ಸಾರ್ಥಕ್ಯದ ಮನವರಿಕೆ ಆಗುತ್ತದೆ.



ಅಕ್ಷರ ಕಲಿತ ಹೆಣ್ಣು, ಕುಟುಂಬದ ಕಣ್ಣು
ಶಿಕ್ಷಿತ ಕುಟುಂಬ, ಸುಖೀ ಕುಟುಂಬ

ಅಕ್ಷರ ಸಂಪತ್ತು, ಅಕ್ಷಯ ಸಂಪತ್ತು
ಓದಿ ಬರೆಯೋಣ, ಬಿತ್ತಿ ಬೆಳೆಯೋಣ

ಓಟದಲ್ಲಿ ಹೃದಯವಂತಿಕೆ

ಕೆ. ಸುಕನ್ಯಭಟ್
"ಶ್ರೀ ಶಾಕಾಂಬರಿ"
ಶಂಕರಮಠ ರಸ್ತೆ, ಧಾರವಾಡ-೪

ನಾಯಿ, ನಾಯಿಜನುಮ, ನಾಯಿಗಿಂತ ಕಡೆ ಎಂದು ಹಳಿಯದಿರಿ. ನಾಯಿಯ ಸ್ವಾಮಿಭಕ್ತಿ, ವಿಶ್ವಾಸಾರ್ಹತೆ ಮತ್ತು ಸಾಹಸಪ್ರಿಯತೆ ಮಾನವನಿಗೊಂದು ವರದಾನ.

ತ್ರಂಗುದಾಣದಿಂದ, ನೋಮ್—ಅಲಾಸ್ಕಾದವರೆಗಿನ ಸುಮಾರು ೨೦೦೦ ಕಿ.ಮಿ. ದೂರದ "ಈಡಿಟರಾಡ್" ರೇಸನ್ನೂ (ಓಟ) ಸೇರಿದಂತೆ, ಹತ್ತಿರ-ಹತ್ತಿರ ೨೩೦೦ ಕಿ.ಮಿ. ವರೆಗೆ ನನ್ನ ಜಾರುಬಂಡಿಯನ್ನೆಳೆಯುವ ನಾಯಿಗಳ ಗುಂಪಿನ ಮುಂದಾಳುತನ ಕೂಕಿ ವಹಿಸಿದ್ದಳು. ದಾರಿ ಕ್ರಮಿಸುವಾಗ—ಕೂಕಿ ಕೇವಲ ನನಗೆ ನಾಯಿಯಾಗಿರದೆ, ಗೆಳತಿಗಿಂತಲೂ ಮಿಗಿಲಾಗಿದ್ದು, ಅನೇಕ ಸಲ ನನ್ನ ಜೀವವನ್ನೂ....ಉಳಿಸಿದ್ದಳು !

ಗರ್ಭಿಣಿಯಾಗಿದ್ದ ಕೂಕಿಗೆ ತಡೆಯಲಸಾಧ್ಯವಾದ ಆ ಭೀಕರ ಚಳಿಗಾಲದಲ್ಲಿ ಹೆರಿಗೆಯ ಹೊತ್ತು ಹತ್ತಿರವಾಗುತ್ತಿತ್ತು. ನನ್ನ ಆತಂಕವೂ ಹೆಚ್ಚಾಗತೊಡಗಿತ್ತು. ಕೆನೆಲ್ (ನಾಯಿ-ಗೂಡಿನಿಂದ)ನಿಂದ, ಅವಳನ್ನು ನನ್ನ ನಾರ್ದರ್ನ್ ಮಿನಿಸೋಟಾ,ದಲ್ಲಿರುವ ಮರದಿಂದ ಕಟ್ಟಲ್ಪಟ್ಟ ಮನೆಯೊಳಗೆ ತಂದಿಟ್ಟುಕೊಳ್ಳಬೇಕೆಂದುಕೊಂಡೆ.

ತೋಳದ ಜಾತಿಯನ್ನು ಬಹಳ ಮಟ್ಟಿಗೆ ಹೋಲುವ, ಕೂಕಿಯ ಮೈಯಲ್ಲಿ ಗ್ರೇ ಬಣ್ಣದ ಗುರುತುಗಳಿದ್ದುವು. ಮೈ ಮೇಲಿನ ತುಪ್ಪಳ ಕೂಡಾ ಒತ್ತಾಗಿತ್ತು. ಮನೆಯೊಳಗಿನ ಸೆಖೆಯನ್ನವಳು ತಡೆಯಲಾರಳು ಎಂದೆನಿಸಿತ್ತು. ಅದು ಅವಳಿಗೆ ಮಾರಣಾಂತಿಕವೂ ಆಗಬಹುದೆನಿಸಿತ್ತು.

ಅವಳಿಗಾಗಿ, ನಾನೊಂದು "ಎಸ್ಕಿಮೋ" ಜನರು ವಾಸಿಸುವಂತಹ ಹುಲ್ಲಿನ ಗುಡಿಸಲನ್ನು ಕಟ್ಟುವ ಬಗ್ಗೆ ಯೋಚಿಸಿದ್ದೆ. ಹೆರಿಗೆಯ ಸಮಯದಲ್ಲಾದರೂ ನಾನವಳ ಜತೆ ಇದ್ದರೆ, ನನ್ನ ಆತಂಕವೂ ಕಡಿಮೆಯಾದೀತೆಂದುಕೊಂಡು, ಕೂಕಿಯ ಗೂಡಿನ ಹತ್ತಿರವೇ ಇಟ್ಟಿದ್ದ, ಹುಲ್ಲಿನ ಕಟ್ಟುಗಳನ್ನು ಉಪಯೋಗಿಸಿಕೊಂಡು, ನಮ್ಮಿಬ್ಬರಿಗೂ ಸಾಕಾಗುವಷ್ಟು ದೊಡ್ಡದಾದ ಗುಡಿಸಲನ್ನು ಕಟ್ಟಿದ್ದೆ. ರಾತ್ರಿ ಮಲಗುವ ಚೀಲದೊಳಗೆ ನುಸುಳುತ್ತಾ—"ಈ ಏರ್ಪಾಡು ಮೊದಲಿಗಿಂತ ಎಷ್ಟೋ....ವಾಸಿ ಅಲ್ವಾ?" ಎಂದು ಕೂಕಿಯನ್ನು ಕೇಳಿದ್ದೆ.

ಅವಳಾದರೊ....ಎಂದಿನಂತೆ ನನ್ನೆಡೆ ಗಮನ ಹರಿಸದೆ, ತನ್ನ ಮೈಯನ್ನು ನೆಕ್ಕತೊಡಗಿದ್ದಳು. ನಾವಿಬ್ಬರು ಯಾವಾಗಲೂ ಮಾತಾಡಿಕೊಳ್ಳುವ ಕ್ರಮ ಇದ್ದಿತು, ಅನೇಕಸರ್ತಿ ನಾನವಳಿಗೆ, ನನ್ನ ಜೀವನದ

೧೯೯೭ರ ಸೆಪ್ಟೆಂಬರ್ ತಿಂಗಳ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ ಗ್ಯಾರಿ ಫಾಲ್ಸನ್ ಅವರ "ಎ ಹಾರ್ಟ್ ಫಾರ್ ದಿ ರನ್" ಲೇಖನದ ಅನುವಾದ.

ಕೆಲವು ಘಟನೆಗಳನ್ನು ಹೇಳಿಕೊಂಡು ಮನ ಹಗುರಮಾಡಿಕೊಂಡದ್ದು ಇತ್ತು. ಈ ರೀತಿಯ ನಮ್ಮ ಸಂವಾದದಿಂದಾಗಿ ನನ್ನ, ನಾ ಹೆಚ್ಚೆಚ್ಚು ಅರಿಯಲು ಸಾಧ್ಯವೂ ಆಗಿತ್ತು. ಅಗಲಿಕೆಯ ನೋವು: ನಿದ್ರೆಯ ತೆಕ್ಕೆ ಸೇರಿದ್ದ ನನಗೆ, ನಾಲ್ಕು ಗಂಟೆಗಳ ಅನಂತರ, ಎಚ್ಚರವಾದಾಗ, ಕೂಕಿಗೆ ಹೆರಿಗೆಯಾಗುತ್ತಿದ್ದುದು ತಿಳಿದಿತ್ತು. ನಾಲ್ಕು ಗ್ರೇ ಬಣ್ಣದ ಮರಿಗಳು ಹೊರಬಂದು ಸಣ್ಣ ಸ್ವರದಲ್ಲಿ ಕಿರುಚತೊಡಗಿದ್ದವು. ಕೂಡಲೇ ತಾಯಿ ಅವುಗಳನ್ನು ಸ್ವಚ್ಛ ಮಾಡಿದ್ದಳು. ಕೊನೆಯ ಹಾಗೂ ಎಂಟನೆಯ ಮರಿ, ಹೊರಬರುವವರೆಗೆ ಎಲ್ಲವೂ ಸುಸೂತ್ರವಾಗಿ ನಡೆದಿತ್ತು. ಕೊನೆಯಮರಿ ಮಾತ್ರ ಜನಿಸುವಾಗಲೇ ನಿರ್ಜೀವವಾಗಿತ್ತು. ಕೂಕಿ, ಕೂಡಲೇ ಆ ಮರಿಯನ್ನು ಉಸಿರಾಡುವಂತೆ ಮಾಡಲು ಜೋರು–ಜೋರಾಗಿ ನೆಕ್ಕತೊಡಗಿದ್ದಳು. ಮೈಬಿಸಿ ಮಾಡತೊಡಗಿದ್ದಳು! ಮರಿಯ ಮೇಲಿನ ಮಮತೆಯಿಂದಾಗಿ ಅವಳ ವರ್ತನೆ ಕೊನೆ–ಕೊನೆಗೆ ಹುಚ್ಚಳಂತಾಗಿತ್ತು.

ಸಣ್ಣ ಸ್ವರದಲ್ಲವಳು ಅಳುವಂತೆ ಶಬ್ದ ಮಾಡತೊಡಗಿದ್ದಳು. ನಾನು, ಒಂದು ಕೈಯಿಂದ ಮರಿಯನ್ನೆತ್ತಿ, ಇನ್ನೊಂದು ಕೈಯಿಂದ ಅವಳ ಕಣ್ಣುಮುಚ್ಚಿ ಹಿಡಿದು, ಅಲ್ಲೇ ಬಾಗಿಲ ಬಳಿಯೇ ಇದ್ದ ಹುಲ್ಲಿನಡಿ ಮುಚ್ಚಿದ್ದೆ, ಕಾಣದ ಮರಿಯ ಯೋಚನೆಯನ್ನು ತತ್ಕಾಲಕ್ಕೆ ಬಿಟ್ಟು, ಜೀವಂತ ಮರಿಗಳತ್ತ ಗಮನಕೊಟ್ಟಳು ತಾಯಿಯಾಗಿದ್ದ ಕೂಕಿ.

ಧೈರ್ಯಸ್ಥೆಯೂ, ದೃಢಸಂಕಲ್ಪದವಳೂ, ಮೊಂಡು ಸ್ವಭಾವದವಳೂ ಆಗಿದ್ದ ಕೂಕಿಯ ಬಗ್ಗೆ ನಾನು ತಿಳಿದದ್ದು ಬಹಳ ಕಡಿಮೆ, ತನ್ನ ಪ್ರೀತಿಪಾತ್ರರಿಗಾಗಿ ತನ್ನ ಜೀವವನ್ನು ಸಮರ್ಪಿಸಿಕೊಳ್ಳಲೂ ಹಿಂಜರಿಯದವಳಾದ ಕೂಕಿ ನನ್ನ ಆಲೋಚನೆಯನ್ನು ತಲೆಕೆಳಗು ಮಾಡಿದ್ದಳು. ಮರಿಗಾಗಿ ಮತ್ತೊಮ್ಮೆ ಹುಡುಕತೊಡಗಿದ್ದಳು. ಸಿಗದೆ ಹೋದಾಗ, ನನ್ನನ್ನು ಪ್ರಶ್ನಿಸುವಂತೆ ದೃಷ್ಟಿಸತೊಡಗಿದ್ದಳು...."ನನ್ನ ಮರಿ ಎಲ್ಲಿ ಎನ್ನುವಂತೆ!"

ನನ್ನ ಕೈಗಳು ಹುಲ್ಲಿನಡಿಯಿಂದ ಮರಿಯನ್ನು ತೆಗೆದು ತೋರಿಸಿದಾಗ, ಬಾಯಲ್ಲಿ ಮೆಲ್ಲನೆ, ಅದೂ....ನೋವಾಗದಂತೆ, ಕಚ್ಚಿಕೊಂಡು ಹೋಗಿ ಬದಿಯಲ್ಲಿಟ್ಟಿದ್ದಳು. ಉಸಿರಾಡಿಸುವ ಪ್ರಯತ್ನ ಪುನಃ ಮಾಡತೊಡಗಿದ್ದಳು. ಮರಿ ಯಾವಾಗ ಪ್ರತಿಸ್ಪಂದಿಸಲಿಲ್ಲವೋ, ಆಗವಳು ಅದಕ್ಕೆ ಹಾಲೂಡಿಸಲು ಉಳಿದ ಮರಿಗಳ ಜತೆಯಲ್ಲಿ ಇಟ್ಟಿದ್ದಳು!

ಉಳಿದ ಮರಿಗಳು ಮಾಡುವ ಗದ್ದಲದಿಂದಾಗಿ ಆ ನಿರ್ಜೀವಮರಿಯೂ ಅಲುಗಾಡತೊಡಗಿದಾಗ, ಜೀವಬಂತೆಂದುಕೊಂಡಳೊ ....ಏನೊ....ಸುಮ್ಮನಾಗಿದ್ದಳು, ತೃಪ್ತಿಯೊಡನೆ, ಹೆತ್ತ ಆಯಾಸವೂ ಸೇರಿ ಕಣ್ಮುಚ್ಚಿ ಮಲಗಿ ನಿದ್ರಿಸಿದ್ದಳು. ನಾನು ಪೂರ್ತಿ ಒಂದು ನಿಮಿಷ ಕಾದು, ಮತ್ತೊಮ್ಮೆ ಎಚ್ಚರಿಕೆಯಿಂದ ಆ ಮರಿಯನ್ನಲ್ಲಿಂದ ತೆಗೆದು, ಹೊರಗೊಯ್ದಿದ್ದೆ, ಹದಿನೆಂಟು ಕಿ.ಮೀ. ದೂರದಲ್ಲಿ ಬರ್ಫಿನಡಿ ಮುಚ್ಚಿಟ್ಟು, ಪುನಃ ಬಂದು ಚೀಲದೊಳಗೆ ಮಲಗಿ ನಿದ್ರಿಸಿದ್ದೆ.

ಬೆಳಗ್ಗೆ ನಾನೆದ್ದಾಗ ಕೂಕಿ ಇನ್ನೂ ಮಲಗಿಯೇ ಇದ್ದಳು. ನಾನು ಹೊರಗೆ ಹೊರಡುವ ತಯಾರಿ ಮಾಡುತ್ತಿದ್ದಾಗ, ಏನೋ....ನನ್ನನ್ನು ತಡೆದು ನಿಲ್ಲಿಸಿದಂತಾಗಿತ್ತು. ನೋಡಿದರೆ–ಉಳಿದ ಮರಿಗಳ

ಮಧ್ಯೆ, ತಾಯಿಯ ಹಾಲು ಕುಡಿಯುವ ಭಂಗಿಯಲ್ಲಿ ಮುಚ್ಚಿಟ್ಟಿದ್ದ (ಹೂತು) ಮರಿಯನ್ನು ಮಲಗಿಸಿದ್ದಳು. ನನ್ನನ್ನೆಬಿಸದೆ, ಕೂಕಿ ಎದ್ದು ಹೋಗಿ, ಹುಡುಕಿ ತನ್ನ ಮರಿಯನ್ನು ತಂದಿದ್ದಳು!

ಕೂಕಿಯ ಮೇಲಿನ ಮೆಚ್ಚುಗೆ ಮತ್ತು ಎದೆ ಒಡೆದುಹೋಗುವಂತಹ ಭಾವನೆಗಳ ಮಧ್ಯೆ ಸಿಕ್ಕಿಹೋದರೂ, ಮತ್ತೊಮ್ಮೆ ಆ ಮರಿಯನ್ನ, ಅದೂ ಅವಳು ಮಲಗಿದಾಗ ತೆಗೆಯಬೇಕೆಂದು ಯೋಚಿಸಿದ್ದೆ, ನನ್ನ ಆ ಪ್ರಯತ್ನವನ್ನವಳು ಆಗಲೇ ಕಣ್ಣು ತೆರೆದು, ಮೂತಿಯನ್ನು ಮುಂದೆಮಾಡಿ (ಕೊಂಕಿಸಿ) ತಡೆದಳು, "ನನ್ನ ಮರಿಯನ್ನ ನನಗೆ ಬಿಟ್ಟು ಬಿಡು" ಎಂಬರ್ಥ ಬರುವಂತೆ ದಿಟ್ಟಿಸಿ ನೋಡಿದ್ದಳು!

ಕೊನೆಗೂ, ನನಗವಳು ಆ ಸತ್ತ ಮರಿಯನ್ನ ತೆಗೆಯಲು ಬಿಡಲು ಪೂರ್ಣ ನಾಲ್ಕು ದಿನಗಳೇ ಬೇಕಾದವು. ಆದರೂ "ಗುರ್" ಎಂದು ಗುರು-ಗುಟ್ಟಿದ್ದಳು. "ನನಗಲ್ಲದಿದ್ದರೂ....ತನ್ನ ಮರಿ ತನಗೆ ದಕ್ಕದಂತೆ ಮಾಡಿದ್ದ ದುರ್ವಿಧಿಗೆ!" ಹಿಮರಾಶಿಯ ಮಧ್ಯೆ ಸಿಕ್ಕಿಹಾಕಿಕೊಂಡಾಗ! ಕೂಕಿಯ ಶ್ರದ್ಧಾ-ಭಕ್ತಿಯ ಬಗ್ಗೆ ಮತ್ತೊಂದು ನಿದರ್ಶನ, ಅದು ಒಂದು ಚಳಿಗಾಲದ, ರಾತ್ರಿಯ ಓಟ (ರೇಸಿನ)ದ ಸಮಯವಾಗಿತ್ತು,—೧೫° ಅಥವಾ ೨೦°ಯಷ್ಟು ತಾಪಮಾನವಿದ್ದು ಹುಣ್ಣಿಮೆಯ ಬೆಳದಿಂಗಳಿದ್ದಂತಹ ಆ ರಾತ್ರಿ, ನಾನವಳನ್ನು ಗಾಡಿಯನ್ನೆಳೆಯುವ ಗುಂಪಿನ ಮುಖ್ಯಸ್ಥಳನ್ನಾಗಿ ಆರಿಸಿದ್ದೆ. ಅವಳೊಡನೆ ಓಡುವುದರಲ್ಲಿ ಪರಿಣಿತಿಯನ್ನ ಪಡೆದಂತಹ ಮೂರು ನಾಯಿಗಳಿದ್ದವು. ಅವಳದ್ದೇ ಆಗಿದ್ದ ಮತ್ತು ಸುಮಾರಾಗಿ ಬೆಳೆದಿದ್ದ ಮರಿಗಳೂ ಹಿಂದೆ ಇದ್ದವು. ಒಟ್ಟು ಆ ಗುಂಪಿನಲ್ಲಿ ಹತ್ತು ನಾಯಿಗಳಿದ್ದವು.

ನಾನೊಮ್ಮೆ ಓಟಕ್ಕಾಗಿ ಪರಿವರ್ತಿಸಲಾಗಿದ್ದ, ಪರಿತ್ಯಕ್ತ ರೈಲ್ವೆ ಟ್ರ್ಯಾಕಿನುದ್ದಕ್ಕೂ ಓಡಬೇಕೆಂದುಕೊಂಡಿದ್ದೆ, ಟ್ರ್ಯಾಕುಗಳು ಮತ್ತು ಕೊಂಡಿಗಳನ್ನು ಅಲ್ಲಿಂದ ತೆಗೆದು, ಆ ಜಾಗೆಯಲ್ಲಿ ಪ್ಲೈವುಡ್ ಅನ್ನು ಹಾಕಿದ್ದರು. ನಲವತ್ತು ಕಿ.ಮೀ ದೂರ ಅರಣ್ಯದಲ್ಲಿ ಓಡಿದ ಬಳಿಕ ಹೊಳೆಯನ್ನು ಅಡ್ಡ ದಾಟುವ ಪ್ರಮೇಯ ಬಂದಿತ್ತು. ಟ್ರೆಸ್ಟಲ್‌ನಲ್ಲಿ ಸ್ವಲ್ಪ ದೂರ ದಾಟಿದೊಡನೆಯೇ....ಅದೂ ಹೊಳೆಯಿಂದ ಆರು ಕಿ.ಮೀ. ಎತ್ತರದಲ್ಲಿ, ನಾಯಿಗಳು ಇದ್ದಕ್ಕಿದ್ದಂತೆ ನಿಂತುಬಿಟ್ಟಿದ್ದವು. ಟ್ರೆಸ್ಟಲ್‌ನ ಮೇಲೆ ಹಾಕಲ್ಪಟ್ಟಿದ್ದ ಪ್ಲೈವುಡ್‌ನ್ನು ಕೆಲವು ಹುಚ್ಚರು ಕದ್ದ ಪರಿಣಾಮವಾಗಿ ನನ್ನ ಬಂಡಿಯೂ ನಿಂತುಬಿಟ್ಟಿತ್ತು. ನನ್ನ ಬಂಡಿಯ ಸ್ಲೋ ಬ್ರೇಕಿನ ಎರಡು ಹಲ್ಲುಗಳು ಹಾಳಾದವಲ್ಲದೆ, ಬಂಡಿ ಅದರುತ್ತಾ ದಢಕ್ಕನೆ ನಿಂತುಬಿಟ್ಟಿತ್ತು.

ವಿಶ್ವಾಸ ಘಾತುಕ :

ಬ್ರೇಕ್ ಇದ್ದಕ್ಕಿದ್ದಂತೆ ಹಾಕಿದ್ದರಿಂದಾಗಿ ಗಾಡಿಯ ಹ್ಯಾಂಡಲ್ ಬಾರ್ ನನ್ನ ಹೊಟ್ಟೆಗೆ ಬಡಿದಿತ್ತು. ನಾನೂ ದೂರ ಎಸೆಯಲ್ಪಟ್ಟಿದ್ದೆ. ನದಿಯ ಹತ್ತಿರವೇ ಇದ್ದಂತಹ ಹಿಮದ ರಾಶಿಯ ಮೇಲೆಯೇ ನಾನು ತಲೆಕೆಳಗಾಗಿ ಬಿದ್ದದ್ದು, ನದಿಯಲ್ಲೇನಾದರೂ ನಾನು ಬಿದ್ದಿದ್ದರೆ, ಮುಳುಗಿಯೇ ಹೋಗುತ್ತಿದ್ದೆ, ಅಥವಾ ಮರಗಟ್ಟಿಬಿಡುತ್ತಿದ್ದೆ. ಐಸಿನ (ಬರ್ಫಿನ) ಮೇಲೆ ಬಿದ್ದಿದ್ದರೆ, ಕುತ್ತಿಗೆ ಮುರಿದು ಹೋಗುತ್ತಿತ್ತೇನೊ....

ಪ್ರಯಾಸದಿಂದೆದ್ದು ನೋಡಿದಾಗ, ಕೂಕಿಯ ಮುಂದಾಳುತನದಲ್ಲಿ ಪೂರಾ ಗುಂಪು ಅಲ್ಲಿಯೇ ನಿಂತಿದ್ದವು. ಅವುಗಳನ್ನ

ಹಾಗೆಯೇ ಹಿಂತಿರುಗಿಸಲು ನಾನು ಪ್ರಯತ್ನಿಸಿದ್ದರೆ, ಒಂದರ ಹಿಂದೊಂದರಂತೆ, ಜಾಗೆ ಬಿಟ್ಟು ಕಟ್ಟಿದ್ದರಿಂದ, ಸಿಕ್ಕಿಹಾಕಿಕೊಂಡು ಗಂಟುಗಳಾಗುವ ಸಾಧ್ಯತೆ ಇತ್ತು. ಟ್ರೆಸ್ಸಲ್‌ನ ಮೇಲೆ ಹೋಗಲು ಬಿಟ್ಟಿದ್ದರೆ ಮರಿಗಳು ಬೀಳಬಹುದೆಂದೆನಿಸಿತ್ತು, "ಅತ್ತ ದರಿ ಇತ್ತಪುಲಿ" ಎನ್ನುವ ಪರಿಸ್ಥಿತಿ, ಕೊನೆಗೆ ನಾನು ಏನನ್ನೂ ಮಾಡಲು ಅಸಾಧ್ಯ" ಎಂದು ಬಿಟ್ಟದ್ದೆ ಕೂಕಿಗೆ.

"ನೀನೇ ನಮ್ಮನ್ನೆಲ್ಲಾ ಈ ರೀತಿಯ ಅಪಾಯಕ್ಕೊಡ್ಡಿದವನು. ಹಾಗಾಗಿ ನೀನೇ ಈಗ ಪಾರುಮಾಡು" ಎನ್ನುವಂತೆ ಅವಳು ನನ್ನನ್ನೇ ನೋಡಿದಳು. ನಾನು ಮೆಲ್ಲನೆದ್ದು, ಟ್ರೆಸೆಲ್‌ನ ಬಳಿಗೆ ಹತ್ತಿ ಹೋಗಿದ್ದೆ ಮತ್ತು ನಾಯಿಗಳ ಕಟ್ಟನ್ನ ಒಂದೊಂದಾಗಿ ಬಿಚ್ಚಿದ್ದೆ. ಅತಿ ಎಚ್ಚರಿಕೆಯಿಂದ, ಒಂದೊಂದು ನಾಯಿಯೂ ಟ್ರೆಸೆಲ್‌ನನ್ನು ದಾಟಿಬಿಟ್ಟವು. ಆಚೆ ದಡ ಸೇರಿದ ನಂತರವೂ ಅವು ನಿಲ್ಲಲಿಲ್ಲ. ದೊಡ್ಡ ನಾಯಿಗಳು ಮೊದಲೂ ಬಂದಿದ್ದರಿಂದ, ಮನೆಗೆ ಹೋಗುವ ದಾರಿಯೂ ಗೊತ್ತಿದ್ದರಿಂದ, ಅಲ್ಲಿ ನಿಲ್ಲದೆ ಪರಾರಿಯಾಗಿದ್ದವು. ಮರಿಗಳೂ ಅವುಗಳನ್ನ ಹಿಂಬಾಲಿಸಿದ್ದವು.

"ಒಳ್ಳೇದು....ಇನ್ನು ಇಲ್ಲಿ ಉಳಿದವರು ನಾವಿಬ್ಬರೆ" ಎಂದಿದ್ದೆ ಕೂಕಿಗೆ, ಅವಳನ್ನೂ ಬಿಚ್ಚಿಬಿಟ್ಟದ್ದೆ. ನನ್ನ ಕಣ್ಣುಗಳನ್ನೆ ನಾನು ನಂಬಲಾರದವನಂತೆ ನೋಡುತ್ತಿದ್ದಂತೆಯೇ ....ಕೂಕಿ ಕೂಡಾ, ಅಲ್ಲಿ ನಿಲ್ಲದೆ ಓಡಿದ್ದಳು. ಗುಂಪಿನ ಹಿಂದೋಡಿದವಳನ್ನ ನೋಡಿದಾಗ ಮನ ಭಾರವಾದಂತೆ ಅನಿಸಿದಾಗ, "ನೀನು ಕೂಡಾ ವಿಶ್ವಾಸಘಾತುಕಿ" ಎಂದಿದ್ದೆ.

ನಾನೇ ಪ್ರಯಾಸ ಪಡುತ್ತಾ ಗಾಡಿಯನ್ನ ಎಳೆದಿದ್ದೆ. ಗಟ್ಟಿ ನೆಲದ ಮೇಲೆ ಹೇಗೋ ಮಾಡಿ ನಿಲ್ಲಿಸಿದ್ದೆ. ಟ್ರೆಸೆಲ್‌ನನ್ನೂ ಒಬ್ಬನೇ ದಾಟಿಸಿದ್ದೆ ಕೂಡಾ. ನಲವತ್ತೆಂಟು ಕಿಲೋಮೀಟರ್ ದೂರವನ್ನು ಕ್ರಮಿಸಲು ನನಗೊಬ್ಬನಿಗೇ ಮೂರು ದಿನಗಳಾದರೂ ಬೇಕಿತ್ತು.

ನಲವತ್ತು ನಿಮಿಷಗಳು ಕಳೆಯುವುದಷ್ಟರಲ್ಲಿ ಏನೊ....ಶಬ್ದ ಕೇಳಿಸಿತ್ತು."ಮಿಂಟೊ" ಎನ್ನುವ ಕೆಂಪು ಬಣ್ಣದ ದೊಡ್ಡ ನಾಯಿ ನನ್ನೆದುರು ಬಂದು ಕುಳಿತುಕೊಂಡಿತ್ತು.

"ಹೆಲೊ" .... ಒಬ್ಬನೇ ಆದೆಯಾ? ಎನ್ನುತ್ತಾ ಅದರ ಕಿವಿಯನ್ನುಜ್ಜಿದ್ದೆ. ಅಷ್ಟರಲ್ಲೇ ವಿನ್‌ಸ್ಟನ್ ಎಂಬ ನಾಯಿಕೂಡ ಬಂದಿತ್ತು.

"ಇದೇನಿದು .... ಸ್ವಾಮಿಭಕ್ತಿಯಾ ?"– ಎಂದು ಪ್ರಶ್ನಿಸಿದ್ದೆ.

ನಿಜವಾದ ಶ್ರದ್ಧಾಭಕ್ತಿ :

ಸತ್ಯ ಸಂಗತಿ ಏನೆಂದರೆ, ರೇಸಿನಲ್ಲಿ ಬಳಸಲ್ಪಡುವ ನಾಯಿಗಳಿಗೆ ಮುಂದೆ ಹೋಗುವುದಕ್ಕೆ ಮಾತ್ರ ತರಪೇತು (ಟ್ರೈನಿಂಗ್) ನೀಡಿರುತ್ತಾರೆಯೇ .... ವಿನಾ, ನಿಲ್ಲಲು, ಅಥವಾ ಹಿಂತಿರುಗಿ ಬರಲು ಅಲ್ಲ. ಅಂಥಾದರಲ್ಲಿ ಇಲ್ಲಿ ಇವುಗಳ ಸಂಗತಿ ಮಾತ್ರ ಬೇರೆಯಾಗಿತ್ತು. ದೊಡ್ಡ ನಾಯಿಗಳು ಮರಳಿ ಬಂದನಂತರ, ಮರಿಗಳು ಕೊನೆಗೆ ಕೂಕಿ ಕೂಡಾ ಬಂದಿತ್ತು.

ಗದ್ಗದಿತನಾಗಿ ಅವುಗಳಿಗೆ "ಥ್ಯಾಂಕ್ಯೂ" ಎನ್ನುತ್ತಾ ಕೊಂಡಿಗಳಿಗೆ ಸಿಕ್ಕಿಸಿದ್ದೆ. ಅವುಗಳನ್ನ ಮುನ್ನಡೆಸಿದಾಗ, ಕೆಲವು ನಾಯಿಗಳ ಕಿವಿಗಳ ತುದಿಯಲ್ಲಿ ಕಟ್ಟಿದ ಗುರುತುಗಳು ನನಗೆ ಕಂಡಿತ್ತು!

ಅನಂತರ ಅಡುಗೆ ಕೋಣೆಯಲ್ಲಿ ಕುಳಿತು ಪತ್ನಿ ರುತ್‌ಳಿಗೆ—"ನಾನಿದುವರೆಗೆ ಕೇಳದೆ

ಇದ್ದ ಮತ್ತು ನಂಬಲಸಾಧ್ಯವಾದ ಸಂಗತಿ ಎಂದರೆ, ನಮ್ಮ ಕೂಕಿಯೇ ಆ ನಾಯಿಗಳ ಹಿಂದೆ ಓಡಿ ಹೋಗಿ ಮರಳಿ, ಕರೆತಂದದ್ದಿರ ಬೇಕು" ಎಂದಿದ್ದೆ.

ದೂರದ ಕರೆ :

ನಾವಿಬ್ಬರೂ ಒಟ್ಟಿಗೆ ರೇಸಿನಿಂದ ನಿವೃತ್ತ ರಾಗಬೇಕಾಯಿತು. ಆ್ಯಂಕಲ್‌ನ (ಪಾದದ ಕೀಲು) ನೋವಿನಿಂದಾಗಿ ಕೂಕಿ ಬದಿಗೆ ಸರಿಸಲ್ಪಟ್ಟಿದ್ದಳು. ಒಂದು ದಿನ ನನಗೂ, ಇದ್ದಕ್ಕಿದ್ದಂತೆ ಎದೆನೋವಾಗಿ, ಹೃದ್ರೋಗ ವೆಂದು ಡಾಕ್ಟರಿಂದ ತಿಳಿದಿತ್ತು. ಉಳಿದ ನಾಯಿಗಳಿಗೆ ಬೇರೆ ಯಜಮಾನನನ್ನು ಹುಡುಕಿದ್ದೆ. ಕೂಕಿಯನ್ನ ಮನೆಯೊಳಗೆ ತಂದಿದ್ದೆ. ಆಹಾರ ಪಥ್ಯಧ್ಯಾನ-ವ್ಯಾಯಾ-ಮದ ಸಹಾಯದಿಂದಾಗಿ ನಾನು ಸುಧಾರಿ ಸಿದ್ದೆ. ನಿವೃತ್ತನಾದನಂತರದ ಮೊದಲ ಚಳಿ ಗಾಲದ ಒಂದು ಮುಂಜಾನೆ ಉರಿ ಹೊತ್ತಿ ಸಲು, ಮರದ ತುಂಡನ್ನ ಸೀಳಲು ಕೂಕಿ ಯನ್ನ ಕರೆದುಕೊಂಡು ಕಟ್ಟಿಗೆ ರಾಶಿಯ ಬಳಿಗೆ ಹೋಗಿದ್ದೆ. ಕಟ್ಟಿಗೆ ರಾಶಿಯ ಬಳಿಯೂ ನಿಲ್ಲದೆ ಕೂಕಿ ಮುಂದಕ್ಕೆ ಹೋಗುತ್ತಿದ್ದಳು!

ಅವಳ ಮನಸ್ಸಿನಲ್ಲಿದ್ದುದೇನೆಂದು ನಾನು ತಿಳಿದಿದ್ದೆ. ಮೊದಲ ಚಳಿಗಾಲದಲ್ಲೇ ದೂರದ ಓಟಗಳೂ, ಚಕ್ರದ ಗಾಡಿಗಳನ್ನ ಕಟ್ಟು ವುದೂ ಇರುತ್ತಿದ್ದಿತು. ನೂರಾರು ಬಾರಿ ಕೊಂಡಿ ಸಿಕ್ಕಿಸಿಕೊಳ್ಳಲು ಇಡೀ ಟೀಮಿ ನೊಡನೆ (ಗುಂಪು) ಅವಳು ನಿಲ್ಲುತ್ತಿದ್ದ ನಿರ್ದಿಷ್ಟ ಜಾಗೆಯಲ್ಲಿ ಅವಳು ನಿಂತಿ ದ್ದಳು.

ಅವಳ ಬಳಿಗೆ ಹೋಗಿ...."ಇಲ್ಲ....ಈಗ ನಾವು ಅದನ್ನು ಮಾಡುವುದಿಲ್ಲ" ಎಂದಿದ್ದೆ. ಅವಳು ಮೆಲ್ಲನೆ ಅಳುತ್ತಿದ್ದಳು. ನನ್ನ ಸ್ತಿಮಿತತೆಯನ್ನು ನಾನೆಲ್ಲಿ ಕಳೆದುಕೊಳ್ಳು ವೆನೊ....ಎಂಬ ಹೆದರಿಕೆಯಿಂದಾಗಿ ನಾನು ತಿರುಗಿಯೂ ನೋಡದೆ ಕಟ್ಟಿಗೆ ರಾಶಿಯ ಬಳಿಗೆ ನಡೆದಿದ್ದೆ.

ರೇಸಿನಲ್ಲೋಡುವ ಅವಳ ಆಸೆಯನ್ನ.... ನನ್ನ ಜತೆಗಿರಬೇಕೆಂಬ ಅವಳ ಪ್ರತೀದೃಢ ನಿಶ್ಚಯ ಗೆದ್ದಂತಾಗಿ ಓಡಿ ಬಂದಿದ್ದಳು. ಅವಳ ಬಳಿ ಕುಳಿತು ಸಂತೈಸಿ, ಮೈ ಸವರಿ ದಾಗ ನನ್ನ ಗಾಲಿಗೊತ್ತಿ ನಿಂತಿದ್ದಳು.

ಎರಡು ಚಳಿಗಾಲಗಳೂ....ಒಂದು ಬೇಸಿಗೆ ಕಾಲವೂ ಕೂಕಿ ನಮ್ಮೊಂದಿಗೆ ಇದ್ದಳು. ಬೇಸಿಗೆಯ ಒಂದು ಮುಂಜಾನೆ ಹೊರ ಹೋದ ಕೂಕಿ ಮರಳಿ ಬರಲಿಲ್ಲ. ಸತ್ತು ಬಿದ್ದ ಕೂಕಿಯನ್ನ ಒಂದು ಮರದ ಬುಡದಲ್ಲಿ ಕಂಡಿದ್ದೆ.

ಅವಳ ಬಳಿಯಲ್ಲಿ ಕುಳಿತು ನಾನು ಅತ್ತೆ. ಅನಂತರ ಅವಳನ್ನ ಅವಳ ಪ್ರೀತಿಯ ನಾಯಿಗೂಡಿನೊಳಗೆ ತೆಗೆದುಕೊಂಡು ಹೋಗಿ, ರೇಸಿನ ಸಾಮಾನು-ಸರಂಜಾಮು ಗಳನ್ನಿಡುವ, ಜಾಗೆಯಲ್ಲಿಟ್ಟೆ. ಈಡಿ. ಟರಾಡ್ ರೇಸಿನಲ್ಲಿಯ, ಅವಳ ಮತ್ತು ನನ್ನ ನಂಬರ್ ೩೨ ಮತ್ತು ಅವಳ ಕಾಲರ್ ಬೆಲ್ಟನೊಂದಿಗೇ ಅವಳನ್ನಲ್ಲಿ ಮಣ್ಣು ಮಾಡಿದೆ.

ಯೌವನಾವಸ್ಥೆಯಲ್ಲಿ, ನಮ್ಮಿಬ್ಬರ ಮುಂದೆ ಇರುತ್ತಿದ್ದುದು ಕೇವಲ ಬರ್ಫಿನ ಮಿನುಗು ಮತ್ತು ದಿಗಂತವೆಂಬುದಿನ್ನೂ ನನ್ನ ಮನದಲ್ಲಿ ಹಚ್ಚ ಹಸಿರಾಗಿದೆ.

ನನ್ನ ನೆಚ್ಚಿನ ನಿಧಿ ನೂರು ಡಾಲರ್‌ಗಳು

ನೀರದ ಎನ್ ನಾಗರಾಜರಾವ್

೨೨೩೫, ೨೩ನೇ ಕ್ರಾಸ್, ಬನಶಂಕರಿ ೩ನೇ ಹಂತ
ಬೆಂಗಳೂರು–೫೬೦೦೭೦

ವರ್ಷದ ರಜ ಬಂದು ನಮ್ಮ ಪಾಠಶಾಲೆಯನ್ನು ಮುಚ್ಚಿದ್ದರು. ನಾನು ಮತ್ತು ಮ್ಯಾಕ್ಸ್ ಇಬ್ಬರು, ಮಾರ್ಕ್ಸ್‌ನ ತಂದೆಯ ಕಾರಿನಲ್ಲಿ ಮನೆಗೆ ವಾಪಸ್ಸು ಬಂದೆವು. ೧೯೬೭ ನೇ ಜೂನ್ ತಿಂಗಳಿನಲ್ಲಿ ನಾವು, ಕೆನಡಾದ ವಾನ್ ಕೂವರ್ ದ್ವೀಪದ ಪೋರ್ಟ್ ಆಬ್ಬರ್ನಿಯ ಒಂದು ಲಂಬರ್-ಮಿಲ್ ಪಟ್ಟಣದಲ್ಲಿ ಕಾರಿನಲ್ಲಿ ಬರುತಿದ್ದೆವು. ನಾವು ಒಂದು ರಸ್ತೆಯ ತಿರುವಿನಲ್ಲಿದ್ದಾಗ ನನ್ನ ತಂದೆಯನ್ನು ನೋಡಿದೆ. ಹಾಯ್‌ಲೆಂಡ್ ಪಟ್ಟಣದಲ್ಲಿ ಯೂನಿಫಾರಂ ಆಗಿರುವ ಉಲ್ಲನ್ನಿನ ಚೌಕಳಿ ಫ್ಲಾನಲ್ ಷರಟು, ಹಸುರು ಪ್ಯಾಂಟ್‌ನ್ನು ಪಟ್ಟಣದ ಮಾಲಿಯಾದ ನಮ್ಮ ತಂದೆಯೂ ಹಾಕಿಕೊಂಡಿದ್ದರು.

ಮ್ಯಾಕ್ಸ್ "ಅಲ್ಲಿನೋಡು ನಿನ್ನ ಮುದುಕ ತಂದೆ" ಎಂದ.

"ಮುಂದಕ್ಕೆ ಕಾರು ಬಿಟ್ಟುಕೊಂಡು ಹೋಗು" ಎಂದು ಹೇಳುತ್ತಾ ಮೈಯನ್ನು ಆದಷ್ಟೂ ಮುದುಡಿಕೊಂಡು, ಅವರಿಗೆ ಕಾಣಿಸದಿರಲಿ ಎಂದು ತಗ್ಗಿಸಿ ಕುಳಿತೆ. ಏಕೆಂದರೆ ಆ ದಿನವೇ ನನಗೆ ನನ್ನ ಅಂಕಪಟ್ಟಿ ಸಿಕ್ಕಿತ್ತು. ಅದರಲ್ಲಿ ನಾನು ಉತ್ತೀರ್ಣನಾಗಿರಲಿಲ್ಲವೆಂದು ಮತ್ತೆ ಅದೇ ಕ್ಲಾಸಿನಲ್ಲಿ ಓದಬೇಕೆಂದು ಬರೆದಿತ್ತು. ಅದನ್ನು ನೋಡಿದ ಮೇಲೆ ನಮ್ಮ ತಂದೆಯವರಿಗೆ ತಡೆಯಲಾರದಷ್ಟು ದುಃಖವಾಗುವುದೆಂದು ನನಗೆ ಚೆನ್ನಾಗಿ ಗೊತ್ತಿತ್ತು.

೧೯೨೮ ರಲ್ಲಿ ಡೆನ್ಮಾರ್ಕಿನಿಂದ, ಕೆನಡಾಗೆ ವಲಸೆ ಬಂದಮೇಲೆ ನನ್ನ ತಂದೆ ಕೂಲಿಕೆಲಸ ಮಾಡಿಕೊಂಡಿರಲು ನಿರ್ಧರಿಸಿದ್ದರು. ಆದರಿಂದ ಅವರಿಗೆ ಹೇರಳವಾದ ಸಂಪಾದನೆಯೇನೂ ಆಗುತ್ತಿರಲಿಲ್ಲ. ಆದರೂ ತನ್ನ ಮಕ್ಕಳು ಮುಂದಕ್ಕೆ ಬರಬೇಕೆಂದು ಬಹಳಷ್ಟು ಶ್ರಮಿಸುತ್ತಿದ್ದರು. ನನ್ನ ಇಬ್ಬರು ಸಹೋದರರು ತಂದೆಯ ಆಸೆಯನ್ನು ಈಡೇರಿಸುವುದಕ್ಕೆ ಸತತ ಪ್ರಯತ್ನಪಡುತ್ತಿದ್ದರು.

ನಮ್ಮ ದೊಡ್ಡಣ್ಣ ಕಾಲೇಜ್ ಓದಿ, ಈಗ ಮದುವೆ ಮಾಡಿಕೊಂಡು ಪ್ರೊವೋದಲ್ಲಿ ಕೆಲಸದಲ್ಲಿದ್ದನು. ಲಾರೆನ್ಸ್‌ಕೂಡ ಪ್ರೊವೋದಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದನು.

ಮನೆಗೆ ಬಂದಕೂಡಲೇ ನಾನು ನನ್ನ ಅಂಕಪಟ್ಟಿಯನ್ನು ಮೇಜಿನ ಮೇಲಿರಿಸಿದೆ.

೧೯೯೬ ರ ಆಗಸ್ಟ್ ತಿಂಗಳ ರೀಡರ್ಸ್ ಡೈಜೆಸ್ಟ್ ಪತ್ರಿಕೆಯಲ್ಲಿ ಪ್ರಕಟವಾದ ಜೇಮ್ಸ್ ಎಡ್‌ವರ್ಡ್ ಪೆಡರ್‌ಸನ್ ಅವರ "ಮೈ ಡಾಲರ್ ಹಂಡ್ರಡ್ ಟ್ರಸ್ಟ್ ಫಂಡ್" ಲೇಖನದ ಅನುವಾದ.

ಏಕೆಂದರೆ ತಂದೆ ಮನೆಗೆ ಬರುವ ಮೊದಲು ತಾಯಿ ನೋಡಿ ನನಗೆ ಬೈಗಳ ಕಡಿಮೆಯಾಗುತ್ತೆ ಎಂಬ ನಂಬಿಕೆ. ಅನಂತರ ನಾನು ಮ್ಯಾರ್ಕ್ಸನ ಹತ್ತಿರಕ್ಕೆ ಹೋದೆ. ಅವನು ನನ್ನ ಹಾಗೇ ಹತ್ತನೇ ಸ್ಟಾಂಡರ್ಡ್‌ನಲ್ಲಿ ಅನುತ್ತೀರ್ಣನಾಗಿದ್ದನು. ಅವನಿಗೆ ತನ್ನ ತಂದೆ ತಾಯಿಯನ್ನು ಹೇಗಪ್ಪಾ ಸಮಾಧಾನಿಸಲಿ ಎನ್ನುವ ಗಾಬರಿಯೇ ಇರಲಿಲ್ಲ.

ನಾನು ಮನೆಗೆ ಹೋದಾಗ ತಂದೆಯವರು ಮಲಗಿದ್ದರು. ಅವರ ಎದೆಯ ಮೇಲೊಂದು ಪತ್ತೇದಾರಿ ಪುಸ್ತಕ ಜೋರಲಾಗಿತ್ತು. ಅವರನ್ನು ನೋಡಿ, ನಾನು ಹೀಗಾಗಿಬಿಡುತ್ತೆ ಅಂತ ಅಂದುಕೊಂಡಿರಲಿಲ್ಲ ಡ್ಯಾಡಿ" ಎಂದು ಬ್ಬೆ....ಬ್ಬೆ....ಬ್ಬೆ ಅಂತ ಒದರಿದೆ. ಆ ಥರಹದ ಪದಗಳು ನನಗೆ ಆಡಲು ಆ ಹೊತ್ತಿನಲ್ಲಿ ಹೇಗೆ ತೋಚಿದವೋ ನನಗೇ ತಿಳಿಯದು.

ತಂದೆಯವರು ಹಾಸಿಗೆ ಮೇಲೆದ್ದು ಕುಳಿತು. "ನೀನು ನನ್ನನ್ನು ನಿಜವಾಗಿಯೂ ತಲೆ ತಗ್ಗಿಸುವಂತೆ ಮಾಡಿಬಿಟ್ಟೆ ಎಂದರು. ಕಾದ ಕಾವಲಿ ಮೇಲೆ ಬಿದ್ದ ಹನಿಗಳಂತೆ ಇತ್ತು ಆ ಮಾತುಗಳು. ನಾನು ನಂಬರ್ ಬರದಿದ್ದಕ್ಕೆ ಹೇಳಿದ ಸುಳ್ಳು ಮಾತುಗಳು ನುಣಚಿಕೊಂಡು ಆವಿಯಾಗಿ ಹೋದಂತೆ ಅನ್ನಿಸಿತು. ನಾನು ಗೊಣಗುಟ್ಟುತ್ತಾ "ನನ್ನನ್ನು ಕ್ಷಮಿಸಿ" ಎಂದು ಹೇಳಿ, ಹಿತ್ತಲ ಕಡೆಗೆ ಓಡಿಹೋದೆ. ಒಂದೆರಡು ಕ್ಷಣಗಳ ನಂತರ ನನ್ನ ತಂದೆಯೂ ನನ್ನ ಬಳಿ ಬಂದು ತಲೆ ತಗ್ಗಿಸಿ ನಿಂತುದು ತಿಳಿಯಿತು. "ಪರವಾಗಿಲ್ಲ ಜಿಮ್ಮಿ" ಎಂದು ಮತ್ತೊಮ್ಮೆ ಸಾಂತ್ವನ ನೀಡಿದರು. "ಈಗ ಫೇಲಾಗಿರುವುದರ ಬಗ್ಗೆ ಏನೂ ಮಾಡಲಾಗುವುದಿಲ್ಲ. ಆದರೆ ಮುಂದಿನ ವರ್ಷ ಚೆನ್ನಾಗಿ ಓದಿ ಪಾಸ್ ಮಾಡಿ ಮೇಲಕ್ಕೆ ಬರುವಂತೆ ಪ್ರಯತ್ನ ಪಡು" ಎಂದರು.

ಅಪ್ಪ "ನನ್ನನ್ನು ಕ್ಷಮಿಸಿ" ಎಂದೆ. ಬರೀ, ಸಾರಿ ಕೇಳಿಕೊಂಡರೆ ಸಾಲದು, ನಿನ್ನ ಮೇಷ್ಟ್ರು ನನಗೆ, ನೀನು 'ಎ' ಗ್ರೇಡ್ ತೆಗೆದುಕೊಳ್ಳಬಲ್ಲವನಾಗಿದ್ದಾನೆ ಎಂದರು, ಆದರೆ ನೀನು ಸರಿಯಾಗಿ, ಚೆನ್ನಾಗಿ, ಓದದೆ ಹೊತ್ತು ಕಳೆದು ಹಾಳುಮಾಡಿಕೊಳ್ಳುತ್ತಿ" ಎಂದರು.

ಮುಂದಿನ ವರ್ಷ ಸ್ಕೂಲಿನ ಬಾಗಿಲು ತೆಗೆದಾಗ, ನನ್ನ ಜೀವನದಲ್ಲಿ ಬಿಡುವಿಲ್ಲದ ವಿಚಾರಗಳು ಮುತ್ತಿಕೊಂಡವು. ನನ್ನ ಜೀವನ ಕ್ಷೇತ್ರವನ್ನು ಬೆವರ್ಲಿ ಆಕ್ರಮಿಸ ತೊಡಗಿದಳು. ಉದ್ದನೆಯ ರೇಷ್ಮೆ ಕೂದಲಿನ ಮುಗ್ಧ ಕಣ್ಣುಗಳು ಜೊತೆಗೆ ಬಹಳ ನಾಚಿಕೆಯಿಂದ ಕೂಡಿದ ಹುಡುಗಿಯೊಬ್ಬಳ ಪರಿಚಯ ಅವನಿಗೆ ಕ್ಲಾಸಿನಲ್ಲಿ ಆಯಿತು. ಅವಳನ್ನು ನನ್ನ ಕ್ಲಾಸಿನ ಪ್ರಯೋಗಾಲಯದಲ್ಲಿ ಪಾರ್ಟನರ್ ಆಗಿರುವಂತೆ ಕೇಳಿಕೊಂಡೆ. ಅವಳು ತನ್ನ ಒಪ್ಪಿಗೆಯಿತ್ತಳು. ನಾನು ನನ್ನಲ್ಲಿರುವ ಧೈರ್ಯವನ್ನೆಲ್ಲಾ ಒಟ್ಟುಗೂಡಿಸಿಕೊಂಡು ಅಕ್ಟೋಬರ್ ತಿಂಗಳಿನಲ್ಲಿ ನಮ್ಮ ಶಾಲೆಯಲ್ಲಿ ನಡೆಯುವ ಡಾನ್ಸ್ ಪ್ರೋಗ್ರಾಂನಲ್ಲಿ ನನ್ನೊಡನೆ ಡಾನ್ಸ್ ಮಾಡಲು ಕೇಳಿಕೊಂಡೆ. ಆದರೆ, ನನ್ನ ಬಳಿ ಡಾನ್ಸ್‌ಗೇ ಎಂದು ನಿಗದಿಪಡಿಸಿದ್ದ ಬಟ್ಟೆಗಳೇ ಇರಲಿಲ್ಲ.

ಒಂದು ದಿನ ನಮ್ಮ ತಂದೆ ಅವರ ಬಳಿ ಹೋಗಿ, ನಮಗೆ ಡಾನ್ಸ್‌ಗೆ ಬೇಕಾದ ಡ್ರೆಸ್ ಕೊಂಡುಕೊಳ್ಳುವಷ್ಟು ಹಣವಿಲ್ಲ ಅಂತ ನನಗೆ ಗೊತ್ತು ಎಂದು ನಾನೇ ನಾಚಿಕೆಯಿಂದ

ಹೇಳಿದೆ "ಆದರೆ, ನಾನು ನನಗೆ ಬೇಕಾದವ ರೊಬ್ಬರನ್ನು ಡಾನ್ಸ್‌ಗೆ ಕರೆದುಕೊಂಡು ಹೋಗುವುದಾಗಿ ಮಾತು ಕೊಟ್ಟಿದ್ದೇನೆ ನನ್ನ ಹತ್ತಿರ ಹಾಕಿಕೊಳ್ಳಲು ಸೂಟ್ ಇಲ್ಲ ಎಂದೆ.

ನನ್ನ ತಂದೆ ಒಂದು ನಿಮಿಷ ನನ್ನನ್ನೇ ದುರುಗುಟ್ಟಿಕೊಂಡು ನೋಡಿದರು. ನನ್ನ ತಂದೆಯವರ ಮನಸ್ಸಿಗೆ ಯಾವುದಾದರೂ ಖರ್ಚು ವ್ಯರ್ಥವೆನ್ನಿಸಿದಲ್ಲಿ, ಅದಕ್ಕಾಗಿ ಏನು ಮಾಡಿದರೂ ಹಣ ಕೊಡುತ್ತಿರಲಿಲ್ಲ. ಇದನ್ನು ತಿಳಿದಿದ್ದ ನಾನು ತಂದೆಯವರನ್ನು ಹಣಕ್ಕಾಗಿ ಬಹಳ ಪೀಡಿಸುತ್ತಿದ್ದೇನೆ ಅನ್ನಿಸಿತು. ಆಯಿತು, ನೀನು ಕೇಳಿದ್ದನ್ನು ನಾನು ತೆಗೆಸಿಕೊಡುತ್ತೇನೆ" ಎಂದು ಉತ್ತರಿಸಿದರು.

ಮಾರನೆ ದಿನ ಸಂಜೆ ನಾವು ಉಡುಪಿನ ಅಂಗಡಿಗೆ ಹೋದೆವು. ತಂದೆಯವರು ಅಂಗಡಿಯವನಿಗೆ "ನನ್ನ ಮಗನ ಅಳತೆಯ ಡಾನ್ಸಿನ ಉಡುಪು ಕೊಡಿ" ಎಂದರು. "ನಾವು ನಿಮ್ಮಲ್ಲಿರುವ ಅತಿ ಉತ್ತಮ ಉಡುಪುಗಳನ್ನು ನೋಡಬಹುದೆ" ಎಂದು ಕೇಳಿದರು. ಅಂಗಡಿಯವನು ಒಂದು ಡ್ರೆಸ್ ನೋಡಲು ಇರಿಸಿದನು. ಜಾಕೆಟ್ ಒಂದೇ ೬೫ ಡಾಲರ್ ಬೆಲೆಯದಾಗಿತ್ತು. ಅದು ನಮ್ಮ ಜೀವನದಲ್ಲೇ ಕಂಡದಿಲ್ಲ, ಕೇಳಿದಿಲ್ಲ. ಅವರು ಬೇಡವೆಂದು ತಲೆ ಆಡಿಸಿಯೇ ಬಿಡುತ್ತಾರೆ ಎಂದಂದುಕೊಂಡು ನಾನು ನನ್ನ ತಂದೆಯವರ ಕಡೆ ನೋಡಿದೆ. ಆದರೆ ಅವರು, ತೆಗೆದುಕೊ ಎಂದು ಒಪ್ಪಿಗೆ ಯನ್ನು ಸೂಚಿಸಿದರು.

ನಾನು ಡಾನ್ಸಿನ ಬಟ್ಟೆಗಳ ಜೊತೆಗೆ ಕೋಟು ಮತ್ತು ಷೂಸ್‌ಗಳನ್ನು ತೆಗೆದು ಕೊಂಡು ಅಂಗಡಿಯಿಂದ ಹೊರಟೆ. ತಂದೆ ಯವರು ಗರಿಮುರಿಯಾದ ೧೦೦ ಡಾಲರ್ ಗಳನ್ನು ತೆಗೆದು ಅಂಗಡಿಯವನಿಗೆ ಕೊಟ್ಟರು. ನಮ್ಮ ತಂದೆ ಕಾರು ಕೊಂಡಾಗ ಮಾತ್ರ ಕೈಬಿಚ್ಚಿ ಹಣದ ದೊಡ್ಡ ಮೊತ್ತವನ್ನು ಕೊಟ್ಟಿದ್ದೇ ನಾನು ನೋಡಿರುವುದು. ಅನಂತರ, ಈ ದಿನ ನನ್ನ ಕರ್ಚಿಗೆಂದೇ ಅವರು ಇಷ್ಟು ದೊಡ್ಡ ಮೊತ್ತವನ್ನು ಖರ್ಚು ಮಾಡಿದ್ದು.

ನಾನು ಎಲ್ಲಾ ಸಿದ್ಧತೆ ಮಾಡಿಕೊಂಡಾದ ಮೇಲೆ, ಮುಂದಿನ ಶನಿವಾರ ಬೆವರ್ಲಿಯನ್ನು ಡಾನ್ಸ್‌ಗೆ ಬರುವಂತೆ ಕೇಳಿಕೊಂಡೆ. "ನನ್ನನ್ನು ಕ್ಷಮಿಸು" ಎಂದು ದೈನ್ಯತೆಯಿಂದ ಕೇಳಿಕೊಂಡಳು. ವಾರದ ಅಂತ್ಯದಲ್ಲಿ ನಾನು ಟೋರೇಂಟೋಗೆ ಹೋಗಿ ಅಲ್ಲೊಂದು ಮದುವೆಗೆ ಹಾಜರಾಗಬೇಕಾಗಿದೆ. ಆದರೆ ನಿನಗೆ ವಂದನೆಗಳು! ಎಂದುಬಿಟ್ಟಳು.

ನಾನು ಅವಳಿಗೆ ಗುಡ್‌ಬೈ ಹೇಳಿ ದೂರವಾಣಿಯನ್ನು ಕೆಳಗಿಟ್ಟು, ಒಮ್ಮೆ ನನಗೆ ನಾನೇ ಕಿರುಚಾಡಿ ಸುಮ್ಮನಾದೆ. "ಆ ಹುಡುಗಿ ಅವರ ಮನೆಯವರಜೊತೆ ಬೇರೆ ಊರಿಗೆ ಹೋಗಬೇಕಂತೆ" ಎಂದು ನಾನು ಗೋಳಾಡುತ್ತಾ ನನ್ನ ತಂದೆಗೆ ಹೇಳಿಕೊಂಡೆ. ಜೊತೆಗೆ "ಅದೊಂದು ಧಿಡೀರನೆ ನಿಶ್ಚಯಿಸಿದ ಪ್ರೋಗ್ರಾಂ ಆಗೋಯ್ತಂತೆ "ಎಂದು ಕೂಡಾ ಸಮಜಾಯಿಸಿದೆ. ನಮ್ಮ ತಂದೆ ಮುಖ ಸಿಂಡರಿಸಿಕೊಂಡರು ಮತ್ತೆ ಸಮಾಧಾನಪಡಿ ಸುವ ಧ್ವನಿಯಿಂದ "ಬೇರೆ ದಿನಗಳಲ್ಲೂ ಡ್ಯಾನ್ಸ್‌ಗಳು ಇದ್ದೇ ಇರುತ್ತವೆ" ಎಂದರು. ನಾನು ಸಮಾಧಾನದಲ್ಲಿ ತೇಲಿಹೋದೆ.

ಒಂದೆರಡು ಭಾನುವಾರಗಳು ಕಳೆದು ಹೋದ ಮೇಲೆ, ನಾನು ಆ ಹೊಸ ಬಟ್ಟೆಗಳನ್ನು ಹಾಕಿಕೊಂಡು ಚರ್ಚ್‌ಗೆ ಹೋದೆ. ರಾತ್ರಿ ಊಟವಾದ ಮೇಲೆ ನಾನು ಟೆಲಿವಿಷನ್ ಮುಂದೆ ಕುಳಿತಾಗ ಮ್ಯಾಕ್ಸ್ ಕಾರಿನಲ್ಲಿ ಬಂದಿಳಿದನು. "ನಾನು ಮ್ಯಾಕ್ಸ್ ಜೊತೆ ಹೋಗುತ್ತಿದ್ದೀನಿ. ಆರ್ವಿ ಡ್ರಿಲ್ ಹಾಲ್‌ನಲ್ಲಿ ರೋಲರ್ ಸ್ಕೇಟ್‌ನವರ ಹಾಕಿ ಪಂದ್ಯಾವಳಿ ನೋಡಲು ಹೋಗುತ್ತಿದ್ದೇನೆ" ಎಂದು, ನಮ್ಮ ತಂದೆತಾಯಿಯವರಿಗೆ ಕೇಳುವಂತೆ ಅರಚುತ್ತಾ ಹೊರಟೆ.

"ಬಟ್ಟೆ ಬದಲಾಯಿಸಿ ಹೋಗು" ಎಂದು ತಂದೆಯವರು ಕೂಗಿದರು".

"ನಾವು ಬರೀ ಆಟ ನೋಡಲು ಹೋಗುತ್ತಿದ್ದೇವೆ. ಆಟ ಆಡಲು ಅಲ್ಲ" ಎಂದು ಎದಿರು ವಾದಿಸುತ್ತಾ ಹೊರಟೇ ಹೋದೆ.

ಆದರೆ ಡ್ರಿಲ್ ಹಾಲ್‌ನಲ್ಲಿ ನಮ್ಮನ್ನು ಯಾರೋ ಜೋರಾಗಿ ಕರೆದರು. ಆಟ ಆಡಲು ಟೀಮಿಗೆ ಸಾಕಷ್ಟು ಜನಗಳಿಲ್ಲ! ಬನ್ನಿ! ಎಂದರು. ಆದ್ದರಿಂದ ನಾನು ನನ್ನ ಜಾಕೆಟನ್ನು ಒಳಕ್ಕೆ ತೂರಿಸಿಕೊಂಡು, ಬಾಡಿಗೆ ಹಾವಿಗೆಯನ್ನು ಹಾಕಿಕೊಂಡು ಗೋಲ್ ಕೀಪರ್ ಜಾಗಕ್ಕೆ ಹೋಗಿ ಸೇರಿದೆ.

ಐದು ನಿಮಿಷದ ಆಟ ನಡೆದಿತ್ತು. ಇದ್ದಕ್ಕಿದ್ದಂತೆ ಒಂದು ಭಾರೀ ಆಸ್ಫೋಟದಂತೆ ಚೆಂಡು ಬೀಸಿ ನನ್ನ ಕಡೆಗೆ ಬಂತು ಅದು ನನ್ನ ಮೊಣ ಕಾಲಿಗೇ ಜೋರಾಗಿ ಬಡಿಯಿತು. ಅಷ್ಟರೊಳಗೆ "ಪರ್....ರ್.... ಪರ್...." ಎಂದು ಪ್ಯಾಂಟಿನ ಎರಡು ಮೊಣಕಾಲು ಹರಿದುಹೋಯಿತು.

ದಿಕ್ಕುತೋಚದೆ, ನಾನು ಮನೆಗೆ ಬಂದಾಗ "ನನ್ನ ಮಾತನ್ನೇಕೆ ಕೇಳದೆ ಓಡಿಹೋದೆ" ಎಂದು ತಂದೆ ಕೂಗಾಡಿದರು.

"ಆ ಡ್ರೆಸ್ಸನ್ನು ನಿನಗೆ ತಂದು ಕೊಡಲು ನಾನೆಷ್ಟು ಹೆಚ್ಚು ಹೆಚ್ಚು ಹೊತ್ತು ಕೆಲಸ ಮಾಡಿದ್ದೀನಿ ಅಂತ ನಿನಗೇನು ಗೊತ್ತು? ಎಂದು ಹೇಳುತ್ತಾ, ತಮ್ಮ ಮಲಗುವ ಕೊಠಡಿಯೊಳಕ್ಕೆ ಹೋಗಿ ಬಾಗಿಲು ಮುಚ್ಚಿಕೊಂಡು ಬಿಟ್ಟರು. ಅವರು ಹಿಂದೆ ಎಂದೂ ನನ್ನ ಮುಂದೆ ಈ ರೀತಿ ಮುಖ ತಿರುಗಿಸಿಕೊಂಡು ಹೋದದ್ದೇ ಇಲ್ಲ.

ಒಂದರೆಕ್ಷಣದಲ್ಲಿ ತಂದೆಯವರು ಬಂದು "ನೀನು ಈ ರಾತ್ರಿ ಹಾಕಿ ಆಟ ಆಡಿದ್ದೀ ಅಲ್ವ? ಎಂದು ಬಹಳ ನೊಂದು ಕೊಳ್ಳುತ್ತಾ ಹೇಳಿದರು.

"ಜನಗಳು ಆಟ ಆಡಿ ಅಂತ ಬಲವಂತ ಮಾಡಿದರು, ಡ್ಯಾಡ್ ! ಎಂದೆ.

"ನೀನು ನಿನ್ನ ಕಾಲ ಮೇಲೆ ನಿಂತು ಕೊಳ್ಳುವುದನ್ನು ಕಲಿಯಬೇಕು ನಾನೇನೊ ಹೆತ್ತ ಮಗ ಅಂತ ನೀನು ಮಾಡಿದ್ದನ್ನೆಲ್ಲಾ ಹೊಟ್ಟೆಗೆ ಹಾಕಿಕೊಳ್ತೀನಿ ಆದರೆ, ಪ್ರಪಂಚದ ಜನ ನಿನ್ನ ಯಾವತ್ತೂ ಕ್ಷಮಿಸುವುದಿಲ್ಲ" ಎಂದರು.

ನನಗೆ ಅವರು ಯಾತಕ್ಕೆ ಹಾಗೆಲ್ಲಾ ಅಂದರು ಅಂತ ಗೊತ್ತಾಗಲೇ ಇಲ್ಲ. ಅವರ ಈ ಮಾತಿನಿಂದ ನನಗೆ ಅವರು ನನ್ನ ಕೆಟ್ಟ ಕೆಲಸದ ಬಗ್ಗೆ ಬಹಳಷ್ಟು ಕಠಿಣರಾಗಿರದೆ, ಮತ್ತೆ ಇನ್ನೂ ಸಹಾಯ ಮಾಡಿ ಮೇಲೆತ್ತುತ್ತಿದ್ದಾರೆಂದು ಅನ್ನಿಸಿತು.

ಬೆವರ್ಲಿಯನ್ನು ನನ್ನ ಪಟ್ಟಿಯಿಂದ ತೆಗೆದು ಹಾಕಿದ ಮೇಲೆ, ನಾನು, ನನ್ನತನವನ್ನು ಇನ್ನೂ ಹೆಚ್ಚಿಸಿಕೊಂಡು,

ಹುಡುಗಿಯರುಗಳನ್ನು ಆಕರ್ಷಿಸುವಂತೆ ಮಾಡಲು ಬೇಕಾದಷ್ಟು ಪ್ರಯತ್ನಪಟ್ಟೆ. ಯಾರಿಂದಲೂ ಆಕರ್ಷಣೆ ನನಗೆ ಸಿಕ್ಕಲಿಲ್ಲ. ಹೆಸರಾಂತ ಗಿಟಾರು ವಾದಕರಿಗೆ ಜನ ದುಂಬಾಲು ಬೀಳುತ್ತಾರೆ. ಆದ್ದರಿಂದ ನಾನೂ ಒಂದು ಕೆಂಪು ಬಣ್ಣದ ಗಿಟಾರನ್ನು ಕೊಂಡುಕೊಳ್ಳಲು ನಿರ್ಧಸಿದೆ. ಅದಕ್ಕಾಗಿ, ಲಂಬರ್‌ಮಿಲ್‌ನಲ್ಲಿ ವಾರಾಂತ್ಯದಲ್ಲಿ ಕೆಲಸ ಮಾಡತೊಡಗಿದೆ. ಅಲ್ಲಿ ಮೈಎಲ್ಲಾ ಗ್ರೀಸ್ ಎಣ್ಣೆ, ಮರದ ಹೊಟ್ಟು ಇವುಗಳಿಂದ ಆವೃತ ನಾಗಿ ಮನೆ ಸೇರುತ್ತಿದ್ದೆ, ಆದರೆ, ನನ್ನ ದುಡಿತಕ್ಕೀಗ ಒಂದು ಹೊಸ ಅರ್ಥವಿತ್ತು.

ನಿಧಾನವಾಗಿ ನನ್ನ ಬಳಿ ಹಣ ಕೂಡುತ್ತಾ ಬಂತು. ಹೀಗೆ, ಒಂದು ಶನಿವಾರ ನಾನು ೧೦೦ ಡಾಲರ್‌ಗಳನ್ನು ಮುಟ್ಟಿದ್ದೆ. ೧೦೦ ಡಾಲರ್‌ಗಳನ್ನು ಕಟ್ಟಿದಲ್ಲಿ ನಾನು ಗಿಟಾರ್‌ನ್ನು ಕೊಂಡುಕೊಳ್ಳಬಹುದೆ? ಎಂದು ಸ್ಪೀರ್ ಕೇಳಬೇಕೆಂದುಕೊಂಡೆ.

ಭಾನುವಾರ ಬೆಳಿಗ್ಗೆ ನಮ್ಮ ತಾಯಿಗೆ ಏಳುತ್ತಿದ್ದ ಹಾಗೇ ಮೈಗೆ ಸರಿಯಾಗಿರಲಿಲ್ಲ ನಮ್ಮ ತಂದೆ ನನ್ನೊಬ್ಬನನ್ನೇ ಚರ್ಚಿಗೆ ಹೋಗಿ ಬರಲು ಹೇಳಿ, "ನಿಧಾನವಾಗಿ ಕಾರು ಓಡಿಸು. ಮತ್ತೆಲ್ಲಿಯೂ ಅಲೆಯದೆ, ಸೀದಾ ಮನೆಗೇ ಬಾ" ಎಂದೂ ಹೇಳಿದರು.

"ಹಾಗೇ ಆಗಲಿ" ಎಂದು ನಾನು ಮಾತು ಕೊಟ್ಟು, ನನ್ನೊಬ್ಬನಿಗೇ ತಮ್ಮ ಕಾರನ್ನು ಓಡಿಸಲು ಕೊಟ್ಟರಲ್ಲ ಅಂತ ಅತೀವ ಆನಂದವಾಯಿತು. ಈ ಕಾರು ನಮ್ಮ ತಂದೆಯುವರ ಎರಡನೆಯ ಹೊಸಕಾರು ಸ್ವಂತದ್ದಾಗಿತ್ತು. ಮೊದಲ ಕಾರನ್ನು ಅವರು ಸಾಲದ ಮೇಲೆ ಕೊಂಡಿದ್ದರು.

ಚರ್ಚಿನಲ್ಲಿ ನನಗೆ ನಾಲ್ಕು ಜನ ಸ್ನೇಹಿತರು ಸಿಕ್ಕಿದರು "ನಿಮ್ಮ ಮನೆಯವರೆಲ್ಲಾ ಎಲ್ಲಿ?" ಎಂದು ಸ್ನೇಹಿತ ಬಿಲ್ಲಿ ಕೇಳಿದ. ಕಾರಣ ತಿಳಿಸಿದೆ. ಒಡನೆಯೇ ಎಲ್ಲರೂ ನನ್ನ ಕಾರಿನೊಳಗೆ ಕುಳಿತು ಬಿಟ್ಟರು, "ನಾವೆಲ್ಲಾ ಸ್ಪೋರ್ಟ್‌ಲೇಕ್‌ಗೆ ಹೋಗೋಣ" ಎಂದು, ಡಾರ್ಲೆನ್ ಸಲಹೆ ಇತ್ತನು. ಮೊದಲು ನಾನು ಹಿಂಜರಿದೆ. ಏಕೆಂದರೆ, ತಂದೆಯುವರು ಮತ್ತೆಲ್ಲಿಯೂ ಅಲೆದಾಡದೆ ಸೀದ ಮನೆಗೆ ಬಾ ಎಂದು ತಾಕೀತು ಮಾಡಿ ಕಳುಹಿಸಿದ್ದರು. ಆದರೆ, ನಾನು ಬೇಗ ಮನೆಗೆ ಹೋಗಿ ಬಿಟ್ಟರೆ ಆಯಿತು. ಮನೆಯಲ್ಲಿ ಯಾರಿಗೂ ಸುಳುಹು ಗೊತ್ತಾಗೊಲ್ಲ ಅಂತ ನಿರ್ಧರಿಸಿ ಹೊರಟೆ.

ದೊಡ್ಡ ರಸ್ತೆಯು ಹಿಂದುಗಡೆ ರಸ್ತೆ ಹಿಮ ಮತ್ತು ಮಂಜಿನಿಂದ ಮುಚ್ಚಿಹೋಗಿತ್ತು. ಒಂದು ಕಿಲೋಮೀಟರ್ ಗಾಡಿ ನಡೆಸಿದ ಮೇಲೆ, ನಾನು ಎತ್ತರದ, ಜಾರುತ್ತಿರುವ ಬೆಟ್ಟದ ತುದಿಗೆ ಬಂದಾಗ, ನಾನು ಬರುತ್ತಿದ್ದ ರಸ್ತೆಯ ದಾರಿಯಲ್ಲಿಯೇ ಒಂದು ಲಾರಿ ಮುಖಾಮುಖಿಯಾಗಿ ನಾನು ಬ್ರೇಕ್‌ನ ಮೇಲೆ ಸಿಕ್ಕಿಹಾಕಿಕೊಂಡು ಬಿಟ್ಟೆ ಮತ್ತು ಲಾರಿ ಜೊತೆ ಢಕ್ಕಾಮುಕ್ಕಿ ಆಗಿ ಬಿಟ್ಟಿತು. ನಾವುಗಳು ಜಾರಿಕೊಂಡು ಲಾರಿ ಒಳಕ್ಕೆ ಬಿದ್ದೆವು.

ಹಾಗೂ ಹೀಗೂ ಹೊರಕ್ಕೆ ಬಂದು ನೋಡಿದಾಗ ಲಾರಿಗೆ ಏನೂ ಜಖಮ್ ಆಗಿರಲಿಲ್ಲ. ಆದರೆ, ಕಾರಿನ ಮುಂಭಾಗ ಛಿದ್ರ-ಛಿದ್ರವಾಗಿತ್ತು.

"ನಮ್ಮಪ್ಪ ನನ್ನ ಕೊಂದೇ ಬಿಡುತ್ತಾರೆ" ಎಂದು ನಾನು ಯೋಚಿಸತೊಡಗಿದೆ.

ಒಂದು ಸಣ್ಣ ಲಾರಿಯಲ್ಲಿ ನನ್ನ ತಂದೆಯರ ಜೀವಕ್ಕೆ ಜೀವದಂತಿದ್ದ ಕಾರನ್ನು ಮನೆಗೆ ತಂದಿದ್ದಾಯಿತು. ನಾವು ಮನೆ ಸೇರಿದ ಕೂಡಲೇ, ನನ್ನ ಸ್ನೇಹಿತರು ಸಣ್ಣ ಲಾರಿಯಿಂದ ಜಿಗಿದು, ಹಾರಿ, ಚದುರಿ ಹೋದರು. ನಾನು ಮತ್ತು ಕ್ರಿಸ್ ಇಬ್ಬರೇ ಮುಂಬರುವ ಭಾರಿ ಅಪಘಾತವನ್ನು ಎದುರಿಸಲು ನಿಲ್ಲಬೇಕಾಯಿತು.

ಮುರಿದು ಚೂರಾದ ಕಾರನ್ನು ನೋಡಿದ ಕೂಡಲೇ ತಂದೆಯವರು ಹಾರಿ ಬಂದು ನಿಂತರು. "ಇದೇನು ಮಾಡಿಬಿಟ್ಟೆ?" "ಒಳಕ್ಕೆ ಹೋಗು !" ಎಂದರು. ಅವರ ಕೂಗಾಟ ನೋಡಿ, ಕ್ರಿಸ್ ಕೂಡ ನನ್ನಿಂದ ದೂರ ಹೊರಟೇ ಬಿಟ್ಟ. ಮನೆಯೊಳಗೆ ಹೋದ ನಂತರ ತಂದೆಯವರು ಬಹಳ ಜಿಗುಪ್ಸೆ ಪಟ್ಟುಕೊಂಡು "ಕಾರಿನ ಬಗ್ಗೆ ನಾನು ಯೋಚಿಸುತ್ತಾ ಇಲ್ಲ. ನಾವೇ ಸರಿ ಮಾಡಿ ಕೊಳ್ಳಬಹುದು. ಆದರೆ, ನಿನ್ನನ್ನು ನಂಬಿ ನಾವು ಯಾವ ಕೆಲಸ ಮಾಡಿಸುವುದಕ್ಕೆ ಆಗುವುದೇ ಇಲ್ಲ. ಮತ್ತೊಮ್ಮೆ ನಾನು ನನ್ನ ಕೊಠಡಿಯೊಳಗೆ ಹೋಗಿ, ತಂದೆಯವರು ಮತ್ತೊಂದು ಬಾರಿ ಬಂದು ನನ್ನ ರೂಮಿನ ಬಾಗಿಲನ್ನು ತಟ್ಟಿ ನನ್ನನ್ನು ಹೊರಬರಲು ಕರೆಯುತ್ತಾರೆ ಎಂದು ಯೋಚಿಸುತ್ತಾ ಕುಳಿತೆ.

ಹೀಗೆ ಸಂಜೆಯೂ ಕಳೆದು, ರಾತ್ರಿಯೂ ಆಯಿತು. ಆದರೆ, ತಂದೆಯವರು ಕರೆಯಲೇ ಇಲ್ಲ, ರೂಮಿಗೂ ಬರಲಿಲ್ಲ ನನಗೂ ನನ್ನ ತಂದೆಗೂ ಮಧ್ಯದಲ್ಲಿ ದೊಡ್ಡ ಬಿರುಕು ಉಂಟಾಗಿ ಹೋಯಿತು, ಮತ್ತೆ ಏನಾದ ರೊಂದು ಹಿತವಾದ ಕೆಲಸಮಾಡಿ ತಂದೆಯ ವರ ಮನಸ್ಸನ್ನು ಗೆಲ್ಲಬೇಕೇ ಹೊರತು, ಅದು ತಾನಾಗಿಯೇ ಬಿರುಕು ಮುಚ್ಚಿಕೊಳ್ಳು ವಂಥದ್ದಲ್ಲ ಎಂದು ಯೋಚಿಸಿದೆ.

ತಂದೆಯವರ ಆದೇಶದಂತೆ ನಾನು ವಿಮೆ ಆಫೀಸಿನ ಏಜೆಂಟ್ ಬಳಿಗೆ ಹೋದೆ.

"ನೀನು ಕಾರು ಓಡಿಸುವಾಗ ಎಚ್ಚರ ವಹಿಸಿಲ್ಲ. "ಆದ್ದರಿಂದ ಈ ತಪ್ಪಿಗೋಸ್ಕರ ನಿಮ್ಮ ತಂದೆ ೧೦೦ ಡಾಲರ್‌ಗಳ ದಂಡ ತೆರಲೇಬೇಕು" ಎಂದು ಏಜೆಂಟ್ ಹೇಳಿದ.

ಅವನ ಮಾತು ಕೇಳಿದ ಒಡನೇ ನನ್ನ ಎದೆ ಧಸಕ್ ಎಂದಿತು. ಯಾಕೆಂದರೆ ಲಾರಿ ನಾನು ಬರುವ ರಸ್ತೆಯಲ್ಲಿಯೇ ಬರುತ್ತಿತ್ತು. ಜೊತೆಗೆ ನಾನು ಗಿಟಾರಿಗೆಂದು ಕೂಡಿಟ್ಟದ್ದ ೧೦೦ ಡಾಲರ್‌ಗಳು ವ್ಯರ್ಥವಾಗಿ ಹೋಗು ತ್ತಲ್ಲಾ ಎಂದು ದುಃಖಿಸ ತೊಡಿದೆ.

ಪ್ರತಿ ಶನಿವಾರ ಆ ಕೊಳಕಿನಲ್ಲಿ ಬೆವರು ಸುರಿಸಿ ಕೆಲಸಮಾಡಿ ಕೊಡಿಟ್ಟದ್ದೆಲ್ಲಾ ನೀರಿನಲ್ಲಿ ಹೋಮ ಮಾಡಿನಂತಾಗಿತ್ತು, ನಾನು ನನ್ನ ಬೆವರಿನ ಹಣ ಐದು, ಇಪ್ಪತ್ತರ ನೋಟುಗಳನ್ನು ಕಿತ್ತುಕೊಟ್ಟೆ. ನನ್ನ ಅನಿಸಿಕೆಗಳೆಲ್ಲಾ ಅರ್ಥ ಕಳೆದುಕೊಂಡು ಬಿಟ್ಟಿದ್ದವು.

ನಾನು ಹಾಗೂ ಹೀಗೂ ಹತ್ತನೇ ತರಗತಿಯನ್ನು ದಾಟಿ ಹನ್ನೊಂದಕ್ಕೆ ಬಂದೆ.

ಒಂದು ದಿನ ಸಂಜೆ ನನ್ನ ಮಲಗುವ ಕೊಠಡಿಯಲ್ಲಿದ್ದಾಗ ನನ್ನ ತಂದೆ ಒಳಕ್ಕೆ ಬಂದರು. ಆ, ಅಪಘಾತದ ನಂತರ ನಾನು ಗೊತ್ತುಗುರಿ ಇಲ್ಲದೆ, ಒಳಗೇ ಕೊರಗುತ್ತಾ, ಒಬ್ಬಂಟಿಗನಾಗಿಯೇ ಉಳಿದು ಸಂಘರ್ಷಣೆಗೆ ಒಳಗಾಗಿದ್ದೆ. ತಂದೆಯವರಿಗೂ ನನಗೂ ಅಂತರ ಜಾಸ್ತಿ ಆಗುತ್ತಾ ಆಗುತ್ತಾ ನಾನು ಸದಾ ಸ್ನೇಹಿತರೊಡನೆ ಅಲೆದು ಕೈಯಲ್ಲಿದ್ದ ಸಂಬಳದ ಹಣವನ್ನು ಕಳೆದುಕೊಂಡು ಬರಿಕೈ ಆಗಿದ್ದೆ.

"ನಾನು ನಿನ್ನ ಭವಿಷ್ಯದ ಬಗ್ಗೆ ಯೋಚನೆ ಮಾಡ್ತಿದ್ದೀನಿ" ಎಂದರು. ಎಲ್ಲಾರೂ ಕಾಲೇಜ್ ಕಲಿಬೇಕು ಅಂದರೆ ಆಗೊಲ್ಲ ಮಿಲ್‌ನಲ್ಲಿ ಕೆಲಸಕ್ಕೆ ಸೇರಿಕೊ, ಅದರಲ್ಲಿ ನಾಚಿಕೆಪಟ್ಟುಕೊಳ್ಳುವಂಥದ್ದು ಏನೂ ಇಲ್ಲ. ಇದರ ಬಗ್ಗೆ ನಿನಗೆ ಸಮಜಾಯಿಸಿ ಹೇಳಲು ಇಷ್ಟಪಡುತ್ತೇನೆ," ಎಂದರು.

ಏನಂತ ಉತ್ತರಿಸಬೇಕೆಂದು ತಿಳಿಯದವನಾದೆ. ಬೆಪ್ಪಾಗಿ ಕುಳಿತೆ.

ಬ್ರಿಗ್‌ಹ್ಯಾಮ್‌ನಿಂದ ಈ ಬಾರಿಯ ಬೇಸಿಗೆ ರಜಕ್ಕೆ ಲಾರೆನ್ಸ್ ಮನೆಗೆ ಬಂದಿದ್ದನು. ಅವನು ತನ್ನ ಮುಂದಿನ ವರ್ಷದ ಓದಿಗಾಗಿ ಹಣ ಸಂಪಾದಿಸಿಕೊಂಡುಹೋಗಲು ಬಂದಿದ್ದನು. ಆಗ ಒಂದು ರಾತ್ರಿ ಅವನು ನನ್ನ ಮುಂದಿನ ಆಗುಹೋಗುಗಳ ಬಗ್ಗೆ ಕೇಳಿ ತಿಳಿದುಕೊಂಡನು.

"ಮಿಲ್‌ನಲ್ಲಿ ಕೆಲಸಕ್ಕೆ ಸೇರಿಕೊಳ್ಳುವುದು ಅಂತ ಕಾಣುತ್ತೆ ಎಂದೆ.

ಮಿಲ್ ಮುಚ್ಚಿಹೋದರೆ ಆಗ ಏನು ಮಾಡುವುದು ?" ಎಂದು ಅವನು ಕೇಳಿದ.

"ನಾನು ಬೇರೆ ಕೆಲಸ ಹುಡುಕಿಕೊಳ್ಳುತ್ತೇನೆ ಎಂದೆ.

"ಬೇರೆಯವರು ನಿನ್ನನ್ನೇಕೆ ಕೆಲಸಕ್ಕೆ ತೆಗೆದುಕೊಳ್ತಾರೆ" ಎಂದು ಅವನು ಮೊಟಕಾಗಿ ಕೇಳಿದಾಗ ನಾನು ಏನು ಉತ್ತರಸಬೇಕೆಂಬುದು ತಿಳಿಯದೆ ಸುಮ್ಮನಾದೆ. "ನೀನೇಕೆ ಪ್ರೊವೋಗೆ ಬಂದು ನಿನ್ನ ಓದನ್ನೇ ಮುಂದುವರಿಸಬಾರದು ? ಈವಾಗ ನೀನು ಓದು ಮುಂದುವರಿಸದಿದ್ದರೆ, ಮುಂದೆಂದಿಗೂ ನಿನಗೆ ಓದಲು ಆಗುವುದೇ ಇಲ್ಲ" ಎಂದರು.

ನಮ್ಮ ತಂದೆಯವರು ಆಡಿದ್ದ ಮಾತಿಗಿಂತ ಲಾರೆನ್ಸ್‌ನ ಮಾತುಗಳು ನನ್ನ ಮನಸ್ಸಿಗೆ ಚೆನ್ನಾಗಿ ನಾಟಿದವು. ಪೋರ್ಟ್ ಆಬ್ಬರ್ನಿಯಲ್ಲಿ ಜೀವನ ಹೇಗಿರುತ್ತೆ ಅಂತ ನನಗೆ ಚೆನ್ನಾಗಿ ಗೊತ್ತು. ಇಲ್ಲಿ ಈಗಿರುವ ಸ್ಥಿತಿಯಲ್ಲಿಯೇ ಇದ್ದರೆ ಏನೂ ಆಗದು. ಹೊಸ ಜಾಗದಲ್ಲಿ ಓದು ಶುರುಮಾಡಿಕೊಂಡಲ್ಲಿ ಖಂಡಿತ ಮುಂದುವರಿಯುತ್ತೇನೇನೋ ಎಂಬ ಹೊಸ ಆಸೆಯೊಂದು ಚಿಗುರಿತು.

ಬಹಳ ಆತಂಕ ಪಟ್ಟುಕೊಂಡು ನಮ್ಮ ತಂದೆಯವರನ್ನು ಇದರ ಬಗ್ಗೆ ಕೇಳಿಕೊಂಡೆ.

"ನಾನು ಒಮ್ಮೆ ಇಲ್ಲಿಂದ ಬೇರೆ ಕಡೆಗೆ ಹೋದಪಕ್ಷದಲ್ಲಿ, ಇಲ್ಲಿಯ ಜಂಝಾಟದಿಂದೆಲ್ಲಾ ಬಿಡುಗಡೆಹೊಂದಿ, ನಿರ್ಯೋಚನೆಯಿಂದ ಓದಿ ಮುಂದಕ್ಕೆ ಬರಬಹುದು" ಎಂದು ಬೇಡಿಕೊಂಡೆ.

ತಂದೆಯವರು ನನ್ನ ಮುಖವನ್ನೇ ದೃಷ್ಟಿಸಿದರು. ನನ್ನ ಮುಖದಲ್ಲಿ ಅವರಿಗೆ ನಿರಾಶೆ ಕಂಡಿರಬೇಕು, ಕೂಡಲೇ, "ಒಳ್ಳೆಯದು, ಹಾಗೇ ಆಗಲಿ" ಎನ್ನುತ್ತಾ, ಕಡೆಗೆ "ಅದಕ್ಕೆ ಬೇಕಾದ ಏರ್ಪಾಟುಗಳನ್ನೆಲ್ಲಾ ನಾವು ಮಾಡಿಕೊಡುತ್ತೇವೆ" ಎಂದರು.

ಮೂರು ವಾರಗಳ ಅನಂತರ ನಾನು ಚೀಲಗಳನ್ನು ಪ್ಯಾಕ್ ಮಾಡಿಕೊಂಡು, ತಂದೆಯವರಿಗೆ 'ಗುಡ್‌ಬೈ" ಹೇಳಲು ಹೋದೆ. ಆಗ ಅವರು ತನ್ನ ಮೇಜಿನಿಂದ ಏನನ್ನೋ ಎಳೆದು ತೆಗೆಯುತಿದ್ದರು.

"ನಿನ್ನ ಹತ್ತಿರ ಹೆಚ್ಚಿಗೆ ಹಣವಿಲ್ಲವೆಂದು ನನಗೆ ಗೊತ್ತು." ಎಂದು ಹೇಳಿ ನನ್ನ ಕೈಗೆ ಒಂದು ಕವರ್ ಇತ್ತರು. "ಇದು ನಿನಗೆ ಉಪಯೋಗಕ್ಕೆ ಬರಬಹುದು ಎಂದರು,

ನಾನು ಕವರ್‌ನ ತುದಿ ಹರಿದು ಒಳಗೇನಿದೆ ಎಂದು ನೋಡಿದಾಗ ಅದರೊಳಗೆ ಸುಕ್ಕು ಸುಕ್ಕಾದ ಡಾಲರ್‌ಗಳ ನೋಟುಗಳಿತ್ತು.

"ನನಗೆ ನೀನು ಹಣಕ್ಕಾಗಿ ವಂದನೆಗಳನ್ನು ಅರ್ಪಿಸಬೇಕಾಗಿಲ್ಲ, ಏಕೆಂದರೆ, ಅದು ನಿನ್ನದೇಹಣ. ಕಾರಿಗೆ ಅಪಘಾತವಾದಾಗ ನೀನು ಕೊಟ್ಟಿದ್ದ ಹಣ ಅದು" ಎಂದರು. ನನ್ನ ಮುಖವೆಲ್ಲಾ ಓಕುಳಿಚೆಲ್ಲಿದಂತಾಗಿತ್ತು.

"ನೀನು ಏಜೆಂಟ್ ಅಂಗಡಿಯಿಂದ ಬಂದಮೇಲೆ ನಾನು ಅವನನ್ನು ನೋಡಲು ಹೋಗಿದ್ದೆ" ಎಂದು ತಂದೆಯವರು ವಿವರಿಸಿ ಹೇಳಿದರು.

"ನಮಗೆಂದೇ ಗೊತ್ತುಪಡಿಸಿದ್ದ ರಸ್ತೆಯಲ್ಲಿಯೇ ಮಗ ಕಾರು ಬಿಟ್ಟುಕೊಂಡು ಬಂದಿರುತ್ತಾನೆ. ಆದರೂ, ಅವನೇಕೆ ಮಗನಲ್ಲಿ ತಪ್ಪು ಕಂಡುಹಿಡಿದು ಕೇಳಿದ್ದಾರೆ. ನಮ್ಮಿಬ್ಬರಿಗೂ, ಅವನು ನಿನ್ನ ಮೇಲೆ ಇಲ್ಲಸಲ್ಲದ ತಪ್ಪು ಹೊರಿಸಿದ್ದಾನೆ ಎಂದು ಗೊತ್ತು, ಆದ್ದರಿಂದ, ಅವನು ನಿನ್ನ ರೆಕಾರ್ಡನ್ನು ಸರಿಮಾಡಿ ನಿನ್ನ ಹಣವನ್ನು ವಾಪಸ್ಸು ಕೊಡುವಂತೆ ಹೇಳಿ ವಸೂಲಿ ಮಾಡಿದೆ. ಅದೂ ನೀನು ಕೊಟ್ಟ ನೋಟುಗಳನ್ನೇ ವಾಪಸ್ಸು ಕೇಳಿ ತಂದಿದ್ದೇನೆ.

"ಆದರೆ ಆ ಹಣವನ್ನು ವಾಪಸ್ಸು ತಂದಾಗಲೇ ನಿನಗೆ ಕೊಟ್ಟುಬಿಟ್ಟಿದ್ದರೆ, ನಿನಗೆ ಅದರ ಬಗ್ಗೆ ಏನೂ ಅನುಭವವೇ ಉಂಟಾಗುತ್ತಿರಲಿಲ್ಲ" ಆದ್ದರಿಂದ ಸರಿಯಾದ ಸಮಯ ಬಂದಾಗ ಕೊಡೋಣವೆಂದು ಇಟ್ಟುಕೊಂಡಿದ್ದೆ" ಎಂದರು.

ನನ್ನೊಳಗಿನ ಹುಡುಗುತನ ತಂದೆಯವರನ್ನು ಅಪ್ಪಿಕೊಳ್ಳಬೇಕು ಅಂತ ಹೇಳುತ್ತಿತ್ತು. ಆದರೆ ಅಷ್ಟರಲ್ಲಿ ನನ್ನ ತಂದೆಯವರು ಇತರರಿಗೆ ಷೇಕ್‌ಹ್ಯಾಂಡ್ ಕೊಡುವಂತೆ ನನ್ನ ಕೈಯನ್ನೂ ಅದುಮಿ ಷೇಕ್‌ಹ್ಯಾಂಡ್ ಕೊಟ್ಟುಬಿಟ್ಟರು. ಅವರ ಆಸೆಗಳನ್ನು ನಿರಾಸೆಗೊಳಿಸಲೇಬಾರದೆಂದು ನಾನು ದೃಢ ನಿರ್ಧಾರ ಮಾಡಿಕೊಂಡೆ.

ಪ್ರೋವೋದಲ್ಲಿ, ನಾನು ೧೨ನೇ ಸ್ಟಾಂಡರ್ಡ್‌ನಲ್ಲಿ ಗಮನವಿಟ್ಟು ಓದತೊಡಗಿದೆ. ನನ್ನ ೧೦೦ ಡಾಲರ್‌ಗಳನ್ನು ಸದ್ವಿನಿಯೋಗ ಮಾಡಿ ಪುಸ್ತಕಗಳನ್ನೇ ಖರೀದಿಸಿದೆ. ಆದರೆ ಒಂಟಿತನ ನನ್ನ ದಿನನಿತ್ಯದ ಸಮಸ್ಯೆ ಆಗತೊಡಗಿತು. ಅಧೈರ್ಯ, ಪರಿಕೀಯ ಭಾವನೆ ಕಾಡುತ್ತಾ ನನ್ನ ಧ್ಯೇಯಗಳನ್ನೆಲ್ಲಾ ಕೊಂದುಹಾಕಲು ಪ್ರಯತ್ನಿಸುತ್ತಿತ್ತು.

ಆದರೆ ತಂದೆಯವರನ್ನು ಮತ್ತೊಮ್ಮೆ ಎದುರಿಸಲು ನಿಲ್ಲಬೇಕಾಗಿ ಬಂದಾಗ ನಾನು ಎತ್ತರದಲ್ಲಿ ನಿಲ್ಲಬೇಕೆಂದುಕೊಂಡು ಮನಸ್ಸಿಗೆ ಶಕ್ತಿ ಕೊಟ್ಟು ಧೈರ್ಯದಿಂದ ಎದುರಿಸಿದೆ. ಹೀಗೆ ತಿಂಗಳುಗಳು ಕಳೆಯುತ್ತಾ ನನ್ನೆಲ್ಲ ಮನಸ್ಥೈರ್ಯ ಒಳ್ಳೇ ಫಲವನ್ನೇ ಇತ್ತಿತು. ಏಪ್ರಿಲ್ ತಿಂಗಳಲ್ಲಿ ನಡೆದ ನನ್ನ ಮೂರನೇ ಕ್ವಾರ್ಟರ್ ಪರೀಕ್ಷೆಯಲ್ಲಿ ನಾನು 'ಎ' ಗ್ರೇಡ್ ಪಡೆದುಕೊಂಡಿದ್ದೆ. ನನಗಂತು ನಂಬಲಾಗಲೇ ಇಲ್ಲ.

ನಾನು ನನ್ನ ತಂದೆಯವರಿಗೆ ಫೋನ್‌ನಲ್ಲಿ ವಿಚಾರ ತಿಳಿಸಿದೆ.

"ನನಗೆ ನಿನ್ನ ಬಗ್ಗೆ ಬಹಳ ಹೆಮ್ಮೆ ಉಂಟಾಗಿದೆ" ಎಂದು ಹೇಳುತ್ತಾ "ನೀನು ಈ ರೀತಿ ಮೇಲಕ್ಕೆ ಬಂದೇ ಬರುತ್ತಿ ಎಂಬ ನಂಬಿಕೆ ಇತ್ತು" ಎಂದರು. ನನ್ನೆರಡು ಕಣ್ಣು ತುಂಬಿ ಬಂತು.

ಎರಡು ತಿಂಗಳ ನಂತರ ನಾನು ಪದವೀಧರನಾದೆ, ಅನಂತರ ನಾನು ಮನೆಗೆ ಹೋದೆ.

ಮನೆಯ ಹೊಸ್ತಿಲನ್ನು ತುಳಿದ ಒಡನೇ, ನನ್ನ ಮತ್ತು ತಂದೆ ನಡುವಿನ ಬಿರುಕು ಮುಚ್ಚಿಹೋಗಿತ್ತು.

ನಾನು ಊರಿಗೆ ಬಂದ ಒಂದೆರಡು ದಿನದಲ್ಲೇ ತಂದೆಯವರಿಗೆ ಹೃದಯಾಘಾತವಾಗಿಬಿಟ್ಟಿತು. ಒಂದೂವರೆ ತಿಂಗಳು ಅವರು ಆಸ್ಪತ್ರೆಯಲ್ಲಿಯೇ ಇದ್ದರು ಆಗಸ್ಟ್ ತಿಂಗಳ ಮಧ್ಯದಲ್ಲಿ ನಾನು ಒಂದು ಸಲ ಆಸ್ಪತ್ರೆಗೆ ನೋಡಲು ಹೋಗಿದ್ದಾಗ ನಾನು ಏನು ಮಾಡಬೇಕೆಂದು ತಿಳಿಯದೆ, ಬೆಪ್ಪಾಗಿ ಸುಮ್ಮನೆ ಕುಳಿತಿದ್ದೆ. ಕಡೆಗೆ ತಂದೆಯವರೇ ನನ್ನ ಮೌನವನ್ನು ಮುರಿದು "ನೀನು ನಿನ್ನ ಜೀವನದಲ್ಲಿ ಮುಂದೇನು ಮಾಡಬೇಕೆಂದಿದ್ದಿ" ? ಎಂದು ಪ್ರಶ್ನಿಸಿದರು.

ನನ್ನ ಸಹಾಯ ಮನೆಗೆ ಬೇಕಾಗಿದೆಎಂದು ಅವರ ಮಾತಿನಿಂದ ನನಗೆ ಅರ್ಥವಾಯಿತು. ನಾನು ನನ್ನ ಭವಿಷ್ಯದ ಬಗ್ಗೆಯೂ ಗಂಭೀರವಾಗಿ ಮಾತನಾಡಿದೆ. ನನ್ನೆಲ್ಲಾ ಮಾತುಗಳು ಅವರಿಗೆ ತೃಪ್ತಿಯನ್ನು ಕೊಟ್ಟಿತ್ತು. ಅದೇ ದಿನ ರಾತ್ರಿ ಅವರು ಕಣ್ಣುಮುಚ್ಚಿದರು. ನಾನು ವಿವೇಚನೆ ಇಲ್ಲದೆ ಅಡ್ಡದಾರಿಗೆ ಹೋಗಿದ್ದಾಗ, ತಂದೆಯವರ ವಿಶಾಲ ಹೃದಯದಿಂದ ನನ್ನನ್ನು ಸರಿಯಾದ ದಾರಿಗೆ ತಂದು ನಿಲ್ಲಿಸಿದ್ದಕ್ಕೆ ನಾನು ಬಹಳ ಹೆಮ್ಮೆಪಟ್ಟುಕೊಂಡೆ.



ಶಿಕ್ಷಣದ ಮೂಲಕ ಪುನರ್ನಿರ್ಮಾಣ ; ಪುನರ್‌ನಿರ್ಮಾಣದ ಮೂಲಕ ಶಿಕ್ಷಣ

—ಗಾಂಧೀಜಿ

ದೇಶದಲ್ಲಿ ರಾಜಕೀಯ ನಿರ್ಧಾರದಿಂದ ಮಾತ್ರ ಅನಕ್ಷರತೆಯ ಮೇಲೆ ಜಯಗಳಿಸಲು ಸಾಧ್ಯ

—ಯುನೆಸ್ಕೊ

ನಿನಗೆ ನೀನೇ ಗೆಳೆಯ

ಟಿ. ವಿ. ಅನ್ನಪೂರ್ಣಮ್ಮ

ಎಂ.ಐ.ಜಿ ೫, 'ಶ್ರೀಕರ'
ಹುಡ್ಕೊ ಮೊದಲ ಹಂತ
ಕುವೆಂಪು ನಗರ, ಮೈಸೂರು-೨೩

"ಮನಸಿಡಿದು ಹೋಳಾಗುತಿರುವ ವೇಳೆ, ಕನಸುಗಳ ಗುಳ್ಳೆಗಳು ಒಡೆದೊಡೆದು ಬೀಳೆ,
ಜನುಮದೀ ರಿಂಗಣದಿ ಕಾಲುಗಳು ಸೋಲೆ, ನಿನಗೆ ನೀನೇ, ಗೆಳೆಯ, ನಿನಗೆ ನೀನೆ!"
—ಗೋಪಾಲಕೃಷ್ಣ ಅಡಿಗರ ಈ ನುಡಿಗಳಿಗೆ ಒಂದು ವ್ಯಾಖ್ಯಾನ ಪ್ರಸಕ್ತ ಲೇಖನ.

ಈ ವ್ಯಕ್ತಿಯ ಭವಿಷ್ಯದ ಬಗ್ಗೆ ಪಣ ಒಡ್ಡಬಲ್ಲಿರಾ? ಈತನಿಗೆ ಈಗ ೫೩ ವರ್ಷ ವಯಸ್ಸು. ಯೌವನದ ಹೆಚ್ಚು ಭಾಗ ಸಾಲ, ದುರಾದೃಷ್ಟಗಳೊಡನೆ ಸೆಣಸಿ ಸೆಣಸಿ ಸೋಲುವುದರಲ್ಲೇ ಕಳೆದುಹೋಯಿತು. ಯುದ್ಧದಲ್ಲಾದ ಹಾನಿಯಿಂದ ಎಡಗೈ ಉಪಯೋಗಕ್ಕೆ ಬರದಂತಾಗಿದೆ. ಹಲವಾರು ಸರ್ಕಾರಿ ಹುದ್ದೆಗಳಲ್ಲಿದ್ದ. ಆದರೆ ಎಲ್ಲೂ ಯಶಸ್ಸು ಗಳಿಸಲಿಲ್ಲ. ಹಲವಾರು ಬಾರಿ ಜೈಲಿಗೆ ಹೋಗಿ ಬಂದಿದ್ದ. ಆ ಬೇಸರದ ಜೀವನದಲ್ಲೂ ಅಭಿವೃದ್ಧಿ ಪಡೆಯುವ ನಂಬಿಕೆ, ರಚನಾತ್ಮಕ ಪ್ರೇರಣೆ ಈತನಿಗೆ ಹೇಗೆ ಬಂದಿತೋ ದೇವರೇ ಬಲ್ಲ. ಆತ ಒಂದು ಪುಸ್ತಕವನ್ನು ಬರೆಯಲು ನಿಶ್ಚಯಿಸಿದ.

೩೫೦ ವರ್ಷಗಳಿಗಿಂತ ಹೆಚ್ಚು ಕಾಲದವರೆಗೂ ಪ್ರಪಂಚವನ್ನೆ ಮುಗ್ಧವಾಗಿಸಿದ ಪುಸ್ತಕವಾಯಿತು ಅದು. ಆ ಪುಸ್ತಕದ ಕರ್ತೃ ಮಾಜಿ ಖೈದಿ ಸರ್ವಾಂಟಿ ಮತ್ತು ಆ ಪುಸ್ತಕ ಡಾನ್‌ಕ್ವಿಕ್ಸೋಟ್. ಈ ಕಥೆ ಗಮನ ಸೆಳೆಯುವ ಒಂದು ಪ್ರಶ್ನೆಯನ್ನು ನಮ್ಮ ಮುಂದಿಡುತ್ತದೆ.

ಕೆಲ ಸ್ತ್ರೀ ಪುರುಷರು ತಮ್ಮ ಕಡೆಯ ಉಸಿರಿರುವವರೆಗೂ ಹೊಸ ಚೈತನ್ಯ ಮತ್ತು ರಚನಾತ್ಮಕ ಶಕ್ತಿಯನ್ನು ಕಂಡುಕೊಳ್ಳುತ್ತಾರೆ. ಆದರೆ ಇನ್ನು ಕೆಲವರು ಸ್ವಲ್ಪ ಕಾಲದಲ್ಲೇ ಸತ್ವಹೀನರಾಗುತ್ತಾರೆ. ಏಕೆ ಹೀಗೆ?

ತಮ್ಮ ಜೀವನದ ಅರ್ಥ ಗುರಿಯನ್ನು ತಲುಪುವ ಮುಂಚೆಯೇ ಹುರುಪು ಕಳೆದುಕೊಂಡು ಪಲಾಯನವಾದಿಗಳಾಗುವ ಜನರನ್ನು ನಾವು ನೋಡಿದ್ದೇವೆ. ಅತ್ಯುನ್ನತ ಪದವಿಗೆ ಹೋಗುವ ಪ್ರಯತ್ನದಲ್ಲಿ ಸೋತವರ ಬಗ್ಗೆ ನಾನು ಮಾತನಾಡುತ್ತಿಲ್ಲ. ಆ ಗುರಿಯನ್ನು ಎಲ್ಲರೂ ಮುಟ್ಟುವುದು ಸಾಧ್ಯವಿಲ್ಲ. ಅನೇಕ ವರ್ಷಗಳಿಂದ ರೂಢಿಸಿಕೊಂಡು ಬಂದಿರುವ ನಿರ್ದಿಷ್ಟ ಮನೋಭಾವ ಹಾಗೂ

ಆಧಾರ: ೧೯೮೧ನೇ ಮೇ ತಿಂಗಳ ರೀಡರ್ಸ್ ಡೈಜೆಸ್ಟ್‌ನಲ್ಲಿ ಪ್ರಕಟವಾದ ಜಾನ್ ಗಾರ್ಡನರ್‌ರವರ "ಥಿಂಗ್ಸ್ ಯು ಲರ್ನ್ ಆಫ್ಟರ್ ಯು ನೊ ಇಟ್ ಆಲ್" ಎಂಬ ಲೇಖನ.

ಅಭಿಪ್ರಾಯಗಳಿಗೆ ಅಂಟಿಕೊಂಡು, ಕಲಿಯುವುದನ್ನೂ ಅಭಿವೃದ್ಧಿ ಹೊಂದುವುದನ್ನೂ ಬಿಟ್ಟುಬಿಟ್ಟಿರುವವರ ಬಗ್ಗೆಯೂ ನಾನು ಮಾತನಾಡುತ್ತಿಲ್ಲ.

ನಮ್ಮಲ್ಲಿ ಬಹಳಷ್ಟು ಮಂದಿ, ವಾಸ್ತವವಾಗಿ ನಮ್ಮ ಜೀವನದ ವ್ಯಾಪ್ತಿ ಹಾಗೂ ವೈವಿಧ್ಯವನ್ನು ಸಂಕುಚಿತಗೊಳಿಸಿಕೊಂಡುಬಿಡುತ್ತೇವೆ. ಪರಿಣಿತಿ ಪಡೆದು ವಿಶೇಷ ಜ್ಞಾನ ಸಂಪಾದನೆಯಲ್ಲಿ ನಾವು ಯಶಸ್ವಿಗಳಾಗುತ್ತೇವೆ. ಆದರೆ ಅನಂತರ ಆ ಪಾಶದಲ್ಲೇ ಸಿಕ್ಕಿಹಾಕಿಕೊಂಡುಬಿಡುತ್ತೇವೆ. ಯಾವುದರ ಬಗ್ಗೆಯೂ ನಮಗೆ ಆಶ್ಚರ್ಯವೇ ಕಾಣುವುದಿಲ್ಲ. ಆಶ್ಚರ್ಯ ಪಡುವ ಶಕ್ತಿಯನ್ನೇ ಕಳೆದುಕೊಂಡುಬಿಡುತ್ತೇವೆ.

ಆದರೆ ಈ ಅಪಾಯಗಳ ಬಗ್ಗೆ ಎಚ್ಚರದಿಂದಿದ್ದರೆ, ಇವನ್ನು ಸರಿಗಟ್ಟಿ ನಿಲ್ಲುವ ಕ್ರಮಗಳನ್ನು ಅನುಸರಿಸಬಹುದು. ಜಡತೆಯನ್ನು ತಿರಸ್ಕರಿಸಬೇಕು. ಕಲಿಯುವಿಕೆ ಕೇವಲ ಯುವಜನಾಂಗಕ್ಕಾಗಿ ಎಂಬ ಮಿಥ್ಯಾಭಾವನೆಯನ್ನು ತೊರೆಯಬೇಕು. ಯಾವುದನ್ನೇ ಆಗಲಿ ಪೂರ್ಣವಾಗಿ ತಿಳಿದ ನಂತರ ಕಲಿಯುವುದೇ ಪರಿಗಣಿಸಲ್ಪಡುವಂಥಹುದು.

ಉತ್ತೇಜನ

ಜೀವನಪೂರ್ತಿ ಕಲಿಯುತ್ತಲೇ ಇರಿ, ಗಳಿಸುವ ಗೆಲುವಿನಿಂದ-ಸೋಲಿನಿಂದ ಕಷ್ಟವನ್ನು ಎದುರಿಸಬೇಕಾದಾಗ ನಿಮ್ಮನ್ನು ನೀವೇ ಕೇಳಿಕೊಳ್ಳಿ "ಇದು ನನಗೆ ಏನನ್ನು ಕಲಿಸಲು ಪ್ರಯತ್ನಿಸುತ್ತಿದೆ" ? ಕಲಿಯುವ ಪಾಠಗಳು ಸದಾ ಆನಂದದಾಯಕವಾಗಿಯೇ ಇರುವುದಿಲ್ಲ. ಹತ್ತೊಂಬತ್ತನೇ ಶತಮಾನದ ಅಮೆರಿಕ ಕವಿ ಹಾಗೂ ಪ್ರಬಂಧಕಾರನಾದ ರಾಲ್ಫ್ ವಾಲ್ಡೋ ಎಮರ್‌ಸನ್ ಈ ರೀತಿ ಬರೆಯುತ್ತಾನೆ. ಕೆಡುಕಿನ ಸಮಯ ಒಂದು ವೈಜ್ಞಾನಿಕ ಮೌಲ್ಯವನ್ನು ಹೊಂದಿರುತ್ತದೆ. ಇವು, ಒಬ್ಬ ಒಳ್ಳೆಯ ಜ್ಞಾನಪಿಪಾಸು ಕಳೆದುಕೊಳ್ಳಬಾರದಂತಹ ಸುಸಂದರ್ಭಗಳು.

ಚೈತನ್ಯವಂತರಾಗಿ ಉಳಿದಿರುವ ವ್ಯಕ್ತಿಗಳು ನಿರ್ಣಯಿಸಿರುವ ರೂಢಿ. ಮನೋಭಾವ ಮತ್ತು ನಿಯತ ಕ್ರಮಗಳಲ್ಲಿ ತಮ್ಮನ್ನು ಬಂಧಿಸಿಕೊಳ್ಳುವುದಿಲ್ಲ. ನಮ್ಮ ಸೆರೆಮನೆಗಳನ್ನು ನಾವೇ ಕಟ್ಟಿಕೊಂಡು ನಾವೇ ನಮ್ಮ ಸೆರೆಮನೆಯ ಅಧಿಪತಿಯಾಗುತ್ತೇವೆ. ಆದರೆ ನಾವು ಸೆರೆಮನೆಗಳನ್ನು ಕಟ್ಟಬಲ್ಲೆವಾದರೆ ಅವುಗಳನ್ನು ನಾವೇ ಒಡೆದು ಹಾಕಬಲ್ಲೆವು. ಕಲಿಯಬೇಕೆಂಬ ಆಸಕ್ತಿ ಇದ್ದರೆ ಅವಕಾಶಗಳು. ಎಲ್ಲೆಲ್ಲೂ ಹೇರಳವಾಗಿವೆ. ನಾವು ನಮ್ಮ ಕೆಲಸದಿಂದ ಕಲಿಯಬಹುದು. ನಮ್ಮ ಸ್ನೇಹಿತರಿಂದ, ಕುಟುಂಬದಿಂದ ಕಲಿಯಬಹುದು. ಜೀವನದ ಉಪಕಾರವನ್ನು ಒಪ್ಪಿಕೊಂಡು ಅದರಿಂದ ಕಲಿಯಬಹುದು, ನೋವಿನಿಂದ ಗಂಡಾಂತರವನ್ನು ಎದುರಿಸುವುದರಿಂದ, ಪ್ರೀತಿಸುವುದರಿಂದ, ಜೀವನದ ಉಪೇಕ್ಷೆಯನ್ನು ಘನತೆಯನ್ನು ಸಹಿಸಿಕೊಳ್ಳುವುದರಿಂದ ನಾವು ಕಲಿಯಬಹುದು.

ಕರ್ತವ್ಯಗಳು

ಮನಃಶಕ್ತಿ ಪೂರ್ಣವಾಗಿ ವಿಕಾಸ ಹೊಂದಿದ ಸ್ಥಿತಿಯಲ್ಲಿ ಕಲಿತಾಗ ಅದು ಸುದ್ದಿ ಸಮಾಚಾರಗಳನ್ನು, ಜಾಣ್ಮೆಯನ್ನು ಒಳಗೊಂಡಿರುವುದಿಲ್ಲ. ಆದರೆ ನಾನು

ಬದಲಾಯಿಸಲಾರದ ಸ್ಥಿತಿಯನ್ನು ಸಹಿಸಿಕೊಳ್ಳುವುದನ್ನು ಕಲಿಯುತ್ತೀಯ ಸ್ನಾನು ಕಂಪವನ್ನು ದೂರವಾಗಿಸಬಲ್ಲೆ. ನಿನ್ನ ಚೈತನ್ಯವನ್ನು ಆತಂಕದಲ್ಲಿ ವ್ಯರ್ಥಮಾಡದಿರುವುದನ್ನು ಕಲಿಯುತ್ತೀಯೆ. ಹೆಚ್ಚಿನ ಜನರು ನಿನ್ನ ಪರವಾಗಿಯಾಗಲೀ. ವಿರುದ್ಧವಾಗಿಯಾಗಲೀ ಇಲ್ಲ. ಆದರೆ ಅವರು ತಮ್ಮ ಬಗ್ಗೆ ಯೋಚಿಸುತ್ತಿರುತ್ತಾರೆಂಬುದನ್ನು ನೀನು ಕಲಿಯುತ್ತೀಯೆ. ನೀನು-ಸಂತೋಷಪಡಿಸಲು ಎಷ್ಟೇ ಪ್ರಯತ್ನಪಟ್ಟರೂ ಕೆಲವರು ನಿನ್ನನ್ನು ಎಂದಿಗೂ ಪ್ರೀತಿಸುವುದಿಲ್ಲ ಎಂಬುದನ್ನು ಕಲಿಯುತ್ತೀಯೆ. ಈ ವಿಷಯ ಪ್ರಾರಂಭದಲ್ಲಿ ಮನಸ್ಸಿಗೆ ನೋವನ್ನುಂಟು ಮಾಡಿದರೂ ಕ್ರಮೇಣ ಮನಸ್ಸನ್ನು ಶಾಂತಗೊಳಿಸುತ್ತದೆ.

ಖುದ್ದು ನಿಮಗೇ ನೀವು ನಿಷ್ಠಾವಂತರಾಗಿರುವುದು ನಿಮ್ಮ ಕರ್ತವ್ಯಗಳ ಪೈಕಿ ಒಂದು. ಅನೇಕ ವ್ಯಕ್ತಿಗಳು ವಯಸ್ಸಾದಂತೆಲ್ಲಾ ಹೆಚ್ಚೆಚ್ಚು ಪ್ರಭಾವ ಬೀರುವ ಆತ್ಮವಂಚನೆಯಿಂದ ವ್ಯವಹರಿಸುವುದರಿಂದ, ಅಂಥವರಿಗೆ ಜ್ಞಾನದ ಆರಂಭ ಪಾಠವಾದ ಆತ್ಮಜ್ಞಾನ ಇರುವುದೇ ಇಲ್ಲ. ಮಧ್ಯವಯಸ್ಸಿನ ವೇಳೆಗೆ ನಮ್ಮಲ್ಲಿ ಬಹಳ ಜನರು ತಮ್ಮಿಂದ ತಾವೇ ಪಲಾಯನ ಮಾಡುವ ಸ್ಥಿತಿಯಲ್ಲಿರುತ್ತಾರೆ. ಆದರೂ ತಮಗೆ ತಾವೇ ಸುಳ್ಳು ಹೇಳಿಕೊಳ್ಳಬಾರದೆಂಬುದನ್ನು ಕಲಿಯುವುದರಲ್ಲಿ ಆಶ್ಚರ್ಯಕರವಾದ ಉಪಯೋಗವಿದೆ. ಅಂತಿಮವಾಗಿ ನಿನಗೆ ನೀನೇ ಜವಾಬ್ದಾರ ಎಂಬ ಅಮೂಲ್ಯ ವಿಷಯ, ನೀನು ಕಲಿಯುವ ವಿಷಯಗಳಲ್ಲೊಂದಾಗಿರುತ್ತದೆ. ನೀನು ಇತರರನ್ನು ದೂಷಿಸುವುದಿಲ್ಲ. ಪರಿಸ್ಥಿತಿಗಳನ್ನು ನೀನು ದೂಷಿಸುವುದಿಲ್ಲ. ಜವಾಬ್ದಾರಿಯನ್ನು ನೀನೇ ತೆಗೆದುಕೊಳ್ಳುತ್ತೀರುವೆ.

ಕಟ್ಟುಪಾಡುಗಳು

ನೀನು ಕಲಿಯುತ್ತಾ ಹೋದರೆ, ಉತ್ತಮ ಪ್ರೇರಕಶಕ್ತಿ ಮತ್ತು ಉತ್ಸಾಹ ನಿನ್ನ ನಂಬಿಗೆಯ ಮಿತ್ರರಾಗುತ್ತವೆ. ಕೆಲವರು ತಮ್ಮ ಜೀವನದ ಕೊನೆಯ ಉಸಿರಿರುವವರೆಗೂ ಉತ್ಸಾಹವನ್ನು ಹೇಗೋ ಉಳಿಸಿಕೊಂಡಿರುತ್ತಾರೆ. ವಿಷಯಗಳಿಗೆ ಅವರು ಮಹತ್ವಕೊಡುತ್ತಾರೆ. ತಮ್ಮನ್ನು ಪಸಂಶಿಸಿಕೊಳ್ಳುತ್ತಾರೆ. ಅವರು ಸುಖಾನುಭವ ಪಡೆಯುತ್ತಾರೆ. ಗಂಡಾಂತರವನ್ನು ಎದುರಿಸುತ್ತಾರೆ. ಎಲ್ಲಕ್ಕಿಂತ ಮಿಗಿಲಾಗಿ ತಮ್ಮ ಜೀವನದ ಅರ್ಥವನ್ನು ಅರಿಯುವುದು ಎಷ್ಟು ಮುಖ್ಯ ಎಂಬುದನ್ನು ಅವರು ತಿಳಿದಿರುತ್ತಾರೆ. ತಮ್ಮ ಅಲ್ಪ ಅಹಂಭಾವವನ್ನು ಬಿಟ್ಟು ತಮ್ಮ ಪ್ರೀತಿ ಪಾತ್ರರೊಡನೆ, ಸಂಗಡಿಗರೊಡನೆ ಕೆಲಸ ಮಾಡಲು ಅಥವಾ ಕೆಲ ನೈತಿಕ ಮತ್ತು ಧಾರ್ಮಿಕ ಭಾವನೆಗಳನ್ನಿಟ್ಟುಕೊಳ್ಳುವಲ್ಲಿ ಕೆಲವು ಕಟ್ಟುಪಾಡುತಳನ್ನು ಹಾಕಿಕೊಂಡರೆ ಮಾತ್ರ ಜೀವನದ ಅರ್ಥವನ್ನು ತಿಳಿಯಬಹುದು. ದಿವಂಗತ ಬ್ರಿಟಿಷ್ ಲೇಖಕ ಬರ್ನಾರ್ಡ್ ಷಾ ಒಮ್ಮೆ ಹೀಗೆ ಬರೆದಿದ್ದ, "ಉಗ್ರತೆಯಿಂದ ಕೂಡಿ, ಮನಃಕ್ಷೋಭೆಯುಳ್ಳ, ಸ್ವಾರ್ಥಿ ಮತ್ತು ಒರಟನಾಗಿದ್ದು, ಈ ಪ್ರಪಂಚ ನಿಮ್ಮ ಸಂತೋಷಕ್ಕಾಗಿ ತನ್ನನ್ನು ಮೀಸಲಾಗಿಡಲಿಲ್ಲವೆಂದು ದೂರುವ ಬದಲು, ಶಕ್ತಿಯುತವೆಂದು ನೀವೇ ಗುರ್ತಿಸಿದ ಉದ್ದೇಶವನ್ನು ಪೂರ್ಣಗೊಳಿಸಲು ತನ್ನನ್ನು ಅರ್ಪಿಸಿಕೊಳ್ಳುವುದರಲ್ಲಿ ನಿಜವಾದ ಆನಂದವಿದೆ."

ನಮ್ಮಲ್ಲಿ ಬಹಳ ಜನರು "ಕಟ್ಟುಪಾಡನ್ನು" ಚರ್ಚಿನಲ್ಲಿ ಕಲಿಸುವಿಕೆ, ಪೋಷಿಸುವಿಕೆಯಂತಹ ಕೆಲಸಗಳ ಕೆಲವು ನಿಶ್ಚಿತ ಅಂಶಗಳೊಡನೆ ಸಮೀಕರಿಸುತ್ತಾರೆ. ಇಂತಹ ಆರೈಕೆಯ, ಕಸುಬುಗಳನ್ನು ಮಾಡುವಾತ ಉಕ್ಕಿನವಸ್ತುಗಳನ್ನು ಮಾಡಬಲ್ಲ ವ್ಯಕ್ತಿ ಅಥವಾ ಛತ್ರಿ ಮಾರುವವನು ಪಡೆಯಬಹುದಾದಕ್ಕಿಂತ ಹೆಚ್ಚಿನ ವೈಯಕ್ತಿಕ ಘನತೆಯ ಅನುಭವ ಪಡೆಯುತ್ತಾನೆ.

ಆದರೆ ಯಾವ ವ್ಯಕ್ತಿಯೇ ಆಗಲಿ ಮಾಡಬಹುದಾದ ಯಾವುದೇ ನ್ಯಾಯಸಮ್ಮತವಾದ ಕೆಲಸ ಶ್ಲಾಘ್ಯವಾದ ಕಟ್ಟುಪಾಡಾಗಿರುತ್ತದೆ. ಇಂತಹ ಉತ್ಕೃಷ್ಟತೆಯನ್ನು ತಲುಪಲು ಹೋರಾಡುವ ವ್ಯಕ್ತಿಗಳು, ಆತ ಒಂದು ಟ್ರಕ್ಕನ್ನು ನಡೆಸಲಿ, ಒಂದು ಅಂಗಡಿಯನ್ನು ನಡೆಸಲಿ ಅಥವಾ ಒಂದು ಕುಟುಂಬದ ಅಭಿವೃದ್ಧಿಯಲ್ಲಿ ತೊಡಗಿರಲಿ, ತಮ್ಮ ಸ್ವಂತಿಕೆಯನ್ನು ಉಳಿಸಿಕೊಂಡ ಮಾತ್ರದಿಂದಲೇ ಈ ಪ್ರಪಂಚವನ್ನು ಉತ್ತಮ ಸ್ಥಿತಿಗೆ ತರಬಲ್ಲರು. ಅಂಥವರು ಜೀವನದ ಅತ್ಯಂತ ಅಮೂಲ್ಯವಾದ ಪಾಠವನ್ನು ಕಲಿತಿರುತ್ತಾರೆ.



ಸಾಕ್ಷರತೆ ಅನುಭವದ ಭಂಡಾರಕ್ಕೆ ಬೀಗದಕೈ ಸಾಮಾಜಿಕ ಪುನರುತ್ಥಾನಕ್ಕೆ ದಾರಿ

—ರೀಡ್

ಅನಕ್ಷರಸ್ಥರು ಯಾವ ರಾಜಕೀಯ ಪಕ್ಷಕ್ಕೂ ಸೇರಿದವರಲ್ಲ; ಅವರಿಗೆ ಮೊದಲು ಅಕ್ಷರ ಕಲಿಸಬೇಕು

—ಲೆನಿನ್

ಕೊನೆಯ ಪಯಣ

ಲಕ್ಷ್ಮೀನಾರಾಯಣ
ರೈಲ್ವೆಸ್ಟೇಷನ್ ರಸ್ತೆ, ಕೆ. ಆರ್. ಸಾಗರ
ಶ್ರೀರಂಗಪಟ್ಟಣ ತಾಲ್ಲೂಕು ೫೭೧ ೬೦೭

ಕ್ಯಾಪ್ಟನ್ ಸ್ಕಾಟ್, ಒಬ್ಬ ಇಂಗ್ಲೀಷ್ ಸಂಶೋಧಕ, ಅಂಟಾರ್ಕ್ಟಿಕಾ ಖಂಡಕ್ಕೆ ಎರಡು ಬಾರಿ ತನ್ನ ತನ್ನ ತಂಡದ ಜತೆ ಪ್ರಯಾಣಿಸಿದ. ಮೊದಲನೆಯ ಸಲ, ಹಲವು ವೈಜ್ಞಾನಿಕ ಉದ್ದೇಶಗಳನ್ನು ಹೊತ್ತು ೧೯೦೧ರಲ್ಲಿ ಹೊರಟು ಖಂಡದ ಬಹುಭಾಗದೊಳಗೆ ಉಪಕ್ರಮಿಸಿ ೧೯೦೪ರಲ್ಲಿ ಹಿಂತಿರುಗಿದ. ಎರಡನೇ ಪ್ರಯಾಣ ೧೯೧೦ರಲ್ಲಿ ಪ್ರಾರಂಭವಾಯಿತು. ಇದರ ಮುಖ್ಯ ಉದ್ದೇಶ ದಕ್ಷಿಣ ಧೃವದ ತುಟ್ಟ ತುದಿಯನ್ನು ಮುಟ್ಟುವುದು. ತಮ್ಮ ಗುರಿಯನ್ನು ಮುಟ್ಟಲು ಕ್ಯಾಪ್ಟನ್ ಸ್ಕಾಟ್ ಮತ್ತು ಅವನ ತಂಡ ಕಷ್ಟಗಳ ಪರಂಪರೆಯೊಡನೆ ಹೋರಾಡುತ್ತಾ ಧೃತಿಗೆಡದೆ ಸಾಗಿದರು. ಆದರೆ ದುರದೃಷ್ಟ, ನಾರ್ವೇಜಿಯನ್ನರು ಇವರಿಗೆ ಮೊದಲೇ ತಲಪಿದರು. ತಮ್ಮ ಉದ್ದೇಶವನ್ನು ಹೃದಯದೊಳಗೆ ಹೊತ್ತು ಹಿಮದೊಳಗೆ ಹೆಪ್ಪುಗಟ್ಟಿ ಮರಣಿಸಿದ ಸ್ಕಾಟ್ ಮತ್ತು ಅವನ ಇಬ್ಬರು ಸಂಗಡಿಗರ ಶವಗಳು ಸತ್ತ ಎಂಟು ತಿಂಗಳ ತರುವಾಯ ದೊರೆತವು. ಜತೆಗೆ ಅವರು ಎದುರಿಸಿದ ಸಂಕಟ, ನೋವು, ಛಲ ಮುಂತಾದವುಗಳನ್ನು ದಾಖಲಿಸಿದ್ದ ಸ್ಕಾಟ್‌ನ ದಿನಚರಿಯೂ ಸಹಾ ಅವನ ಶವದ ಜತೆಗೆ ಲಭ್ಯವಾಯಿತು.

ಗುರುವಾರ ಮಾರ್ಚಿ ೧—

ಮಧ್ಯಾಹ್ನದ ಊಟ. ಕಳೆದ ರಾತ್ರಿ ಬಹಳ ತಣ್ಣಗಿತ್ತು. ಉಷ್ಣಾಂಶ ಕನಿಷ್ಠ ೪೧.೫ ಡಿಗ್ರಿಯಷ್ಟಿತ್ತು. ಈಗಲೂ ಸಹಾ ಶೀತಗಾಳಿ ಎಂದಿನಂತೆ ಬೀಸುತ್ತಿದೆ. ಬೆಳಿಗ್ಗೆ ಎಂಟು ಗಂಟೆಗೆದ್ದು ನಮ್ಮ ಡಿಪೋವಿನಿಂದ ಸ್ವಲ್ಪ ದೂರ ಸಾಗಿದೆವು; ಧ್ವಜ ಮೂರು ಮೈಲಿಗಳ ಅಂತರದಲ್ಲಿದೆ. ನಿನ್ನೆ ಸುಮಾರು ಹನ್ನೊಂದೂವರೆ ಮೈಲಿಗಳಷ್ಟು ದೂರ ಸಾಗಿದೆವು. ಈ ದಿನ ಬೆಳಿಗ್ಗೆ ಆರು ಮೈಲಿಗಳಷ್ಟು ದೂರ ಕ್ರಮಿಸಿದ್ದೇವೆ. ಬಹಳ ಕಷ್ಟದಿಂದ ನಮ್ಮ ಗಾಡಿ ಎಳೆಯಲ್ಪಟ್ಟಿತು. ಇಂದು ನಿನ್ನೆಗಿಂತಲೂ ಅತಿ ಕಷ್ಟವಾಗಿದೆ. ಇದರ ಜತೆಗೆ ವಾತಾವರಣದಲ್ಲಿ ಅದ್ಭುತ ಬದಲಾವಣೆಯಾಗಿದೆ. ಮೋಡವಿಲ್ಲದ ಹಗಲು, ಇರುಳು ಗಾಳಿಯ ಹೊಡೆತ. ದುರದೃಷ್ಟ; ಉತ್ತರದಿಂದ ಬೀಸುತ್ತಿರುವ ಶೀತಗಾಳಿ ಭಯಂಕರ ಚಳಿಯನ್ನು ತರುತ್ತಿದೆ. ಮಧ್ಯಾಹ್ನದ ಊಟದ ಹೊತ್ತಿಗೆ ವಾತಾ

ಆಧಾರ: ಕ್ಯಾಪ್ಟನ್ ಸ್ಕಾಟ್‌ರ ಇಂಗ್ಲೀಷ್ ಲೇಖನ

ವರಣದಲ್ಲಿ ಸ್ವಲ್ಪ ನೆಮ್ಮದಿ. ಸೂರ್ಯ ಸ್ವಲ್ಪ ಮಟ್ಟಿಗೆ ಹೊಳೆಯುತ್ತಾ ಬೆಚ್ಚಗಿದ್ದಾನೆ. ಆದರೆ ನಮ್ಮ ಉಪಕರಣಗಳು ಇನ್ನೂ ಕೊರೆಯುತ್ತಿವೆ.

ಶನಿವಾರ ಮಾರ್ಚಿ ೧೦—

ನಮ್ಮ ಅದೃಷ್ಟ ಸರಿಯಾಗಿಲ್ಲ. ಓಟ್ಸನ ಕಾಲುಗಳು ಛಿದ್ರವಾಗಿವೆ. ಈ ಸ್ಥಿತಿಯಲ್ಲಿ ಅವನಿಂದ ಗುರಿಮುಟ್ಟಲು ಅಸಾಧ್ಯವಿಲ್ಲ. ಅವನು ವಿಲ್ಸನ್‌ನನ್ನು ಇಂದು ಬೆಳಿಗ್ಗೆ ನಾವು ತಲುಪುತ್ತೇವೆಯೋ ಎಂದು ಕೇಳಿದ. ಆದರೆ ಬಿಲ್ ತನಗೆ ಗೊತ್ತಿಲ್ಲ ಎಂದು ಹೇಳಿದ. ನಿಜವಾಗಿಯೂ ಅವನಿಗೆ ಗೊತ್ತಿರಲಿಲ್ಲ. ಅವನ ಜತೆ ನಾವು ಹೆಜ್ಜೆ ಇಟ್ಟರೆ ನಾವೂ ಸಹಾ ಗುರಿ ತಲಪುವುದು ಸಂದೇಹವೇ. ನಮಗೆ ತಲಪುವ ಅದೃಷ್ಟವಿದೆಯೋ ಏನೋ ಗೊತ್ತಿಲ್ಲ. ಕಾರಣ ವಾತಾವರಣ ಬಹಳ ಬೀಭತ್ಸವಾಗಿದ್ದು ನಮ್ಮ ಉಪಕರಣಗಳೆಲ್ಲಾ ಹೆಚ್ಚು ತಣ್ಣಗಾಗಿ ಉಪಯೋಗಿಸಲು ಬಹಳ ಕಷ್ಟವಾಗುತ್ತಿದೆ. ಇದೇ ಸಮಯದಲ್ಲಿ ಟೈಟಸ್ ಓಟ್ಸ್‌ನದು ಬಹಳ ಅಡಚಣೆಯಾಗಿದೆ. ನಾವೆಲ್ಲ ಬೆಳಗಿನ ಬೆಚ್ಚಗಿನ ತಿಂಡಿಯ ಖುಷಿಯನ್ನು ಮರೆತು ಇಡೀ ದಿನ ಅವನನ್ನೇ ಕಾಯುತ್ತ ಕುಳಿತೆವು; ಆದರೆ ಕಾಯುತ್ತ ಕುಳಿತುಕೊಳ್ಳುವುದು ವ್ಯರ್ಥ ಎನಿಸುತ್ತದೆ. ಮತ್ತೆ ಮಧ್ಯಾಹ್ನ ಊಟ. ಪಾಪ, ಬಡಪ್ರಾಣಿ! ಅವನ ಸ್ಥಿತಿ ತುಂಬಾ ಚಿಂತಾಜನಕ; ಯಾರಿಂದಲೂ ಅವನ ಮುಖದಲ್ಲಿ ಗೆಲುವು ಮೂಡಿಸಲಾಗುತ್ತಿಲ್ಲ.

ಬುಧವಾರ ಮಾರ್ಚಿ ೧೪—

ಇಂದು ಬೆಳಗ್ಗೆ ದಕ್ಷಿಣ ದಿಕ್ಕಿನಿಂದ ಬೀಸಿ ಬರುತ್ತಿದ್ದ ಶೀತಗಾಳಿಯಲ್ಲಿ ಹೊರಟು ಬಹಳ ವೇಗವಾಗಿ ಮತ್ತೊಂದು ಕಲ್ಲುಗಳ ಗುಡ್ಡವನ್ನು ದಾಟಿದೆವು. ಅಲ್ಲಿಂದ ಅರ್ಧ ದೂರ ಕ್ರಮಿಸುತ್ತಿದ್ದಂತೆಯೇ ಗಾಳಿ ದಕ್ಷಿಣದಿಂದ ಪಶ್ಚಿಮಕ್ಕೆ ಅಥವಾ ನೈಋತ್ಯ ದಿಕ್ಕಿಗೆ ಬದಲಿಸಿತು. ನಾವು ಗಾಳಿಯುಡುಪು ಧರಿಸಿದ್ದರೂ ಮೈ ಕೊರೆಯಲಾರಂಭಿಸಿತು. ಬಡ ವಿಲ್ಸನ್ ಭಯಂಕರ ಶೀತಕ್ಕೆ ತುತ್ತಾಗಿ ಕೆಲವು ಕಾಲ ತಟಸ್ಥನಾದ.

ಬೋವರ್ಸ್ ಮತ್ತು ನಾನು ಬಹಳ ಶ್ರಮದಿಂದ ಕ್ಯಾಂಪ್ ಮಾಡಿದೆವು. ಟೆಂಟಿನ ಒಳ ಹೋಗುತ್ತಿದ್ದಂತೆಯೇ ಚಳಿಯಿಂದ ಎಲ್ಲರೂ ಸಾಯುವಂತಾಗಿದ್ದೆವು. ಆಗ ಉಷ್ಣಾಂಶ ಮಧ್ಯಾಹ್ನದಲ್ಲಿಯೂ –೪೩ ಡಿಗ್ರಿಗಳಿಗಿಂತಲೂ ಕಡಿಮೆ. ಗಾಳಿ ಬಹಳ ರಭಸವಾಗಿತ್ತು. ಅಲ್ಲಿಂದ ನಾವು ಹೊರಡಲೇಬೇಕಿತ್ತು. ಕಾರಣ ಅಂಥ ಕಡೆ ನಾವು ಕ್ಯಾಂಪ್ ಮಾಡುವುದು ಬಹಳ ಕಷ್ಟ ಹಾಗೂ ಅಪಾಯಕಾರಿ. ನಮ್ಮ ಅಂತ್ಯ ಬಹಳ ದೂರವಿಲ್ಲವೆನಿಸುತ್ತದೆ. ಬಡಪ್ರಾಣಿ ಓಟ್ಸ್‌ನ ಕಾಲುಗಳು ಮತ್ತಷ್ಟು ಛಿದ್ರಗೊಂಡವು. ನಾಳೆ ಏನು ಸಂಭವಿಸಬಹುದು ಎಂಬ ಯೋಚನೆಯನ್ನೇ ತಳ್ಳಿಹಾಕಿದೆ. ಕಾರಣ ದಾರುಣವಾದ ನೋವು ನಮ್ಮನ್ನು ಸತತವಾದ ಹಿಮದ ಹೊಡೆತಗಳಿಂದ ಮುಕ್ತಿಗೊಳಿಸುತ್ತದೆ. ಇಂಥ ಬಿರುಸಾದ ಗಾಳಿ, ಇಷ್ಟು ಕಡಿಮೆ 'ಉಷ್ಣಾಂಶ ಈ ಇಡೀ ವರ್ಷದಲ್ಲಿ ಇತ್ತೊ ಏನೋ ಗೊತ್ತಿಲ್ಲ. ಟೆಂಟಿನ ಹೊರಗೆ ಭಯಂಕರವಾದ ವಾತಾವರಣ. ಕೊನೆಯ ಬಿಸ್ಕತ್ತಿನ ಚೂರು ಇರುವವರೆವಿಗೂ ಹೋರಾಡುವುದು ಎಂದು ನಿಶ್ಚಯಿಸಿದೆವು.

ಶುಕ್ರವಾರ ಮಾರ್ಚಿ ೧೬ ಅಥವಾ ಶನಿವಾರ ೧೭—

ಸರಿಯಾಗಿ ಖಾತರಿಯಾದ ದಿನಾಂಕ ಮರೆತಿದೆ, ಆದರೂ ಕೊನೆಯದು ಸರಿಯೆಂಬ ನಂಬಿಕೆ. ಕಷ್ಟಗಳ ಪರಂಪರೆ ಹೆಜ್ಜೆ ಹೆಜ್ಜೆಗೂ ಎದುರಾಗುತ್ತಿದೆ. ಮೊನ್ನೆ ಮಧ್ಯಾಹ್ನದ ಭೋಜನದ ಅನಂತರ ಬಡ ಟೈಟಸ್ ಓಟ್ಸ್ ತನ್ನಿಂದ ಮುಂದೆ ಒಂದು ಹೆಜ್ಜೆ ಕೀಳಲು ಸಾಧ್ಯವಿಲ್ಲ, ಮಲಗುವ ಚೀಲದೊಳಗೆ ತನ್ನನ್ನು ಬಿಟ್ಟು ಹೋಗಿ ಎಂದು ಸೂಚಿಸಿದ. ಆದರೆ ನಾವು ಆ ರೀತಿ ಮಾಡದೆ ಸಾಧ್ಯವಾದಷ್ಟು ಹೆಜ್ಜೆಯಿಡಲು ಉರಿದುಂಬಿಸಿದೆವು. ತನ್ನ ಅತ್ಯಂತ ದಾರುಣ ಸ್ಥಿತಿಯಲ್ಲಿಯೂ ಹೋರಾಡುತ್ತಾನಮ್ಮೊಡನೆ ಕೆಲವು ಮೈಲಿಗಳಷ್ಟು ಸಾಗಿದ. ಆದರೆ ರಾತ್ರಿಯಂತೂ ಪಾಪ ಬಹಳ ಕಂಗೆಟ್ಟು ಯಾತನೆಯನುಭವಿಸಿದ. ಅವನ ಅಂತ್ಯ ಸಮೀಪಿಸಿತೆಂದು ನಮಗೆ ತಿಳಿದುಹೋಯಿತು.

ನಮ್ಮಲ್ಲಿ ಅನುಭವಗಳು ಹೊರ ಜಗತ್ತಿಗೆ ತಿಳಿಯಲೆಂದು ದಾಖಲಿಸಿಡುತ್ತಿದ್ದೇನೆ. ಓಟ್ಸನ ಕೊನೆಯ ಆಲೋಚನೆಗಳೆಲ್ಲ ಅವನ ತಾಯಿಯ ಕುರಿತಾಗಿತ್ತು. ಆದರೆ ತತ್‌ಕ್ಷಣ ತನ್ನ ಧ್ಯೇಯಕ್ಕೋಸ್ಕರ ತಾನು ಸಾಯುತ್ತಿರುವುದು ಅವನಿಗೆ ಬಹಳ ಖುಷಿಯನ್ನು ತಂದಿತು. ಅವನ ಧೈರ್ಯವನ್ನು ನಾವು ಪರೀಕ್ಷಿಸಿದೆವು. ಒಂದು ಚೂರೂ ಗೊಣಗಾಟವಿಲ್ಲದೆ ವಾರಗಟ್ಟಲೆ ತನ್ನ ದಾರುಣವಾದ ನೋವನ್ನು ಸಹಿಸಿಕೊಂಡ ಮತ್ತು ಉಸಿರಿರುವವರೆಗೂ ಇತರ ವಿಚಾರಗಳನ್ನು ಚರ್ಚಿಸುತ್ತಿದ್ದ. ಉಸಿರಿನ ಗುಟುಕಿರುವವರೆವಿಗೂ ಭರವಸೆಯನ್ನು ಬಿಡಲಿಲ್ಲ—ಬಿಟ್ಟುಕೊಡಲೂ ಇಲ್ಲ. ಆವನೊಬ್ಬ ಧೀರ. ನಾಳೆ ಬೆಳಗ್ಗೆ ಬಹುಶಃ ತಾನು ಎದ್ದೇಳುವುದಿಲ್ಲ ವೆಂಬ ನಂಬಿಕೆಯೊಡನೆ ಮಲಗಿದ. ಆದರೆ ಎದ್ದ—ನಿನ್ನೆಯ ಬೆಳಗ್ಗೆ. ಆಗ ಶೀತಗಾಳಿಯ ಚಂಡಮಾರುತ. 'ನಾನು ಹೊರಗೆ ಹೋಗುತ್ತಿದ್ದೇನೆ, ಬಹುಶಃ ಸ್ವಲ್ಪ ಕಾಲ' ಎಂದು ತಿಳಿಸಿ, ಅವನು ಚಂಡಮಾರುತದೊಳಗೆ ನುಗ್ಗಿ ಹೋದ. ಇಂದಿನವರೆಗೂ ನಾವು ಅವನನ್ನು ಕಂಡಿಲ್ಲ. ಇದು ಅವನ ಅಂತ್ಯ.

ಗುರುವಾರ ಮಾರ್ಚಿ ೨೨ ಮತ್ತು ೨೩—

ಶೀತಗಾಳಿ ಮೊದಲಿನಷ್ಟೇ ಕಟುವಾಗಿತ್ತು—ವಿಲ್ಸನ್ ಮತ್ತು ಬೋವರ್ಸ್ ಅವರೂ ಮುಂದಡಿಯಿಡಲು ಅಸಮರ್ಥರಾಗಿದ್ದಾರೆ. ನಾಳೆ ಕೊನೆಯ ಅವಕಾಶ—ಇಂಧನ ಮುಗಿದಿದೆ ಮತ್ತು ಒಂದೆರಡು ದಿನಗಳಿಗಾಗುವಷ್ಟು ಮಾತ್ರ ಆಹಾರ ಉಳಿದಿದೆ—ಸಾವಂತೂ ಖಚಿತ. ಅದು ಸಹಜವೆಂಬಂತೆ ತೀರ್ಮಾನಿಸಲಾಗಿದೆ—ನಾವು ನಮ್ಮ ವಸ್ತುಗಳೊಡನೆ ಡಿಪೋದ ಕಡೆಗೆ ಹೆಜ್ಜೆ ಇಟ್ಟೆವು—ಮರಣಿಸಲು.

ಗುರುವಾರ ಮಾರ್ಚಿ ೨೯—


ಇಪ್ಪತ್ತೊಂದರಿಂದಲೂ ನೈಋತ ಮಾರುತ ಸತತವಾಗಿ ಬೀಸುತ್ತಿದೆ. ಕೇವಲ ಎರಡು ಕಪ್ಪುಗಳಿಗಾಗುವಷ್ಟು ಮಾತ್ರ ಇಂಧನ ಹಾಗೂ ಸ್ವಲ್ಪ ಆಹಾರ ಉಳಿದಿದೆ. ಪ್ರತಿದಿನ ನಾವು ನಮ್ಮ ಡಿಪೋನಿಂದ ೧೧ ಮೈಲಿಗಳಷ್ಟು ದೂರ ಕ್ರಮಿಸಬೇಕಾಗಿತ್ತು. ಆದರೆ ಟೆಂಟಿನ ಬಾಗಿಲಿನಿಂದಾಚೆ ಭಯಂಕರವಾದ ಬಿರುಗಾಳಿ. ಬದುಕುಳಿಯುವ ನಂಬಿಕೆ ನಮ್ಮ ಮುಂದೆ ಕಳಚಿ ಬಿದ್ದಿತ್ತು. ನಾವು ಬಹಳ ನಿತ್ರಾಣರಾಗಿದ್ದು, ಸಾವನ್ನು

ಕಾಯುತ್ತ ಕುಳಿತಿದ್ದೆವು. ನಮ್ಮ ಸಾವು ಸಹಾ ಬಹಳ ದೂರದಲ್ಲಿರಲಿಲ್ಲ. ತುಂಬಾ ಸಂಕಟದಂತೆ ಕಾಣಬಹುದು. ಮುಂದೆ ನಾನು ಹೆಚ್ಚು ಬರೆಯಲಾರೆನೆನಿಸುತ್ತದೆ.

ದೇವರು ನಮ್ಮ ಜನತೆಯನ್ನು ಕಾಪಾಡಲಿ.

ಆರ್. ಸ್ಕಾಟ್ (ಸಹಿ)

[ವಿಲ್ಸನ್ ಮತ್ತು ಬೋವರ್ಸ್ ಮಲಗಿ ನಿದ್ರಿಸುತ್ತಿರುವವರಂತೆ ದೊರಕಿದರು. ಅವರು ಮಲಗುವ ಚೀಲಗಳು (ಸ್ಲೀಪಿಂಗ್ ಬ್ಯಾಗ್) ಅವರ ತಲೆಯ ಮೇಲೆ ಸ್ವಾಭಾವಿಕವಾಗಿ ಮುಚ್ಚಲ್ಪಟ್ಟಂತೆ ಮುಚ್ಚಿದ್ದವು. ಸ್ಕಾಟ್ ಕೊನೆಯಲ್ಲಿ ಸತ್ತ. ಅವನು ತನ್ನ ಚೀಲ ಹಾಗೂ ಕೋಟಿನ ಗುಂಡಿಗಳನ್ನು ತೆರೆದಿಟ್ಟಿದ್ದ. ಅತನ ಭುಜದಡಿ ಒಂದು ಪುಟ್ಟ ಚೀಲದಲ್ಲಿ ಮೂರು ನೋಟ್ ಪುಸ್ತಕಗಳು ದೊರಕಿದವು. ಅವನ ಒಂದು ತೋಳು ವಿಲ್ಸನ್ ಕಡೆ ಚಾಚಿತ್ತು. ಅವರು ಸತ್ತ ಎಂಟು ತಿಂಗಳ ತರುವಾಯ ಅವರ ದೇಹಗಳು ದೊರಕಿದವು.]



ಅನಕ್ಷರತೆ, ಹಿಂದುಳಿದಿರುವಿಕೆ—ಶೋಷಣೆಯ ಗುರುತು

—ಗಾಂಧೀಜಿ

ಒಬ್ಬ ವ್ಯಕ್ತಿಯ ಸಾರ್ಥಕ ಜೀವನವನ್ನು ಅವನು ಮಾಡಿದ ಕೆಲಸದಿಂದ ನಿರ್ಧರಿಸಬೇಕೇ ಹೊರತು ಅವನ ವಯಸ್ಸಿನಿಂದಲ್ಲ.

—ಷೆಡರಿಕ್

ಒಬ್ಬ ಸೇನಾನಿಯ ಪ್ರಾರ್ಥನೆ

ಎಲ್ಲಾ ತಾಯಿ ತಂದೆಯರು ದೇವರಲ್ಲಿ ತಮ್ಮ ಮಕ್ಕಳಿಗೆ ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಕರುಣಿಸುವಂತೆ ಮೊರೆಯಿಡುವುದು ಸಾಮಾನ್ಯ. ಆದರೆ, ಜನರಲ್ ಮ್ಯಾಕ್ ಆರ್ಥರ್ ತನ್ನ ಮಗನ ಬಗ್ಗೆ ದೇವರಲ್ಲಿ ಪ್ರಾರ್ಥಿಸಿದ್ದು ಹೀಗೆ :

"ಅಬಲನಾಗಿರುವಾಗ ತನಗೆ ಶಕ್ತಿಯಿದೆ ಎಂಬ ಆತ್ಮವಿಶ್ವಾಸ ಬೆಳೆಸಿಕೊಳ್ಳುವಂತೆ, ಧೈರ್ಯದಿಂದ ಭಯವನ್ನು ಎದುರಿಸುವಂತೆ, ಸೋತಾಗ ಅಂಜದೆ, ಕುಗ್ಗದೆ ನೆಟ್ಟಗೆ ನಿಲ್ಲುವಂತೆ, ಜಯ ದೊರೆತಾಗ ದೀನನಾಗಿರುವಂತೆ ನನ್ನ ಮಗನನ್ನ ಬೆಳೆಸು, ಓ ಪ್ರಭು.

"ಬೆನ್ನೆಲುಬಿರಬೇಕಾದ ಜಾಗದಲ್ಲಿ ಆಸೆಯ ಎಲುಬನಿಟ್ಟುಕೊಳ್ಳದಂತೆ, ತನ್ನನ್ನು ತಾನೇ ಅರ್ಥ ಮಾಡಿಕೊಳ್ಳುವುದು ಜ್ಞಾನಕ್ಕೆ ಬುನಾದಿ ಎಂದು ತಿಳಿಯುವಂತೆ ಅವನನ್ನು ಬೆಳೆಸು, ಪ್ರಭು.

"ಸುಗಮದ ಹಾದಿ ಬಿಟ್ಟು ಎಡರು ತೊಡರಿರುವ ಪಥದಲ್ಲಿ ಅವನನ್ನು ನಡೆಸಿ, ಬಿರುಗಾಳಿ ಬಂದಾಗಲೂ ಅಲುಗಾಡದೆ ಗಟ್ಟಿಯಾಗಿ ನಿಂತುಕೊಳ್ಳುವುದನ್ನು ಮತ್ತು ಬಿದ್ದವರಿಗೆ ಅನುಕಂಪ ತೋರಿಸುವುದನ್ನು ಕಲಿಸು, ಪ್ರಭು.

"ಯಾವಾಗಲೂ ನಗುವ ಆದರೆ ಅಳುವುದನ್ನು ಮರೆಯದ, ಹಳೆಯದನ್ನು ಮರೆಯದೆ ಭವಿಷ್ಯತ್ತನ್ನು ನೋಡುವ, ಮಹತ್ತಾದ ಜೀವನೋದ್ದೇಶ ಇಟ್ಟುಕೊಳ್ಳುವಂತಹ, ನಿಷ್ಕಲ್ಮಷ ಹೃದಯವಿರುವ ವ್ಯಕ್ತಿಯನ್ನಾಗಿ ಅವನನ್ನು ಬೆಳೆಸು ಪ್ರಭು.

"ಇವೆಲ್ಲದರ ಜೊತೆ ಹಾಸ್ಯ ಪ್ರಜ್ಞೆಯನ್ನು ನಿಜವಾದ ಹಿರಿಮೆ ಎಂದರೆ ಸರಳತೆ ಎಂಬುದನ್ನು ಮತ್ತು ನಮ್ರ ಸ್ವಭಾವವನ್ನು ಅವನಿಗೆ ಕರುಣಿಸು, ಪ್ರಭು."

ಅವನು ಹಾಗಾದಾಗ, ಅಪ್ಪನಾಗಿ ನಾನು ಮೆಲು ಧ್ವನಿಯಲ್ಲಿ ಹೇಳುತ್ತೇನೆ—'ನನ್ನ ಜನ್ಮ ಸಾರ್ಥಕವಾಯಿ' ಎಂದು.

ಆಧಾರ : ಲ್ಯಾರಿಕಾಲಿನ್ಸ್ ಮತ್ತು ಡೊಮಿನಿಕ್ ಲೇಪಿಯರ್ ಅವರ 'ಫ್ರೀಡಂ ಎಟ್ ಎಡ್‌ನೈಟ್' ಕೃತಿ.

ಲೇಖಕರು ಮತ್ತು ಲೇಖನಗಳು

Reg.No. K[illegible]N-29 / 6

LICENCE No. 21
LICENCED TO POST WITH PAYMENT



ಸೆಪ್ಟೆಂಬರ್ ೮, ಅಂತರರಾಷ್ಟ್ರೀಯ ಸಾಕ್ಷರತಾ ದಿನ

Editeed by Chandrashekhararadhya Printed by Papanna
Printed & Published by Karnataka State Adult Education Council
5/1, Vinoba Road, Manasa Gangothri, Mysore-570 006.